ಮಂಗಳೂರು ಮಂಗಳವಾರ, 28 ಏಪ್ರಿಲ್ 2026 ಸಂಪುಟ 48, ಸಂಚಿಕೆ 40, ಪುಟಗಳು 12+6 hosadigantha.com
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ REG.No.MNG /121/2024-26 Posted at kodialbail P.O / RNI:29813/78/ Daily
₹5

ಹೊಸ ದಿಗಂತ

ರಾಷ್ಟ್ರ ಜಾಗೃತಿಯ ದೈನಿಕ

ಲೋಕಹಿತಂ ಮಮ ಕರಣೀಯಂ

ಶಾರಿಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ

• ವಿವರ ಪುಟ ೩

ಭಾರತ–ಕಿವೀಸ್ ಮುಕ್ತ ವ್ಯಾಪಾರ ಒಪ್ಪಂದಕ್ಕೆ ಸಹಿ: ರಫ್ತುಗಳಿಗೆ ಇಲ್ಲ ಸುಂಕ

• ವಿವರ ಪುಟ ೩

ಕಿರುಸುದ್ದಿ

ಮೇ 2: ಮಂಗಳೂರಿನಲ್ಲಿ ಶ್ರೀ ಆದಿ ಶಂಕರಾಚಾರ್ಯ ಜಯಂತ್ಯುತ್ಸವ

ಮಂಗಳೂರು : ಶ್ರೀ ಜಗದ್ಗುರು ಶಂಕರಾಚಾರ್ಯ ಮಹಾಸಂಸ್ಥಾನ ದಕ್ಷಿಣಾಮ್ನಾಯ ಶ್ರೀ ಶಾರದಾ ಪೀಠ ಶೃಂಗೇರಿಯ ಜಗದ್ಗುರು ಶಂಕರಾಚಾರ್ಯ ಶ್ರೀ ಭಾರತೀ ತೀರ್ಥ ಸ್ವಾಮೀಜಿ ಮತ್ತು ಜಗದ್ಗುರು ಶಂಕರಾಚಾರ್ಯ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿಯವರ ಕೃಪಾಶೀರ್ವಾದಗಳೊಂದಿಗೆ , ಸಂಗೀತ ಶಾರದಾ ಶೃಂಗೇರಿ, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಮತ್ತು ಭರತಾಂಜಲಿ ಕೊಟ್ಟಾರ , ಮಂಗಳೂರು ಇವರ ಸಂಯುಕ್ತಾಶ್ರಯದಲ್ಲಿ ಮೇ 2ರಂದು ಸಂಜೆ 4.15ರಿಂದ ನಗರದ ಕರಂಗಲ್ಪಾಡಿಯಲ್ಲಿರುವ ಶ್ರೀ ಸುಬ್ರಹ್ಮಣ್ಯ ಸಭಾದಲ್ಲಿ ಶ್ರೀ ಆದಿ ಶಂಕರಾಚಾರ್ಯರ ಜಯಂತಿ ಉತ್ಸವ ಜರಗಲಿದೆ. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಉಪಾಧ್ಯಕ್ಷರಾದ ಮಹೇಶ್ ಕಜೆ ಅವರು ದೀಪ ಪ್ರಜ್ವಲನೆಗೈಯ್ಯಲಿದ್ದು, ಅಭ್ಯಾಗತರಾಗಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ರಾಜೇಶ್ ಜಿ., ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಕಾರ್ಯಕಾರಿಣಿ ಸದಸ್ಯರಾದ ಸುಬ್ರಹ್ಮಣ್ಯ ಪ್ರಸಾದ್ ಕೊರಿಯಾರ್ , ಎಂ.ಎಸ್. ಗುರುರಾಜ್, ಭರತಾಂಜಲಿಯ ಟ್ರಸ್ಟಿ ಪ್ರತಿಮಾ ಶ್ರೀಧರ್ ಪಾಲ್ಗೊಳ್ಳುವರು. ಈ ಸಂದರ್ಭ ಶ್ರೀ ಶಂಕರಸ್ತೋತ್ರ ರತ್ನ ಸಮರ್ಪಣಮ್‌ನಲ್ಲಿ ವಿದುಷಿ ವಂದನಾ ರಾಣಿ, ಬೆಂಗಳೂರು, ವಿದುಷಿ ಮಧುರ ಕಾರಂತ್ , ಮಂಗಳೂರು, ವಿದುಷಿ ರಮ್ಯ ಮಂಗಳಲಕ್ಷ್ಮಿ , ಚೆನ್ನೈ ಹಾಡುಗಾರಿಕೆ ನಡೆಸಿಕೊಡಲಿದ್ದಾರೆ. ಮೃದಂಗದಲ್ಲಿ ವಿದ್ವಾನ್ ಮನೋಹರ ರಾವ್ ಮಂಗಳೂರು, ವಯೋಲಿನ್‌ನಲ್ಲಿ ವಿದುಷಿ ಧನಶ್ರೀ ಶಬರಾಯ, ಮಂಗಳೂರು ಸಹಕರಿಸಲಿದ್ದಾರೆ. ಬೆಂಗಳೂರಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಈ ಕಾರ್ಯಕ್ರಮಕ್ಕೆ ಸಹಯೋಗ ನೀಡಲಿದೆ.

ಪುತ್ತೂರು ಶಾಸಕರಿಗೆ ಬೆದರಿಕೆ ಕರೆ

ಪುತ್ತೂರು: ಪುತ್ತೂರು ಶಾಸಕ ಅಶೋಕ್ ರೈ ಅವರಿಗೆ ದಿಲ್ಲಿಯಿಂದ ವ್ಯಕ್ತಿಯೊಬ್ಬ ಕರೆ ಮಾಡಿ ಬೆದರಿಕೆಯೊಡ್ಡಿರುವ ಕುರಿತು ಸ್ವತಃ ಶಾಸಕರೇ ಬಹಿರಂಗಪಡಿಸಿದ್ದಾರೆ.



ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಸಮೀಪ, ಬಲ್ನಾಡ್ ಕ್ಷೇತ್ರದ ಉಳ್ಳಾಲ್ತಿ ದೈವದ ಕಿರುವಾಳು ಭಂಡಾರ ಬರುವ ದಾರಿಯಲ್ಲಿದ್ದ ಹಳೆಯ ಕಟ್ಟಡವನ್ನು ಭಾನುವಾರ ಕೆಡವಿದ ವಿಚಾರದಲ್ಲಿ ಈ ಬೆದರಿಕೆ ಕರೆ ಬಂದಿದೆ ಎಂದು ಶಾಸಕರು ಹೇಳಿದರು.ಮೊದಲು ವಾಟ್ಸಾಪ್ ಮೂಲಕ ಮೆಸೇಜ್ ಹಾಕಿ ಬೆದರಿಕೆಯೊಡ್ಡಿದ ವ್ಯಕ್ತಿ ಬಳಿಕ ಕರೆ ಮಾಡಿ ಹಿಂದಿ ಭಾಷೆಯಲ್ಲಿ ಬೆದರಿಸಿದ್ದಾನೆ. ನೀವು ಹಾಸನಗಿಯವರ ಜಾಗಕ್ಕೆ ಪ್ರವೇಶ ಮಾಡಿದ್ದೀರಿ. ನಾನು ದಿಲ್ಲಿಯಿಂದ ಪಿಎಂಒ ಕಚೇರಿ ಸಹಾಯದಿಂದ ಈ ಕರೆ ಮಾಡುತ್ತಿದ್ದೇನೆ ಎಂದು ವ್ಯಕ್ತಿ ತಿಳಿಸಿದ್ದಾನೆ. ಆತನಿಗೆ ಸರಿಯಾಗಿ ಉತ್ತರ ಕೊಟ್ಟಿದ್ದೇನೆ. ಕೊನೆಗೆ ನಾನು ಆದಾಯ ತೆರಿಗೆ ಇಲಾಖೆಯಿಂದ ಮಾತನಾಡುತ್ತಿರುವುದಾಗಿ ಹೇಳಿದ್ದಾನೆ. ನಾನೇನೂ ತಪ್ಪು ಮಾಡಿಲ್ಲ. ಹಾಗಿರುವಾಗ ಆದಾಯ ತೆರಿಗೆ ಇಲಾಖೆಯ ಭಯ ನನಗೇಕೆ ಎಂದು ಉತ್ತರಿಸಿದೆ ಎಂದರು. ಬೆದರಿಕೆ ಕರೆ ಬಂದಿರುವ ಬಗ್ಗೆ ಪೊಲೀಸ್ ದೂರು ನೀಡಿಲ್ಲವೇಕೆ ಎಂಬ ಪ್ರಶ್ನೆಗೆ ಉತ್ತರಿಸಿದ ಅವರು, ಇಂತಹದ್ದನ್ನೆಲ್ಲ ನಾನು ಗಂಭೀರವಾಗಿ ಪರಿಗಣಿಸಿಲ್ಲ. ನನ್ನ ಹಿತಶತ್ರುಗಳು ಕೆಲವರಿದ್ದಾರೆ. ಅಶೋಕ್ ರೈಯನ್ನು ಹೇಗೆ ಎಳೆದು ಹಾಕುವುದು ಎಂದು ಕಾಯುತ್ತಿದ್ದಾರೆ ಎಂದರು.

ಕಾಸರಗೋಡು ಜಿಲ್ಲೆಯಲ್ಲಿ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳ ಅವಗಣನೆ | ಪ್ರವಾಸಿಗರಿಗೆ ಸುರಕ್ಷಾ ವ್ಯವಸ್ಥೆಯಿಲ್ಲ

ಸಮುದ್ರ ಕರಾವಳಿಯಲ್ಲಿ ಹೆಚ್ಚುತ್ತಿವೆ ಅವಘಡಗಳು

ಕಾಸರಗೋಡು: ಜಿಲ್ಲೆಯಲ್ಲಿ ಸಮುದ್ರ ಕರಾವಳಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಗಳು ಕಡೆಗಣಿಸಲ್ಪಟ್ಟಿವೆ. ಇದರಿಂದಾಗಿ ಜಿಲ್ಲೆಯಾದ್ಯಂತವಿರುವ ಕಡಲ ಕಿನಾರೆ ಪ್ರವಾಸೋದ್ಯಮ ವಲಯವು ಪ್ರವಾಸಿಗರನ್ನು ಕೈಬೀಸಿ ಕರೆಯುವಲ್ಲಿ ವಿಫಲವಾಗುತ್ತಿದೆ. ಮಾತ್ರವಲ್ಲದೆ ಸುರಕ್ಷಾ ವ್ಯವಸ್ಥೆಗಳಿಲ್ಲದೆ ಜಿಲ್ಲಾ ವ್ಯಾಪ್ತಿಯ ಸಮುದ್ರ ಕರಾವಳಿಯಲ್ಲಿ ನಿತ್ಯವೂ ಅವಘಡಗಳು ಸಂಭವಿಸುತ್ತಿವೆ.

ಮಂಜೇಶ್ವರ, ಕಾಸರಗೋಡು, ಉದುಮ, ಕಾಞಂಗಾಡು, ತೃಕ್ಕರೀಪ್ಪುರ ವಿಧಾನಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಸಮಗ್ರವಾದ ಹಾಗೂ ಅತ್ಯಾಧುನಿಕ ಮಾದರಿಯ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸಲು ಅಧಿಕಾರಿಗಳು ತೋರುತ್ತಿರುವ ನಿರ್ಲಕ್ಷ್ಯ ಧೋರಣೆಯು ಸಾರ್ವಜನಿಕರನ್ನು ಆಕ್ರೋಶಕ್ಕೀಡು ಮಾಡಿದೆ.

ಕರಾವಳಿ ಭಾಗಗಳಲ್ಲಿ ಸುರಕ್ಷಾ ಸೌಲಭ್ಯಗಳಿಲ್ಲದೆ ಸಮುದ್ರಕ್ಕೆ ಬಿದ್ದು ಅಪಘಾತಗಳು, ಜೀವಹಾನಿಗಳು ನಡೆಯುತ್ತಿರುತ್ತವೆ. ಕಳೆದ 10 ವರ್ಷಗಳ ಅವಧಿಯಲ್ಲಿ ಮಂಜೇಶ್ವರದಿಂದ ವಲಿಯಪರಂಬ ತನಕದ ಕಾಸರಗೋಡು ಜಿಲ್ಲೆಯ ಸಮುದ್ರ ತೀರದಲ್ಲಿ ಹಲವಾರು ಪ್ರವಾಸಿಗರು ಮತ್ತು ಇತರರು ಕಡಲಿಗೆ ಬಿದ್ದು ಸಾವನ್ನಪ್ಪಿರುವುದಾಗಿ ಅಂಕಿ ಅಂಶಗಳು ದೃಢಪಡಿಸುತ್ತವೆ. ಸುರಕ್ಷಾ ಗಾರ್ಡ್‌ಗಳಾಗಲಿ, ಮುನ್ನೆಚ್ಚರಿಕಾ ಫಲಕಗಳಾಗಲಿ ಇಲ್ಲದಿರುವುದು ಅಪಘಾತ ವ್ಯಾಪ್ತಿಯನ್ನು ಹೆಚ್ಚಿಸುತ್ತಿದೆ.

ಕಡಲತೀರದ ಆಟಗಳು,ಸಮುದ್ರಸ್ನಾನ ಇತ್ಯಾದಿಗಳ ಮೂಲಕ ಕರಾವಳಿ ಪ್ರದೇಶಗಳಲ್ಲಿ ಅವಘಡಗಳು ನಡೆಯುತ್ತಿವೆ. ಸಮುದ್ರ ಕರಾವಳಿಯಲ್ಲಿ





ಆಟ ಆಡುವವರು, ಸಮುದ್ರ ಸ್ನಾನಕ್ಕೆ ಮತ್ತು ವಿನೋದ ಯಾತ್ರೆಗೆ ತೆರಳುವವರು ಮಾತ್ರವಲ್ಲದೆ ಮೀನು ಕಾರ್ಮಿಕರು ಕೂಡಾ ಸಮುದ್ರದಲ್ಲಿ ಸಂಭವಿಸುವ ಅಪಘಾತಗಳಿಗೆ ಒಳಗಾಗುತ್ತಿದ್ದಾರೆ. ಪ್ರವಾಸೋದ್ಯಮ ಯೋಜನೆಗಳನ್ನು ಅನುಷ್ಠಾನಕ್ಕೆ ತಂದರೆ ಸಮುದ್ರ ಕರಾವಳಿಯಲ್ಲಿ ಸಮರ್ಪಕವಾದ ಸುರಕ್ಷಾ ವ್ಯವಸ್ಥೆಗಳು ಜಾರಿಗೆ ಬರಲಿವೆ. ಈ ಮೂಲಕ ಅಪಘಾತಗಳನ್ನು ತಡೆಗಟ್ಟಲು ಸಹಕಾರಿಯಾಗಬಹುದು ಎಂದು ನಾಗರಿಕರು ತಿಳಿಸಿದ್ದಾರೆ.

ಇದೇ ವೇಳೆ ಮಂಜೇಶ್ವರದ ಕಣ್ವತೀರ್ಥದಿಂದ ಮೊಗ್ರಾಲ್ ಕೊಪ್ಪಳ ತನಕದ ಪ್ರದೇಶ ಹಾಗೂ ಕಾಸರಗೋಡಿನ ಕಡಪ್ಪುರ ಕೂಡಾ ಪ್ರವಾಸೋದ್ಯಮ ಯೋಜನೆಗಳಿಗೆ ಅತ್ಯಂತ ಯೋಗ್ಯವಾದುದಾಗಿದೆ. ಮಂಜೇಶ್ವರ, ಉಪ್ಪಳ, ಕುಂಬಳೆ, ಮೊಗ್ರಾಲ್, ಕಾಸರಗೋಡು, ಬೇಕಲಕೋಟೆ, ನೀಲೇಶ್ವರ, ವಲಿಯಪರಂಬ ಮೊದಲಾದ ಬೀಚ್‌ಗಳಿಗೆ ರಜಾದಿನಗಳಲ್ಲಿ ಮತ್ತು ಉತ್ಸವದ ದಿನಗಳಲ್ಲಿ ನೂರಾರು ಮಂದಿ ತೆರಳಿ ಸಮುದ್ರದಲ್ಲಿ ಈಜಾಡಿ ಖುಷಿಪಡುತ್ತಾರೆ. ಕರ್ನಾಟಕದ ಗಡಿಭಾಗಗಳಿಂದಲೂ ಹಲವಾರು ಮಂದಿ ಆಗಮಿಸುತ್ತಾರೆ.

ಇನ್ನೊಂದೆಡೆ ವಿವಾಹಕ್ಕಿಂತ ಮೊದಲಿನ ಕಾರ್ಯಕ್ರಮಗಳನ್ನು ಕೂಡಾ ಸಮುದ್ರ ಕಿನಾರೆಯಲ್ಲಿ ಅದ್ದೂರಿಯಾಗಿ ಆಚರಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಫೋಟೋ ಕ್ಲಿಕ್ಕಿಸಲು ಸಮುದ್ರ ಅಲೆಗಳತ್ತ ತೆರಳುತ್ತಾರೆ. ಆದರೆ ಬೀಚ್ ಪ್ರದೇಶಗಳಲ್ಲಿ ಸುರಕ್ಷಿತ ಕ್ರಮಗಳಿಲ್ಲದೆ ಜನರು ತೊಂದರೆ ಅನುಭವಿಸುತ್ತಾರೆ. ಇನ್ನೊಂದೆಡೆ ಅಗತ್ಯದ ಶೌಚಾಲಯ, ಆಸನ, ಬೆಳಕು ಮೊದಲಾದ ಮೂಲಭೂತ ಸೌಲಭ್ಯಗಳನ್ನು ಏರ್ಪಡಿಸಲು ಕೂಡಾ ಸಂಬಂಧಪಟ್ಟ ಅಧಿಕಾರಿಗಳು ಆಸಕ್ತಿ ತೋರುತ್ತಿಲ್ಲ ಎಂಬ ಆರೋಪಗಳು ವ್ಯಾಪಕಗೊಂಡಿವೆ.

ಜೀವರಕ್ಷಕ ಉಪಕರಣಗಳನ್ನು ಸಿದ್ಧತೆಯಲ್ಲಿಡಬೇಕು

ಕಾಸರಗೋಡು ಜಿಲ್ಲೆಯ ಹಲವೆಡೆಗಳಲ್ಲಿ ಗತವರ್ಷಗಳಲ್ಲಿ ಸಾರ್ವಜನಿಕರು ನೇತೃತ್ವ ವಹಿಸಿ ಬೀಚ್ ಫೆಸ್ಟ್ ಸಹಿತ ಇನ್ನಿತರ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಭಾರೀ ಜನಾಕರ್ಷಣೆಗೆ ಕಾರಣವಾಗಿದ್ದವು. ಆದರೆ ಪ್ರವಾಸೋದ್ಯಮ ಇಲಾಖೆಯಿಂದ ಅಗತ್ಯದ ಪ್ರೋತ್ಸಾಹ, ಬೆಂಬಲ ಲಭಿಸುತ್ತಿಲ್ಲ. ಕಳೆದ ವರ್ಷ ಕಣ್ವತೀರ್ಥ ಪ್ರವಾಸೋದ್ಯಮ ಯೋಜನೆಗಾಗಿ ನಿರ್ಮಿಸಿದ್ದ ಕಟ್ಟಡವು ಕಡಲ್ಕೊರೆತಕ್ಕೆ ಬಲಿಯಾಗಿದ್ದು, ಅವೈಜ್ಞಾನಿಕ ನಿರ್ಮಾಣವೇ ಇದಕ್ಕೆ ಸಾಕ್ಷಿಯಾಗಿದೆ. ಕರಾವಳಿ ಪ್ರದೇಶಗಳ ಅಪಘಾತಗಳನ್ನು ತಡೆಗಟ್ಟಲು ಶೀಘ್ರವಾಗಿ ಜೀವರಕ್ಷಕರನ್ನು ಹಾಗೂ ಜೀವರಕ್ಷಕ ಉಪಕರಣಗಳನ್ನು ಸಿದ್ಧತೆಯಲ್ಲಿರಿಸಬೇಕು ಎಂದು ನಾಗರಿಕರು ಆಗ್ರಹಿಸಿದ್ದಾರೆ.

ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳು ಬೇಕು

ಪ್ರವಾಸಿಗರಿಗೆ ಮೂಲಭೂತ ಸೌಕರ್ಯಗಳನ್ನು ವ್ಯವಸ್ಥೆಗೊಳಿಸಲು ಮತ್ತು ಅವೈಜ್ಞಾನಿಕವಾದ ನಿರ್ಮಾಣ ಯೋಜನೆಗಳನ್ನು ಹಿಂತೆಗೆದು ನೂತನ ಪ್ರವಾಸೋದ್ಯಮ ಯೋಜನೆಗಳನ್ನು ಜಾರಿಗೊಳಿಸಬೇಕು ಎಂಬ ಅಭಿಪ್ರಾಯ ಸಾರ್ವಜನಿಕರದ್ದಾಗಿದೆ. ಈ ನಡುವೆ ಜಿಲ್ಲೆಯ ಪ್ರವಾಸಿ ತಾಣಗಳಲ್ಲಿ ಹೆಚ್ಚಿನವು ಸಮುದ್ರ ಕಿನಾರೆಯಲ್ಲಿವೆ. ಆದ್ದರಿಂದ ಸಂಬಂಧಪಟ್ಟ ಇಲಾಖೆಗಳ ಅಧಿಕಾರಿಗಳು ಹೆಚ್ಚಿನ ಮುತುವರ್ಜಿ ವಹಿಸಿದಲ್ಲಿ ಸಾಕಷ್ಟು ಪ್ರವಾಸಿಗರನ್ನು ಆಕರ್ಷಿಸುವಂತೆ ಮಾಡಿ ಆದಾಯವನ್ನು ಇಮ್ಮಡಿಗೊಳಿಸಬಹುದಾಗಿದೆ. ಈ ನಿಟ್ಟಿನಲ್ಲಿ ಇನ್ನಾದರೂ ವಿಶೇಷ ಗಮನ ಹರಿಸಬೇಕಾಗಿದೆ.

ತನ್ನ ನೂತನ ಮನೆಯ ಗೃಹಪ್ರವೇಶದ ಔತಣಕೂಟದ ದಿನದಂದೇ ವಾಗ್ಮಿ ಸಾವು

ಬಂಟ್ವಾಳ : ತನ್ನ ನೂತನ ಮನೆಯ ಗೃಹಪ್ರವೇಶದ ಔತಣಕೂಟದ ದಿನದಂದೇ ಯುವ ಮುಸ್ಲಿಂ ವಿದ್ವಾಂಸರೋರ್ವರು ಇಹಲೋಕ ತ್ಯಜಿಸಿದ ಘಟನೆಯೊಂದು ಸಜಿಪಮುನ್ನೂರು ಗ್ರಾಮದ ಆಲಾಡಿ–ಕೊಪ್ಪಳ ಎಂಬಲ್ಲಿ ಸೋಮವಾರ ಬೆಳಗ್ಗಿನ ಜಾವ ಸಂಭವಿಸಿದೆ.

ಮೂಲತಃ ಸಜಿಪನಡು ನಿವಾಸಿ ಪುತ್ತನಾಕ ಅವರ ಪುತ್ರರಾದ ಅಮೀರ್ ಅರ್ಶದಿ (36) ಎಂಬವರೇ ಹಠಾತ್ ಹೃದಯಾಘಾತಕ್ಕೊಳಗಾಗಿ ನಿಧನರಾದ ಯುವ ವಿದ್ವಾಂಸ.

ಮರ್ಹೂಂ ಶೈಖುನಾ ಮಿತ್ತಬೈಲು ಉಸ್ತಾದರ ಶಿಷ್ಯರಾಗಿದ್ದ ಇವರು ತಾಳಿಪಡು ಮಸ್ಜಿದುಲ್ ಹುದಾ ಮಸೀದಿಯಲ್ಲಿ ಕಳೆದ ಐದು ವರ್ಷಗಳಿಂದ ಖತೀಬರಾಗಿ ಸೇವೆ ಸಲ್ಲಿಸುತ್ತಿದ್ದು, ಜಮಾಅತ್ ವ್ಯಾಪ್ತಿಯಲ್ಲಿ ಹಲವು ಗಣನೀಯ ಬದಲಾವಣೆ ಹಾಗೂ ಯುವಸಮೂಹದಲ್ಲಿ ಧಾರ್ಮಿಕ ಪ್ರಜ್ಞೆ ಮೂಡಿಸುವ ಕಾರ್ಯ ನಡೆಸಿದ್ದರು ಎಂದು ಸ್ಥಳೀಯರು ಮಾಹಿತಿ ನೀಡಿದ್ದಾರೆ.



ಅತ್ಯುತ್ತಮ ವಾಗ್ಮಿಯೂ ಆಗಿದ್ದ ಇವರು ಈ ಹಿಂದೆ ಸಜಿಪಮುನ್ನೂರು ಗ್ರಾಮದ ಮಲಾಯಿಬೆಟ್ಟು ಹಯಾತುಲ್ ಇಸ್ಲಾಂ ಮದ್ರಸದಲ್ಲಿ ಸುಮಾರು ಮೂರು ವರ್ಷಗಳ ಕಾಲ ಮದ್ರಸ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

ಇವರಿಗೆ ಇತ್ತೀಚೆಗಷ್ಟೆ ಕಿಡ್ನಿ ಸಂಬಂಧಿ ಕಾಯಿಲೆ ಕಾಣಿಸಿಕೊಂಡ ಹಿನ್ನಲೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಭಾನುವಾರ ಮಧ್ಯ ರಾತ್ರಿ ಹಠಾತ್ ಎದೆ ನೋವು ಕಾಣಿಸಿಕೊಂಡ ಹಿನ್ನಲೆಯಲ್ಲಿ ತಕ್ಷಣ ಅವರನ್ನು ಬಿ ಸಿ ರೋಡು ಪರಿಸರದ ಖಾಸಗಿ ಆಸ್ಪತ್ರೆಗೆ ಸಾಗಿಸಿ ಅಲ್ಲಿನ ವೈದ್ಯರ ಸಲಹೆಯಂತೆ ಮಂಗಳೂರಿನ ಆಸ್ಪತ್ರೆಗೆ ಸಾಗಿಸಲಾಯಿತಾದರೂ ಅದಾಗಲೇ ಅವರು ಮೃತಪಟ್ಟಿದ್ದಾರೆ ಎನ್ನಲಾಗಿದೆ.

ಇವರು ಇತ್ತೀಚೆಗಷ್ಟೆ ಸಜಿಪಮುನ್ನೂರು ಗ್ರಾಮದ ಆಲಂಪಾಡಿ–ಕೊಪ್ಪಳ ಎಂಬಲ್ಲಿ ನೂತನ ಮನೆ ನಿರ್ಮಿಸಿ ಕೆಲಸ ಪೂರ್ಣಗೊಂಡಿದ್ದು, ಏ. 17 ರಂದು ಔಪಚಾರಿಕ ಗೃಹಪ್ರವೇಶ ಪ್ರಕ್ರಿಯೆ ನಡೆಸಿದ್ದರು, ಏ. 27 ರ ಮಧ್ಯಾಹ್ನ ಬಂಧು–ಮಿತ್ರರಿಗೆ ಔತಣಕೂಟ ಏರ್ಪಡಿಸಿದ್ದರು. ಈ ಔತಣಕೂಟಕ್ಕಾಗಿ ಮುನ್ನಾ ರಾತ್ರಿವರೆಗೂ ಬಂಧು–ಮಿತ್ರರಿಗೆ ಕರೆ ಮಾಡಿ ಆಹ್ವಾನಿಸಿದ್ದರು ಎಂದು ಆಹ್ವಾನ ಕರೆ ಸ್ವೀಕರಿಸಿದ ಬಂಧು–ಮಿತ್ರರು ಅವರ ಹಠಾತ್, ಅಕಾಲಿಕ ನಿಧನಕ್ಕೆ ತೀವ್ರ ಆಘಾತ ಹಾಗೂ ದುಃಖ ವ್ಯಕ್ತಪಡಿಸಿದ್ದಾರೆ.

ಎಸ್ಸೆಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಆಳ್ವಾಸ್‌ನ ಸಾಧ್ವಿಗೆ ಶಿಕ್ಷಣ ಇಲಾಖೆಯಿಂದ ಅಭಿನಂದನೆ

ಮೂಡುಬಿದಿರೆ: ಆಳ್ವಾಸ್ ವಿದ್ಯಾ ವಿದ್ಯಾಸಂಸ್ಥೆಯಲ್ಲಿ ಎಸ್ಸೆಸೆಲ್ಸಿಯಲ್ಲಿ ಅತಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿನಿ ಸಾಧ್ವಿ ಅವರನ್ನು ಶಿಕ್ಷಣ ಇಲಾಖೆಯ ವತಿಯಿಂದ ಅವರ ಮನೆಗೆ ಹೋಗಿ ಅಭಿನಂದಿಸಲಾಯಿತು. ಈ ಬಾರಿ ಎಸ್ಸೆಸೆಲ್ಸಿ ಪರೀಕ್ಷಾ ಫಲಿತಾಂಶದಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಪ್ರಥಮ ಸ್ಥಾನ ಪಡೆದಿದ್ದು, ಮೂಡುಬಿದಿರೆ ಜಿಲ್ಲೆಯಲ್ಲಿ ಪ್ರಥಮ ಸ್ಥಾನವನ್ನು ಪಡೆದಿದೆ. ಶಿಕ್ಷಕರ, ಪಾಲಕರ, ಇಲಾಖೆಯ ಮಾರ್ಗದರ್ಶನದ ಮೂಲಕ ರಾಜ್ಯಮಟ್ಟದಲ್ಲಿ ಜಿಲ್ಲೆ ಮತ್ತು ತಾಲೂಕು ಗುರುತಿಸಲ್ಪಟ್ಟಿದೆ. ನಿರಂತರ ಪ್ರಯತ್ನ ಮತ್ತು ಶ್ರದ್ಧೆಯಿಂದ ಅಧ್ಯಯನ ಮಾಡುವುದರ ಮೂಲಕ ಸಂಸ್ಥೆಗೆ, ಪೋಷಕರಿಗೆ, ಇಲಾಖೆಗೆ ಗೌರವವನ್ನು ತಂದು ಕೊಟ್ಟ ಕುಮಾರಿ ಸಾಧ್ವಿಗೆ ದಕ್ಷಿಣ ಕನ್ನಡ ಜಿಲ್ಲಾ ಶಾಲಾ ಶಿಕ್ಷಣ ಇಲಾಖೆ ವತಿಯಿಂದ ಡಿ.ಡಿ.ಪಿ.ಐ. ಶಶಿಧರ್ ಅವರು ಅಭಿನಂದನೆ ಸಲ್ಲಿಸಿದರು.



ಅವರ ಜೊತೆಯಲ್ಲಿ ಡಯಟ್ ಉಪನ್ಯಾಸಕರಾದ ಸುರೇಶ್, ತಾರೇಶ ನಾಯಕ್, ಮೂಡುಬಿದಿಯ ಕ್ಷೇತ್ರ ಶಿಕ್ಷಣಾಧಿಕಾರಿ ವಿರೂಪಾಕ್ಷಪ್ಪ, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಮಹಮ್ಮದ್ ರಿಯಾಜ್, ಮೂಡುಬಿದಿರೆ ತಾಲೂಕು ಸಹ ಶಿಕ್ಷಕರ ಸಂಘದ ಅಧ್ಯಕ್ಷ ಡಾ. ರಾಮಕಷ್ಣ ಶಿರೂರು, ಕಡಬ ತಾಲೂಕಿನ ಸಹಶಿಕ್ಷಕ ಸಂಘದ ಅಧ್ಯಕ್ಷ ಶಾಂತರಾಮ ಮತ್ತು ಪದಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ವಿದ್ಯಾರ್ಥಿನಿಯ ತಂದೆ ಪ್ರಭಾಕರ ಮತ್ತು ಮಮತಾ ಅವರು ತಮ್ಮ ಸಂತೋಷವನ್ನು ಹಂಚಿಕೊಂಡು ವಿದ್ಯಾ ಸಂಸ್ಥೆಗೆ ಮತ್ತು ಇಲಾಖೆಗೆ ಧನ್ಯವಾದ ಸಲ್ಲಿಸಿದರು.

ಕುಕ್ಕರ್ ಬಾಂಬ್ ಸ್ಫೋಟದ ಆರೋಪಿಗೆ ಶಿಕ್ಷೆ ಸ್ವಾಗತಾರ್ಹ

ಮಂಗಳೂರು: ಇತಿಹಾಸ ಪ್ರಸಿದ್ಧ ಕದ್ರಿ ಮಂಜುನಾಥ ದೇವಸ್ಥಾನವನ್ನು ಗುರಿಯಾಗಿಸಿಕೊಂಡಿದ್ದ, ಮಂಗಳೂರು ಕುಕ್ಕರ್ ಬಾಂಬ್ ಸ್ಫೋಟದ ಆರೋಪಿ ಉಗ್ರ ಮೊಹಮ್ಮದ್ ಶಾರೀಕ್‌ಗೆ ಎನ್‌ಐಎ ವಿಶೇಷ ನ್ಯಾಯಾಲಯವು 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿ ತೀರ್ಪು ನೀಡಿದ್ದು ಸ್ವಾಗತಾರ್ಹವೆಂದು ಶಾಸಕ ವೇದವ್ಯಾಸ ಕಾಮತ್ ಹೇಳಿದ್ದಾರೆ.



ಐಸಿಸ್‌ ಸಂಘಟನೆಯಿಂದಪ್ರೇರಣೆಗೊಂಡಿದ್ದ ಇಂತಹವರನ್ನೂ ಸಹ ಅಂದು 'ಅಮಾಯಕ', 'ಬ್ರದರ್ಸ್', 'ಇದು ಸಣ್ಣ ಘಟನೆ' ಎಂದೆಲ್ಲಾ ಸಮರ್ಥನೆಗೆ ಇಳಿದಿದ್ದ ಕಾಂಗ್ರೆಸ್ಸಿಗರು ಇನ್ನಾದರೂ ಆತ್ಮವಿಮರ್ಶೆ ಮಾಡಿಕೊಳ್ಳಲಿ. ಭಯೋತ್ಪಾದನೆ ಹಾಗೂ ಭಯೋತ್ಪಾದಕರ ಬಗ್ಗೆ ಮೃದು ಧೋರಣೆ ತೋರುವ ಕಾಂಗ್ರೆಸ್ಸಿಗರಿಂದ ರಾಜ್ಯದ ರಕ್ಷಣೆ ಎಷ್ಟರಮಟ್ಟಿಗೆ ಸಾಧ್ಯ ಎಂದು ಈಗ ಜನರಲ್ಲಿ ಪ್ರಶ್ನೆ ಮೂಡುವುದು ಸಹಜವಾಗಿದೆ.

ನ್ಯಾಯಾಲಯವು ನೀಡಿರುವ ತೀರ್ಪು ಶಾರೀಕ್ ನಂತೆ ಭಯೋತ್ಪಾದನೆಯ ಹಾದಿ ಹಿಡಿಯುವ ಎಲ್ಲಾ ಉಗ್ರರಿಗೆ ಎಂದಿಗೂ ಮರೆಯಲಾಗದ ಪಾಠವಾಗಲಿ ಎಂದು ಹೇಳಿದ್ದಾರೆ.

ಘಟನೆಯಲ್ಲಿ ಅಂದು ಗಾಯಗೊಂಡಿದ್ದ ಪುರುಷೋತ್ತಮ್ ಪೂಜಾರಿ ಅವರಿಗೆ ಬಿಜೆಪಿ ಸರ್ಕಾರದ ಅವಧಿಯಲ್ಲಿ 5 ಲಕ್ಷ ರೂ. ಪರಿಹಾರ ಸಹಿತ ಹೊಸ ಆಟೋ ರಿಕ್ಷಾ ಒದಗಿಸಿ ಬದುಕು ಕಟ್ಟಿಕೊಳ್ಳಲು ನೆರವಾಗಿದ್ದು ಒಂದು ಹಂತದ ನ್ಯಾಯವಾದರೆ, ಇಂದಿನ ನ್ಯಾಯಾಲಯದ ತೀರ್ಪು ಮತ್ತೊಂದು ಹಂತದ ನ್ಯಾಯವಾಗಿದೆ ಎಂದು ಕಾಮತ್ ಹೇಳಿದ್ದಾರೆ.

ಕೊಲ್ಲೂರು ಧರ್ಮಪೀಠ ಆಶ್ರಮದ ವಾರ್ಷಿಕ ಅನ್ನದಾನ ಸೇವೆ

275 ಫಲಾನುಭವಿಗಳಿಗೆ ಕಿಟ್

ಬೈಂದೂರು: ಕೊಲ್ಲೂರಿನ ಈ ಮಣ್ಣುಭೂಮಿಯಲ್ಲಿ ಧರ್ಮಪೀಠ ಆಶ್ರಮದ ವತಿಯಿಂದ ಮಠದ ಸ್ವಾಮೀಜಿಯವರು ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಈ ಭಾಗದ ಜನರಿಗೆ ಸಹಾಯಹಸ್ತ ನೀಡುವ ಮೂಲಕ ಧರ್ಮಕಾರ್ಯ ಮಾಡುತ್ತಿರುವುದು ಅಭಿನಂದನೀಯ. ನಡೆದಾಡುವ ದೇವರೆಂದು ಕರೆಯಲ್ಪಡುವ ಕೇರಳದ ತಥಾತ ಗುರೂಜಿ ಇವರು ಕಳೆದ ಮೂವತ್ತು ವರ್ಷಗಳ ಹಿಂದೆ ಕೊಲ್ಲೂರಿನಲ್ಲಿ ಸ್ಥಾಪಿಸಿದ್ದ ಧರ್ಮಪೀಠ ಇಂದು ಸುಮಾರು 35 ರಾಷ್ಟ್ರಗಳಲ್ಲಿ ಜಾತಿ, ಮತ, ಧರ್ಮ ಭೇಧವಿಲ್ಲದೇ ಆಧ್ಯಾತ್ಮದ ಜತೆಗೆ ಹಿಂದುಧರ್ಮ ಪ್ರಚಾರ ಹಾಗೂ ಜಾಗೃತಿ ಮೂಡಿಸುವ ಕಾರ್ಯ ಮಡುತ್ತಿರುವುದು ಶ್ಲಾಘನೀಯ ಎಂದು ಶಾಸಕ ಗುರುರಾಜ ಗಂಟಿಹೊಳೆ ಹೇಳಿದರು.



ಕೊಲ್ಲೂರು ಧರ್ಮಪೀಠ ಆಶ್ರಮದ ವಾರ್ಷಿಕ ಅನ್ನದಾನ ಸೇವೆಯ ಅಂಗವಾಗಿ ಸೋಮವಾರ ನಡೆದ ಉಚಿತ ಕಿಟ್ ವಿತರಣಾ ಸಮಾರಂಭದಲ್ಲಿ ಐದು ಗ್ರಾಮಗಳ ಸುಮಾರು 275 ಅರ್ಹ ಫಲಾನುಭವಿಗಳಿಗೆ ಉಚಿತ ಆಹಾರ ಕಿಟ್ ಅನ್ನು ವಿತರಿಸಿ ಮಾತನಾಡಿದರು. ಧ್ಯಾನ, ಯೋಗ, ಪ್ರಾಣಾಯಾಮಗಳ ಅಭ್ಯಾಸಕ್ಕಾಗಿ ಇತರೇ ಧರ್ಮದ ಸಾವಿರಾರು ವಿದೇಶಿ ಭಕ್ತರು ಕೊಲ್ಲೂರಿಗೆ ಬರುತ್ತಿದ್ದಾರೆ. ಇವರ ಆಗಮನ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿದೆ. ಇವರೆಲ್ಲರೂ ಹಿಂದು ಜೀವನ ಪದ್ಧತಿ, ಧರ್ಮದ ಸಾರ ಹಾಗೂ ಆಚರಣೆಗಳ ಬಗ್ಗೆ ಅಧ್ಯಯನ ಮಾಡಿಕೊಂಡು ನಮ್ಮ ಧರ್ಮದ ಅನುಯಾಯಿಗಳಾಗುತ್ತಿದ್ದಾರೆ. ಹಿಂದು ಸಮಾಜ ಮುನ್ನಡೆಸುವ ನಿಟ್ಟಿನಲ್ಲಿ ಹಾಗೂ ಧರ್ಮ ಉಳಿಸಿ ಬೆಳೆಸಬೇಕು ಎಂಬ ಧ್ಯೇಯೋದ್ದೇಶದಿಂದ ಧರ್ಮಪೀಠ ನಿಸ್ವಾರ್ಥ ಸೇವೆ ನೀಡುತ್ತಿದೆ ಎಂದರು.

ಮಾಜಿ ಶಾಸಕ ಬಿ. ಎಂ. ಸುಕುಮಾರ ಶೆಟ್ಟಿ ಸಮಾರಂಭ ಉದ್ಘಾಟಿಸಿದರು. ಧರ್ಮಪೀಠ ಆಶ್ರಮದ ಸ್ವಾಮೀಜಿ ಮೈತ್ರಿ ಸನತ್ ಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಕೊಲ್ಲೂರು ಗ್ರಾಮ ಪಂಚಾಯತ್ ಮಾಜಿ ಅಧ್ಯಕ್ಷ ಶಿವರಾಮ ಕೃಷ್ಣಭಟ್, ಆಶ್ರಮದ ಧರ್ಮ ಉಪನ್ಯಾಸಕರಾದ ವಿವಾಸ್ವಾನ್ ಗುರೂಜಿ, ಮೈತ್ರೇಯ ಗುರೂಜಿ, ಚೈತನ್ಯದಾಸ್ ಗುರೂಜಿ ಉಪಸ್ಥಿತರಿದ್ದರು.

ಕೊಲ್ಲೂರು ಶ್ರೀ ಮೂಕಾಂಬಿಕಾ ವ್ಯವಸಾಯ ಸೇವಾ ಸಹಕಾರಿ ಸಂಘದ ನಿರ್ದೇಶಕರಾದ ಸಂದೀಪ್ ಕೊಲ್ಲೂರು ಸ್ವಾಗತಿಸಿ, ಚಂದ್ರ ಬಳೆಗಾರ್ ನಿರೂಪಿಸಿದರು. ಗಿರೀಶ್ ಶೆಟ್ಟಿ ವಂದಿಸಿದರು.

ಪೋರ್ಟ್ ವಾರ್ಡ್‌ನ ಅಲ್ಲಲ್ಲಿ ನೀರಿನ ಕೊರತೆ | ಪೂರೈಕೆಯಾಗುವ ನೀರಿನ ಪ್ರಮಾಣ ಕಡಿಮೆ

ನಿಧಾನ ನೀರು ನಿತ್ಯ ಬಳಕೆಗೆ ಸಾಕಾಗುತ್ತಿಲ್ಲ

ಹರೀಶ ಕುಲ್ಕುಂದ

ದಿಗಂತ ವಾಟರ್ ಚೆಕ್

ಮಂಗಳೂರು: ದಕ್ಕೆ ಹಾಗೂ ಅತಿ ಹೆಚ್ಚು ಸರಕಾರಿ ಕಚೇರಿಗಳನ್ನು ಒಳಗೊಂಡಿರುವ ಪೋರ್ಟ್ ವಾರ್ಡ್‌ನ ಅಲ್ಲಲ್ಲಿ ನೀರಿನ ಸಮಸ್ಯೆಯಿದೆ. ಬಂದರು ಪೊಲೀಸ್ ಠಾಣೆಯಿಂದ ಕಂದುಕ, ಗೂಡ್ಸ್ ಶೆಡ್, ಪಾಂಡೇಶ್ವರ ಟೆಲಿಕಾಂ ರಸ್ತೆ ಬಲಗಡೆ, ರೋಜಾರಿಯೊ, ಸೈಂಟ್ ಆ್ಯನ್ಸ್, ಹೊಯಿಗೆಬಜಾರ್ ಮುಖ್ಯರಸ್ತೆ, ಸುಭಾಶ್‌ನಗರ, ಅಮೃತನಗರ, ಪಾಂಡೇಶ್ವರ ಮಹಾಲಿಂಗೇಶ್ವರ ದೇವಸ್ಥಾನ ವಠಾರ, ಎಮ್ಮೆಕೆರೆ ಗ್ರೌಂಡ್‌ವರೆಗೆ ವ್ಯಾಪಿಸಿರುವ ಪೋರ್ಟ್ ವಾರ್ಡ್ ನದಿ, ಸಮುದ್ರ ತಟದಲ್ಲಿ ಇದ್ದರೂ, ನೀರಿನ ಕೊರತೆ ಎದುರಿಸುತ್ತಿದೆ.

ಈ ವಾರ್ಡ್‌ನ ಕಂದುಕ, ನೆಲ್ಲಿಕಾಯಿ ರಸ್ತೆ, ಗೂಡ್ಸ್‌ಶೆಡ್, ಪಾಂಡೇಶ್ವರ, ಸುಭಾಶ್‌ನಗರ ಪ್ರದೇಶಗಳಲ್ಲಿ ಜನತೆ ನೀರಿನ ತೊಂದರೆ ಅನುಭವಿಸುತ್ತಿದ್ದಾರೆ. ಈ ವಾರ್ಡ್‌ಗೆ ಬೆಂದೂರುವೆಲ್ ಹಾಗೂ ಪಡೀಲ್ ಟ್ಯಾಂಕ್‌ನಿಂದ ನೀರು ಬರುತ್ತಿದೆ. ಬೆಂದೂರ್‌ವೆಲ್ ಟ್ಯಾಂಕ್‌ನಿಂದ ಪುರಭವನದ ಪಂಪ್‌ಹೌಸ್ ಮೂಲಕ ಕಂದುಕ, ಗೂಡ್ಸ್‌ಶೆಡ್, ನೆಲ್ಲಿಕಾಯಿ ರಸ್ತೆ, ಪಾಂಡೇಶ್ವರ, ಅಮೃತನಗರ ಪ್ರದೇಶಗಳಿಗೆ ಬೆಳಗ್ಗೆ 6.30ರಿಂದ 9ಗಂಟೆವರೆಗೆ ನೀರು ಸರಬರಾಜು ಮಾಡಲಾಗುತ್ತಿದೆ. ಅಮೃತನಗರಕ್ಕೆ ಬೆಳಗ್ಗೆ 11ಕ್ಕೆ ನೀರು ಬರುತ್ತಿದೆ. ಪಡೀಲ್ ಟ್ಯಾಂಕ್‌ನಿಂದ ಸುಭಾಶ್‌ನಗರ, ಹೊಯಿಗೆಬಜಾರ್, ಪಟೇಲ್ ಕಂಪೌಂಡ್, ಹೊಯಿಗೆಬಜಾರ್ ಮುಖ್ಯರಸ್ತೆ ಪ್ರದೇಶಕ್ಕೆ ಬೆಳಗ್ಗೆ 5ರಿಂದ 9ರವರೆಗೆ ನೀರು ಬರುತ್ತಿದೆ. ಎರಡೂ ಕಡೆ ಎರಡು ದಿನಕ್ಕೊಮ್ಮೆ ಸಂಜೆ ವೇಳೆ ನೀರು ನೀಡಲಾಗುತ್ತಿದೆ.

ಟೌನ್‌ಹಾಲ್ ಪಂಪ್‌ಹೌಸ್‌ನಿಂದ 6 ವಾರ್ಡ್‌ಗಳಿಗೆ ನೀರು ಹಂಚಿಕೆ ಮಾಡಲಾಗುತ್ತದೆ. ಈ ಪೈಕಿ ನಾಲ್ಕು ವಾರ್ಡ್‌ಗಳಲ್ಲಿ ಕಮರ್ಶಿಯಲ್ ಸಂಪರ್ಕ ಅಧಿಕವಿದೆ. ಮನೆಗಳ ಸಂಖ್ಯೆ ಹೆಚ್ಚಿದೆ. ಪೊಲೀಸ್ ಲೇನ್ ಹಾಗೂ ಸುತ್ತಲಿನ ಪ್ರದೇಶಗಳ ಫ್ಲ್ಯಾಟ್‌ಗಳಲ್ಲಿ ಹಿಂದೆ ನೀರಿನ ಸಣ್ಣ ತೊಟ್ಟಿಗಳಿದ್ದವು. ಈಗ ದೊಡ್ಡ ಟ್ಯಾಂಕ್‌ಗಳನ್ನು ಅಳವಡಿಸಲಾಗಿದೆ. ಆದರೆ, ಪೂರೈಕೆಯಾಗುವ ನೀರಿನ ಪ್ರಮಾಣ ಹಿಂದಿನಷ್ಟೇ ಇದೆ. ದೊಡ್ಡ ನೀರಿನ ತೊಟ್ಟಿಗಳನ್ನು ತುಂಬಿಸುವ ವೇಳೆ ಕಂದುಕ ಸಹಿತ ಪೈಪ್‌ಲೈನ್‌ನ ಕೊನೆಯ ಸ್ಥಳಗಳಿಗೆ ನೀರು ತಲುಪುತ್ತಿಲ್ಲ. ಪ್ರೆಶರ್ ಕೊರತೆಯಿಂದ ಅಗತ್ಯ ಇರುವಷ್ಟು ಪ್ರಮಾಣದಲ್ಲಿ ನೀರು ದೊರೆಯುತ್ತಿಲ್ಲ ಎನ್ನುತ್ತಾರೆ ಸ್ಥಳೀಯರು.

ನೀರಿನ ಕೊರತೆ ಕಾಣಿಸಿಕೊಂಡಾಗ ಮಂಗಳೂರು ಮಹಾನಗರ ಪಾಲಿಕೆ ವತಿಯಿಂದ ಟ್ಯಾಂಕರ್ ಮೂಲಕ ನೀರು ಒದಗಿಸಲಾಗುತ್ತಿದೆ. ಆದರೆ, ಗೂಡ್ಸ್ ಶೆಡ್, ಪಾಂಡೇಶ್ವರ ದೇವಸ್ಥಾನದ ಬಳಿ ಕಾಲುದಾರಿಗಳು ಇರುವ ಕಾರಣ ಟ್ಯಾಂಕರ್ ಬರುವುದು ಸಾಧ್ಯವಾಗುತ್ತಿಲ್ಲ. ಈ ವಾರ್ಡ್‌ನಲ್ಲಿ ಸರಕಾರಿ ಬಾವಿ, ಕೊಳವೆಬಾವಿಗಳು ಇಲ್ಲ. ಪಟೇಲ್ ಕಂಪೌಂಡ್ ಬಳಿ ಬಾವಿಯೊಂದಿದ್ದರೂ, ಡ್ರೈನೇಜ್ ನೀರು ಸೋರಿಕೆಯಿಂದ ಇದರ ನೀರನ್ನು ಕುಡಿಯಲು ಉಪಯೋಗಿಸುತ್ತಿಲ್ಲ. ಪೋರ್ಟ್ ವಾರ್ಡ್‌ನಲ್ಲಿ ಜಲಸಿರಿ ಕಾಮಗಾರಿ ಅರೆಬರೆ ನಡೆದಿದೆ. ಶೇ.75ರಷ್ಟು ಪೈಪ್‌ಲೈನ್ ಆಗಿದ್ದು, ನೀರಿನ ಸಂಪರ್ಕ ನೀಡಿಲ್ಲ.



ಸ್ಟೇಟ್‌ಬ್ಯಾಂಕ್- ಹಳೆ ಬಂದರು ರಸ್ತೆಗೆ ಕಾಂಕ್ರೀಟ್ ಹಾಕಿ ಬೀದಿದೀಪ ಅಳವಡಿಸಲಾಗಿದೆ.

ನಮ್ಮ ವಾರ್ಡ್‌ನಲ್ಲಿ ಪ್ರೆಶರ್ ಕೊರತೆ-ಯಿಂದ ಜನರಿಗೆ ಅಗತ್ಯ ಇರುವಷ್ಟು ನೀರು ಲಭ್ಯವಾಗುತ್ತಿಲ್ಲ. ಟೌನ್‌ಹಾಲ್ ಪಂಪ್ ಹೌಸ್‌ನಿಂದ 6 ವಾರ್ಡ್‌ಗಳಿಗೆ ನೀರು ಹಂಚಿ ನೀಡುವ ಕಾರಣ ನಮ್ಮ ವಾರ್ಡ್‌ಗೆ ಕಡಿಮೆ ನೀರು ಪೂರೈಕೆ ಆಗುತ್ತಿದೆ. ಇದರಿಂದಾಗಿ ಕೆಲ ಪ್ರದೇಶಗಳಲ್ಲಿ ನೀರಿನ ಕೊರತೆ ಉಂಟಾಗಿದೆ. ಲೇಡಿಗೋಶನ್ ಬಳಿ ಜಲಸಿರಿ ಯೋಜನೆ ಮೂಲಕ ಬೃಹತ್ ನೀರಿನ ಟ್ಯಾಂಕ್ ನಿರ್ಮಾಣಗೊಂಡಿದ್ದು, ಅದರಿಂದ ಸಮರ್ಪಕವಾಗಿ ಉತ್ತಮ ಪ್ರೆಶರ್‌ನೊಂದಿಗೆ ನೀರು ಒದಗಿಸಿದರೆ ನಮ್ಮ ವಾರ್ಡ್‌ನ ನೀರಿನ ಸಮಸ್ಯೆ ಬಗೆಹರಿಸಬಹುದು. ಪೋರ್ಟ್ ವಾರ್ಡ್‌ನಲ್ಲಿ ಶೇ.40ರಷ್ಟು ಜಾಗ ಮಾತ್ರ ಮಂಗಳೂರು ಮಹಾನಗರ ಪಾಲಿಕೆ ಸುಪರ್ದಿಯಲ್ಲಿದೆ. ಉಳಿದ ಶೇ.30ರಷ್ಟು ಭೂಮಿ ಮೀನುಗಾರಿಕಾ ಇಲಾಖೆ, ಶೇ.30ರಷ್ಟು ಜಾಗ ಬಂದರು ಇಲಾಖೆ ವ್ಯಾಪ್ತಿಯಲ್ಲಿದೆ. ಗೂಡ್ಸ್ ಶೆಡ್ ರೈಲ್ವೆ ಇಲಾಖೆ ಅಧೀನದಲ್ಲಿದೆ. ಹಾಗಾಗಿ ಇಲ್ಲಿ ಯಾವುದೇ ಕಾಮಗಾರಿ ನಡೆಸಬೇಕಾದರೂ ಸಂಬಂಧಿತ ಇಲಾಖೆಗೆ ಅನುಮತಿ ಅಗತ್ಯ. ಪಾಂಡೇಶ್ವರ, ಹೊಯಿಗೆಬಜಾರ್‌ನಲ್ಲಿ ರೈಲ್ವೆ ಗೇಟ್‌ನಿಂದ ಜನತೆ ಭಾರಿ ತೊಂದರೆ ಅನುಭವಿಸುತ್ತಿದ್ದಾರೆ. ಹ್ಯಾಮಿಲ್ಟನ್ ಸರ್ಕಲ್‌ನಲ್ಲಿ ಏಕಮುಖವೋ, ದ್ವಿಮುಖ ಸಂಚಾರವೋ ಎಂಬ ಬಗ್ಗೆ ಜನತೆ ಇನ್ನೂ ಗೊಂದಲದಲ್ಲಿದ್ದಾರೆ. ಸುಭಾಶನಗರ ಪ್ರದೇಶದಲ್ಲಿ ಮಳೆಗಾಲದಲ್ಲಿ ನೆರೆ ತಪ್ಪಿಸಲು ಹೊಯಿಗೆಬಜಾರ್ ಅಲ್ಬುಕರ್ಕ್ ಹಂಚಿನ ಕಾರ್ಖಾನೆ ಬಳಿ ಹಳೆಯ ಸೇತುವೆ ತೆರವುಗೊಳಿಸಿ, ನೀರು ಸರಾಗವಾಗಿ ಹರಿದುಹೋಗಲು ಅನುಕೂಲವಾಗುವಂತೆ ಹೊಸ ಸೇತುವೆ ನಿರ್ಮಿಸಬೇಕಿದೆ. ವಾರ್ಡ್‌ನ ಶೇ.95ರಷ್ಟು ರಸ್ತೆಗಳಿಗೆ ಕಾಂಕ್ರೀಟ್ ಅಳವಡಿಸಲಾಗಿದೆ. ಶೇ.70ರಷ್ಟು ಯುಜಿಡಿ ಕಾಮಗಾರಿ ಮಾಡಲಾಗಿದೆ. ಗೂಡ್ಸ್ ಶೆಡ್ ಮುಖ್ಯರಸ್ತೆ, ಸ್ಟೇಟ್‌ಬ್ಯಾಂಕ್ ಬಳಿ ಹಳೆ ಬಂದರು ರಸ್ತೆ, ಬಂದರು ಪೊಲೀಸ್ ಠಾಣೆಯಿಂದ ನೀರೇಶ್ವಾಲ್ಯ ರಸ್ತೆ, ಕಂದುಕ ಒಳರಸ್ತೆ, ಸುಭಾಶ್‌ನಗರ 1 ಹಾಗೂ 3ನೇ ರಸ್ತೆಗೆ ಕಾಂಕ್ರೀಟ್ ಹಾಕಲಾಗಿದೆ. ಎಲ್‌ಇಡಿ ಬೀದಿದೀಪಗಳನ್ನು ಅಳವಡಿಸಲಾಗಿದೆ.



■ **ಅಬ್ದುಲ್ ಲತೀಫ್, ಪೋರ್ಟ್ ವಾರ್ಡ್ ನಿಕಟಪೂರ್ವ ಕಾರ್ಪೋರೇಟರ್**

ನಮ್ಮಲ್ಲಿ ನೀರು ಪೂರೈಕೆಗೆ ನಿರ್ದಿಷ್ಟ ಸಮಯ ಎಂಬುದಿಲ್ಲ. ಒಂದು ದಿನ ಬೆಳಗ್ಗೆ ನೀರು ಬಂದರೆ, ಇನ್ನೊಂದು ದಿನ ಸಂಜೆ ಬರುತ್ತದೆ. ಮತ್ತೊಂದು ದಿನ ರಾತ್ರಿ ವೇಳೆ ನೀರು ಬಿಡಲಾಗುತ್ತಿದೆ. ಇದರಿಂದಾಗಿ ನೀರು ಯಾವಾಗ ಬರುತ್ತದೆ ಎಂದು ಇಡೀ ದಿನ ನಾವು ಕಾಯುವಂತಾಗಿದೆ. ಪ್ರತಿದಿನ ನಿಧಾನವಾಗಿ ನೀರು ಬರುತ್ತಿದ್ದು, ನಿತ್ಯ ಬಳಕೆಗೆ ಸಾಕಾಗುತ್ತಿಲ್ಲ. ನಾವು ಪಕ್ಕದ ಮನೆಯವರಿಂದ ನೀರು ಪಡೆಯುತ್ತಿದ್ದೇವೆ. ನಿಗದಿತ ಸಮಯದಲ್ಲಿ ಸಮರ್ಪಕ ನೀರು ಪೂರೈಕೆಗೆ ಮನಪಾ ಅಧಿಕಾರಿಗಳು ಕ್ರಮ ಕೈಗೊಳ್ಳಬೇಕು.

■ **ವಿನೋದ್ ಅಮೀನ್, ಪಾಂಡೇಶ್ವರ ಭಾರತೀಯ ವಿದ್ಯಾಭವನ ಬಳಿಯ ನಿವಾಸಿ**



ನಾವು ಕಳೆದ ಮೂರು ತಿಂಗಳಿನಿಂದ ತೀವ್ರವಾಗಿ ನೀರಿನ ಸಮಸ್ಯೆ ಎದುರಿಸಿದ್ದೇವೆ. ಪೈಪ್ ಲೈನ್‌ನಲ್ಲಿ ಸಮಸ್ಯೆ ಉಂಟಾಗಿ ನಮ್ಮಲ್ಲಿಗೆ ಮೂರು ತಿಂಗಳಿನಿಂದ ನೀರು ಬರುತ್ತಿರಲಿಲ್ಲ. ಟ್ಯಾಂಕರ್ ಮೂಲಕ ನೀರು ತರಿಸಿ ಸಾಕಾಗಿತ್ತು. ಕಳೆದ 15 ದಿನಗಳಿಂದ ಸ್ವಲ್ಪಮಟ್ಟಿಗೆ ನೀರು ಬರುತ್ತಿದೆ.

■ **ನರ್ಸಿರ್, ಅಮೃತನಗರ ನಿವಾಸಿ**

ಕೃತಕ ನೆರೆ ಸಮಸ್ಯೆ

ಪಾಂಡೇಶ್ವರ ಶ್ರೀನಿವಾಸ ಕಾಲೇಜು ಬಳಿ, ದಕ್ಕೆಯಲ್ಲಿ ರಾಜಕಾಲುವೆ ಹಾದು ಹೋಗುತ್ತದೆ. 8 ವಾರ್ಡ್ ಗಳ ನೀರು ಇದರ ಮೂಲಕ ಹರಿಯುತ್ತದೆ. ಮಳೆಗಾಲದಲ್ಲಿ ನಿರಂತರ ಮಳೆಯಾದಾಗ ಸಮುದ್ರ ನೀರು ಸ್ವೀಕರಿಸದೇ ಇರುವ ಸಂದರ್ಭ ರಾಜಕಾಲುವೆಯಿಂದ ನೀರು ಉಕ್ಕಿ ಸುಭಾಶ್‌ನಗರ ಪ್ರದೇಶ ಮುಳುಗುತ್ತದೆ. ಇದರಿಂದಾಗಿ ಮಳೆಗಾಲದಲ್ಲಿ ಸುಭಾಶ್‌ನಗರ ಪ್ರದೇಶದ ಜನತೆ ತೀವ್ರ ಕಿರಿಕಿರಿ ಅನುಭವಿಸುತ್ತಿದ್ದಾರೆ.

ಮುಂದಿನ ವಾರ್ಡ್ -46
ಕಂಟೋನ್ಮೆಂಟ್ ಪರಿಸರದ ಸ್ಥಿತಿಗತಿ

ಮಂಗಳೂರು
ರಾಷ್ಟ್ರ ಜಾಗೃತಿಯ ದೈನಿಕ
ಮಂಗಳವಾರ, 28 ಏಪ್ರಿಲ್ 2026
ಸಂಪುಟ 48, ಸಂಚಿಕೆ 40 ಪುಟಗಳು 12+6
■ ಬೆಂಗಳೂರು ■ ಮಂಗಳೂರು ■ ಶಿವಮೊಗ್ಗ ■ ಹುಬ್ಬಳ್ಳಿ
₹5
REG.No.MNG /121/2024-26 Posted at kodialbail P.O / RNI:29813/78/ Daily
hosadigantha.com
epaper.hosadigantha.com
Hosadigantha Digital

ಹೊಸ ದಿಗಂತ

ಲೋಕಹಿತಂ ಮಮ ಕರಣೀಯಂ



ಫುಡ್ ಪಾಯ್ಸನ್ ಶಂಕೆ: ನಾಲ್ವರ ಬಲಿ |೦೭
ಜಲಸಂಧಿ ಮುಕ್ತಕ್ಕೆ ಇರಾನ್ ಪ್ರಸ್ತಾವನೆ |೦೭
ಹೀಟ್‌ಸ್ಟ್ರೋಕ್ ನಿರ್ವಹಣಾ ಘಟಕ ಕಡ್ಡಾಯ |೦೭

ಶುಭ ದಿನ

ಕಲಿಯುಗಾಬ್ದ 5128, ಪರಾಭವ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ದ್ವಾದಶಿ, ನಕ್ಷತ್ರ: ಉತ್ತರೆ

ದಿನದ ಮಾತು

ತಮ್ಮನ್ನು ತಾವೇ ಮೇಧಾವಿಗಳೆಂದುಕೊಳ್ಳುವವರು ಬಹುಬೇಗ ನಾಶವಾಗುತ್ತಾರೆ.
▲ಮಹಾವೀರ

ಉಳುಮೆಗೂ ಸಾಗಾಟಕ್ಕೂ ಹೆಸರುವಾಸಿಯಾದ ಖಿಲಾರಿ ದನಗಳು

ಧರಣಿ ಮಂಡಲ

• ಕೆ.ಎನ್. ಶೈಲೇಶ್ ಹೊಳ್ಳ

• ಪುಟ ೬

ಕಿರುಸುದ್ದಿ

ಜನಿವಾರ ಪ್ರಕರಣ: ಕೃಪಾನಿಧಿ ಕಾಲೇಜಿನ ಸಿಇಟಿ ಕೇಂದ್ರ ರದ್ದು

• **ಬೆಂಗಳೂರು:** ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಸರ್ಕಾರಿ ಪರೀಕ್ಷೆಗಳು ನಡೆಸದಂತೆ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ತಿಳಿಸಿದರು.

• ಪುಟ ೫

7 ಆಪ್ ಸಂಸದರ ಬಿಜೆಪಿ ವಿಲೀನಕ್ಕೆ ಅಧ್ಯಕ್ಷರ ಒಪ್ಪಿಗೆ

• **ಹೊಸದಿಲ್ಲಿ:** ಆಮ್ ಆದ್ಮಿ ಪಕ್ಷ(ಆಪ್) ತೊರೆದ ರಾಘವ್ ಚಡ್ಡಾ ಮತ್ತು ಇತರ ಆರು ಸಂಸದರನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಲು ರಾಜ್ಯಸಭೆ ಅಧ್ಯಕ್ಷ ಸಿ.ಪಿ. ರಾಧಾಕೃಷ್ಣನ್ ಅವರು ಅನುಮೋದನೆ ನೀಡಿದ್ದಾರೆ. ಈ ಮೂಲಕ ರಾಜ್ಯಸಭೆಯಲ್ಲಿ ಎಎಪಿ ಸದಸ್ಯರ ಬಲ 3ಕ್ಕೆ ಕುಸಿದಿದೆ. ಬಿಜೆಪಿ ಬಲ 113ಕ್ಕೆ ಏರಿಕೆಯಾಗಿದೆ.

• ಪುಟ ೭

ಲಡಾಖ್‌ನಲ್ಲಿ 5 ಹೊಸ ಜಿಲ್ಲೆಗಳ ರಚನೆಗೆ ಅಸ್ತು

• ಪುಟ ೭

ಪ.ಬಂಗಾಳದಲ್ಲಿ ಬಿಜೆಪಿಗೆ ಅಧಿಕಾರ ಖಚಿತ: ಮೋದಿ

• ಪುಟ ೭

ವೆಬ್‌ಸೈಟ್‌ನಲ್ಲಿ ಸಿಇಟಿ ಕೀ ಉತ್ತರ ಲಭ್ಯ

• ಪುಟ ೫

ಪಾಕ್‌ನಲ್ಲಿ ಉಗ್ರ ಹಫೀಜ್ ನಿಕಟವರ್ತಿ ಶೇಖ್ ವಧೆ

• ಪುಟ ೭



ಅಣುಶಕ್ತಿಯಲ್ಲಿ ಭಾರತ ಸಾಧನೆ

• ಪುಟ ೭

ಸುದ್ದಿ ಸಮಗ್ರ

ಉಭಯ ರಾಷ್ಟ್ರಗಳ ಎಫ್‌ಟಿಎಗೆ ಸಹಿ | ರಫ್ತುಗಳಿಗೆ ಇಲ್ಲ ಸುಂಕ

ಭಾರತ-ಕಿವೀಸ್ ಮುಕ್ತ

• **ಹೊಸದಿಲ್ಲಿ:** ಭಾರತ ಮತ್ತು ನ್ಯೂಜಿಲೆಂಡ್ ನಡುವಿನ ಬಹುಕಾಲದಿಂದ ನಿರೀಕ್ಷಿತ ಮುಕ್ತ ವ್ಯಾಪಾರ ಒಪ್ಪಂದಕ್ಕೆ (ಎಫ್‌ಟಿಎ) ಸೋಮವಾರ ಅಧಿಕೃತವಾಗಿ ಸಹಿ ಹಾಕಲಾಗಿದ್ದು, ಎರಡೂ ದೇಶಗಳ ಆರ್ಥಿಕ ಸಂಬಂಧಗಳಲ್ಲಿ ಹೊಸ ಅಧ್ಯಾಯ ಆರಂಭವಾಗಿದೆ.

ನಮ್ಮ ಈ ಪೀಳಿಗೆಯ ಅತ್ಯಂತ ಮಹತ್ವದ ಒಪ್ಪಂದವೆಂದು ಕರೆಯಲಾಗುತ್ತಿರುವ ಈ ಒಪ್ಪಂದದಲ್ಲಿ ಭಾರತೀಯ ಉತ್ಪನ್ನಗಳಿಗೆ ನ್ಯೂಜಿಲೆಂಡ್ ಮಾರುಕಟ್ಟೆಯಲ್ಲಿ ಶೇ.100 ಸುಂಕಮುಕ್ತ ಪ್ರವೇಶ ಸಿಗಲಿದ್ದು, ವ್ಯಾಪಾರ, ಹೂಡಿಕೆ, ಉದ್ಯೋಗ ಹಾಗೂ ಸೇವಾ ಕ್ಷೇತ್ರಗಳಲ್ಲಿ ಮಹತ್ತರ ಬದಲಾವಣೆ ತರಲಿದೆ.

ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಹಾಗೂ ನ್ಯೂಜಿಲೆಂಡ್ ವ್ಯಾಪಾರ ಮತ್ತು ಹೂಡಿಕೆ ಸಚಿವ ಟಾಡ್ ಮೆಕ್‌ಲೇ ನಡುವೆ ಈ ಒಪ್ಪಂದಕ್ಕೆ ಸಹಿ ಹಾಕಲಾಗಿದ್ದು, ಅಲ್ಲಿನ



ಸಂಸತ್ತಿನ ಅನುಮೋದನೆಯ ನಂತರ ಈ ವರ್ಷದ ಅಂತ್ಯದೊಳಗೆ ಜಾರಿಗೆ ಬರುವ ನಿರೀಕ್ಷೆ ವ್ಯಕ್ತವಾಗಿದೆ.

ಈ ಮಹತ್ವದ ಬೆಳವಣಿಗೆ ಕುರಿತು ಪ್ರತಿಕ್ರಿಯಿಸಿರುವ ಪ್ರಧಾನಿ ನರೇಂದ್ರ ಮೋದಿ ಅವರು, 'ಇದು ಭಾರತ ಜಾಗತಿಕ ಆರ್ಥಿಕ ವೇದಿಕೆಯಲ್ಲಿ ಇನ್ನಷ್ಟು ಗಾಢವಾಗಿ ಸೇರಿಕೊಳ್ಳುವತ್ತದ ಐತಿಹಾಸಿಕ ಹೆಜ್ಜೆ. ರೈತರು, ಯುವಕರು, ಮಹಿಳೆಯರು, ಎಂಎಸ್‌ಎಂಇಗಳು, ಉದ್ಯಮಿಗಳು ಮತ್ತು ವಿದ್ಯಾರ್ಥಿಗಳಿಗೆ ಹೊಸ ಅವಕಾಶಗಳ ದಾರಿ ತೆರೆದಿದೆ' ಎಂದು ಹೇಳಿದ್ದಾರೆ. ಇದೇ ವೇಳೆ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲಕ್ಸನ್, 'ಈ ಒಪ್ಪಂದವು ನಮ್ಮ ರಫ್ತುಗಾರರಿಗೆ 1.4 ಬಿಲಿಯನ್ ಜನಸಂಖ್ಯೆಯ ಮಾರುಕಟ್ಟೆಗೆ ಅಪೂರ್ವ ಪ್ರವೇಶ ಒದಗಿಸುತ್ತದೆ' ಎಂದು ಒಪ್ಪಂದದ ಮಹತ್ವವನ್ನು ಒತ್ತಿ ಹೇಳಿದ್ದಾರೆ.

➡ಪುಟ ೪



- ಈ ಪೀಳಿಗೆಯ ಅತಿದೊಡ್ಡ ಒಪ್ಪಂದ ಎಂದ ಪಿಯೂಷ್ ಗೋಯಲ್
- ಇಪ್ಪತ್ತು ಬಿಲಿಯನ್ ಹೂಡಿಕೆ ಭರವಸೆ

- ಭಾರತೀಯ ಉತ್ಪನ್ನಗಳಿಗೆ ನ್ಯೂಜಿಲೆಂಡ್ ಮಾರುಕಟ್ಟೆಯಲ್ಲಿ ಶೇ.100 ಸುಂಕಮುಕ್ತ ಪ್ರವೇಶ
- ಮುಂದಿನ 5 ವರ್ಷಗಳಲ್ಲಿ ದ್ವಿಪಕ್ಷೀಯ ವ್ಯಾಪಾರವನ್ನು 5 ಬಿಲಿಯನ್‌ಗೆ ಹೆಚ್ಚಿಸುವ ಗುರಿ
- ನ್ಯೂಜಿಲೆಂಡ್‌ನಿಂದ ಭಾರತಕ್ಕೆ 15 ವರ್ಷಗಳಲ್ಲಿ 20 ಬಿಲಿಯನ್ ಎಫ್‌ಡಿಐ ಹೂಡಿಕೆ ಭರವಸೆ
- ಉಡುಪು, ಚರ್ಮ, ಪಾದರಕ್ಷೆ, ರತ್ನಾಭರಣ, ಎಂಜಿನಿಯರಿಂಗ್ ವಸ್ತುಗಳಿಗೆ ದೊಡ್ಡ ಲಾಭ
- ಕಾರ್ಮಿಕಾಧಾರಿತ ಕೈಗಾರಿಕೆಗಳಿಗೆ ಸ್ಪರ್ಧಾತ್ಮಕತೆ, ಉದ್ಯೋಗಾವಕಾಶ ಹೆಚ್ಚಳ

> ಇದು ಭಾರತ ಜಾಗತಿಕ ಆರ್ಥಿಕ ಸಂಪರ್ಕವನ್ನು ಮತ್ತಷ್ಟು ಗಾಢಗೊಳಿಸುವ ಐತಿಹಾಸಿಕ ಮೈಲಿಗಲ್ಲು. ಈ ಒಪ್ಪಂದ ರೈತರು, ಯುವಕರು, ಮಹಿಳೆಯರು, ಉದ್ಯಮಿಗಳು ಹಾಗೂ ಎಂಎಸ್‌ಎಂಇಗಳಿಗೆ ಹೊಸ ಅವಕಾಶಗಳನ್ನು ತೆರೆದಿಡುತ್ತದೆ.
> ■ ನರೇಂದ್ರ ಮೋದಿ, ಪ್ರಧಾನಿ

> ಈ ಒಪ್ಪಂದವು ನಮ್ಮ ರಫ್ತುದಾರರಿಗೆ 1.4 ಬಿಲಿಯನ್ ಜನಸಂಖ್ಯೆಯ ಮಾರುಕಟ್ಟೆಗೆ ಅಪೂರ್ವ ಪ್ರವೇಶ ಒದಗಿಸುತ್ತದೆ.
> ■ ಕ್ರಿಸ್ಟೋಫರ್ ಲಕ್ಸನ್, ನ್ಯೂಜಿಲೆಂಡ್ ಪ್ರಧಾನಿ

ರಫ್ತುಗಳಿಗೆ ಶೇ.100 ಸುಂಕಮುಕ್ತ ಪ್ರವೇಶ



ಒಪ್ಪಂದದಲ್ಲಿ ಭಾರತದಿಂದ ನ್ಯೂಜಿಲೆಂಡ್‌ಗೆ ಸಾಗುವ ಎಲ್ಲಾ ಪ್ರಮುಖ ಉತ್ಪನ್ನಗಳಿಗೆ ಅಂದರೆ, ಉಡುಪು, ಚರ್ಮ ಉತ್ಪನ್ನಗಳು, ಪಾದರಕ್ಷೆಗಳು, ರತ್ನಾಭರಣ, ಎಂಜಿನಿಯರಿಂಗ್ ವಸ್ತುಗಳು ಮತ್ತು ಸಂಸ್ಕರಿತ ಆಹಾರಗಳಿಗೆ ಶೇ.100 ಸುಂಕಮುಕ್ತ ಪ್ರವೇಶ ದೊರೆಯಲಿದೆ. ಇದುವರೆಗೆ ಕೆಲವು ಉತ್ಪನ್ನಗಳಿಗೆ ಶೇ.10ರವರೆಗೆ ಸುಂಕ ವಿಧಿಸಲಾಗುತ್ತಿತ್ತು.ಇದರಿಂದ ವಿಶೇಷವಾಗಿ ಕಾರ್ಮಿಕಾಧಾರಿತ ಕೈಗಾರಿಕೆಗಳಿಗೆ ಜಾಗತಿಕ ಸ್ಪರ್ಧಾತ್ಮಕತೆ ಹೆಚ್ಚಾಗಿ, ಉದ್ಯೋಗ ಸೃಷ್ಟಿಗೆ ಉತ್ತೇಜನ ಸಿಗಲಿದೆ.

ಸಂವೇದನಾಶೀಲ ಕ್ಷೇತ್ರಗಳಿಗೆ ರಕ್ಷಣಾ ವಲಯ

ದೇಶೀಯ ರೈತರು ಮತ್ತು ಸಣ್ಣ ಉದ್ಯಮಗಳ ಹಿತಾಸಕ್ತಿ ಕಾಪಾಡಲು, ಭಾರತವು ಹಾಲು ಉತ್ಪನ್ನಗಳು, ಸಕ್ಕರೆ, ಕೆಲವು ಕೃಷಿ ಉತ್ಪನ್ನಗಳು, ಲೋಹಗಳು ಸೇರಿದಂತೆ ಹಲವು ಸಂವೇದನಾಶೀಲ ವಸ್ತುಗಳನ್ನು ಈ ಒಪ್ಪಂದದ ವ್ಯಾಪ್ತಿಯಿಂದ ಹೊರಗಿಟ್ಟಿದೆ. ಇದರ ಜತೆಗೆ ಸೇಬು, ಕಿವಿ ಹಣ್ಣು, ಮನೂಕಾ ಜೇನು ಮೊದಲಾದ ಉತ್ಪನ್ನಗಳಿಗೆ ಪ್ರಮಾಣಿತ ಆಮದು ನಿಯಮಗಳು ಹಾಗೂ ಕನಿಷ್ಠ ಬೆಲೆ ವ್ಯವಸ್ಥೆಗಳನ್ನು ಜಾರಿಗೆ ತರುವ ಮೂಲಕ ದೇಶೀಯ ಉತ್ಪಾದಕರಿಗೆ ರಕ್ಷಣೆ ಒದಗಿಸಲಾಗಿದೆ.

ಮಂಗಳೂರಲ್ಲಿ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣ | ಎನ್‌ಐಎ ಕೋರ್ಟ್ ತೀರ್ಪು

ಶಾರಿಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ

• **ಬೆಂಗಳೂರು:** ಕರಾವಳಿ ನಗರಿ ಮಂಗಳೂರನ್ನು ಬೆಚ್ಚಿಬೀಳಿಸಿದ್ದ ಕುಕ್ಕರ್ ಬಾಂಬ್ ಸ್ಫೋಟ ಪ್ರಕರಣದ ಪ್ರಮುಖ ಆರೋಪಿ ಮೊಹಮ್ಮದ್ ಶಾರಿಕ್‌ನನ್ನು ದೋಷಿ ಎಂದು ಘೋಷಿಸಿರುವ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯವು, 10 ವರ್ಷ ಕಠಿಣ ಕಾರಾಗೃಹ ಶಿಕ್ಷೆ



ವಿಧಿಸಿ ಹಾಗೂ 94 ಸಾವಿರ ರೂ. ದಂಡ ವಿಧಿಸಿ ಮಹತ್ವದ ತೀರ್ಪು ನೀಡಿದೆ.

2022ರ ನವೆಂಬರ್ 19ರಂದು ಮಂಗಳೂರಿನ ಕಂಕನಾಡಿ ರೈಲ್ವೆ ನಿಲ್ದಾಣದ ಸಮೀಪವಿರುವ ನಾಗುರಿ ಎಂಬಲ್ಲಿ ಚಲಿಸುತ್ತಿದ್ದ ಆಟೋ ರಿಕ್ಷಾದಲ್ಲಿ ಭೀಕರ ಸ್ಫೋಟ ಸಂಭವಿಸಿತ್ತು. ಇದು ವ್ಯವಸ್ಥಿತವಾಗಿ ರೂಪಿಸಲಾಗಿದ್ದ ಐಇಡಿ ಬಾಂಬ್ ಸ್ಫೋಟವಾಗಿತ್ತು. ಆರೋಪಿ ಶಾರಿಕ್ ಬಾಂಬ್ ಹೊತ್ತು ಸಾಗಿಸುತ್ತಿದ್ದಾಗಲೇ ಅದು ಆಕಸ್ಮಿಕವಾಗಿ ಸ್ಫೋಟಗೊಂಡಿದ್ದರಿಂದ ಅಂದು ಭಾರಿ ಅನಾಹುತವೊಂದು ತಪ್ಪಿದಂತಾಗಿತ್ತು. ಈ ಘಟನೆಯಲ್ಲಿ ಶಾರಿಕ್ ಮತ್ತು ಆಟೋ ಚಾಲಕ ಪುರುಷೋತ್ತಮ ಪೂಜಾರಿ ಇಬ್ಬರೂ ಗಂಭೀರವಾಗಿ ಗಾಯಗೊಂಡಿದ್ದರು.

ಕಠಿಣ ತೀರ್ಪು: ಪ್ರಕರಣದ ಸುದೀರ್ಘ ವಿಚಾರಣೆ ನಡೆಸಿದ ಎನ್‌ಐಎ ವಿಶೇಷ ನ್ಯಾಯಾಲಯವು, ಆರೋಪಿ ವಿರುದ್ಧದ ಸಾಕ್ಷ್ಯಗಳನ್ನು ಪುರಸ್ಕರಿಸಿತು.

➡ಪುಟ ೪

ಇನ್ನೂ ಕಠಿಣ ಶಿಕ್ಷೆ ವಿಧಿಸಬೇಕಿತ್ತು: ಸಂತ್ರಸ್ತ ಆಟೋ ಚಾಲಕ

ತೀರ್ಪಿನ ಕುರಿತು ಪ್ರತಿಕ್ರಿಯಿಸಿರುವ ಸಂತ್ರಸ್ತ ಆಟೋ ಚಾಲಕ ಪುರುಷೋತ್ತಮ ಪೂಜಾರಿ ಅವರು, ಮೊಹಮ್ಮದ್ ಶಾರಿಕ್‌ಗೆ ಕಠಿಣ ಶಿಕ್ಷೆ ವಿಧಿಸಿರುವುದು ಸರಿಯಾದ ನಿರ್ಧಾರ. ಆತ ಮಾಡಿದ ತಪ್ಪಿಗೆ ನಾನು ದೈಹಿಕ ವಾಗಿ, ಮಾನಸಿಕವಾಗಿ ಶಿಕ್ಷೆ ಅನುಭವಿಸುತ್ತಿದ್ದೇನೆ. ಆತ ಜೀವಮಾನದಲ್ಲಿ ಜೈಲಿಂದ ಹೊರಗೆ ಬರಬಾರದು. ಮುಂದೆ ಯಾರೂ ಸಹ ಇಂತಹ ಕೃತ್ಯ ಮಾಡಲು ಧೈರ್ಯ ಮಾಡಬಾರದೆಂದು ತಮ್ಮ ನೋವನ್ನು ವ್ಯಕ್ತಪಡಿಸಿದ್ದಾರೆ.



ತನಿಖೆ ವೇಳೆ ಬಯಲಾದ ಸಂಚು

ಘಟನೆಯ ಬಳಿಕ ಪೊಲೀಸರು ತನಿಖೆ ಆರಂಭಿಸಿದಾಗ ಸುಟ್ಟುಹೋಗಿದ್ದ ಪ್ರೆಶರ್ ಕುಕ್ಕರ್ ಪತ್ತೆಯಾಗಿತ್ತು. ಅದರೊಳಗೆ ಡಿಟೋನೇಟರ್, ಸರ್ಕ್ಯೂಟ್ ಮತ್ತು ಬ್ಯಾಟರಿಗಳನ್ನು ಅಳವಡಿಸಿರುವುದು ಕಂಡುಬಂದಿದ್ದು, ಇದೊಂದು ಆತ್ಮಾಹುತಿ ಬಾಂಬ್ ದಾಳಿಯ ಪ್ರಯತ್ನವಾಗಿತ್ತು ಎಂಬುದು ಸ್ಪಷ್ಟವಾಗಿತ್ತು. ಶಾರಿಕ್ ತನ್ನ ಅಸಲಿ ಗುರುತು ಮುಚ್ಚಿಡಲು ಹುಬ್ಬಳ್ಳಿಯ ಪ್ರೇಮರಾಜ್ ಎಂಬವರ ಹೆಸರಿನ ನಕಲಿ ಆಧಾರ್ ಕಾರ್ಡ್ ಬಳಸುತ್ತಿದ್ದನು. ಅಲ್ಲದೆ, ಮೈಸೂರಿನಲ್ಲಿ ಬಾಡಿಗೆ ಮನೆ ಪಡೆದು ಅಲ್ಲಿಯೇ ಬಾಂಬ್ ತಯಾರಿಕೆಗೆ ಬೇಕಾದ ಕಚ್ಚಾ ವಸ್ತುಗಳನ್ನು ಅಳವಡಿಸಿದ್ದ ಎಂಬುದು ತನಿಖೆಯಲ್ಲಿ ಸಾಬೀತಾಗಿತ್ತು.

➡ಪುಟ ೪

---

888 ಅಡಿ ಎತ್ತರದ ಮೂರ್ತಿ ನಿರ್ಮಾಣ ಯೋಜನೆಗೆ ಸಿದ್ದರಾಮಯ್ಯ ಚಾಲನೆ

ಪಂಚಶೀಲ ಬೆಟ್ಟದಲ್ಲಿ ಅತಿ ಎತ್ತರದ ಬುದ್ಧನ ಪ್ರತಿಮೆ



• **ಬೆಂಗಳೂರು:** ವಿಶ್ವ ಬೌದ್ಧ ಮಹಾ ಸಮ್ಮೇಳನ ಸಮಿತಿ, ಉಪಾಸಿಕ ಆ್ಯಂಡ್ ಉಪಾಸಕ ಚಾರಿಟಬಲ್ ಟ್ರಸ್ಟ್ ಹಾಗೂ ಇಂಟರ್ನ್ಯಾಷನಲ್ ಬುದ್ದಿಸ್ಟ್ ಮಾಂಕ್ಸ್ ಚಾರಿಟಬಲ್ ಟ್ರಸ್ಟ್, ಚಾಮರಾಜನಗರದ ಉತ್ತವಳ್ಳಿಯ ಪಂಚಶೀಲ ಬೆಟ್ಟದ ನಳಂದ ಜ್ಞಾನ ಮತ್ತು ಅಧ್ಯಯನ ಕೇಂದ್ರವು ಸದಾಶಿವ ನಗರದ ನಾಗಸೇನಾ ಬುದ್ಧ ವಿಹಾರದಲ್ಲಿ ಆಯೋಜಿಸಿದ್ದ ವಿಶ್ವ ಬೌದ್ಧ ಮಹಾ ಸಮ್ಮೇಳನವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಉದ್ಘಾಟಿಸಿದರು.

ಇದೇ ವೇಳೆ ಚಾಮರಾಜನಗರ ಜಿಲ್ಲೆಯಲ್ಲಿ ಸ್ಥಾಪನೆಗೊಳ್ಳಲಿರುವ 888 ಅಡಿ ಎತ್ತರದ ಭಗವಾನ್ ಬುದ್ಧರ ಮೂರ್ತಿ ನಿರ್ಮಾಣ ಯೋಜನೆಗೆ ಚಾಲನೆ ನೀಡಿ, ಪಂಚಶೀಲ ಪಾದಯಾತ್ರೆಯ ಪ್ರಾರಂಭೋತ್ಸವವನ್ನು ಉದ್ಘಾಟಿಸಿದರು. ಬುದ್ಧರ ಮೂರ್ತಿಯ ಮಾದರಿಯನ್ನು ಅನಾವರಣಗೊಳಿಸಿದರು.

ಕರ್ನಾಟಕ ಅಲೆಮಾರಿ ಮತ್ತು ಅರೆ ಅಲೆಮಾರಿ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಪಲ್ಲವಿ ಮಾತನಾಡಿ, ಚಾಮರಾಜನಗರ ಜಿಲ್ಲೆಯಲ್ಲಿ ಭಗವಾನ್ ಬುದ್ಧನ ಪ್ರತಿಮೆ ಸ್ಥಾಪನೆಯಾಗುತ್ತಿರುವುದು ಸಂಸತದ ವಿಚಾರ. ಇದು ಜಗತ್ತಿನಲ್ಲೇ ಅತಿ ಎತ್ತರದ ಬುದ್ಧ ಪ್ರತಿಮೆ ಎಂದು ಭಾವಿಸಲಾಗಿದೆ.

➡ಪುಟ ೪

ಮದ್ರಾಸ್ ಹೈಕೋರ್ಟ್ ಮುಖ್ಯ ನ್ಯಾ.ಎಸ್.ಎ. ಧರ್ಮಾಧಿಕಾರಿ ಕರೆ

ಭಾರತೀಯ ಸಂಸ್ಕೃತಿ-ಸಿದ್ಧಾಂತಗಳ ಮೌಲ್ಯ ಕಲಿಸಿ

• **ಹೊಸದಿಲ್ಲಿ:** ನಮ್ಮ ಮೂಲ ಸಂಸ್ಕೃತಿ ಪರಂಪರೆಗಳ ಪರಿಚಯವೇ ಇಲ್ಲದಂತಿರುವ ರಾಷ್ಟ್ರೀಯ ಕಾನೂನು ವಿವಿ ವಿದ್ಯಾರ್ಥಿಗಳಿಗೆ, ಭಾರತೀಯ ಸಂಸ್ಕೃತಿ- ಸಿದ್ಧಾಂತಗಳ ಮೌಲ್ಯಗಳು, ಮನುಸ್ಮೃತಿ, ಅರ್ಥಶಾಸ್ತ್ರಗಳನ್ನೂ ಕಲಿಸಬೇಕು ಎಂದು ಮದ್ರಾಸ್ ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಎಸ್.ಎ. ಧರ್ಮಾಧಿಕಾರಿ ಕರೆ ನೀಡಿದ್ದಾರೆ.



ಆತ್ಮಾವಲೋಕನಕ್ಕಾಗಿ ಕಲಿಕೆ: ನಮ್ಮ ಕರ್ತವ್ಯ-ಕರ್ಮಗಳ ನಿಭಾಯಿಸುವುದಕ್ಕಾಗಿಯೇ ನಾವು ಈ ಮಹಾನ್ ರಾಷ್ಟ್ರದಲ್ಲಿ ಮಾನವರಾಗಿ ಜನಿಸಿದ್ದೇವೆ. ವಿದ್ಯಾರ್ಥಿಗಳ ಚಿಂತನೆಯಲ್ಲಿ ಸ್ಥಿರತೆ ಮತ್ತು ಪ್ರೌಢತೆ ಮೂಡಿಸಲಷ್ಟೇ ಅಲ್ಲ, ನಮ್ಮ ಕರ್ತವ್ಯ ಹಾಗೂ ಕರ್ಮಗಳ ಬಗ್ಗೆ ಅಸಾಧಾರಣ ಪ್ರಜ್ಞೆಯನ್ನು ಒಳಗೊಂಡಿರುವ ಮಹಾನ್ ಭಾರತೀಯ ಸಂಸ್ಕೃತಿ ಬಗ್ಗೆ ವಿದ್ಯಾರ್ಥಿಗಳಲ್ಲಿ ಆತ್ಮಾವಲೋಕನವಾಗಬೇಕು, ಇದಕ್ಕಾಗಿ ಜೈನ-ಬೌದ್ಧ ಧರ್ಮಗಳ ಸಿದ್ಧಾಂತಗಳು, ಮನುಸ್ಮೃತಿ, ಅರ್ಥಶಾಸ್ತ್ರ ಮತ್ತು ಮೂಲಗ್ರಂಥಗಳ ನಡುವಣ ಸಹಬಾಂಧವ್ಯವನ್ನು ಕಾನೂನು ವಿದ್ಯಾರ್ಥಿಗಳಿಗೆ ಕಲಿಸಬೇಕು ಮತ್ತು ಇವು ಎಲ್ಲಾ ಕಾನೂನು ವಿದ್ಯಾರ್ಥಿಗಳಿಗೆ ಗೊತ್ತಿರಬೇಕೆಂದು ನ್ಯಾಯಮೂರ್ತಿ ಧರ್ಮಾಧಿಕಾರಿ ಪ್ರತಿಪಾದಿಸಿದರು.

➡ಪುಟ ೪

ಕಾನೂನು ಕುರುಡಲ್ಲ

ಕಾನೂನು ಕುರುಡಲ್ಲ, ಬದಲಾಗಿ ಪ್ರತಿಯೊಂದನ್ನೂ ನೋಡುತ್ತೆ. ಕುರುಡು ನಿಷ್ಪಕ್ಷಪಾತ ನ್ಯಾಯ ಬದಲು ಸಮಾಜದಲ್ಲಿನ ಅಸಮಾನತೆ ವಿರುದ್ಧ ಸೂಕ್ಷ್ಮ ಸಂವೇದನೆ, ಜಾಗೃತಿಯನ್ನು ಕಾನೂನು ಪ್ರತಿಪಾದಿಸುತ್ತದೆ. ಈ ನಿಟ್ಟಿನಲ್ಲಿ ಸುಪ್ರೀಂಕೋರ್ಟ್‌ನಲ್ಲಿ ಹಿಂದಿದ್ದ ಕಣ್ಣಿಗೆ ಕರಿಬಟ್ಟೆ ಕಟ್ಟಿದ ನ್ಯಾಯದೇವತೆ ಪ್ರತಿಮೆ ಕಿತ್ತು, ಆ ಜಾಗದಲ್ಲಿ ಕಣ್ತೆರೆದ ಸ್ಥಿತಿಯಲ್ಲಿರುವ ನ್ಯಾಯದೇವತೆ ಮೂರ್ತಿ ಅಳವಡಿಸಿರುವುದು ಬಹಳ ಅರ್ಥಗರ್ಭಿತ ಎಂದರು.

➡ಪುಟ ೪

ಮೋದಿ ಮೇಲೂ ದಾಳಿ ಬಯಸುತ್ತಿದೆಯೇ ಕೈ?

• **ಹೊಸದಿಲ್ಲಿ:** ಅಮೆರಿಕದಲ್ಲಿ ನಡೆದ ಗುಂಡಿನ ದಾಳಿ ಘಟನೆಯನ್ನು ಉಲ್ಲೇಖಿಸಿ ಮಹಾರಾಷ್ಟ್ರ ಕಾಂಗ್ರೆಸ್ ಶಾಸಕ ವಿಜಯ್ ವಾಡೆಟ್ಟಿವಾರ್ ನೀಡಿದ ಹೇಳಿಕೆ ಭಾರೀ ವಿವಾದಕ್ಕೆ ಕಾರಣವಾಗಿದೆ. ಈ ಹೇಳಿಕೆಯನ್ನು ಮುಂದಿಟ್ಟುಕೊಂಡು ಬಿಜೆಪಿ, ಪ್ರಧಾನಿ ನರೇಂದ್ರ ಮೋದಿ ವಿರುದ್ಧ ದಾಳಿ ನಡೆಯಬೇಕೆಂಬ ಮನೋಭಾವ ಕಾಂಗ್ರೆಸ್‌ನಲ್ಲಿ ಮೂಡಿದೆ ಎಂದು ಗಂಭೀರ ಆರೋಪ ಮಾಡಿದೆ. ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಪಾಲ್ಗೊಂಡಿದ್ದ ವೈಟ್ ಹೌಸ್ ವರದಿಗಾರರ ಔತಣಕೂಟದ ವೇಳೆ ನಡೆದ ಗುಂಡಿನ ದಾಳಿ ನಂತರ ಈ ವಿವಾದ ಉಂಟಾಗಿದೆ.

➡ಪುಟ ೪



ಮಹಾರಾಷ್ಟ್ರ ಕಾಂಗ್ರೆಸ್ ಶಾಸಕನ ವಿವಾದಾತ್ಮಕ ಹೇಳಿಕೆ

ಎನ್‌ಐಎ ಕಸ್ಟಡಿಗೆ ಎಲ್‌ಇಟಿ ಉಗ್ರರು

ಇಬ್ಬರು ಪಾಕಿಗಳು ಸೇರಿ ಐವರ ಸೆರೆ

• **ಹೊಸದಿಲ್ಲಿ:** ಅಂತಾರಾಜ್ಯ ಲಷ್ಕರ್-ಎ-ತೊಯ್ಬಾ(ಎಲ್‌ಇಟಿ) ಭಯೋತ್ಪಾದಕ ಘಟಕದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ(ಎನ್‌ಐಎ) ವಹಿಸಿಕೊಂಡಿದ್ದು,



ಇಬ್ಬರು ಪಾಕಿಸ್ತಾನಿ ಪ್ರಜೆಗಳು ಸೇರಿ ಐವರು ಭಯೋತ್ಪಾದಕರನ್ನು ವಶಕ್ಕೆ ಪಡೆದಿದೆ. ಜಮ್ಮು-ಕಾಶ್ಮೀರ ಪೊಲೀಸರ ಮಹತ್ವದ ಕಾರ್ಯಾಚರಣೆಯಲ್ಲಿ ಐವರು ಎಲ್‌ಇಟಿ ಉಗ್ರರನ್ನು, ವಿಶೇಷವಾಗಿ 16 ವರ್ಷಗಳಿಂದ ದೇಶಭ್ರಷ್ಟನಾಗಿದ್ದ ಅಬ್ದುಲ್ಲಾ ಅಲಿಯಾಸ್ ಅಬು ಹುರೇರಾನನ್ನು ಏ.7ರಂದು ಬಂಧಿಸಲಾಗಿತ್ತು. ಎನ್‌ಐಎ, ಪ್ರಕರಣವನ್ನು ವಿಚಾರಣೆಗೆ ವಹಿಸಿಕೊಂಡ ನಂತರ, ಶಂಕಿತರನ್ನು ಜಮ್ಮುವಿನ ವಿಶೇಷ ಎನ್‌ಐಎ ನ್ಯಾಯಾಲಯದಲ್ಲಿ ಹಾಜರುಪಡಿಸಲಾಗಿ, ನ್ಯಾಯಾಲಯವು ಪಾಕಿಸ್ತಾನಿ ಪ್ರಜೆಗಳಾದ ಹುರೇರಾ ಮತ್ತು ಖುಬೈಬ್‌ನನ್ನು 2 ದಿನ, ಸ್ಥಳೀಯ ಉಗ್ರರನ್ನು 15 ದಿನಗಳ ಅವಧಿಗೆ ಸೋಮವಾರ ಎನ್‌ಐಎ ಕಸ್ಟಡಿಗೆ ನೀಡಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

➡ಪುಟ ೪

3,259 ತಾಯಂದಿರಿಂದ ದಾನ | 7,17,048 ಲೀಟರ್ ಎದೆ ಹಾಲು ಸಂಗ್ರಹ

3,283 ಶಿಶುಗಳಿಗೆ ಎದೆಹಾಲು ಅಮೃತಧಾರೆ

▸ ನಂದಿನಿ ಎನ್.

• **ಬೆಂಗಳೂರು:** ತಾಯಿಯ ಎದೆಹಾಲಿನಿಂದ ವಂಚಿತರಾಗುವ ಶಿಶುಗಳಿಗೆ ಬೆಂಗಳೂರಿನ ವಾಣಿ ವಿಲಾಸ ಆಸತ್ರೆಯ ತಾಯಂದಿರ ಎದೆ ಹಾಲಿನ ಬ್ಯಾಂಕ್ ಅಮೃತಧಾರೆಯಾಗಿದೆ.

ದಿಗಂತ ವಿಶೇಷ

ಮೂರ್ನಾಲ್ಕು ವರ್ಷಗಳಿಂದ ಶಿಶು ಮರಣ ಪ್ರಮಾಣ ತಗ್ಗಿಸುವಲ್ಲಿ ಮಹತ್ವದ ಪಾತ್ರ ವಹಿಸಿದೆ. 2022ರ ಮಾ.8ರಿಂದ ಈವರೆಗೆ 3,259 ತಾಯಂದಿರ ದಾನದಿಂದ 7,17,048 ಲೀಟರ್ ಎದೆ ಹಾಲು ಸಂಗ್ರಹವಾಗಿದೆ.

ರಾಜ್ಯದಲ್ಲಿ ಮೊದಲ ಬಾರಿಗೆ ತಾಯಂದಿರ ಎದೆ ಹಾಲಿನ ಬ್ಯಾಂಕ್ ಅಮೃತಧಾರೆ ಸ್ಥಾಪಿಸುವ ಮೂಲಕ ನವಜಾತ ಶಿಶುಗಳ ಅಪೌಷ್ಟಿಕತೆ ದೂರ ಮಾಡುತ್ತಿದ್ದು ತಾಯಿಯ ಎದೆ ಹಾಲಿನಲ್ಲಿ ಲವಣಾಂಶ, ಪ್ರೋಟೀನ್, ಶಕ್ಕರಪಿಷ್ಟ, ಫ್ಯಾಟ್, ಪ್ರತಿರೋಧಕ ಶಕ್ತಿ ಹೆಚ್ಚಿಸುವ ಜೀವಕಣ ಅತ್ಯಧಿಕವಾಗಿದ್ದು, ಇದು ಶಿಶುವಿನ ಬೆಳವಣಿಗೆಗೆ ಅಗತ್ಯವಾಗಿ ಬೇಕಾಗಿದೆ. ಹುಟ್ಟಿದಾಗಿನಿಂದ ಶಿಶುವಿಗೆ ಆರು ತಿಂಗಳವರೆಗೆ ತಾಯಿ ಹಾಲನ್ನು ಬಿಟ್ಟು ಬೇರೆ ಏನನ್ನೂ ನೀಡಬಾರದು ಎನ್ನುತ್ತಾರೆ ವೈದ್ಯರು. ಅದಕ್ಕಾಗಿ ಇಂತಹ ತಾಯಿ ಹಾಲು ವಂಚಿತ ಮಕ್ಕಳಿಗೆ ಈ ಹಾಲು ವರದಾನವಾಗಿದೆ.

➡ಪುಟ ೪



- ಹಾಲು ದಾನ ಮಾಡಿದ ತಾಯಂದಿರು - 3,259
- ಸಂಗ್ರಹವಾದ ಒಟ್ಟು ಹಾಲು - 7,17,048 ಲೀ.
- ಪ್ರಯೋಜನ ಪಡೆದ ಶಿಶುಗಳು - 3,283
- ಅವಧಿಪೂರ್ವ ಶಿಶುಗಳು - 1,136
- ಪೂರ್ಣಾವಧಿ ಶಿಶುಗಳು - 2,147

> ಅಗತ್ಯಕ್ಕಿಂತ ಹೆಚ್ಚು ಎದೆಹಾಲು ಹೊಂದಿರುವ ತಾಯಂದಿರೆಲ್ಲ ಹಾಲನ್ನು ದಾನ ಮಾಡಲು ಸಾಧ್ಯವಾಗುವುದಿಲ್ಲ. ಎಚ್‌ಐವಿ ಸೋಂಕು, ಜ್ವರ ಅಥವಾ ಇನ್ನಿತರ ಗಂಭೀರ ಸಮಸ್ಯೆಗೆ ಒಳಗಾಗಿದ್ದರೆ ಹಾಲನ್ನು ದಾನವಾಗಿ ಕೊಡುವಂತಿಲ್ಲ. ತಜ್ಞರಿಂದ ಪರೀಕ್ಷೆಗೆ ಒಳಗಾದ ಬಳಿಕವಷ್ಟೆ ಇನ್ನೊಂದು ಶಿಶುವಿಗೆ ಹಾಲನ್ನು ನೀಡಬಹುದು.
> ■ ಡಾ.ಸಂತೋಷ್ ಡಿ., ಸ್ಥಾನಿಕ ವೈದ್ಯಾಧಿಕಾರಿ, ವಾಣಿವಿಲಾಸ ಆಸ್ಪತ್ರೆ

ವಾರಕ್ಕೊಮ್ಮೆ ಮಾತ್ರ ಪೂರೈಕೆ | ಇಚ್ಛೆಯ ಆಯ್ಕೆಗಿಲ್ಲ ಅವಕಾಶ

ಮೈಸೂರು ಸಿಲ್ಕು, ಎಲ್ಲಿಯೂ ಇಲ್ಲ ಶಿಲ್ಕು

▸ ವೀರಣ್ಣ ಬಳಿಗಾರ

• **ಬೆಂಗಳೂರು:** ಆಕರ್ಷಕ ಸೌಂದರ್ಯ, ಕಲಾತ್ಮಕ ವಿನ್ಯಾಸ, ಐಷಾರಾಮಿ ಗುಣಮಟ್ಟ, ದೀರ್ಘಕಾಲ ಬಾಳಿಕೆ ಬರುವ ಹಾಗೂ ಕರ್ನಾಟಕದ ಅಸ್ಮಿತೆಯಾಗಿರುವಂತಹ ಮೈಸೂರು ರೇಷ್ಮೆ ಸೀರೆಗಳಿಗೆ ಭಾರೀ ಬೇಡಿಕೆ ಇದೆ. ಆದರೆ, ಗ್ರಾಹಕರ ಬೇಡಿಕೆಗೆ ತಕ್ಕಂತೆ ಸೀರೆಗಳು ಪೂರೈಕೆ ಆಗುತ್ತಿಲ್ಲ ಎಂಬುದು ಬೇಸರದ ಸಂಗತಿ.

ದಿಗಂತ ವಿಶೇಷ

ಬೆಂಗಳೂರು ಸೇರಿದಂತೆ ರಾಜ್ಯಾದ್ಯಂತ 14 ಮಾರಾಟ ಮಳಿಗೆಗಳು ಕಾರ್ಯನಿರ್ವಹಿಸುತ್ತಿವೆ. ವಾರಕ್ಕೊಮ್ಮೆ ಒಂದು ಬಾರಿ ಮಾತ್ರ ಸೀರೆಗಳು ಬರುತ್ತವೆ. ಸೀರೆ ಆಯ್ಕೆ ಮಾಡಿಕೊಳ್ಳಲು ಅವಕಾಶವೇ ಇರುವುದಿಲ್ಲ. ಸಿಕ್ಕಿದ್ದನ್ನು ತೆಗೆದುಕೊಳ್ಳಬೇಕೆಂದು ಮಳಿಗೆ ಸಿಬ್ಬಂದಿ ಒತ್ತಡ ಹೇರುತ್ತಾರೆ ಎಂಬುದು ಗ್ರಾಹಕರು ಹೇಳುತ್ತಾರೆ.

ಐತಿಹಾಸಿಕ ಮೈಸೂರು ರೇಷ್ಮೆ ಸೀರೆಗೆ ಕರ್ನಾಟಕವಲ್ಲದೆ, ದೇಶ-ವಿದೇಶಗಳಲ್ಲೂ ಬೇಡಿಕೆ ಇದ್ದು ನಿತ್ಯ ಸಾವಿರಾರು ಮಂದಿ ಸೀರೆ ಖರೀದಿಗೆ ಪರದಾಡುತ್ತಿದ್ದಾರೆ. ಅನೇಕ ಸಂದರ್ಭಗಳಲ್ಲಿ ಪ್ರಭಾವ ಬಳಸಿದರೂ ಸಿಗುತ್ತಿಲ್ಲ. ಉತ್ತಮ ಗುಣಮಟ್ಟದ ರೇಷ್ಮೆ ಸೀರೆಗಳನ್ನು ಉತ್ಪಾದಿಸುವ ಕೆಎಸ್‌ಐಸಿಎಲ್ ವರ್ಷಕ್ಕೆ ಅಂದಾಜು 1.20 ಲಕ್ಷ ಸೀರೆ ಉತ್ಪಾದಿಸುತ್ತಿದೆ.

➡ಪುಟ ೪



₹3.50 ಲಕ್ಷವರೆಗೂ ದರ

ಕೆಎಸ್‌ಐಸಿಎಲ್ ಉತ್ಪಾದಿಸುವ ಮೈಸೂರು ಸಿಲ್ಕ್ ಸೀರೆಗಳ ದರ 19 ಸಾವಿರದಿಂದ ಆರಂಭಗೊಂಡು 3.50 ಲಕ್ಷದವರೆಗೂ ಇದೆ. ದುಬಾರಿ ರೇಷ್ಮೆ ಸೀರೆಗಳಿಗೂ ಬೇಡಿಕೆ ಇದೆ. ಅದರಲ್ಲಿ 20 ರಿಂದ 35 ಸಾವಿರ ರೂ. ವರೆಗಿನ ಸೀರೆಗಳಿಗೆ ಅತೀ ಹೆಚ್ಚು ಬೇಡಿಕೆ ಇದೆ. ಹಬ್ಬ ಮತ್ತು ವಿಶೇಷ ದಿನಗಳಂದು ಮಾತ್ರವಲ್ಲ ಯಾವಾಗಲೂ ಈ ಮೈಸೂರು ಸಿಲ್ಕ್ ಸೀರೆಗಳಿಗೆ ಸರತಿ ಸಾಲಿನಲ್ಲಿ ನಿಂತು ಖರೀದಿಸುವಷ್ಟು ಬೇಡಿಕೆ ಇದೆ.

ಉದ್ಯೋಗಿಗಳ ಕೊರತೆ

ಸದ್ಯ ಕೆಎಸ್‌ಐಸಿಎಲ್ ವ್ಯಾಪ್ತಿಯ ಕಾರ್ಖಾನೆಯಲ್ಲಿ 260ಕ್ಕೂ ಹೆಚ್ಚು ವಿದ್ಯುತ್ ಮಗ್ಗಗಳು (ಪವರ್‌ಲೂಮ್) ಇವೆ. ದಿನವೊಂದಕ್ಕೆ 300ರಿಂದ 350 ಸೀರೆ ಅಷ್ಟೇ ಉತ್ಪಾದಿಸಲಾಗುತ್ತಿದೆ. ಪ್ರಸ್ತುತ 800ರಿಂದ 1,000 ಉದ್ಯೋಗಿಗಳು ಇದ್ದು, ಪ್ರತಿ ವರ್ಷ ಕನಿಷ್ಠ 10ರಿಂದ 15 ಕಾಯಂ ನೌಕರರು ನಿವೃತ್ತರಾಗುತ್ತಿದ್ದಾರೆ. ಬೇಡಿಕೆಗೆ ತಕ್ಕಷ್ಟು ರೇಷ್ಮೆ ಸೀರೆಗಳನ್ನು ಉತ್ಪಾದಿಸಲು ಸಾಧ್ಯವಾಗದಿರುವುದಕ್ಕೆ ಉದ್ಯೋಗಿಗಳ ಕೊರತೆಯೇ ಕಾರಣವಾಗಿದೆ.

➡ಪುಟ ೪

ಬೆಳ್ಳಿ ಬಂಗಾರ (ಬೆಂಗಳೂರು) ಬೆಳ್ಳಿ: 2,53,200(2,51,700) ಅಪರಂಜಿ ಚಿನ್ನ 15,300(15,270) ಆಭರಣ ಚಿನ್ನ 14,155(14,120) ಚಿನ್ನ 1 ಗ್ರಾಂ.ಗೆ, ಬೆಳ್ಳಿ 1 ಕೆ.ಜಿಗೆ, ರೂ.ಗಳಲ್ಲಿ (ಆವರಣದಲ್ಲಿ ಹಿಂದಿನ ದಿನದ ದರ)

ಷೇರು ಸೂಚ್ಯಂಕ ಬಿಎಸ್‌ಇ 77,303(639↑) ಎನ್‌ಎಸ್‌ಇ 24,092(194↑)

$1 = ₹94.26

ಶಾರಿಕ್‌ಗೆ 10 ವರ್ಷ ಕಠಿಣ ಜೈಲು ಶಿಕ್ಷೆ

ಪುಟ 1 ➡ ಐಪಿಸಿ ಸೆಕ್ಷನ್ 121ಎ ಅಡಿಯಲ್ಲಿ ಭಾರತ ಸರ್ಕಾರದ ವಿರುದ್ಧ ಯುದ್ಧ ಸಾರುವ ಸಂಚು, ಸೆಕ್ಷನ್ 122ರ ಅಡಿಯಲ್ಲಿ ಶಸ್ತ್ರಾಸ್ತ್ರ ಸಂಗ್ರಹಣೆ, ಯುಎಪಿಎ ಕಾಯ್ದೆಯ ವಿವಿಧ ಕಠಿಣ ಸೆಕ್ಷನ್‌ಗಳ ಅಡಿಯಲ್ಲಿ ಶಿಕ್ಷೆ ಪ್ರಕಟಿಸಿದೆ.

ನಾನು ಯಾವುದೇ ತಪ್ಪು ಮಾಡಿಲ್ಲ ಆರೋಪಿ ಸೈಯದ್: ಇನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎರಡನೇ ಆರೋಪಿ, ನಾನು ಯಾವುದೇ ತಪ್ಪು ಮಾಡಿಲ್ಲ ಎಂದು ಕೋರ್ಟ್ ಮುಂದೆ ಹೇಳಿದ್ದಾನೆ. ಹೀಗಾಗಿ ಎ2 ಸೈಯದ್ ವಿರುದ್ಧ ಸಾಕ್ಷ್ಯ ವಿಚಾರಣೆ ಬೆಂಗಳೂರಿನ ಎನ್ಐಎ ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ ನಡೆಯಲಿದೆ.


ತನಿಖೆ ವೇಳೆ ಬಯಲಾದ ಸಂಚು

ಪುಟ 1 ➡ ಪ್ರಕರಣದ ಗಾಂಭೀರ್ಯ ಅರಿತ ಕೇಂದ್ರ ಸರ್ಕಾರವು ತನಿಖೆಯನ್ನು ರಾಷ್ಟ್ರೀಯ ತನಿಖಾ ದಳಕ್ಕೆ (ಎನ್‌ಐಎ) ವಹಿಸಿತು. ಶಾರಿಕ್ ಐಸಿಸ್ ಉಗ್ರ ಸಂಘಟನೆಯಿಂದ ಪ್ರೇರಿತನಾಗಿ ರಾಜ್ಯಾದ್ಯಂತ ವಿಧ್ವಂಸಕ ಕೃತ್ಯ ಎಸಗಲು ಸಂಚು ರೂಪಿಸಿದ್ದ ಲೋನ್ ವುಲ್ಫ್ ಎಂಬುದು ತನಿಖೆಯ ವೇಳೆ ಬಹಿರಂಗವಾಗಿತ್ತು. ಮಂಗಳೂರಿನ ಕದ್ರಿ ದೇವಸ್ಥಾನ ಅಥವಾ ಜನನಿಬಿಡ ಪ್ರದೇಶವೇ ಆತನ ಅಂದಿನ ಗುರಿಯಾಗಿತ್ತು ಎಂಬ ಶಂಕೆ ವ್ಯಕ್ತವಾಗಿತ್ತು.

ಶಿಕ್ಷೆ ಕಡಿಮೆ ಮಾಡುವಂತೆ ಶಾರಿಕ್ ಮನವಿ

ತನಗೆ ಚಿಕ್ಕ ವಯಸ್ಸಿನ ಸಹೋದರಿ ಇದ್ದಾಳೆ. ಕುಟುಂಬವನ್ನು ತಾನೇ ನಿರ್ವಹಿಸಬೇಕು. ಕಡಿಮೆ ಶಿಕ್ಷೆ ನೀಡುವಂತೆ ಅಪರಾಧಿ ಶಾರಿಕ್ ಮನವಿ ಮಾಡಿದ್ದ. ಈತನ ಮನವಿಯನ್ನು ಮಾನ್ಯ ಮಾಡಿದ್ದ ನ್ಯಾಯಾಲಯ ಭಾರತೀಯ ನ್ಯಾಯ ಸಂಹಿತೆ ಹಾಗೂ ಯುಎಪಿಎ ಕಾಯ್ದೆಗಳ ಸೆಕ್ಷನ್‌ನಲ್ಲಿ ಅಪರಾಧಿಗೆ 10 ವರ್ಷ ಕಠಿಣ ಸಜೆ ಪ್ರಕಟಿಸಿದೆ. ಇನ್ನು 2022ರಿಂದ ಜೈಲಿನಲ್ಲಿರುವ ಶಾರಿಕ್, ಈಗಾಗಲೇ ಮೂರುವರೆ ವರ್ಷ ಸಜೆ ಅನುಭವಿಸಿದ್ದಾನೆ. ಉಳಿದ ಏಳೂವರೆ ವರ್ಷ ಜೈಲಿನಲ್ಲಿ ಇರಬೇಕಿದೆ.

ರಾಮ ಬಾಣ



ವಿಶ್ವೇಶ್ವರ ಭಟ್ಟರಿಗೆ ಸೌರಭ ಪ್ರಶಸ್ತಿ

• **ಕುಮಟಾ:** ಸೌರಭ, ಕುಮಟಾ ಇದರ 30ನೇ ವಾರ್ಷಿಕೋತ್ಸವದ ಅಂಗವಾಗಿ ಭಾನುವಾರ ಪಟ್ಟಣದ ಹವ್ಯಕ ಸಭಾ ಮಂಟಪದಲ್ಲಿ ಆಯೋಜಿಸಿದ್ದ ಸಾಂಸ್ಕೃತಿಕ ಅನುಸಂಧಾನ ಮತ್ತು ರಾಷ್ಟ್ರೀಯ ಸೌರಭ ಸಮ್ಮಾನ ಪ್ರಶಸ್ತಿಯನ್ನು ಹಿರಿಯ ಪತ್ರಕರ್ತ ವಿಶ್ವೇಶ್ವರ ಭಟ್ಟ ಅವರಿಗೆ ಪ್ರದಾನ ಮಾಡಲಾಯಿತು.



ಸನ್ಮಾನ ಸ್ವೀಕರಿಸಿ ಮಾತನಾಡಿದ ವಿಶ್ವೇಶ್ವರ ಭಟ್ಟ, ತನಗೆ ನೂರಾರು ಕಡೆಯಿಂದ ಸಾವಿರಾರು ಸನ್ಮಾನಗಳಾಗಿವೆ. ಆದರೆ, ನನ್ನ ಹುಟ್ಟೂರಿನಲ್ಲಿ ನೀಡಿರುವ ಈ ಸನ್ಮಾನ ನನ್ನ ಜೀವನದ ಅವಿಸ್ಮರಣೀಯ ಕ್ಷಣದಲ್ಲಿ ಒಂದು ಎಂದು ಅವರು ಹೇಳಿದರು. ಇಂದಿನ ದಿನದಲ್ಲಿ ಪ್ರಶಸ್ತಿ ಕೊಡುವುದು, ತೆಗೆದುಕೊಳ್ಳುವುದರ ಕುರಿತು ಸಂದೇಹಗಳೇ ಹೆಚ್ಚಿರುತ್ತವೆ. ಒಬ್ಬನ ಸಾಧನೆ ಮಾಡಿದ್ದಾನೆ ಎಂದು ಕೊಂಡರೆ ಅದು ಮುಖ್ಯವಾಗಿ ಆ ಸಾಧನೆಗೆ ನೂರಾರು ಜನರ ಕೊಡುಗೆ ಇರುತ್ತದೆ. ಹಾಗಾಗಿ ನಾನೇನಾದರೂ ಸಾಧನೆ ಮಾಡಿದ್ದರೆ ಅದಕ್ಕೆ ನೂರಾರು ಜನರ ಬೆಂಬಲದಿಂದ ಇದು ಸಾಧ್ಯವಾಗಿದೆ ಎಂದುಕೊಂಡಿದ್ದೇನೆ ಎನ್ನುತ್ತಾ ಹಿಂದಿನ ಎಲ್ಲಾ ಸಂಸ್ಥೆಗಳನ್ನು ಸ್ಮರಿಸಿ ವಿಶ್ವೇಶ್ವರ ಭಟ್ಟ ಎಲ್ಲರಿಗೆ ವಂದನೆ ಸಲ್ಲಿಸಿದರು. ಅಧ್ಯಕ್ಷತೆಯನ್ನು ಸೌರಭದ ಅಧ್ಯಕ್ಷ ಶ್ರೀಕಾಂತ ಭಟ್ಟ ವಹಿಸಿದ್ದರು. ಮುಖ್ಯ ಅತಿಥಿಯಾಗಿ ಮಾಜಿ ಸಂಸದ ಪ್ರತಾಪ್ ಸಿಂಹ, ಸೌರಭದ ಗೌರವ ಅಧ್ಯಕ್ಷ ಮೋಹನ ಹೆಗಡೆ ವೇದಿಕೆಯಲ್ಲಿ ಉಪಸ್ಥಿತರಿದ್ದರು. ಪ್ರಧಾನ ಕಾರ್ಯದರ್ಶಿ ಅರುಣ ಹೆಗಡೆ ಸನ್ಮಾನ ಪತ್ರ ವಾಚಿಸಿದರು. ಸೌರಭ ನಿರ್ದೇಶಕ ಗಣೇಶ ಜೋಶಿ ಕಾರ್ಯಕ್ರಮ ನಿರೂಪಿಸಿದ್ದರು.

ಕಿಡಿ ನುಡಿ

• ವಾಸುದೇವರಾವ್ ಕಕ್ಕೆನೇಜಿ

◈ ಭಾರತದ ವಿರುದ್ಧ ಭಯೋತ್ಪಾದನೆಯನ್ನು ಛೂ ಬಿಟ್ಟ, ಜಗತ್ತಿಗೆ ಭಯೋತ್ಪಾದನೆಯನ್ನು ರಫ್ತು ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿದ ಪಾಕಿಸ್ತಾನವು ಈಗ ತಾನೆ ಅದರ ಉಪಟಳವನ್ನು ಎದುರಿಸುತ್ತಿದೆ – **ಸಂಪಾದಕೀಯ ವಾಕ್ಯ**
– ಬಿತ್ತಿದಂತೆ ಬೆಳೆ, ಬೇವು ಬಿತ್ತಿದರೆ ಮಾವು ಸಿಕ್ಕೀತೇ!

ದಿನ ಭವಿಷ್ಯ

ಮೇಷ – ಗುರಿ ಸಾಧಿಸುವ ಛಲ ನಿಮ್ಮದು. ಕೋಪದಿಂದ ಎಗರಾಡುವ ಪ್ರಸಂಗ ಬಂದೀತು. ಇತರರನ್ನು ಅರಿತು ವ್ಯವಹರಿಸಲು ಪ್ರಯತ್ನಿಸಿ.

ವೃಷಭ – ಅವಕಾಶಗಳು ನಿಮ್ಮ ಮುಂದಿವೆ. ಅವನ್ನು ಸದುಪಯೋಗ ಮಾಡುವ ಕಾರ್ಯ ನಿಮ್ಮದು. ಕಳೆದುದಕ್ಕೆ ಕೊರಗುತ್ತಾ ಉತ್ಸಾಹ ಕಳಕೊಳ್ಳದಿರಿ.

ಮಿಥುನ – ನಿಮ್ಮ ಕೆರಿಯರ್‌ಗೆ ಆದ್ಯತೆ ಕೊಡಿ. ಹೊಣೆ ವಹಿಸಬೇಕಾದ ಸಮಯ ಬಂದಿದೆ. ಕಾಲಹರಣ ಮಾಡಬೇಡಿ. ಹಣದ ಕೊರತೆ ಕಾಡಬಹುದು.

ಕಟಕ – ನಿಮ್ಮ ಬದುಕಲ್ಲಿ ಇತರರ ಹಸ್ತಕ್ಷೇಪ ಅಸಹನೆ ಮೂಡಿಸಲಿದೆ. ಆರ್ಥಿಕ ವ್ಯವಹಾರವೊಂದು ನೀವು ನಿರೀಕ್ಷಿಸಿದಂತೆ ಸಾಗದು. ಧನ ಹಾನಿ ಉಂಟಾದೀತು.

ಸಿಂಹ – ಮನಸ್ಸು ಕೆಡಿಸುವ ಬೆಳವಣಿಗೆ. ಸಂಗಾತಿ ಜತೆ ಅಸಮಾಧಾನ. ವೃತ್ತಿಯಲ್ಲಿ ಎಡರುತೊಡರು ಎದುರಿಸುವಿರಿ. ಕೆಲವರ ಅಸಹಕಾರ ಉಂಟಾದೀತು.

ಕನ್ಯಾ – ಇತರರ ಜತೆ ಹೆಜ್ಜೆಯಿಟ್ಟು ಸಾಗಿ. ನಿಮ್ಮದೇ ವಿಭಿನ್ನ ದಾರಿ ತುಳಿಯದಿರಿ. ಪರಸ್ಪರ ಸಹಕಾರ ಅಗತ್ಯ. ಕೆಲವು ಅಡ್ಡಿಗಳು ಗೋಚರಿಸಲಿವೆ.

ತುಲಾ – ನಿಮ್ಮ ನಿರ್ವಹಣೆ ಇತರರ ಗಮನಕ್ಕೆ ಬರಲಿದೆ. ಕೌಟುಂಬಿಕ ಸೌಹಾರ್ದ. ಮಕ್ಕಳ ಸಾಧನೆಯಿಂದ ತೃಪ್ತಿ. ಆರ್ಥಿಕ ಅಡ್ಡಿ ನಿವಾರಣೆ.

ವೃಶ್ಚಿಕ – ಕುಟುಂಬದ ವ್ಯವಹಾರಕ್ಕೆ ಹೆಚ್ಚು ಗಮನ ಕೊಡಿ. ನಿಮ್ಮ ಮೇಲೆ ಒತ್ತಡ ಹೆಚ್ಚಲಿದೆ. ಹೊಸ ವ್ಯವಹಾರ ಆರಂಭಿಸಿದವರಿಗೆ ತೃಪ್ತಿಕರ ಬೆಳವಣಿಗೆ.

ಧನು – ವೃತ್ತಿಯಲ್ಲೂ ಖಾಸಗಿಯಾಗಿಯೂ ಉನ್ನತಿ. ದೊಡ್ಡ ಕಿರಿಕಿರಿಯೊಂದು ಅಂತ್ಯ. ಮನಸ್ಸಿಗೆ ನಿರಾಳತೆ. ಆರೋಗ್ಯ ಸುಸ್ಥಿರ.

ಮಕರ – ಉತ್ಸಾಹದ ದಿನ. ಆದರೆ ಫಲ ನೀಡದ ಕಾರ್ಯಕ್ಕೆ ಎಳಸಬೇಡಿ. ಅಪರಿಚಿತರ ಜತೆ ಎಚ್ಚರದ ನಡೆಯಿರಲಿ. ಬೇಸ್ತು ಬೀಳುವ ಸಂಭವವಿದೆ.

ಕುಂಭ – ನಿಮ್ಮ ಬದುಕು ಸರಿದಾರಿಯಲ್ಲಿ ಸಾಗುತ್ತಿದೆ ಎಂಬ ಭಾವ. ವಿಘ್ನಗಳು ನಿವಾರಣೆ. ದಂಪತಿಗಳಿಗೆ ಶುಭ ಬೆಳವಣಿಗೆ. ಆರ್ಥಿಕ ಕೊರತೆ ನೀಗಲಿದೆ.

ಮೀನ – ಅವಸರದ ಹೆಜ್ಜೆ ಇಡಬೇಡಿ. ಯೋಚಿಸಿ ಕಾರ್ಯವೆಸಗಿ. ಕಾಣದ ಕೈಗಳು ನಿಮ್ಮ ವಿರುದ್ಧ ಕಾರ್ಯಾಚರಿಸುತ್ತಿವೆ. ಕೌಟುಂಬಿಕ ಸೌಹಾರ್ದ.

ರಾಹುಕಾಲ: 3.00– 4.30
ಗುಳಿಕಕಾಲ: 12.00–1.30
ಅದೃಷ್ಟ ಸಂಖ್ಯೆ: 0,5,9,4

ಎನ್‌ಐಎ ಕಸ್ಟಡಿಗೆ ಎಲ್‌ಇಟಿ ಉಗ್ರರು

ಪುಟ 1 ➡ **ಮಾಸ್ಟರ್ ಮೈಂಡ್ ಹುರೇರ:** ಉಗ್ರ ಚಟುವಟಿಕೆಗಳ ಮಾಸ್ಟರ್ ಮೈಂಡ್ ಹುರೇರ, ಶ್ರೀನಗರದ ಸಮೀಪ ಹರ್ವಾನ್‌ನಲ್ಲಿ ಭಯೋತ್ಪಾದನಾ ಚಟುವಟಿಕೆಗಳಿಗೆ ಹಣಕಾಸಿನ ನೆರವು ನೀಡುತ್ತಿದ್ದ. ಅಲ್ಲದೇ ದಶಕಗಳ ಹಿಂದೆ ಜಮ್ಮು ಕಾಶ್ಮೀರದೊಳಗೆ ಅಕ್ರಮವಾಗಿ ನುಸುಳಿದ್ದ ಹುರೇರ, ಗಸ್ಸು, ವಾನಿಹೊಮ, ಚಾಟರ್‌ಹಮ ಮತ್ತು ಡೆನಿಹಮ ಇತ್ಯಾದಿ ಗ್ರಾಮಗಳಲ್ಲಿ ತಲೆಮರೆಸಿಕೊಂಡು ಉಗ್ರ ಚಟುವಟಿಕೆಗಳಲ್ಲಿ ಸಕ್ರಿಯವಾಗಿದ್ದ. ಹುರೇರಾ ಮತ್ತು ಮತ್ತೊರ್ವ ಪಾಕಿಸ್ತಾನಿ ಭಯೋತ್ಪಾದಕ ಉಸ್ಮಾನ್ ಅಲಿಯಾಸ್ ಖುಬೈಬ್‌ನನ್ನು ಶ್ರೀನಗರದ ಮೂವರು ನಿವಾಸಿಗಳೊಂದಿಗೆ ರಾಜ್ಯ ಮತ್ತು ಕೇಂದ್ರ ತಂಡದ ಜಂಟಿ ಪ್ರಯತ್ನದಲ್ಲಿ ಬಂಧಿಸಲಾಗಿತ್ತು. ಈ ಬಂಧನದಿಂದಾಗಿ ಭಯೋತ್ಪಾದಕ ಚಟುವಟಿಕೆಗಳಿಗೆ ಲಾಜಿಸ್ಟಿಕ್ಸ್ ಮತ್ತು ಧನಸಹಾಯವನ್ನು ಒದಗಿಸುವ ಅತ್ಯಾಧುನಿಕ ಜಾಲದ ಬೆಳಕಿಗೆ ಬಂದಿತ್ತು.

ಪಂಚಶೀಲ ಬೆಟ್ಟದಲ್ಲಿ ಅತಿ ಎತ್ತರದ ಬುದ್ಧನ ಪ್ರತಿಮೆ

ಪುಟ 1 ➡ ಇಷ್ಟು ಜನ ಬಂತೇಜಿಗಳು ಒಂದೆಡೆ ಸೇರಿರುವುದು ಧರ್ಮದ ಬೆಳವಣಿಗೆಗೆ ಉತ್ತಮ ಹೆಜ್ಜೆ ಎಂದು ಹೇಳಿದರು. ಹಿಂದು ಧಾರ್ಮಿಕ ದತ್ತಿ ಇಲಾಖೆ ಸಚಿವ ರಾಮಲಿಂಗಾರೆಡ್ಡಿ, ವಿಶ್ವ ಭಾರತ ಮಹಾಸಭಾದ ಅಧ್ಯಕ್ಷ ಮಲ್ಲಿಕಾರ್ಜುನ್ ಭಾಲ್ಕಿ, ರಾಜ್ಯ ಘಟಕದ ಉಪಾಧ್ಯಕ್ಷ ಎಂ.ಸಿ.ಶಿವರಾಜ್, ಮಂಡ್ಯ ಜಿಲ್ಲಾ ಕಾರ್ಯದರ್ಶಿ ಎಸ್.ಸಿ. ನಾರಾಯಣಸ್ವಾಮಿ, ಮೂಡ್ನಕೂಡು ಚಿನ್ನಸ್ವಾಮಿ, ಪೀಪಲ್ಸ್ ಪಾರ್ಟಿ ಅಧ್ಯಕ್ಷ ಡಾ. ವೆಂಕಟಸ್ವಾಮಿ, ಗೌತಮಿ ಬಂತೇಜಿ ಪಾಲ್ಗೊಂಡಿದ್ದರು.

ಆರೋಗ್ಯ ಸಚಿವ ದಿನೇಶ ಗುಂಡೂರಾವ್ ಭರವಸೆ

ವೈದ್ಯರ ನೇಮಕಾತಿ ಶೀಘ್ರ

• **ಹುಬ್ಬಳ್ಳಿ:** ಆರ್ಥಿಕ ಇಲಾಖೆ ರಾಜ್ಯದಲ್ಲಿ 225 ವೈದ್ಯರ ನೇಮಕಾತಿ ಮಾಡಿಕೊಳ್ಳಲು ಅನುಮೋದನೆ ನೀಡಿದೆ. ಶೀಘ್ರದಲ್ಲಿ ಒಳ ಮೀಸಲಾತಿ ಅನ್ವಯ ನೇಮಕಾತಿ ಪ್ರಕ್ರಿಯೆ ನಡೆಸಲಾಗುವುದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ ಗುಂಡೂರಾವ್ ಹೇಳಿದರು.

ಸೋಮವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ತಾಲೂಕು ಆಸ್ಪತ್ರೆಗಳ ಮೂಲ ಸೌಲಭ್ಯ ಒದಗಿಸಿ ದಿನದ 24 ಗಂಟೆ ಕಾರ್ಯ ನಿರ್ವಹಿಸುವ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ. ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ 1,300 ಶುಶ್ರೂಷಕರ ನೇಮಕ ಮಾಡಿಕೊಳ್ಳಲು ಅವಕಾಶವಿದೆ ಎಂದರು.

ಆರೋಗ್ಯದ ಮೇಲೆ ಬಿಸಿಲಿನ ತಾಪ ಪರಿಣಾಮ ಬೀರುವ ಸಾಧ್ಯತೆಯಿರುವುದರಿಂದ ರಾಜ್ಯ ಸರ್ಕಾರ ಅಗತ್ಯ ಮಾರ್ಗಸೂಚಿಗಳನ್ನು ಪ್ರಕಟಿಸಿದೆ. ಹೀಟ್ ಸ್ಟ್ರೋಕ್ ಪ್ರಕರಣಗಳಿಗೆ ತುರ್ತು ಚಿಕಿತ್ಸೆ ನೀಡಲು ಕ್ರಮ ಕೈಗೊಳ್ಳಲಾಗಿದ್ದು, ಎಲ್ಲಾ ಆಸ್ಪತ್ರೆಗಳಲ್ಲಿ ಹಾಸಿಗೆಗಳನ್ನು ಕಾಯ್ದಿರಿಸಲಾಗಿದೆ ಎಂದರು. ಸರ್ಕಾರಿ ಆಸ್ಪತ್ರೆಗಳಲ್ಲಿ ಸರ್ಕಾರಿ ಔಷಧಗಳೇ ಸಿಗಬೇಕು ಎನ್ನುವ ಉದ್ದೇಶದಿಂದ ಈಗಿರುವ ಜೆನರಿಕ್ ಮಳಿಗೆಗಳನ್ನು ತೆರವುಗೊಳಿಸುವ ನಿರ್ಧಾರ ತೆಗೆದುಕೊಂಡಿದ್ದೇವೆ. ಈ ಕುರಿತು ಕೆಲವರು ನ್ಯಾಯಾಲಯದ ಮೆಟ್ಟಿಲೇರಿದ್ದಾರೆ. ನಾವು ಸಹ ನ್ಯಾಯಾಲಯದಲ್ಲಿ ಸಮರ್ಥನೆ ಮಾಡಿಕೊಳ್ಳುತ್ತಿದ್ದೇವೆ ಎಂದು ತಿಳಿಸಿದರು.

ಹಿರಿಯ ಶಾಸಕರಿಗೆ ಅವಕಾಶ

ನಾವ್ಯಾರೂ ಖಾಯಂ ಸಚಿವರಾಗಬೇಕು ಎಂಬ ನಿಯಮ ಪಕ್ಷದಲ್ಲಿ ಇಲ್ಲ. ಸಾಕಷ್ಟು ಮಂದಿ ಹಿರಿಯರು, ಅನುಭವಿಗಳೂ ಇದ್ದಾರೆ. ಅವರಿಗೂ ಅವಕಾಶ ದೊರೆಯಬೇಕು ಎಂದರು. ಹೈಕಮಾಂಡ್ ತೆಗೆದುಕೊಳ್ಳುವ ತೀರ್ಮಾನವನ್ನು ಮುಕ್ತವಾಗಿ ಒಪ್ಪಿಕೊಳ್ಳುತ್ತೇವೆ. ನಾವೆಲ್ಲ ಪಕ್ಷದ ಶಿಸ್ತಿನ ಸಿಪಾಯಿಗಳಾಗಿದ್ದೇವೆ. ಸಚಿವ ಸ್ಥಾನ ಕಳೆದುಕೊಳ್ಳುವವರು ಅವಮಾನ ಎಂದು ಭಾವಿಸಬಾರದು. ಎಲ್ಲರಿಗೂ ಅವಕಾಶ ಸಿಗಬೇಕು ಎನ್ನುವ ದೊಡ್ಡತನ ಇಟ್ಟುಕೊಂಡಿರಬೇಕು ಎಂದರು.



ಆಂಬುಲೆನ್ಸ್ ಸೇವೆ ಸರ್ಕಾರದ ಜವಾಬ್ದಾರಿ

• **ಶಿಗ್ಗಾವಿ:** ಖಾಸಗಿ ಒಡೆತನದಲ್ಲಿರುವ 108 ಆಂಬುಲೆನ್ಸ್ ಸೇವೆ ಸಂಪೂರ್ಣ ಜವಾಬ್ದಾರಿಯನ್ನು ರಾಜ್ಯ ಸರ್ಕಾರವೇ ನಿರ್ವಹಿಸಲಿದೆ. ಮುಂದಿನ ಒಂದು ತಿಂಗಳಲ್ಲಿ ಆಧುನಿಕ ವ್ಯವಸ್ಥೆ ಮೂಲಕ ದೇಶದಲ್ಲಿಯೇ ಮಾದರಿಯಾಗುವ ಆಂಬುಲೆನ್ಸ್ ಸೇವೆಯನ್ನು ರಾಜ್ಯ ಸರ್ಕಾರ ಕಲ್ಪಿಸಲಿದೆ ಎಂದು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವ ದಿನೇಶ ಗುಂಡೂರಾವ್ ತಿಳಿಸಿದರು.

ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷ ಸಮೀಪಿಸುತ್ತಿದೆ. ಸಚಿವ ಸಂಪುಟ ಪುನರ್ ರಚನೆಯಾಗಿ ಉಳಿದವರಿಗೂ ಅಲ್ಲಿ ಅವಕಾಶ ದೊರೆಯಬೇಕು. ಹೈಕಮಾಂಡ್ ಹಾಗೂ ಸಿಎಂ ಈ ಬಗ್ಗೆ ಶೀಘ್ರದಲ್ಲಿ ಸೂಕ್ತ ನಿರ್ಧಾರ ಕೈಗೊಳ್ಳಲಿದ್ದಾರೆ ಎಂದರು.

ಬಡವರ ಪರ ಕೆಲಸ ಮಾಡಿ: ಡಿಕೆಶಿ

• **ಬೆಂಗಳೂರು:** ಅಧಿಕಾರಿಗಳು ಬಡವರ ಪರವಾಗಿ ಕೆಲಸ ಮಾಡಬೇಕು ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಕಿವಿಮಾತು ಹೇಳಿದರು.



ಬೆಂಗಳೂರಿನಲ್ಲಿ ಮಾತನಾಡಿ, ರಾಜಕಾರಣಿಗಳ ಕಾಲಾವಧಿ ಕೇವಲ 5 ವರ್ಷ. ನಾವು ಈ ಸ್ಥಾನಕ್ಕೆ ಬರಬೇಕು ಎಂದರೆ ಎಷ್ಟು ನೀರು ಕುಡಿದಿರುತ್ತೇವೆ, ಏನೇನು ಮಾಡಿರುತ್ತೇವೆ ಎನ್ನುವುದು ನಿಮಗೂ ಗೊತ್ತಿರುತ್ತದೆ. ನೀವು 25– 30 ವರ್ಷಕ್ಕೆ ಅಧಿಕಾರಿಗಳಾಗಿರುತ್ತೀರಿ. ಅವರು, ಇವರು ಯಾರೇ ಬಂದರೂ ಜಾತಿ, ಪ್ರಭಾವ ಬಳಸಿಕೊಂಡು ಮುಂದುವರೆಯುವವರು ನೀವು. ರಾಜಕಾರಣ ನಮಗಿಂತ ನಿಮಗೇ ಚೆನ್ನಾಗಿ ಗೊತ್ತಿದೆ. ಯಾವ ಅಧಿಕಾರಿಗಳೂ ಕಡಿಮೆಯಿಲ್ಲ. ಕೆಲವೊಬ್ಬರು ದಡ್ಡರು ಇರಬಹುದು. ಹೀಗೆ ಪ್ರಭಾವ ಬಳಸಿಕೊಳ್ಳುವುದು ಎಂದು ಸುಮ್ಮನಿರಬಹುದು. ಆದರೂ ಅಧಿಕಾರಿಗಳು ಚಾಣಾಕ್ಷರಿದ್ದೀರಿ ಎಂದರು. ಅಧಿಕಾರಿಗಳನ್ನು ದೇವರ ರೂಪದಲ್ಲಿ ಜನ ನೋಡುತ್ತಾರೆ ಎಂದು ಹೇಳಿದರು.

ಶೀಘ್ರ ಸಿಹಿ ಸುದ್ದಿ ನಿರೀಕ್ಷೆ



ಮೇ ಎರಡನೇ ಅಥವಾ ಮೂರನೇ ವಾರಕ್ಕೆ ಸಿಹಿಸುದ್ದಿ ಕೊಡುತ್ತೇವೆ ಎಂದು ಹೈಕಮಾಂಡ್ ನಾಯಕರು ಹೇಳಿದ್ದಾರೆ ಎಂದು ವಿಧಾನಸಭೆ ಮುಖ್ಯ ಸಚೇತಕ ಅಶೋಕ ಪಟ್ಟಣ ಹೇಳಿದರು. ಸೋಮವಾರ ಸುದ್ದಿಗಾರರ ಜೊತೆ ಸೋಮವಾರ ಮಾತನಾಡಿದ ಅವರು, ನಾವು ಎವಲಿಗೆ ಹೋಗಿ ರಣದೀಪ್ ಸಿಂಗ್ ಸುರ್ಜೇವಾಲ ಅವರನ್ನು ಭೇಟಿ ಮಾಡಿದ್ದೇವೆ. ಮಲ್ಲಿಕಾರ್ಜುನ ಖರ್ಗೆಯವರೂ ನಮ್ಮ ಜೊತೆ ಮಾತನಾಡಿದ್ದಾರೆ ಎಂದರು. ಮತ್ತೊಂದು ಸಭೆ ಸೇರಲು ಶಾಸಕರು ಒತ್ತಾಯಿಸುತ್ತಿದ್ದಾರೆ. ಉಪಚುನಾವಣೆ ಫಲಿತಾಂಶದ ಬಳಿಕ 40 ಜನ ಮತ್ತೆ ಹೈಕಮಾಂಡ್ ನಾಯಕರ ಭೇಟಿಗೆ ಹೋಗುತ್ತೇವೆ ಎಂದೂ ಹೇಳಿದರು.

ಮೋದಿ ಮೇಲೂ ದಾಳಿ ಬಯಸುತ್ತಿದೆಯೇ ಕೈ?

ಪುಟ 1 ➡ ವಾಷಿಂಗ್ಟನ್‌ನ ಹೋಟೆಲ್‌ನಲ್ಲಿ ನಡೆದ ಈ ಘಟನೆಯಲ್ಲಿ ಟ್ರಂಪ್ ಸೇರಿದಂತೆ ಪ್ರಮುಖರು ಸುರಕ್ಷಿತವಾಗಿ ಸ್ಥಳಾಂತರಗೊಂಡಿದ್ದರು. ಈ ಹಿನ್ನೆಲೆಯಲ್ಲಿ ಮಾತನಾಡಿದ ವಾಡೆಟ್ಟಿವಾರ್, 'ಯಾರು ಏನೇ ಮಾಡಿದರೂ ಅದರ ಫಲ ಅನುಭವಿಸಬೇಕಾಗುತ್ತದೆ' ಎಂಬ ಅರ್ಥದ ಹೇಳಿಕೆ ನೀಡಿರುವ ವಿಡಿಯೋವನ್ನು ಬಿಜೆಪಿ ಹಂಚಿಕೊಂಡಿದ್ದು, ಇದೇ ವಿಚಾರಕ್ಕೆ ತೀವ್ರ ರಾಜಕೀಯ ಪ್ರತಿಕ್ರಿಯೆಗಳು ವ್ಯಕ್ತವಾಗಿವೆ.

ಈ ಬಗ್ಗೆ ಪ್ರತಿಕ್ರಿಯಿಸಿದ ಬಿಜೆಪಿ ವಕ್ತಾರ ಶೇಹ್ಜಾದ್ ಪೂನಾವಾಲಾ, ಕಾಂಗ್ರೆಸ್ ರಾಜಕೀಯ ಟೀಕೆಯನ್ನು ಮೀರಿ ಹಿಂಸಾತ್ಮಕ ಘಟನೆಯನ್ನು ಸಮರ್ಥಿಸುವ ಮಟ್ಟಕ್ಕೆ ಕಾಂಗ್ರೆಸ್ ಪಕ್ಷ ಇಳಿದಿದೆ ಎಂದು ಆರೋಪಿಸಿದರು. 'ವಾಡೆಟ್ಟಿವಾರ್ ಹೇಳಿಕೆ ಮೂಲಕ ಟ್ರಂಪ್ ಮೇಲೆ ನಡೆದ ದಾಳಿಯನ್ನು ಸಮರ್ಥಿಸಿ, ಭಾರತದಲ್ಲಿಯೂ ಇಂತಹ ಮನೋಭಾವ ಇದೆ ಎಂದು ಹೇಳಿದ್ದಾರೆ. ಇದು ಪ್ರಧಾನಿ ಮೋದಿ ವಿರುದ್ಧ ಇಂತಹ ಘಟನೆ ನಡೆಯಲಿ ಎಂಬ ಆಶಯವನ್ನೇ ಸೂಚಿಸುತ್ತದೆ' ಎಂದು ಅವರು ಕಿಡಿಕಾರಿದರು. ಜತೆಗೆ ಈ ಹೇಳಿಕೆಯನ್ನು ಲೋಕಸಭೆ ಪ್ರತಿಪಕ್ಷ ನಾಯಕ ರಾಹುಲ್ ಗಾಂಧಿ ಅವರು ಖಂಡಿಸಲಿ ಎಂದು ಒತ್ತಾಯಿಸಿದ್ದಾರೆ.

ಕಾಂಗ್ರೆಸ್ ಈ ಹೇಳಿಕೆಗಳಿಗೆ ಕ್ಷಮೆ ಕೇಳಬೇಕು ಎಂದು ಬಿಜೆಪಿ ಆಗ್ರಹಿಸಿದ್ದು, ಈ ಮೂಲಕ ಪಕ್ಷದ ನಿಜಸ್ವರೂಪ ಬಹಿರಂಗವಾಗಿದೆ ಎಂದು ಪೂನಾವಾಲಾ ಆರೋಪಿಸಿದರು.

ಇದೇ ವೇಳೆ ಮತ್ತೊಬ್ಬ ಬಿಜೆಪಿ ರಾಷ್ಟ್ರೀಯ ವಕ್ತಾರ ಪ್ರದೀಪ್ ಭಂಡಾರಿ ಕಾಂಗ್ರೆಸ್ ವಿರುದ್ಧ ತೀವ್ರ ಆಕ್ರೋಶ ವ್ಯಕ್ತಪಡಿಸಿ, 'ಪ್ರಜಾಪ್ರಭುತ್ವದ ಮೂಲಕ ಪ್ರಧಾನಿ ಮೋದಿ ಅವರನ್ನು ಸೋಲಿಸಲು ಸಾಧ್ಯವಾಗದ ಕಾಂಗ್ರೆಸ್, ಈಗ ಅವರ ವಿರುದ್ಧ ದಾಳಿ ನಡೆಯಲಿ ಎಂದು ಬಯಸುತ್ತಿದೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಆರೋಪಿಸಿದ್ದಾರೆ.

ವಾಡೆಟ್ಟಿವಾರ್ ಹೇಳಿದ್ದೇನು?

ವಾಡೆಟ್ಟಿವಾರ್ ವಿಡಿಯೋದಲ್ಲಿ ಟ್ರಂಪ್ ಆಡಳಿತವು ಜಾಗತಿಕ ಶಾಂತಿಯನ್ನು ಅಸ್ಥಿರಗೊಳಿಸಿದೆ ಎಂದು ಆರೋಪಿಸಿ, ಅಮೆರಿಕದಲ್ಲಿ ಜನರು ಬೀದಿಗಿಳಿದು ಪ್ರತಿಭಟನೆ ನಡೆಸುತ್ತಿರುವುದನ್ನು ಉಲ್ಲೇಖಿಸಿದ್ದಾರೆ. ಭಾರತದಲ್ಲಿ ಇದೇ ರೀತಿಯ ಅಸಮಾಧಾನ ಇದ್ದರೂ ಜನರು ಹೊರಬರುತ್ತಿಲ್ಲ ಎಂಬ ಅಭಿಪ್ರಾಯವನ್ನೂ ಅವರು ವ್ಯಕ್ತಪಡಿಸಿದ್ದಾರೆ. 'ದೇಶದ ಸ್ಥಿತಿಗತಿ ಬಗ್ಗೆ ಅಸಮಾಧಾನ ಇದ್ದರೂ ಅದು ಬಹಿರಂಗವಾಗುತ್ತಿಲ್ಲ' ಎಂದೂ ಹೇಳಿದ್ದಾರೆ.

ಭಾರತ–ಕಿವೀಸ್ ಮುಕ್ತ

ಪುಟ 1 ➡ **ವ್ಯಾಪಾರ ಮತ್ತು ಹೂಡಿಕೆಗೆ ದೊಡ್ಡ ಉತ್ತೇಜನ:** ಈ ಒಪ್ಪಂದದ ಪ್ರಮುಖ ಅಂಶವಾಗಿ, ನ್ಯೂಜಿಲೆಂಡ್ ಮುಂದಿನ 15 ವರ್ಷಗಳಲ್ಲಿ ಭಾರತದಲ್ಲಿ ಸುಮಾರು 20 ಬಿಲಿಯನ್ ಅಮೆರಿಕನ್ ಡಾಲರ್ ನೇರ ವಿದೇಶಿ ಹೂಡಿಕೆ ಮಾಡಲು ಬದ್ಧತೆ ವ್ಯಕ್ತಪಡಿಸಿದೆ. ಕೃಷಿ, ಉತ್ಪಾದನೆ, ತಂತ್ರಜ್ಞಾನ ಮತ್ತು ನವೋದ್ಯಮ ಕ್ಷೇತ್ರಗಳಲ್ಲಿ ಈ ಹೂಡಿಕೆ ಮಹತ್ತರ ಪರಿಣಾಮ ಬೀರುವ ನಿರೀಕ್ಷೆ ಇದೆ.

ಇದರೊಂದಿಗೆ, ಎರಡೂ ದೇಶಗಳ ನಡುವೆ ಸರಕು ಮತ್ತು ಸೇವೆಗಳ ಒಟ್ಟು ದ್ವಿಪಕ್ಷೀಯ ವ್ಯಾಪಾರವನ್ನು ಮುಂದಿನ ಐದು ವರ್ಷಗಳಲ್ಲಿ 5 ಬಿಲಿಯನ್ ಡಾಲರ್‌ಗೆ ದ್ವಿಗುಣಗೊಳಿಸುವ ಗುರಿ ಹೊಂದಲಾಗಿದೆ. ವಾಣಿಜ್ಯ ಸಚಿವ ಪಿಯೂಷ್ ಗೋಯಲ್, 'ಈ ಒಪ್ಪಂದದಲ್ಲಿ ಪ್ರಮುಖವಾಗಿ ರಫ್ತುಗಳ ಬಲವರ್ಧನೆ, ಕೃಷಿ ಉತ್ಪಾದಕತೆ, ಹೂಡಿಕೆ, ಸೇವೆಗಳು ಮತ್ತು ಕೌಶಲ್ಯ ಅಭಿವೃದ್ಧಿಯಂತಹ ಪ್ರಮುಖ ಅಂಶಗಳಿವೆ' ಎಂದು ತಿಳಿಸಿದ್ದಾರೆ.

ಸೇವಾ ಕ್ಷೇತ್ರ ಮತ್ತು ವೀಸಾಗಳಲ್ಲಿ ಹೊಸ ದಾರಿ: ಸೇವಾ ಕ್ಷೇತ್ರದಲ್ಲಿ, ಐಟಿ, ಶಿಕ್ಷಣ, ಹಣಕಾಸು, ಪ್ರವಾಸೋದ್ಯಮ ಸೇರಿದಂತೆ ಸುಮಾರು 118 ಕ್ಷೇತ್ರಗಳಲ್ಲಿ ಭಾರತಕ್ಕೆ ಮಾರುಕಟ್ಟೆ ಪ್ರವೇಶ ಸಿಗಲಿದೆ. ಜತೆಗೆ, ಮೋಸ್ಟ್ ಫೇವರ್ಡ್ ನೇಶನ್(ಎಂಎಫ್ಎನ್) ಸೌಲಭ್ಯವನ್ನು ಹಲವು ಕ್ಷೇತ್ರಗಳಲ್ಲಿ ನೀಡಲಾಗಿದೆ.

ತಾತ್ಕಾಲಿಕ ಉದ್ಯೋಗ ಮಾರ್ಗ: ಭಾರತೀಯ ಪರಿಣತರಿಗಾಗಿ 5,000 ವೀಸಾಗಳ ಕೋಟಾದೊಂದಿಗೆ ಹೊಸ ತಾತ್ಕಾಲಿಕ ಉದ್ಯೋಗ ಮಾರ್ಗವನ್ನು ನ್ಯೂಜಿಲೆಂಡ್ ತೆರೆದಿದೆ. ಐಟಿ, ಇಂಜಿನಿಯರಿಂಗ್, ಆರೋಗ್ಯ, ಶಿಕ್ಷಣ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡುವ ಅವಕಾಶಗಳು ಸಿಗಲಿವೆ. ಪ್ರಧಾನಿ ಮೋದಿ ಅವರು, 'ಈ ಒಪ್ಪಂದವು ಕೌಶಲ್ಯ, ಪ್ರತಿಭೆ ಮತ್ತು ಯುವಶಕ್ತಿಗೆ ಹೊಸ ದಿಕ್ಕು ನೀಡುತ್ತದೆ. ವಿದ್ಯಾರ್ಥಿಗಳು ಮತ್ತು ಪರಿಣತರಿಗಾಗಿ ವಿಶ್ವಮಟ್ಟದ ಅವಕಾಶಗಳನ್ನು ತೆರೆದಿಡುತ್ತದೆ,' ಎಂದು ಹೇಳಿದ್ದಾರೆ.

> ಈ ಒಪ್ಪಂದದ ಕೇಂದ್ರಬಿಂದು ರಫ್ತು ಬಲವರ್ಧನೆ, ಕೃಷಿ ಉತ್ಪಾದಕತೆ, ಹೂಡಿಕೆ, ಸೇವೆಗಳು ಮತ್ತು ಕೌಶಲ್ಯ ಅಭಿವೃದ್ಧಿಯಾಗಿದೆ.
> ■ **ಪಿಯೂಷ್ ಗೋಯಲ್,** ವಾಣಿಜ್ಯ ಮತ್ತು ಕೈಗಾರಿಕಾ ಸಚಿವ

> ಎಫ್‌ಟಿಎ ವ್ಯಾಪಾರದಲ್ಲಿ ಅಡೆತಡೆಗಳನ್ನು ಕಡಿಮೆ ಮಾಡುತ್ತದೆ, ಸ್ಪಷ್ಟ ನಿಯಮಗಳನ್ನು ಒದಗಿಸುತ್ತದೆ ಮತ್ತು ವ್ಯಾಪಾರ ಸಂಬಂಧಗಳನ್ನು ಸುಲಭಗೊಳಿಸುತ್ತದೆ.
> ■ **ಟಾಡ್ ಮೆಕ್‌ಲೇ,** ನ್ಯೂಜಿಲೆಂಡ್ ವ್ಯಾಪಾರ ಮತ್ತು ಹೂಡಿಕೆ ಸಚಿವ

ಇಂಡೋ–ಪೆಸಿಫಿಕ್ ತಂತ್ರದಲ್ಲಿ ಪ್ರಮುಖ ಹೆಜ್ಜೆ: ಈ ಎಫ್‌ಟಿಎ ಭಾರತಕ್ಕೆ ಪೆಸಿಫಿಕ್ ಪ್ರದೇಶದ ಉನ್ನತ ಆದಾಯದ ಮಾರುಕಟ್ಟೆಗೆ ಪ್ರವೇಶ ನೀಡುವ ಮೂಲಕ ಅದರ ಇಂಡೋ–ಪೆಸಿಫಿಕ್ ಆರ್ಥಿಕ ತಂತ್ರವನ್ನು ಬಲಪಡಿಸುತ್ತದೆ. ಮತ್ತೊಂದೆಡೆ, ನ್ಯೂಜಿಲೆಂಡ್‌ಗೆ ವೇಗವಾಗಿ ಬೆಳೆಯುತ್ತಿರುವ ಭಾರತೀಯ ಮಾರುಕಟ್ಟೆಯಲ್ಲಿ ಸ್ಥಿರ ಪ್ರವೇಶ ಸಿಗುತ್ತದೆ.

3,283 ಶಿಶುಗಳಿಗೆ ಎದೆಹಾಲು ಅಮೃತಧಾರೆ

ಪುಟ 1 ➡ 2022ರ ಮಾ.8ರ ಮಹಿಳಾ ದಿನದಂದೇ ರಾಜ್ಯದಲ್ಲಿ ಮೊದಲ ಬಾರಿಗೆ ಬೆಂಗಳೂರಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ತಾಯಿ ಎದೆಹಾಲು ಬ್ಯಾಂಕ್ ಯೋಜನೆ ಆರಂಭಗೊಂಡಿದ್ದು, ಒಟ್ಟು 3,283 ನವಜಾತ ಶಿಶುಗಳು ಇದರ ಪ್ರಯೋಜನ ಪಡೆದಿವೆ. 1 ಕೋಟಿ ರೂ. ವೆಚ್ಚದಲ್ಲಿ ತಾಯಂದಿರ ಎದೆ ಹಾಲಿನ ಬ್ಯಾಂಕ್ ನಿರ್ಮಾಣ ಮಾಡಲಾಗಿದ್ದು, ಪ್ರತಿದಿನ 20 ರಿಂದ 30 ತಾಯಂದಿರು ಎದೆ ಹಾಲು ನೀಡುತ್ತಿದ್ದಾರೆ. ಈ ತಾಯಂದಿರ ಎದೆ ಹಾಲಿನ ಬ್ಯಾಂಕ್‌ಗೆ ಅಮೃತಧಾರೆ ಎಂದು ಹೆಸರಿಡಲಾಗಿದೆ.

ಹಾಲು ನೀಡುವ ಕ್ರಮ: ಕೆಲವು ಬಾಣಂತಿಯರಲ್ಲಿ ಎದೆ ಹಾಲು ಹೆಚ್ಚಿದ್ದು, ನೋವು ಅನುಭವಿಸುತ್ತಿರುತ್ತಾರೆ. ಅಂತಹವರು ವೈದ್ಯರ ಸಲಹೆಯಂತೆ ದಾನ ಮಾಡಲು ಬಯಸುತ್ತಾರೆ. ಅವರಿಗೆ ಆಪ್ತ ಸಮಾಲೋಚನೆ ನಡೆಸಿ, ಘಟಕಕ್ಕೆ ಕಳುಹಿಸಲಾಗುತ್ತದೆ. ಕೆ-ಶೀಟ್ ಸಹಿತ ಬರುವ ತಾಯಂದಿರ ಫೈಲ್ ಚೆಕ್ ಮಾಡಿ, ಸಂಪೂರ್ಣ ಆರೋಗ್ಯವಂತರು ಎಂದು ಖಾತ್ರಿಯಾದ ಬಳಿಕವೇ ಹಾಲು ಪಡೆಯಲಾಗುತ್ತದೆ. ತಾಯಿಗೆ ಸೆರೋಲಜಿ ಪರೀಕ್ಷೆಗಳಾದ ಎಚ್‌ಐವಿ, ಎಚ್‌ಬಿಎಸ್‌ಎಜಿ, ವಿಡಿಆರ್‌ಎಲ್, ಎಚ್‌ಸಿವಿ ಪರೀಕ್ಷೆ ಮಾಡಲಾಗುತ್ತವೆ. ಎಲ್ಲವೂ ನೆಗೆಟಿವ್ ಇರಬೇಕು. ಯಾವುದೇ ಸೋಂಕುಗಳಿದ್ದರೂ ಹಾಲನ್ನು ಪಡೆದುಕೊಳ್ಳಲಾಗುವುದಿಲ್ಲ. ಹೀಗೆ ಪಡೆದ ಹಾಲನ್ನು ಮೈನಸ್ 18–20 ಡಿಗ್ರಿ ಸೆಲ್ಸಿಯಸ್‌ನಲ್ಲಿ ಮೂರು ತಿಂಗಳು ಇಡಬಹುದು. ಅಷ್ಟರೊಳಗೆ ಪ್ಯಾಶ್ಚರೀಕರಣ ಮಾಡಿ, ಸಂಗ್ರಹಿಸಿದ ದಿನಾಂಕದಿಂದ 6 ತಿಂಗಳು ಶೇಖರಿಸಿಡಬಹುದು. ಪ್ಯಾಶ್ಚರೀಕರಣ ನಡೆದ ತಕ್ಷಣ ಕಲ್ಚರ್ ಟೆಸ್ಟ್‌ಗೆ ಕಳುಹಿಸಿ, ಈ ಹಾಲು ಶಿಶುಗಳಿಗೆ ಉಣಿಸಬಹುದು ಎಂದು ಪ್ರಯೋಗಾಲಯದಿಂದ ವರದಿ ಬಂದ ಬಳಿಕಷ್ಟೇ ವೈದ್ಯರ ಸಲಹೆ ಮೇರೆಗೆ ಹಾಲನ್ನು ಶಿಶುಗಳಿಗೆ ನೀಡಲಾಗುತ್ತದೆ.

ಎದೆಹಾಲು ಬ್ಯಾಂಕ್ ಸ್ಥಾಪನೆಗೆ ಸರ್ಕಾರ ಯೋಜನೆ: ಉತ್ತರ ಕರ್ನಾಟಕ ವಿಜಯಪುರದಲ್ಲಿ ಮೊದಲ ಸರ್ಕಾರಿ ಎದೆಹಾಲು ಬ್ಯಾಂಕ್ ವಿಜಯಪುರ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಥಾಪನೆಯಾಗುತ್ತಿದೆ. ಜತೆಗೆ, ಬೆಂಗಳೂರು, ಬೆಳಗಾವಿ, ಕಲಬುರಗಿ ಮತ್ತು ಮೈಸೂರು ಈ ನಾಲ್ಕು ಕಂದಾಯ ವಿಭಾಗಗಳಲ್ಲಿ ತಾಯಿ ಎದೆಹಾಲು ಬ್ಯಾಂಕ್‌ಗಳನ್ನು ಸ್ಥಾಪಿಸಲು ಸರ್ಕಾರ ಯೋಜನೆ ರೂಪಿಸುತ್ತಿದೆ.

ಮೈಸೂರು ಸಿಲ್ಕ್, ಎಲ್ಲಿಯೂ ಇಲ್ಲ ಶಿಲ್ಕು

ಪುಟ 1 ➡ ಆದರೆ ಉತ್ಪಾದಿಸಿದ ಎಲ್ಲಾ ಸೀರೆಗಳು ಮಾರುಕಟ್ಟೆಗೆ ಬರುತ್ತಿದ್ದಂತೆ ಮಾರಾಟವಾಗುತ್ತವೆ. ನಿಗಮವು ವಾರ್ಷಿಕ 400 ಕೋಟಿ ರೂ. ಲಾಭದಲ್ಲಿದೆ. ಆದರೂ ಬೇಡಿಕೆ ತಕ್ಕಷ್ಟು ಸೀರೆಗಳನ್ನು ತಲುಪಿಸುವಲ್ಲಿ ವಿಫಲವಾಗಿದೆ.

ಒಬ್ಬರಿಗೊಂದೇ ಸೀರೆ: ಇತ್ತೀಚೆಗೆ ಸಾಕಷ್ಟು ಮಂದಿ ನಕಲಿ ರೇಷ್ಮೆ ಖರೀದಿಸಿ ಮೋಸ ಹೋಗುತ್ತಿದ್ದು, ಇದರಿಂದ ಗ್ರಾಹಕರು ಸೀರೆ ಖರೀದಿಸಲು ಕೆಎಸ್‌ಐಸಿಎಲ್ ಮಳಿಗೆಗೆ ಬಂದು ದಿನವಿಡೀ ಸರದಿಯಲ್ಲಿ ನಿಂತು ಕಾದವರಿಗೆ ಸಿಗುವುದು ಬರೀ ಒಂದು ಸೀರೆ ಮಾತ್ರ. ಅಂದರೆ ಕೆಎಸ್‌ಐಸಿ ತನ್ನ ಸೀರೆಗಳಿಗೆ ಇರುವ ಬೇಡಿಕೆಗೆ ತಕ್ಕಂತೆ ಸೀರೆ ಉತ್ಪಾದನೆ ಆಗದೆ ಇರುವುದು ಕೃತಕ ಅಭಾವವೋ ಅಥವಾ ಮಾರಾಟದ ತಂತ್ರವೇ ಎಂದು ಗ್ರಾಹಕರು ಆರೋಪಿಸುತ್ತಿದ್ದಾರೆ.

ಉದ್ಯೋಗಿಗಳ ಕೊರತೆ

ಪುಟ 1 ➡ ಹೊಸದಾಗಿ ಬರುತ್ತಿರುವ ನೌಕರರಿಗೆ ಸರಿಯಾದ ತರಬೇತಿ ನೀಡಲು ಕನಿಷ್ಠ 3 ರಿಂದ 6 ತಿಂಗಳ ಕಾಲಾವಧಿ ಬೇಕಾಗುತ್ತಿದೆ. ಕೆಲವರು ಮೊದಲೇ ಸಿಲ್ಕ್ ಸೆಂಟರ್‌ನಿಂದ ತರಬೇತಿ ಪಡೆದು ಬಂದಿದ್ದರೂ ಪ್ರೊಬೆಷನರಿ ಅವಧಿ ಪೂರ್ಣಗೊಳಿಸಬೇಕಿದೆ. ಕೆಎಸ್‌ಐಸಿಎಲ್ ಸರ್ಕಾರಿ ಸಂಸ್ಥೆಯಾಗಿದ್ದು, ಗುಣಮಟ್ಟದ ವಿಚಾರದಲ್ಲಿ ಯಾವುದೇ ರಾಜಿ ಇಲ್ಲ.

ಭಾರತೀಯ ಸಂಸ್ಕೃತಿ–ಸಿದ್ಧಾಂತಗಳ ಮೌಲ್ಯ ಕಲಿಸಿ

ಪುಟ 1 ➡ **ಹಣ ಗಳಿಕೆ ಗುರಿ ದುರದೃಷ್ಟಕರ:** ದೇಶದ ರಾಷ್ಟ್ರೀಯ ಕಾನೂನು ವಿವಿಗಳು ಅದ್ಭುತ ಪ್ರತಿಭೆಗಳನ್ನು ಸೃಷ್ಟಿಸುತ್ತಿವೆ. ಈ ಪ್ರತಿಭೆಗಳು ತಮ್ಮ ಸಮಕಾಲೀನರಿಂದ ಮುಂಚೂಣಿಯಲ್ಲಿರುವುದೂ ಹೌದು. ಆದರೆ, ತಾವು ಆದಷ್ಟು ಕ್ಷಿಪ್ರಗತಿಯಲ್ಲಿ ಮಿಲಿಯಾಧಿಪತಿಗಳಾಗಬೇಕೆಂಬುದೇ ಈ ಪ್ರತಿಭೆಗಳ ಅಂತಿಮ ಗುರಿಯಾಗಿರುವುದು ಮಾತ್ರ ತೀರಾ ದುರದೃಷ್ಟಕರ. ಈ ಪದವೀಧರರು ತಮ್ಮ ಮೂಲ ಸಂಸ್ಕೃತಿ ಮತ್ತು ಸೈದ್ಧಾಂತಿಕ ನೆಲೆಗಟ್ಟಿನೊಂದಿಗಿನ ಸಂಪರ್ಕ ಕಡಿದುಕೊಂಡಂತಿರುವುದು ದುರದೃಷ್ಟಕರ ಎಂದು ಕಾರ್ಯಕ್ರಮವೊಂದರಲ್ಲಿ ನ್ಯಾಯಮೂರ್ತಿ ವಿಷಾದಿಸಿದ್ದಾರೆ.

ಕಾನೂನು ಅಸ್ಮಿತೆಯ ಮರುಸ್ಥಾಪನೆ: ಸಂವಿಧಾನದ ವಿವಿಧ ಭಾಗಗಳಲ್ಲಿ ಪ್ರತಿಫಲಿಸುವ ಭಾರತೀಯ ಇತಿಹಾಸ ಮತ್ತು ಮೂಲಗ್ರಂಥಗಳನ್ನು ಪಠ್ಯಕ್ರಮಕ್ಕೆ ಜೋಡಿಸಬೇಕು ಮತ್ತು ಯುವ ಕಾನೂನು ವಿದ್ಯಾರ್ಥಿಗಳಿಗೆ ಇದನ್ನು ಬೋಧಿಸಬೇಕು. ಮುಖ್ಯವಾಗಿ ದೇಶದ ಪ್ರಮುಖ ರಾಷ್ಟ್ರೀಯ ಕಾನೂನು ವಿವಿಗಳಲ್ಲಿ ಅಧ್ಯಯನನಿರತ ವಿದ್ಯಾರ್ಥಿಗಳಿಗೆ ಕಲಿಸಬೇಕು.

ನ್ಯಾಯಾಂಗ ವ್ಯವಸ್ಥೆಯ ಭಾರತೀಯಕರಣವೆಂದರೆ ಕೇವಲ ಕಾನೂನು ಸುಧಾರಣೆಯಷ್ಟೇ ಅಲ್ಲ, ಬದಲಾಗಿ ಭಾರತದ ಕಾನೂನು ಅಸ್ಮಿತೆಯನ್ನು ಎತ್ತಿಹಿಡಿದು ಮರುಸ್ಥಾಪಿಸುವುದಾಗಿದೆ. ನ್ಯಾಯಾಂಗ ವ್ಯವಸ್ಥೆಯ ಭಾರತೀಯತೆಯು ನ್ಯಾಯದಾನವನ್ನು ಹೆಚ್ಚು ಸುಗಮಗೊಳಿಸುವುದು, ಸಾಂಸ್ಕೃತಿಕವಾಗಿ ಪ್ರಸ್ತುತ ಮತ್ತು ಭಾರತೀಯ ಸಮಾಜದ ಅಗತ್ಯಗಳನ್ನು ನಿಜಕ್ಕೂ ಪ್ರತಿಫಲಿಸಲಿದೆ ಎಂದರು. ಅಳಿದುಳಿದ ವಸಾಹತುಶಾಹಿ ಪರಂಪರೆಯು ನಾವು ನಮ್ಮದೇ ಆದ ಸ್ಪಷ್ಟ ನ್ಯಾಯಾಂಗ ವ್ಯವಸ್ಥೆಯನ್ನು ಹೊಂದುವಲ್ಲಿ ಮಬ್ಬಾಗಿ ಪರಿಣಮಿಸಿದೆ ಎಂದು ಆರೋಪಿಸಿದ ನ್ಯಾಯಮೂರ್ತಿ ಧರ್ಮಾಧಿಕಾರಿ, ಈ ಮಸುಕನ್ನು ನಿವಾರಿಸಲು ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಕಾನೂನು ಕುರುಡಲ್ಲ

ಪುಟ 1 ➡ ಭಾರತದಲ್ಲಿಂದು ಸಾಂವಿಧಾನಿಕ ಸಿದ್ಧಾಂತಗಳಿಗೆ ಅನುಗುಣವಾಗಿ ನ್ಯಾಯದಾನವಾಗುತ್ತದೆಯೇ ವಿನಾ ಅಧಿಕಾರ ಬಲ ಅಥವಾ ಒತ್ತಡದಿಂದಲ್ಲ ಎಂಬುದರ ಸಂಕೇತವಾಗಿ, ಪ್ರತಿಮೆಯ ಎಡ ಕೈಯ್ಯಲ್ಲಿದ್ದ ಖಡ್ಗವನ್ನು ಕಳಚಲಾಗಿದೆ. ನ್ಯಾಯೋಚಿತತೆ, ಸಮಾನತೆ ಮತ್ತು ಪಾರದರ್ಶಿತ್ವದ ಆಧಾರದಲ್ಲಿ ನ್ಯಾಯದಾನವಾಗುತ್ತೆ ಎಂಬುದನ್ನು ಸಾಂಕೇತಿಸಲು ಪ್ರತಿಮೆಯ ಕಣ್ಣುಗಳು ತೆರೆದುಕೊಂಡಿವೆ ಮತ್ತು ಹಸ್ತದಲ್ಲಿ ಸಂವಿಧಾನದ ಪ್ರತಿಯಿದೆ ಎಂದು ನ್ಯಾಯಮೂರ್ತಿ ಧರ್ಮಾಧಿಕಾರಿ ವಿಶ್ಲೇಷಿಸಿದರು.

ಭಾರತದ ಅಗತ್ಯಗಳಿಗೆ ಪೂರಕವಾಗಿ ಪುನರ್‌ರಚನೆ: ಕಾನೂನು ಯಥಾವತ್ ಕಲಿಕೆಯಾಗಕೂಡದು. ಕಾನೂನಿನ ಪಾತ್ರವೇನು ಎಂಬುದನ್ನು ಅವಲೋಕಿಸಿಕೊಂಡು, ಭಾರತದ ಅಗತ್ಯಗಳಿಗೆ ಪೂರಕವಾಗಿ ಅದನ್ನು ಪುನರ್ ರಚಿಸಬೇಕು. ಭಾರತದಲ್ಲಿ ಪಾಶ್ಚಾತ್ಯ ಕಾನೂನಿನ ಪ್ರಭಾವದ ಬಗ್ಗೆ ಮರುಚಿಂತನೆ ಮತ್ತು ಪುನರ್ ರಚನೆಯೆಂದರೆ, ಗತಕಾಲದಲ್ಲಿದ್ದುದನ್ನು ಅಳಿಸಿಹಾಕುವುದೆಂದು ಅರ್ಥವಲ್ಲ. ಬದಲಾಗಿ ಕಾನೂನು ಸಂಸ್ಥೆಗಳ ಚಿಂತನೆಯನ್ನು ವಸಾಹತುಶಾಹಿಯಿಂದ ಮುಕ್ತಗೊಳಿಸುವುದಾಗಿದೆ. ಸ್ವಾತಂತ್ರ್ಯಾನಂತರವೂ ಬಹುತೇಕ ಕಾನೂನು ನಿಯಮಾವಳಿಗಳು, ಚಿಂತನೆಗಳು ಭಾರತೀಯ ವಸ್ತುನಿಷ್ಠತೆ ಬದಲು ಬ್ರಿಟಿಷ್ ಪ್ರಭಾವವನ್ನೇ ಪ್ರತಿಬಿಂಬಿಸುತ್ತಿರುವುದು ತೀರಾ ದುರದೃಷ್ಟಕರ ಎಂದು ಹೇಳಿದರು.

ಅರಾಜಕ ಇಂಗ್ಲಿಷ್‌ನಲ್ಲಿ ನ್ಯಾಯದಾನ ವ್ಯರ್ಥ: ಪ್ರಸ್ತುತ ಕಾನೂನು ವ್ಯವಸ್ಥೆ ತೀರಾ ಜಟಿಲವಾಗಿದೆ ಮತ್ತು ಸುಗಮವಾಗಿ ಲಭಿಸುವಂಥದ್ದಲ್ಲ. ಇನ್ನು ಬಹುತೇಕ ಕಾನೂನುಗಳು ಅರಾಜಕ ಇಂಗ್ಲಿಷ್‌ನಲ್ಲಿದ್ದು ಇವು ಕಕ್ಷಿದಾರನಿಗೆ ಸುಲಭವಾಗಿ ಅರ್ಥವಾಗಲ್ಲ. ಕಕ್ಷಿದಾರನಿಗೆ ಕೋರ್ಟ್ ಭಾಷೆ ಅರ್ಥವಾಗಲ್ಲವೆಂದರೆ ನ್ಯಾಯದಾನವು ವಸಾಹತುಶಾಹಿ ಗೇಟ್ ಹಿಂದೆ ಬೀಗ ಜಡಿದ ಸ್ಥಿತಿಯಲ್ಲಿದೆ ಎಂದರ್ಥ. ಇದು ಪ್ರಸಕ್ತ ಕಾನೂನು ವ್ಯವಸ್ಥೆಗೆ ಸಂಬಂಧಿತ ಪ್ರಮುಖ ಸಮಸ್ಯೆಗಳಲ್ಲೊಂದು.

ಮಹತ್ತ್ವದ ಉಪಕ್ರಮ: ನ್ಯಾಯಾಧೀಶರನ್ನು ಮೈಲಾರ್ಡ್ ಎಂದು ಅಥವಾ ಲೇಡಿಶಿಪ್‌ಗಳೆಂದು ಸಂಬೋಧಿಸುವುದು ಕೂಡ ವಸಾಹತುಶಾಹಿ ಕಾಲದ ವ್ಯವಸ್ಥೆಯನ್ನೇ ಪ್ರತಿಬಿಂಬಿಸುತ್ತದೆ. ವಸಾಹತುಶಾಹಿ ಕಾಲದಲ್ಲಿ ಸಾಮಾನ್ಯ ಜನರ ಪಾಲಿಗೆ ನ್ಯಾಯದಾನವೆಂಬುದು ಹಕ್ಕಾಗಿರಲಿಲ್ಲ, ಬದಲಾಗಿ ನ್ಯಾಯಕ್ಕಾಗಿ ಮೈಲಾರ್ಡ್‌ಗಳಲ್ಲಿ ಗೋಗರೆವ ದಯನೀಯ ಸ್ಥಿತಿಯಿತ್ತು. ಐಪಿಸಿ, ಸಿಆರ್‌ಪಿಸಿ ಮತ್ತು ಭಾರತೀಯ ಸಾಕ್ಷ್ಯ ಸಂಹಿತೆಗಳನ್ನು ಈಚೆಗೆ ಭಾರತೀಯ ನ್ಯಾಯಸಂಹಿತಾ, ಭಾರತೀಯ ನಾಗರಿಕ ಸುರಕ್ಷಾ ಸಂಹಿತಾ, ಭಾರತೀಯ ಸಾಕ್ಷ್ಯ ಅಧಿನಿಯಮ್ ಎಂಬುದಾಗಿ ಪುನರ್‌ರಚಿಸಿರುವುದು ತೀರಾ ದಿಟ್ಟ ಮತ್ತು ಮಹತ್ತ್ವದ ಉಪಕ್ರಮವೆಂದು ನ್ಯಾಯಮೂರ್ತಿ ಧರ್ಮಾಧಿಕಾರಿ ಪ್ರಶಂಸಿಸಿದರು.

ನ್ಯಾಯದಾನ ಚಿಂತನೆ ಶ್ರೇಷ್ಠ: ದಂಡನಾ ಚಿಂತನೆಯಿಂದ ನ್ಯಾಯದಾನ ಚಿಂತನೆಗೆ ಹೊರಳುವುದು, ವಸಾಹತುಶಾಹಿ ಕಾಲದ ಕ್ರಿಮಿನಲ್ ಕಾನೂನುಗಳ ರದ್ದುಪಡಿಸಿದ ಹೊಸ ಮೂರು ಕಾನೂನುಗಳ ಮೂಲೋದ್ದೇಶವಾಗಿದೆ. ಸುಪ್ರೀಂ ಕೋರ್ಟ್‌ನ ವಿಧಿಕ್ ಅನುವಾದ್ ಸಾಫ್ಟ್‌ವೇರ್ ಕೂಡ ಕಾನೂನು ವ್ಯವಸ್ಥೆಯ ಭಾರತೀಕರಣ ನಿಟ್ಟಿನಲ್ಲಿ ನಿರ್ಣಾಯಕ ಹೆಜ್ಜೆಯಾಗಿದೆ. ನ್ಯಾಯಾಂಗ ವಿಧಿವಿಧಾನ ಅಥವಾ ನಿಯಮಾವಳಿಗಳಲ್ಲಿ ಪ್ರಾದೇಶಿಕ ಭಾಷಾ ಬಳಕೆಗೆ ಉತ್ತೇಜನ ಸಹಿತ ನ್ಯಾಯಾಲಯಗಳನ್ನು ಕಕ್ಷಿದಾರಸ್ನೇಹಿಯಾಗಿ ಪರಿವರ್ತಿಸುವುದು ಅಥವಾ ಕಾನೂನು ಸೇವೆಗಳು ಜನಸಾಮಾನ್ಯರಿಗೆ ಸುಗಮವಾಗಿ ಲಭಿಸುವಂತೆ ಮಾಡುವುದು ಕೂಡ ವಿಧಿಕ್ ಅನುವಾದ್ ಸಾಫ್ಟ್‌ವೇರ್ ಮೂಲೋದ್ದೇಶವಾಗಿದೆ. ಭೋಪಾಲ್‌ನ ನ್ಯಾಷನಲ್ ಲಾ ಇನ್‌ಸ್ಟಿಟ್ಯೂಟ್ ವಿವಿಯಲ್ಲಿ ನಡೆದ 2 ಎನ್‌ಎಲ್‌ಐಯು ಎಸ್‌ಬಿಎ ಕಾನೂನು ಸಮಾವೇಶದಲ್ಲಿ ನ್ಯಾಯಮೂರ್ತಿ ಧರ್ಮಾಧಿಕಾರಿ ಪಾಲ್ಗೊಂಡರು.

ಸಿಂಧನೂರು ಯುವಕನಿಗೆ ಮೋದಿ ಅಚ್ಚರಿ ಕೊಡುಗೆ!

ಸಿಂಧನೂರು: ದೇಶದ ಪ್ರಧಾನ ಮಂತ್ರಿಗಳೆಂದರೆ ಸದಾ ಬಿಡುವಿಲ್ಲದ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಆದರೆ, ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಕಾನಿಹಾಳ ಗ್ರಾಮದ ಸಾಮಾನ್ಯ ಯುವಕನೊಬ್ಬ ಪ್ರೀತಿಯಿಂದ ಕಳುಹಿಸಿದ ಮದುವೆ ಆಮಂತ್ರಣ ಪತ್ರಿಕೆಗೆ ಪ್ರಧಾನಿ ಮೋದಿ ವಿಶೇಷವಾಗಿ ಸ್ಪಂದಿಸಿದ್ದಾರೆ.



ನವಜೋಡಿಗೆ ಹಾರೈಸಿ ಪತ್ರ ಕಳುಹಿಸುವ ಮೂಲಕ ಪ್ರಧಾನಿಯವರು ಸಿಂಧನೂರು ತಾಲೂಕಿನ ಕಾನಿಹಾಳ ಗ್ರಾಮದ ದಂಪತಿಯ ಸಂಭ್ರಮವನ್ನು ಇಮ್ಮಡಿಗೊಳಿಸಿದ್ದಾರೆ. ಸಿಂಧನೂರು ತಾಲೂಕಿನ ಕಾನಿಹಾಳ ಗ್ರಾಮದ ನಿವಾಸಿ ರಾಜೇಶ ನಾಯಕ ಎಂಬುವವರ ವಿವಾಹವು ಸವಿತಾ ಎಂಬ ಯುವತಿಯೊಂದಿಗೆ ಇದೇ ಏಪ್ರಿಲ್ 13ರಂದು ನೆರವೇರಿತ್ತು. ತಮ್ಮ ಬದುಕಿನ ಈ ದೊಡ್ಡ ಸಂಭ್ರಮಕ್ಕೆ ಪ್ರಧಾನಿ ಮೋದಿಯವರನ್ನೂ ಆಹ್ವಾನಿಸಬೇಕೆಂದು ಆಸೆ ಪಟ್ಟಿದ್ದ ರಾಜೇಶ, ಪ್ರಧಾನಿ ಕಚೇರಿಗೆ ಮದುವೆಯ ಆಹ್ವಾನ ಪತ್ರಿಕೆಯನ್ನು ಪೋಸ್ಟ್ ಮಾಡಿದ್ದರು. ಒಬ್ಬ ಸಾಮಾನ್ಯರಿಗೂ ಮೋದಿ ಪತ್ರದ ಮೂಲಕ ನವಜೋಡಿಗೆ ಸಂದೇಶವನ್ನು ರವಾನಿಸಿದ್ದಾರೆ.

ರಾಜೇಶ ನಾಯಕ ಅವರಿಗೆ ಪತ್ರ ಬರೆದಿರುವ ಪ್ರಧಾನಿ ಮೋದಿ, ನಿಮ್ಮ ವಿವಾಹ ಮಹೋತ್ಸವಕ್ಕೆ ನನ್ನನ್ನು ಆಹ್ವಾನಿಸಿದ್ದಕ್ಕಾಗಿ ಹೃತ್ಪೂರ್ವಕ ಧನ್ಯವಾದಗಳು, ಜೀವನದ ಹೊಸ ಹಂತಕ್ಕೆ ಕಾಲಿಡುತ್ತಿರುವ ನಿಮಗೆ, ಸವಿತಾ ಅವರಿಗೆ ಸುಂದರ ಭವಿಷ್ಯಕ್ಕಾಗಿ ಶುಭ ಆಶೀರ್ವಾದಗಳು. ನಿಮ್ಮಿಬ್ಬರ ಹೃದಯ ಮತ್ತು ಮನಸ್ಸುಗಳು ಒಂದಾಗಿರಲಿ. ಜೀವನದ ಏರಿಳಿತಗಳಲ್ಲಿ ಪರಸ್ಪರ ಕೈಹಿಡಿದು ಸಾಗಿ, ಜವಾಬ್ದಾರಿಗಳನ್ನು ಪ್ರೀತಿಯಿಂದ ನಿಭಾಯಿಸಿ, ಪರಸ್ಪರರ ದೋಷಗಳನ್ನು ಒಪ್ಪಿಕೊಂಡು, ಗುಣಗಳನ್ನು ಗೌರವಿಸುತ್ತಾ ಆದರ್ಶ ದಂಪತಿ ಗಳಾಗಿ ಬಾಳಿ, ನಿಮ್ಮ ದಾಂಪತ್ಯ ಸುಖಮಯವಾಗಿರಲಿ ಎಂದು ಆತ್ಮೀಯವಾಗಿ ಹಾರೈಸಿದ್ದಾರೆ.

ಯುವಕನ ಸಂತಸ

ದೇಶದ ಪ್ರಧಾನಿಯವರಿಂದ ಪತ್ರ ಬಂದಿರುವುದಕ್ಕೆ ರಾಜೇಶ ನಾಯಕ ಬೆರಗಾಗಿದ್ದಾರೆ. ನಮ್ಮ ಮದುವೆಗೆ ಕೆಲವು ವಾರಗಳ ಮೊದಲು ಪ್ರಧಾನಿ ಮೋದಿಯವರಿಗೆ ಆಹ್ವಾನ ಪತ್ರಿಕೆ ಕಳುಹಿಸಿದ್ದೆ. ಅವರ ಕಡೆಯಿಂದ ಕನಿಷ್ಠ ಉತ್ತರವಾದರೂ ಬರಬಹುದು ಎಂಬ ಸಣ್ಣ ನಿರೀಕ್ಷೆ ಇತ್ತು. ಆದರೆ, ಅಷ್ಟೇನೂ ಭರವಸೆ ಇರಲಿಲ್ಲ. ಈಗ ಸ್ವತಃ ಪ್ರಧಾನಿಯವರೇ ಪತ್ರ ಬರೆದು ಹಾರೈಸಿರುವುದು ನಂಬಲಾಗದ ಸಂಗತಿ. ಅಷ್ಟೊಂದು ದೊಡ್ಡ ಹುದ್ದೆಯಲ್ಲಿದ್ದರೂ ದೇಶದ ಸಾಮಾನ್ಯ ಪ್ರಜೆಯ ಪತ್ರವನ್ನೂ ಅವರು ಪರಿಗಣಿಸುತ್ತಾರೆ ಎಂಬುದು ನಿಜಕ್ಕೂ ಅದ್ಭುತ ಎಂದು ರಾಜೇಶ ನಾಯಕ ಕೃತಜ್ಞತೆ ಸಲ್ಲಿಸಿದ್ದಾರೆ.

ಚಿಕ್ಕಮಗಳೂರಿನಲ್ಲಿ ಮಳೆರಾಯ



ಬಿಸಿಲಿನಿಂದ ಕಂಗೆಟ್ಟಿದ್ದ ಜನರಿಗೆ ಸೋಮವಾರ ಚಿಕ್ಕಮಗಳೂರಿನಲ್ಲಿ ಸುರಿದ ಮಳೆಗೆ ತಂಪಿನ ವಾತಾವರಣ ನಿರ್ಮಾಣವಾಗಿತ್ತು. ರಸ್ತೆಯಲ್ಲಿ ನೀರು ನಿಂತ ಪರಿಣಾಮ ವಾಹನ ಸಂಚಾರದಲ್ಲಿ ತೊಡಕಾಗಿತ್ತು.

ಧರ್ಮಸ್ಥಳದಲ್ಲಿ ನಾಳೆ ಸಾಮೂಹಿಕ ವಿವಾಹ

ಧರ್ಮಸ್ಥಳ: ನಾಡಿನ ಪವಿತ್ರ ಕ್ಷೇತ್ರ ಹಾಗೂ ಸರ್ವಧರ್ಮ ಸಮನ್ವಯ ಕೇಂದ್ರವಾದ ಧರ್ಮಸ್ಥಳದಲ್ಲಿ ಬುಧವಾರ ಸಂಜೆ ಗಂಟೆ 6.40ಕ್ಕೆ ಗೋಧೂಳಿ ಲಗ್ನ ಸುಮುಹೂರ್ತದಲ್ಲಿ ಐವತ್ತನಾಲ್ಕನೆ ವರ್ಷದ ಉಚಿತ ಸಾಮೂಹಿಕ ವಿವಾಹ ಸಮಾರಂಭ ನಡೆಯಲಿದೆ.

ಈಗಾಗಲೆ 105 ಜೊತೆ ವಧು-ವರರು ವಿವಾಹಕ್ಕಾಗಿ ಹೆಸರು ನೋಂದಾಯಿಸಿದ್ದು, ಅವರು ಕೊಟ್ಟ ದಾಖಲೆಗಳ ಮೂಲ ಪ್ರತಿಗಳನ್ನು ಪರಿಶೀಲಿಸಿದ ಬಳಿಕ ಅವರಿಗೆ ಸಾಮೂಹಿಕ ವಿವಾಹದಲ್ಲಿ ಅವಕಾಶ ನೀಡಲಾಗುವುದು. ವರನಿಗೆ ಧೋತಿ, ಶಾಲು ಮತ್ತು ವಧುವಿಗೆ ಸೀರೆ, ರವಿಕೆ ಕಣ ಹಾಗೂ ಮಂಗಳಸೂತ್ರ, ಹೂವಿನಹಾರ ನೀಡಲಾಗುವುದು.

ಮದುವೆಯ ಎಲ್ಲಾ ವೆಚ್ಚವನ್ನು ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆ ಅಧ್ಯಕ್ಷರಾಗಿರುವ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಧರ್ಮೋತ್ಥಾನ ಟ್ರಸ್ಟ್ ವತಿಯಿಂದ ಭರಿಸಲಾಗುವುದು ಎಂದು ಟ್ರಸ್ಟ್‌ನ ಕಾರ್ಯದರ್ಶಿ ಎ.ವಿ. ಶೆಟ್ಟಿ ತಿಳಿಸಿದ್ದಾರೆ. ವರದಕ್ಷಿಣೆ ಹಾಗೂ ಮದುವೆಗಾಗುವ ದುಂದುವೆಚ್ಚವನ್ನು ತಡೆಯುವ ಉದ್ದೇಶದಿಂದ ಪೂಜ್ಯ ಡಿ. ವೀರೇಂದ್ರ ಹೆಗ್ಗಡೆಯವರು ಧರ್ಮಸ್ಥಳದಲ್ಲಿ 1972ರಲ್ಲಿ ಆರಂಭಿಸಿದ ಉಚಿತ ಸಾಮೂಹಿಕ ವಿವಾಹವನ್ನು ಪ್ರತಿವರ್ಷ ನಡೆಸುತ್ತಿದ್ದು, ಕಳೆದ ವರ್ಷದ ವರೆಗೆ ಹದಿಮೂರು ಸಾವಿರ ಜೊತೆ ಸಾಮೂಹಿಕ ವಿವಾಹದಲ್ಲಿ ಮದುವೆಯಾಗಿದ್ದು, ಸುಖ-ಶಾಂತಿ, ನೆಮ್ಮದಿಯ ದಾಂಪತ್ಯಜೀವನ ನಡೆಸುತ್ತಿದ್ದಾರೆ. ಧರ್ಮಾಧಿಕಾರಿ ಡಿ. ವೀರೇಂದ್ರ ಹೆಗ್ಗಡೆಯವರ ಅಧ್ಯಕ್ಷತೆಯಲ್ಲಿ ಡಿ. ಹರ್ಷೇಂದ್ರ ಕುಮಾರ್ ನೇತೃತ್ವದಲ್ಲಿ ನಡೆಯಲಿದೆ.

ಕಿರುಸುದ್ದಿ

ವೆಬ್‌ಸೈಟ್‌ನಲ್ಲಿ ಸಿಇಟಿ ಕೀ ಉತ್ತರ

ಬೆಂಗಳೂರು: ಕಳೆದ ಮಾ. 23 ಮತ್ತು 24ರಂದು ನಡೆದ 2026ನೇ ಸಾಲಿನ ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ)ಯ ಎಲ್ಲ ವಿಷಯಗಳ ಕೀ ಉತ್ತರಗಳನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ. ಈ ಕೀ ಉತ್ತರಗಳಿಗೆ ಆಕ್ಷೇಪಣೆಗಳು ಇದ್ದರೆ, ಮೇ.30ರ ಒಳಗೆ ಸಲ್ಲಿಸಬೇಕು. ಇದಕ್ಕೆ ಆನ್‌ಲೈನ್ ಲಿಂಕ್ ಕೂಡ ಬಿಡುಗಡೆ ಮಾಡಿದ್ದು, ಆಕ್ಷೇಪಣೆಗಳ ಜತೆಗೆ ಪ್ರಶ್ನೆ ಸಂಖ್ಯೆ, ವರ್ಷನ್ ಕೋಡ್ ಇತ್ಯಾದಿ ಮಾಹಿತಿಯನ್ನು ನಿಖರವಾಗಿ ದಾಖಲಿಸಬೇಕು. ಅಪೂರ್ಣ ಮಾಹಿತಿಯ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ ಎಂದು ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ. ಆಕ್ಷೇಪಣೆಗಳಿಗೆ ಸಂಬಂಧಿಸಿದಂತೆ ವಿಷಯ ತಜ್ಞರು ತೆಗೆದುಕೊಳ್ಳುವ ತೀರ್ಮಾನವೇ ಅಂತಿಮವಾಗಿರುತ್ತದೆ ಎಂದು ಸ್ಪಷ್ಟಪಡಿಸಿದ್ದಾರೆ.

ಬಾಲ್ಯವಿವಾಹ ತಡೆದ ಅಕ್ಕ ಪಡೆ

ಬೆಳಗಾವಿ: ನಗರದ ವಂಟಮುರಿ ಕಾಲೋನಿಯಲ್ಲಿ ಬಾಲ್ಯವಿವಾಹ ನಡೆಯುತ್ತಿದ್ದ ವೇಳೆ ಅಕ್ಕ ಪಡೆ ತಡೆದು ಬಾಲಕಿಯನ್ನು ರಕ್ಷಣೆ ಮಾಡಿರುವ ಘಟನೆ ಬೆಳಕಿಗೆ ಬಂದಿದೆ. ಅಕ್ಕ ಪಡೆ ಪೆಟ್ರೋಲಿಂಗ್ ವೇಳೆ ಅನುಮಾನಗೊಂಡು ವಿಚಾರಣೆ ನಡೆಸಿದಾಗ, 17 ವರ್ಷದ ಬಾಲಕಿಯ ಮದುವೆ ನಡೆಯಲು ಸಿದ್ಧತೆ ನಡೆದಿರುವುದು ಪತ್ತೆಯಾಗಿದೆ. ಘಟನೆಯ ವಿವರಗಳ ಪ್ರಕಾರ, ಏಪ್ರಿಲ್ 20ರಂದು ಗಸ್ತು ತಿರುಗುತ್ತಿದ್ದ ಅಕ್ಕ ಪಡೆಯ ಸಿಬ್ಬಂದಿ, ಒಂದು ಮನೆಯ ಮುಂದೆ ಮಂಟಪ ಹಾಕಿರುವುದನ್ನು ಗಮನಿಸಿದ್ದಾರೆ. ಅನುಮಾನಗೊಂಡು ಮನೆಗೆ ತೆರಳಿ ವಿಚಾರಿಸಿದಾಗ ಏಪ್ರಿಲ್ 21ರಂದು ಅಪ್ರಾಪ್ತ ಬಾಲಕಿಯ ಮದುವೆ ಮಹಾರಾಷ್ಟ್ರದ ಮೂಲದ ಯುವಕನೊಂದಿಗೆ ನಡೆಸಲು ಸಿದ್ಧತೆ ನಡೆಯುತ್ತಿರುವುದು ತಿಳಿದುಬಂದಿದೆ. ಪೊಲೀಸರು ಬಾಲಕಿಯ ಆಧಾರ್ ಕಾರ್ಡ್ ಹಾಗೂ ಜನನ ಪ್ರಮಾಣಪತ್ರ ಪರಿಶೀಲಿಸಿದಾಗ ಆಕೆಗೆ ಕೇವಲ 17 ವರ್ಷ 4 ತಿಂಗಳು ವಯಸ್ಸು ಇರುವುದಾಗಿ ದೃಢಪಟ್ಟಿತು. ತಕ್ಷಣವೇ ವಿಷಯವನ್ನು ಮಹಿಳಾ ಪೊಲೀಸ್ ಠಾಣೆಯ ಅಧಿಕಾರಿಗಳಿಗೆ ತಿಳಿಸಲಾಯಿತು. ಮಹಿಳಾ ಪೊಲೀಸ್ ಠಾಣೆಯ ಇನ್ಸ್‌ಪೆಕ್ಟರ್ ದಿಲೀಪ್ ಪಿ.ನಿಂಬಾಳಕರ ಅವರ ಮಾರ್ಗದರ್ಶನದಲ್ಲಿ ಅಕ್ಕ ಪಡೆ, ಮಕ್ಕಳ ಸಹಾಯವಾಣಿ ತಂಡ ಹಾಗೂ ಮಾಳಮಾರುತಿ ಪೊಲೀಸ್ ಠಾಣೆಯ ಸಿಬ್ಬಂದಿ ಸ್ಥಳಕ್ಕೆ ಧಾವಿಸಿದರು. ಬಾಲಕಿಯನ್ನು ಮಕ್ಕಳ ಕಲ್ಯಾಣ ಸಮಿತಿಯ ಮುಂದೆ ಹಾಜರುಪಡಿಸಲಾಯಿತು. ಬಾಲ್ಯವಿವಾಹ ನಡೆಸಲು ಮುಂದಾಗಿದ್ದ ಬಾಲಕಿಯ ತಂದೆಯ ವಿರುದ್ಧ ಬೆಳಗಾವಿ ಮಹಿಳಾ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿ ಕಾನೂನು ಕ್ರಮ ಕೈಗೊಳ್ಳಲಾಗಿದೆ.

ಪರಮಾಣು ವಿದ್ಯುತ್ ಸ್ಥಾವರ ಸ್ಥಾಪನೆಗೆ ಸ್ಥಳೀಯರ ವಿರೋಧ

ನಾಗರ: ಬೇಸೂರು ಭಾಗದಲ್ಲಿ ಉದ್ದೇಶಿತ ಪರಮಾಣು ವಿದ್ಯುತ್ ಸ್ಥಾವರ ಬೇಡ. ಇದಕ್ಕೆ ನಮ್ಮ ಸಂಪೂರ್ಣ ವಿರೋಧ ಇದೆ ಎಂದು ಬೇಸೂರು ಭಾಗದ ಪ್ರಮುಖರು, ಪರಿಸರ ಪರ ಹೋರಾಟಗಾರರು, ಸಾಮಾಜಿಕ ಕಾರ್ಯಕರ್ತರು, ಚುನಾಯಿತ ಪ್ರತಿನಿಧಿಗಳು ಒಕ್ಕೊರಲಿನ ಒತ್ತಾಯ ಮಾಡಿದ್ದಾರೆ. ತಾಲೂಕು ಕೋಳೂರು ಗ್ರಾಪಂ ವ್ಯಾಪ್ತಿಯ ಹುಲಿದೇವರಬನ ಗ್ರಾಮ ಸಭಾಂಗಣದಲ್ಲಿ ಬೇಸೂರು ಅಣು ವಿದ್ಯುತ್ ಸ್ಥಾವರ ನಿರ್ಮಾಣ ಕುರಿತು ಸೋಮವಾರ ಆಯೋಜಿಸಲಾಗಿದ್ದ ಸಮಾಲೋಚನಾ ಸಭೆಯಲ್ಲಿ ಈ ನಿರ್ಣಯ ಕೈಗೊಂಡಿದ್ದು, ಕೇಂದ್ರ, ರಾಜ್ಯ ಸರ್ಕಾರಕ್ಕೆ ಉಪವಿಭಾಗಾಧಿಕಾರಿಗಳಿಗೆ, ಡಿಸಿಗೆ ಈ ಸಂಬಂಧ ಪ್ರತಿಭಟನೆ ಮೂಲಕ ಮನವಿ ಸಲ್ಲಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. ಸಭೆಯಲ್ಲಿ ಸಾಕಷ್ಟು ವಿರೋಧದ ನಡುವೆಯೂ ಕಳೆದ ಎರಡು ದಿನಗಳಿಂದ ಬೇಸೂರು ಗ್ರಾಮದ ನೆತ್ತಿಯ ಮೇಲೆ ವಿಮಾನ ಹಾರಾಟ ನಡೆಸುತ್ತಿರುವ ಬಗ್ಗೆ ಆತಂಕ ವ್ಯಕ್ತಪಡಿಸಲಾಯಿತು.

ತ್ವರಿತವಾಗಿ ಕಡತ ವಿಲೇವಾರಿಯಾಗಲಿ: ಅಧಿಕಾರಿಗಳಿಗೆ ಸಿಎಂ ಸೂಚನೆ

ವಿಳಂಬ ನೀತಿಗೆ ಸಿಎಂ ಬೇಸರ

ಬೆಂಗಳೂರು: ವಿಳಂಬ ನೀತಿ ಭ್ರಷ್ಟಾಚಾರಕ್ಕೆ ಎಡೆಮಾಡಿಕೊಡುತ್ತದೆ. ಅಧಿಕಾರಿಗಳು ಯಾವುದೇ ಕಾರಣಕ್ಕೂ ತಡ ಮಾಡದೇ, ಶೀಘ್ರವಾಗಿ ಕಡತಗಳನ್ನು ವಿಲೇವಾರಿ ಮಾಡಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧಿಕಾರಿಗಳಿಗೆ ಸಲಹೆ ನೀಡಿದರು.

ಕರ್ನಾಟಕ ಆಡಳಿತ ಸೇವೆ ಅಧಿಕಾರಿಗಳ ಒಕ್ಕೂಟ ಸಂಘ ಬೆಂಗಳೂರು ಇವರ ವತಿಯಿಂದ ಇನ್‌ಫೆಂಟ್ರಿ ರಸ್ತೆಯಲ್ಲಿರುವ ಕೆಎಎಸ್ ಅಧಿಕಾರಿಗಳ ಸಂಘದ ನವೀಕರಿಸಿದ ಕಟ್ಟಡ ಹೊಸದಾಗಿ ನಿರ್ಮಿಸಿದ ಹೆಚ್ಚುವರಿ ಕೊಠಡಿಗಳನ್ನು ಉದ್ಘಾಟನೆ ಮಾಡಿ ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿ ಮಾತನಾಡಿದರು.



ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕಾರ್ಯಾಂಗ ಹಾಗೂ ಶಾಸಕಾಂಗ ಒಟ್ಟಾಗಿ ಕೆಲಸ ಮಾಡಬೇಕು. ಜನರ ಹಿತವನ್ನು ಕಾಪಾಡುವುದು ನಮ್ಮ ಕರ್ತವ್ಯ. ಮಧ್ಯವರ್ತಿಗಳು ಎಲ್ಲೆಡೆ ಇರುತ್ತಾರೆ ಆದರೆ ಅವರನ್ನು ಕಚೇರಿಯೊಳಗೆ ಬಿಟ್ಟುಕೊಳ್ಳದೇ ಹೊರಗೆ ಕಳಿಸಿ ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಅಧಿಕಾರಿಗಳಿಗೆ ಕಾನೂನಿನ ಅರಿವಿನ ಜೊತೆಗೆ ಸಾಮಾನ್ಯ ಜ್ಞಾನ, ಸಮಾಜದ ಬಗ್ಗೆ ಅರಿವು ಇರಬೇಕು. ನಿವೃತ್ತರಾಗುವವರೆಗೆ ಜನಸೇವೆಯಲ್ಲಿ ತೊಡಗಿಸಿಕೊಳ್ಳುವ ಅವಕಾಶವಿದೆ. ಅಸಮಾನತೆ ಇರುವ ಸಮಾಜದಲ್ಲಿ ದುರ್ಬಲ ವರ್ಗಕ್ಕೆ ಸ್ಪಂದಿಸಬೇಕು. ಅಧಿಕಾರಿಗಳಿಗೆ ಕಾನೂನಿನ ಅರಿವಿನ ಜೊತೆಗೆ ಸಾಮಾನ್ಯ ಜ್ಞಾನ, ಸಮಾಜದ ಬಗ್ಗೆ ಅರಿವು ಇರಬೇಕು. ಆಗ ಮಾತ್ರ ಜನರಿಗೆ ಸ್ಪಂದಿಸಲು ಸಾಧ್ಯ ಎಂದರು.

ಸರ್ಕಾರ ರೂಪಿಸುವ ನೀತಿಗಳು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರುವಲ್ಲಿ ಅಧಿಕಾರಿಗಳ ಪಾತ್ರ ಹಿರಿದು. ಜನಸೇವೆಗೆ ದೊರಕಿರುವ ಅವಕಾಶವನ್ನು ಸದುಪಯೋಗ ಮಾಡಿಕೊಳ್ಳಬೇಕು. ತೃಪ್ತಿದಾಯಕವಾಗಿ ಕೆಲಸ ಮಾಡಿರುವುದಕ್ಕಿಂತ ದೊಡ್ಡ ಪ್ರಮಾಣಪತ್ರ ಇನ್ನೊಂದಿಲ್ಲ ಎಂದರು. ಈ ಬಗ್ಗೆ ಅಧಿಕಾರಿಗಳು ಆತ್ಮಾವಲೋಕನ ಮಾಡಿಕೊಳ್ಳಬೇಕು. ಜೀವನ ಸಾರ್ಥಕವಾಗಿ ಸೇವೆ ತೃಪಿಕರವಾಗಿ ಮಾಡಿದ್ದೇನೆ ಎಂಬ ಭಾವನೆ ನಿಮ್ಮಲ್ಲಿ ಇರಬೇಕು ಎಂದರು.

ನಮ್ಮ ಕೆಲಸವನ್ನು ನಾವು ಪ್ರೀತಿಸಬೇಕು. ಗ್ರಾಮೀಣ ಜನರನ್ನು ಪ್ರೀತಿಯಿಂದ ಮಾತನಾಡಿಸಿ ಅವರ ಸಮಸ್ಯೆ ಅರ್ಥೈಸಿಕೊಂಡು ಬಗೆಹರಿಸಿದರೆ ಅವರು ನಿಮ್ಮನ್ನು ಮರೆಯುವುದಿಲ್ಲ. ಮಧ್ಯವರ್ತಿಗಳ ಹಾವಳಿ ತಪ್ಪಿಸುವ ನಿಟ್ಟಿನಲ್ಲಿ ಗ್ಯಾರಂಟಿ ಯೋಜನೆಗಳು ಸಹಕಾರಿಯಾಗಿವೆ. ನೇರವಾಗಿ ಫಲಾನುಭವಿಗಳ ಖಾತೆಗೆ ಹಣ ವರ್ಗಾಯಿಸಲಾಗುತ್ತಿದೆ ಎಂದರು.

ಪ್ರಾಮಾಣಿಕವಾಗಿ ಕರ್ತವ್ಯ ನಿರ್ವಹಿಸಿ

ಕೆಎಎಸ್ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ನಿಷ್ಠೆಯಿಂದ ಪ್ರಾಮಾಣಿಕವಾಗಿ ಮಾಡಬೇಕು. ಕೆಎಎಸ್ ಅಧಿಕಾರಿಗಳ ಸಂಘಕ್ಕೆ ನೂರು ವರ್ಷಗಳ ಇತಿಹಾಸವಿದ್ದು, ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ರಾಜ್ಯಕ್ಕೆ ಅಪಾರ ಕೊಡುಗೆ ಕೊಟ್ಟಿದ್ದಾರೆ. ಸಾಮಾಜಿಕ, ಆರ್ಥಿಕ , ಮೂಲಭೂತ ಸೌಕರ್ಯಗಳು, ಕೈಗಾರಿಕೆಗಳ ಬೆಳವಣಿಗೆಗೆ ಕಾರಣೀಭೂತರಾಗಿದ್ದಾರೆ. ಅವರ ಕಾಲದಲ್ಲಿ ದಿವಾನರಾಗಿದ್ದವರು ಸಂಘದ ಅಧ್ಯಕ್ಷರಾಗಿದ್ದರು ಎನ್ನುವುದು ಈ ಸಂಘದ ಹೆಗ್ಗಳಿಕೆ. ಅವರೆಲ್ಲರೂ ದಕ್ಷ ಆಡಳಿತಕ್ಕೆ ನಮಗೆ ದಾರಿದೀಪವಾಗಿದ್ದಾರೆ ಎಂದರು.

ಶೀಘ್ರ ಪದೋನ್ನತಿ

ಪದೋನ್ನತಿ ಬಗ್ಗೆ ಕಂದಾಯ ಸಚಿವರು ಕಾರ್ಯೋನ್ಮುಖರಾಗಿದ್ದು, ಶೀಘ್ರವಾಗಿ ಪದೋನ್ನತಿ ಆಗಲಿದೆ. ಶೇ.33 ರಷ್ಟು ಅಧಿಕಾರಿಗಳನ್ನು ಸಿಇಓಗಳಾಗಿ ಬಡ್ತಿ ನೀಡುವ ಭರವಸೆಯನ್ನು ಮುಖ್ಯಮಂತ್ರಿಗಳು ನೀಡಿದರು.

ಗೋಹತ್ಯೆ ವಿರುದ್ಧ ಸರ್ಕಾರ ಕಾನೂನು ಕ್ರಮ ಕೈಗೊಳ್ಳಲಿ

ಬೆಂಗಳೂರು: ಕರ್ನಾಟಕದಲ್ಲಿ ಗೋಹತ್ಯೆ ನಿಷೇಧವಿದ್ದರೂ ಅಕ್ರಮವಾಗಿ ಗೋಹತ್ಯೆ ನಡೆಯುತ್ತಿದೆ, ಎಲ್ಲಾ ಗ್ರಾಮಗಳಲ್ಲೂ ಗೋ ಮಾಂಸ ಮಾರಾಟ ಮಾಡುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳು ಗೋಹತ್ಯೆ ನಿಷೇಧ ಕಾನೂನಿನ ಕುರಿತು ಅರಿವು ಮೂಡಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ಹಲಸೂರಿನ ಉದಾಸೀನ್ ಮಠದ ಅಧ್ಯಕ್ಷ ಬಾಲಯೋಗಿ ಗಣೇಶ್ ದಾಸ್ ಆಗ್ರಹಿಸಿದರು.

> **ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಗೋಹತ್ಯೆ ಕಾನೂನು ಬಗ್ಗೆ ಕ್ರಮ ಕೈಗೊಂಡಿತ್ತು. ಈಗಿರುವ ಕಾಂಗ್ರೆಸ್ ಸರ್ಕಾರವು ಸಹ ಇದನ್ನು ಮುಂದುವರೆಸಿಕೊಂಡು ಹೋಗುವಂತೆ ಮನವಿ ಮಾಡುತ್ತೇನೆ.**
> ■ **ಕೆ.ಹೇಮಂತ್, ಸಮಾಜ ಸೇವಕ**

ಗೋಹತ್ಯೆಯನ್ನು ಸಂಪೂರ್ಣವಾಗಿ ನಿಷೇಧ ಮಾಡುವಂತೆ ಒತ್ತಾಯಿಸಿ ಕೆ.ಆರ್.ಪುರ ಬಸ್ ನಿಲ್ದಾಣದಿಂದ ಬೆಂಗಳೂರು ಪೂರ್ವ ತಾಲೂಕಿನ ತಹಶಿಲ್ದಾರ್ ಕಚೇರಿ ವರೆಗೆ ಹಲಸೂರಿನ ಉದಾಸೀನ್ ಮಠದ ಅಧ್ಯಕ್ಷ ಬಾಲಯೋಗಿ ಗಣೇಶ್ ದಾಸ್ ಜಿ ಹಾಗೂ ಸಮಾಜ ಸೇವಕ ಕೆ.ಹೇಮಂತ್ ನೇತೃತ್ವದಲ್ಲಿ ಕಲ್ನಡಿಗೆ ಜಾಥ ನಡೆಸಿ ತಹಶಿಲ್ದಾರ್ ಅವರಿಗೆ ಮನವಿ ಸಲ್ಲಿಸಲಾಯಿತು. ಈ ವೇಳೆ ಮಾತನಾಡಿ, ಸನಾತನ ಧರ್ಮದಲ್ಲಿ ಗೋಮಾತೆಗೆ ಎರಡನೇ ತಾಯಿಯ ಪೂಜನೀಯ ಸ್ಥಾನಮಾನ ನೀಡಲಾಗಿದೆ. ಗೋ ಮಾತೆಯನ್ನು ನಾವು ಪೂಜಿಸುತ್ತೇವೆ. ಆದ್ದರಿಂದ ಗೋ ಮಾತೆ ರಕ್ಷಣೆಯ ಕುರಿತು ಸರ್ಕಾರಕ್ಕೆ ಅಷ್ಟೇ ಅಲ್ಲದೆ, ನಾವು ಸಮಾಜದಲ್ಲಿ ಕಳಕಳಿ ಮೂಡಿಸಬೇಕಾಗಿದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ತೇಜಕುಮಾರ್, ಮುಕುಂದ್ ಇದ್ದರು.

ಯುವ ಪೀಳಿಗೆಗೆ ಗುರಿ ಇರಲಿ

ಬೆಂಗಳೂರು: ಯುವ ಪೀಳಿಗೆಯು ಯಶಸ್ವಿ ವೃತ್ತಿಪರ ಜೀವನಕ್ಕಾಗಿ ಗುರಿಗಳನ್ನು ಇಟ್ಟುಕೊಳ್ಳಬೇಕು ಹಾಗೂ ಅದರ ರೂಪುರೇಷಗಳ ಮೇರೆಗೆ ಕಾರ್ಯನಿರ್ವಸಬೇಕೆಂದು ಕೃಷಿ ವಿವಿ ವಿಸ್ತರಣಾ ನಿರ್ದೇಶಕ ಡಾ.ವೈ.ಎನ್. ಶಿವಲಿಂಗಯ್ಯ ತಿಳಿಸಿದರು.

ಕೃಷಿ ವಿಶ್ವವಿದ್ಯಾನಿಲಯದಲ್ಲಿ ನಡೆದ ಒಂದು ದಿನದ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಡಿ ಅವರು, ಯಾವುದೇ ಉದ್ಯಮಿಯು ನಿರ್ವಹಣಾ ಮತ್ತು ಮಾರುಕಟ್ಟೆ ಕೌಶಲ್ಯಗಳನ್ನು ಹೊಂದಿರಬೇಕು ಮತ್ತು ಸೂಕ್ತ ಸಂವಹನ ಕೌಶಲ್ಯಗಳನ್ನು ಅರಿತು ಹೆಚ್ಚಿನ ಲಾಭ ಪಡೆಯಬಹು. ಈ ತರಬೇತಿ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದಕ್ಕಾಗಿ ಹಾಗೂ ಪ್ರಮಾಣಪತ್ರ ಪಡೆಯಲು ಹಾಜರಿದ್ದ 31 ತರಬೇತಿದಾರರಿಗೆ ಅಭಿನಂದಿಸಿದರು.

ಕೃಪಾನಿಧಿ ಕಾಲೇಜಿನಲ್ಲಿ ಪರೀಕ್ಷೆ ನಡೆಸದಂತೆ ವರದಿ

ಬೆಂಗಳೂರು: ಸಾಮಾನ್ಯ ಪ್ರವೇಶ ಪರೀಕ್ಷೆ (ಸಿಇಟಿ) ವೇಳೆ ವಿದ್ಯಾರ್ಥಿಗಳ ಜನಿವಾರ ತೆಗೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಮಡಿವಾಳದಲ್ಲಿರುವ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಸರ್ಕಾರಿ ಪರೀಕ್ಷೆಗಳು ನಡೆಸದಂತೆ ಸರ್ಕಾರಕ್ಕೆ ವರದಿ ಸಲ್ಲಿಸುವುದಾಗಿ ಬೆಂಗಳೂರು ನಗರ ಜಿಲ್ಲಾಧಿಕಾರಿ ಜಗದೀಶ್ ತಿಳಿಸಿದರು.



ಈ ಕುರಿತು ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿಇಟಿ ಪರೀಕ್ಷೆ ವೇಳೆ ಜನಿವಾರ ತೆಗೆಸಿದ ವಿಚಾರ ಸಂಬಂಧ ಕೃತ್ಯ ಎಸಗಿರುವುದು ಯಾರು ಎಂಬ ಬಗ್ಗೆ ತನಿಖೆ ಮಾಡಲಾಗಿದೆ. ವಸ್ತ್ರಸಂಹಿತೆ ಬಗ್ಗೆ ತರಬೇತಿ ನೀಡಿದ್ದರೂ ಇಷ್ಟೆಲ್ಲ ಸಮಸ್ಯೆಯಾಗಿದೆ. ಜನಿವಾರ ಘಟನೆಯಲ್ಲಿ ಕರ್ತವ್ಯ ಲೋಪವಾಗಿರುವ ಕಾರಣ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಸರಕಾರಿ ಪರೀಕ್ಷೆಗಳನ್ನು ನಡೆಸದಂತೆ ಸರ್ಕಾರಕ್ಕೆ ವರದಿ ಸಲ್ಲಿಕೆ ಮಾಡುತ್ತೇವೆ. ಪರೀಕ್ಷಾರ್ಥಿಗಳ ಜನಿವಾರವನ್ನು ಉದ್ದೇಶಪೂರ್ವಕವಾಗಿ ತೆಗೆಸಲಾಗಿರುವ ಕಾರಣ ಕೃಪಾನಿಧಿ ಕಾಲೇಜಿನಲ್ಲಿ ಇನ್ನು ಮುಂದೆ ಪರೀಕ್ಷಾ ಕೇಂದ್ರ ನೀಡದಂತೆ ವರದಿ ನೀಡುತ್ತೇವೆ ಎಂದರು.

ವಸ್ತ್ರ ಸಂಹಿತೆಗೆ ಅಧಿಕಾರಿಗಳು ನೇಮಕ ಆಗಿದ್ದರು. ಆದರೂ ಸಹ ಕರ್ತವ್ಯ ಲೋಪವಾಗಿದೆ ಎಂಬುದು ಗೊತ್ತಾಗಿದೆ. ಈ ರೀತಿ ಮಾಡಬಾರದು ಎಂದು ತರಬೇತಿ ನೀಡಲಾಗಿತ್ತು. ಉದ್ದೇಶಪೂರ್ವಕವಾಗಿ ಮಾಡಿದ್ದಾರೆ ಎಂದು ತನಿಖೆ ವೇಳೆ ಗೊತ್ತಾಗಿದ್ದು, ಹೀಗಾಗಿ ಅವರ ಮೇಲೆ ಕ್ರಮ ತೆಗೆದುಕೊಳ್ಳಲಾಗಿದೆ. ಹಿರಿಯ ಅಧಿಕಾರಿಗಳು ಕಾಲೇಜಿಗೆ ಭೇಟಿ ನೀಡಿ ಪರಿಶೀಲನೆ ಮಾಡಿದ್ದು, ಸಿಸಿ ಕ್ಯಾಮೆರಾ, ಡಾಕ್ಯುಮೆಂಟ್ ಪರಿಶೀಲನೆ ಮಾಡಿ ವರದಿ ಸಲ್ಲಿಸಿದ್ದಾರೆ. ಅಖಿಲ ಭಾರತ ಬ್ರಾಹ್ಮಣರ ಮಹಾಸಂಘ ಕೂಡ ಮನವಿ ಸಲ್ಲಿಸಿದ್ದಾರೆ. ಅವರ ಮನವಿಯನ್ನು ಕೆಇಎಗೆ ಕಳುಹಿಸಿಕೊಡಲಾಗುತ್ತದೆ. ಪತ್ರದಲ್ಲಿನ ಮನವಿ ಕುರಿತು ಸರ್ಕಾರ ಹಾಗೂ ಕೆಇಎ ನಿರ್ಧಾರ ತೆಗೆದುಕೊಳ್ಳುತ್ತದೆ ಎಂದು ಜಗದೀಶ್ ಮಾಹಿತಿ ನೀಡಿದರು.

ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಆಕ್ರೋಶ

ಇದು ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಎಂದು ಆಕ್ರೋಶ ವ್ಯಕ್ತಪಡಿಸಿದ್ದ ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ, ಕಾಲೇಜು ಪರವಾನಗಿ ರದ್ದುಪಡಿಸಿ 25 ಲಕ್ಷ ರೂ. ದಂಡ ವಿಧಿಸುವಂತೆ ಮುಖ್ಯಮಂತ್ರಿಗಳಿಗೆ ದೂರು ನೀಡಿ ಆಗ್ರಹಿಸಿತ್ತು.

> **ಜನಿವಾರವು ಬ್ರಾಹ್ಮಣ ಸಮುದಾಯದವರಿಗೆ ಕೇವಲ ದಾರವಲ್ಲ. ಇದು ಧಾರ್ಮಿಕ ನಂಬಿಕೆ, ಸಂಸ್ಕೃತಿ, ಸಂಪ್ರದಾಯ, ಆಚರಣೆ ಹಾಗೂ ಆತ್ಮಗೌರವದ ಪ್ರತೀಕವಾಗಿದೆ. ಇಂತಹ ಧಾರ್ಮಿಕ ಗುರುತನ್ನು ಬಲವಂತವಾಗಿ ತೆಗೆಸುವುದು ಮೂಲಭೂತ ಹಕ್ಕುಗಳ ಉಲ್ಲಂಘನೆಯಾಗುತ್ತದೆ.**
> ■ **ಜಿ.ಆರ್. ಪ್ರದೀಪ್, ರಾಜ್ಯಾಧ್ಯಕ್ಷರು, ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ**

ಟೀಕೆಗಳಿಗೆ ಉತ್ತರ ನೀಡಲ್ಲ: ಸಚಿವ ಮಧು ಬಂಗಾರಪ್ಪ

ಎಸ್ಸೆಸ್ಸೆಲ್ಸಿ ಫಲಿತಾಂಶದಲ್ಲಿ ಸುಧಾರಣೆ

ಶಿವಮೊಗ್ಗ: ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಎಸ್ಸಿ, ಎಸ್ಟಿ ಹಾಗೂ ಹಿಂದುಳಿದ ವರ್ಗಗಳ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಸಾಕಷ್ಟು ಸುಧಾರಣೆಯಾಗಿದೆ ಎಂದು ಶಿಕ್ಷಣ ಸಚಿವ ಮಧು ಬಂಗಾರಪ್ಪ ಹೇಳಿದರು.

ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಎಸ್ಸಿ ವಿದ್ಯಾರ್ಥಿಗಳು ಶೇ.18.5 ಮತ್ತು ಎಸ್ಟಿ ವಿದ್ಯಾರ್ಥಿಗಳ ಫಲಿತಾಂಶದಲ್ಲಿ ಸಹ ಶೇ.17.5ರಷ್ಟು ಸುಧಾರಣೆಯಾಗಿದೆ. ಮುಂದೆ ಇನ್ನೂ ಉತ್ತಮ ಫಲಿತಾಂಶ ಪಡೆಯುವ ನಿಟ್ಟಿನಲ್ಲಿ ಯೋಜನೆ ರೂಪಿಸಿಕೊಳ್ಳಲಾಗುವುದು ಎಂದು ಹೇಳಿದರು.



ಸರ್ಕಾರಿ ಎಲ್ಲಾ ಶಾಲೆಗಳಿಗೆ ವಿದ್ಯುತ್ ಸಂಪರ್ಕ ನೀಡಿದ್ದು, ಇಡೀ ದೇಶದಲ್ಲಿಯೇ ಮೊದಲ ಬಾರಿಗೆ ಎಲ್ಲಾ ಸರ್ಕಾರಿ ಶಾಲೆಗಳ ಪೋಷಕರೊಂದಿಗೆ ಮೆಗಾ ಮೀಟ್ ಮಾಡಿದ್ದು, ಪೋಷಕರು ಹಾಗೂ ಶಿಕ್ಷಕರ ಸಭೆ ನಡೆಸಿದ್ದು, ವಿದ್ಯಾರ್ಥಿಗಳ ಮೇಲೆ ನಿರಂತರ ನಿಗಾ ಇಡಲಾಗಿತ್ತು. ಫೇಲ್ ಆಗಬಹುದಾದ ವಿದ್ಯಾರ್ಥಿ ಪಾಸ್ ಆಗುವಂತೆ ಕಲಿಸಿದ್ದು, ಜೆಸ್ಟ್ ಪಾಸ್ ಆಗುವ ವಿದಾರ್ಥಿ ಸೆಕೆಂಡ್ ಕ್ಲಾಸ್‌ನಲ್ಲಿ, ಸೆಕೆಂಡ್ ಕ್ಲಾಸ್‌ನವರು ಫಸ್ಟ್ ಕ್ಲಾಸ್‌ನಲ್ಲಿ ಹಾಗೂ ಫಸ್ಟ್ ಕ್ಲಾಸ್ ಮಾರ್ಕ್ ತೆಗೆದವರು ಡಿಸ್ಟಿಂಕ್ಷನ್ ಪಡೆಯುವಂತೆ ಕಲಿಸಲಾಗಿತ್ತು ಎಂದರು.

ಇದು ಯಾವುದನ್ನು ತಿಳಿಯದೆ ಮಾಜಿ ಸಚಿವ ಎಚ್. ವಿಶ್ವನಾಥ್ ಹಾಗೂ ಮಾಜಿ ಸಿಎಂ ಹಾಗೂ ಸಂಸದ ಬಸವರಾಜ್ ಬೊಮ್ಮಾಯಿ ಫಲಿತಾಂಶ ಟೀಕೆ ಮಾಡಿದ್ದಾರೆ. ಕಾಪಿ ಹೊಡೆಸಲಾಗಿದೆ ಎಂದೆಲ್ಲಾ ಹೇಳಿದ್ದಾರೆ. ಅವರೂ ಕೂಡ ಶಿಕ್ಷಕರಿಂದಲೇ ಕಲಿತು ಪರೀಕ್ಷೆ ಬರೆದವರು. ಅವರು ಕಾಪಿ ಹೊಡೆದೇ ಪಾಸ್ ಮಾಡಿದ್ದರಾ ? ಎಂದು ಪ್ರಶ್ನಿಸಿದರು.

ಅವರ ಟೀಕೆಗೆ ಮಕ್ಕಳೇ ಉತ್ತರ ನೀಡಿದ್ದಾರೆ. ಮಕ್ಕಳ ಭವಿಷ್ಯಕ್ಕೆ ವಿರುದ್ಧವಾಗಿ ಹೇಳಿಕೆ ನೀಡಿರುವ ಇಬ್ಬರೂ ನಾಯಕರು ಫೇಲ್ ಆಗಿದ್ದಾರೆ. ಫಲಿತಾಂಶದ ಬಗ್ಗೆ ಹಾಗೂ ಸಚಿವ ಪ್ರಿಯಾಂಕ್ ಖರ್ಗೆ ಬಗ್ಗೆ ಜಾಲತಾಣದಲ್ಲಿ ಟೀಕೆ ಮಾಡುವವರಿಗೆ ತಲೆಯಲ್ಲಿ ಬುದ್ಧಿಯೇ ಇಲ್ಲ ಎಂದು ಹರಿಹಾಯ್ದರು.

ಇಲಾಖೆಯಲ್ಲಿ ಸುಧಾರಣೆ

ಸಚಿವನಾದ ಮೊದಲ ವರ್ಷ ಇಲಾಖೆಯ ಆಳಗಲದ ಬಗ್ಗೆ ಅರ್ಥವೇ ಆಗಿರಲಿಲ್ಲ. 2ನೇ ವರ್ಷದಲ್ಲಿ ಒಂದಿಷ್ಟು ಹಿಡಿತ ಸಿಕ್ಕಿತ್ತು. ವೆಬ್ ಕಾಸ್ಟಿಂಗ್ ತಂದು ಕಾಪಿ ನಿಯಂತ್ರಿಸಲಾಗಿತ್ತು. 3ನೇ ವರ್ಷ ಸಂಪೂರ್ಣ ಇಲಾಖೆ ಮೇಲೆ ಹಿಡಿತ ಬಂದಿದ್ದರಿಂದಾಗಿ ಉತ್ತಮ ಫಲಿತಾಂಶ ಪಡೆಯಲು ಸಾಧ್ಯವಾಗಿದೆ. ಇಲಾಖೆಯಲ್ಲಿ ಸುಧಾರಣೆ ತಂದಿರುವುದನ್ನು ಐಸಿಐಸಿ, ಸಿಬಿಎಸ್‌ಸಿಯವರು ಅದನ್ನು ಪಾಲಿಸುತ್ತಿದ್ದಾರೆ. ಸಿಇಟಿ ನಿಯಮಾವಳಿಗಳನ್ನು ಕೆಲವರು ತಪ್ಪಾಗಿ ಅರ್ಥೈಸಿಕೊಂಡು ಜನಿವಾರ ತೆಗೆಸಿದ್ದಾರೆ. ಇದನ್ನು ಸಮರ್ಥಿಸುವುದಿಲ್ಲ ಎಂದ ಅವರು, ಡಾ.ರಾಜ್‌ಕುಮಾರ್ ಸ್ಮಾರಕದ ಜಾಗಕ್ಕೆ ಸಂಬಂಧಿಸಿದಂತೆ ಶಿವಣ್ಣ ಹೇಳಿಕೆ ನೀಡಿದ್ದಾರೆ ಎಂದರು.

ಎಂಜಿನ್ ಬದಲಾವಣೆ ಸುಲಭವಲ್ಲ | ಇಡೀ ವಿಮಾನದ ವಿನ್ಯಾಸವೇ ಅದರ ಮೇಲೆ ನಿಂತಿರುತ್ತದೆ

ವರ್ಷಾಂತ್ಯಕ್ಕೆ ಜಿಇ ಎಫ್ 414 ಒಪ್ಪಂದ ಪೂರ್ಣ

ನೆಲ್ಲಿಜೆ ನವ್ಯಜ್ಯೋತಿ

ದಿಗಂತ ವಿಶೇಷ

ಬೆಂಗಳೂರು: ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್‌ಎಎಲ್) ತೇಜಸ್ ಲಘು ಯುದ್ಧ ವಿಮಾನ ಕುರಿತಾಗಿ ಸಾರ್ವಜನಿಕವಾಗಿ ಅತೀ ಹೆಚ್ಚು ಟೀಕೆಗೆ ಗುರಿಯಾಗಿದೆ. ಅಮೆರಿಕದ ಜನರಲ್ ಎಲೆಕ್ಟ್ರಿಕ್ (ಜಿಇ) ಒಪ್ಪಂದದಂತೆ ಎಂಜಿನ್‌ಗಳನ್ನು ಪೂರೈಸದಿರುವುದೇ ಇದಕ್ಕೆ ಮುಖ್ಯ ಕಾರಣ. ಆದಕ್ಕಾಗಿ ಜಿಇಯನ್ನು ಕೈಬಿಟ್ಟು ಬೇರೆ ಎಂಜಿನ್ ಹಾಕಿ ತೇಜಸ್ ಹಾರಿಸಿ ಎಂಬ ಪುಕ್ಕಟೆ ಸಲಹೆಯೂ ಬರುತ್ತದೆ. ವಾಸ್ತವದಲ್ಲಿ ಇದು ಸಾಧ್ಯವಾ?

ಒಂದು ಎಂಜಿನ್ ಇಟ್ಟುಕೊಂಡು ಅದಕ್ಕೆ ತಕ್ಕಂತೆ ವಿಮಾನವನ್ನು ವಿನ್ಯಾಸಗೊಳಿಸಿದ ನಂತರ ಎಂಜಿನ್ ಬದಲಾಯಿಸುವುದು ಕಷ್ಟ. ಎಂಜಿನ್ ಎನ್ನುವುದು ಯಾವುದೋ ಪರ್ಯಾಯ ಭಾಗ ಅಲ್ಲ, ಯಾವುದೋ ಬೇರೆಯದು ತಂದು ಹಾಕುವುದಕ್ಕೆ ಸಾಧ್ಯವಿಲ್ಲ. ಅದು ವಿಮಾನದ ಬಹುಮುಖ್ಯ ಭಾಗ. ಅದರ ಆಧಾರದಲ್ಲೇ ಇಡೀ ವಿಮಾನದ ವಿನ್ಯಾಸ ಇರುತ್ತದೆ. ಜಿಇ ಎಂಜಿನ್ ಆರ್ಡರ್ ರದ್ದುಗೊಳಿಸಿ ಬೇರೆ ಎಂಜಿನ್ ಹಾಕಿ ಎಂಬ ಸಾರ್ವಜನಿಕ ಅಭಿಪ್ರಾಯಗಳು ಬರುತ್ತಿವೆ. ಆದರೆ, ಅದು ಹಾಗೆ ಆಗುವುದಿಲ್ಲ. ಅಷ್ಟೇ ಅಲ್ಲದೇ

> **ತೇಜಸ್‌ನ ಎಂಜಿನ್ ಕುರಿತಾಗಿ ನಮ್ಮನ್ನು ಸಾಕಷ್ಟು ಟೀಕೆ ಮಾಡಲಾಗಿದೆ. ಜಿಇ ಒಪ್ಪಂದ ರದ್ದುಪಡಿಸಿ ಬೇರೆ ಕಂಪನಿ ನೇಮಿಸಿ ಎಂದು ಎಕ್ಸ್‌ನಲ್ಲಿ ಬರೆಯುವುದು ಸುಲಭ. ಆದರೆ, ಒಂದು ಯುದ್ಧ ವಿಮಾನದ ಎಂಜಿನ್ ಬದಲಾವಣೆ ಅಷ್ಟು ಸುಲಭವಲ್ಲ.**
> ■ **ಡಾ.ಡಿ.ಕೆ. ಸುನೀಲ್, ಸಿಎಂಡಿ ಎಚ್‌ಎಎಲ್**

ತೇಜಸ್ ಜಟಿಲ ಯುದ್ಧವಿಮಾನವಾಗಿದೆ ಎನ್ನುತ್ತಾರೆ ಎಚ್‌ಎಎಲ್‌ನ ಅಧ್ಯಕ್ಷ ಮತ್ತು ವ್ಯವಸ್ಥಾಪಕ ನಿರ್ದೇಶಕ ಡಾ. ಡಿ.ಕೆ. ಸುನೀಲ್.

ಖರೀದಿದಾರರೆಂದು ಪೂರ್ಣ ಅಧಿಕಾರವಿಲ್ಲ: ನಾವು ಎಂಜಿನ್ ಖರೀದಿಸುತ್ತೇವೆ ಎಂದು ನಮಗೆ ಅದರಲ್ಲಿ ಶೇ.100ರಷ್ಟು ಅಧಿಕಾರವಿರುವುದಿಲ್ಲ. ಯಾಕೆಂದರೆ ಜಿಇ ತುಂಬಾ ಬಲಿಷ್ಠವಾಗಿದೆ. ಅವರೊಂದಿಗೆ ಹೊಂದಿಕೊಂಡು ಹೋಗಬೇಕಾದ ಅಗತ್ಯವಿದೆ. ಹೀಗಿರುವಾಗ ಅವರ ಸಮಸ್ಯೆಗಳೇನಿದೆ, ಅದನ್ನು ಜಿಇ ಅವರೊಂದಿಗೆ ಚರ್ಚಿಸಿ, ನಮ್ಮ ಕಡೆಯಿಂದ ಏನು ಮಾಡಬಹುದು? ಎಂಬುದನ್ನು ಪರಿಶೀಲಿಸಿ ಮುಂದುವರಿಯುತ್ತಿದ್ದೇವೆ. ಪ್ರಸಕ್ತ ಪರಿಸ್ಥಿತಿ ಸುಧಾರಿಸಿದೆ, ಸಮಸ್ಯೆಗಳನ್ನು ಬಗೆಹರಿಸಲಾಗಿದೆ. ಈ ವರ್ಷದಲ್ಲಿ ಎಂಜಿನ್‌ಗಳು ಬರುತ್ತವೆ ಎಂಬ ವಿಶ್ವಾಸವಿದೆ. ಸಾಮಾಜಿಕ ಜಾಲತಾಣದಲ್ಲಿ ಜಿಇ ಕಂಪನಿಯೊಂದಿಗಿನ ಒಪ್ಪಂದ ಕೈಬಿಡಿ ಎಂದು ಬರೆಯಬಹುದು. ಆದರೆ, ವಾಸ್ತವದಲ್ಲಿ ಅದು ಸುಲಭವಿಲ್ಲ ಎಂದು ಡಾ. ಸುನೀಲ್ ವಿವರಿಸಿದ್ದಾರೆ.

ನಷ್ಟ ಪರಿಹಾರ ಪಡೆಯುತ್ತದೆ ಎಚ್‌ಎಎಲ್: ಜಿಇ ಸಣ್ಣ ಕಂಪನಿಯಲ್ಲ. ಅದೊಂದು ದೈತ್ಯ ಕಂಪನಿ ಅವರು ಸಿವಿಲ್ ಎಂಜಿನ್ಸ್ ಕೂಡ ಮಾಡುತ್ತಾರೆ. ತೇಜಸ್ ಎಲ್‌ಸಿಎ ಎಂಕೆ-1ಎ ವಿಮಾನಕ್ಕೆ ಎಫ್404 ಎಂಜಿನ್‌ನನ್ನು ಜಿಇ ಕಂಪನಿ ಪೂರೈಕೆ ಮಾಡುತ್ತದೆ. ಎಚ್‌ಎಎಲ್ 99 ಎಂಜಿನ್‌ಗಳಿಗೆ ಆದೇಶ ನೀಡಿತ್ತು. ಒಪ್ಪಂದದಂತೆ 2024ರ ವೇಳೆಗೆ ಸರಬರಾಜು ಪ್ರಾರಂಭವಾಗಬೇಕಿತ್ತು. ಆದರೆ, ಕಳೆದ ವರ್ಷ ಎಂಜಿನ್ ಪೂರೈಕೆ ಪ್ರಾರಂಭಿಸಿತ್ತು. ಇದರಿಂದ ಎಚ್‌ಎಎಲ್ ಸಾಕಷ್ಟು ನಷ್ಟ ಅನುಭವಿಸಿದೆ. ಯಾವುದೇ ಟೆಂಡರ್ ಒಪ್ಪಂದ ಮಾಡಿಕೊಳ್ಳುವಾಗ ಅದರಲ್ಲಿ ವಾಣಿಜ್ಯ ನಿಯಮಗಳಿರುತ್ತವೆ. ಸರಿಯಾದ ಸಮಯಕ್ಕೆ ಉತ್ಪನ್ನ ಪೂರೈಕೆ ಮಾಡದಿದ್ದಾಗ ಇಂತಿಷ್ಟು ಕಡಿತಗೊಳಿಸಲಾಗುತ್ತದೆ ಎಂದು ಷರತ್ತುಗಳಲ್ಲಿದೆ. ಹೀಗಾಗಿ, ವಿಳಂಬಕ್ಕಾಗಿ ದಿವಾಳಿ ಪರಿಹಾರವನ್ನು ವಿಧಿಸಲಾಗಿದೆ ಎಂದಿದ್ದಾರೆ.

ಎಫ್ 414 ಎಂಜಿನ್ ತಾಂತ್ರಿಕ ಭಾಗದ ಮಾತುಕತೆ ಪೂರ್ಣ

ತೇಜಸ್ ಲಘು ಯುದ್ಧ ವಿಮಾನದ ಮುಂದಿನ ಆವೃತ್ತಿ ಎಲ್‌ಸಿಎ ಎಂಕೆ-2 ಈಗಾಗಲೇ ಮೂಲ ಮಾದರಿಯ ಉತ್ಪಾದನೆಯಲ್ಲಿದೆ. ಇದು ಹೆಚ್ಚು ಸುಧಾರಿತ ಜಿಇ ಎಫ್414 ಎಂಜಿನ್‌ನಿಂದ ಕಾರ್ಯಾಚರಿಸಲಿದೆ. ಈ ಜಿಇ



ಎಫ್414 ಎಂಜಿನ್‌ನ ತಂತ್ರಜ್ಞಾನದ ವರ್ಗಾವಣೆಗಾಗಿ ಎಚ್‌ಎಎಲ್ ಅಮೆರಿಕದ ಕಂಪನಿಯೊಂದಿಗೆ ಒಪ್ಪಂದ ಮಾಡಿಕೊಳ್ಳಲಿದೆ. ಈಗಾಗಲೇ ಚರ್ಚೆಗಳನ್ನು ಮುಂದಿವರಿಸಿದ್ದು, ನಿಯಮ ಮತ್ತು ಷರತ್ತುಗಳ ತಾಂತ್ರಿಕ ಭಾಗ ಪೂರ್ಣಗೊಂಡಿದೆ. ಆರ್ಥಿಕ ಭಾಗ ಜೂನ್-ಜುಲೈನಲ್ಲಿ ಅಂತಿಮವಾಗಲಿದೆ. ನಂತರ ಕೇಂದ್ರ ಸರ್ಕಾರದ ಅನುಮೋದನೆ ಪಡೆಯಬೇಕು. ಈ ವರ್ಷಾಂತ್ಯದಲ್ಲಿ ಒಪ್ಪಂದ ಆಗಲಿದೆ ಎಂದು ಎಚ್‌ಎಎಲ್ ಸಿಎಂಡಿ ಡಾ. ಡಿ.ಕೆ. ಸುನೀಲ್ ಕುಮಾರ್ ತಿಳಿಸಿದ್ದಾರೆ. ಎಲ್‌ಸಿಎ ಎಂಕೆ-2 ಉತ್ಪಾದನೆ ಆರಂಭಕ್ಕೆ ಇನ್ನೂ ನಾಲ್ಕು ವರ್ಷ ಆಗುವುದರಿಂದ ಆ ವೇಳೆಗೆ ಜಿಇ ಎಫ್414 ಎಂಜಿನ್ ಭಾರತದಲ್ಲೇ ತಯಾರಾಗಲಿದೆ. ಒಪ್ಪಂದದ ಮಹತ್ವದ ಮೈಲಿಗಲ್ಲು ಪೂರ್ಣಗೊಂಡಿದೆ. ಈಗಾಗಲೇ ಎಚ್‌ಎಎಲ್ ತಂಡ ಜಿಇಗೆ ಹೋಗಿ ಅಲ್ಲಿ ಪರಿಶೀಲನೆ ನಡೆಸಿದೆ, ಅದೇ ರೀತಿ ಜಿಇ ತಂಡವೂ ಇಲ್ಲಿಗೆ ಬಂದು ಪರಿಶೀಲನೆ ಪೂರ್ಣಗೊಳಿಸಿದೆ. ವಿಡಿಯೋ ಕಾನ್ಫರೆನ್ಸ್‌ಗಳ ಮೂಲಕ ಸಂವಹನ ಪ್ರಗತಿಯಲ್ಲಿದೆ ಎಂದು ವಿವರಿಸಿದ್ದಾರೆ.

ಪ್ರಾಧ್ಯಾಪಕರ ಸೇವೆ ಬಳಸಿಕೊಳ್ಳಿ: ಪುಟ್ಟಣ್ಣ

ಬೆಂಗಳೂರು: ಖಾಯಂ ಬೋಧಕರ ಕೊರತೆ ಎದುರಿಸುತ್ತಿರುವ ವಿವಿಗಳಲ್ಲಿ ಪಿಎಚ್.ಡಿ ಮಾರ್ಗದರ್ಶಕರಾಗಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಧ್ಯಾಪಕರ ಸೇವೆ ಬಳಸಿಕೊಳ್ಳಲು ಅವಕಾಶ ಕಲ್ಪಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಪುಟ್ಟಣ್ಣ ಆಗ್ರಹಿಸಿದ್ದಾರೆ.

ಬೆಂಗಳೂರು ವಿವಿ, ಸರ್ಕಾರಿ ಕಲಾ ಕಾಲೇಜು, ಕರ್ನಾಟಕ ಪತ್ರಾಗಾರ, ಗೆಜೆಟಿಯರ್ ಇಲಾಖೆ ಹಾಗೂ ಭಾರತೀಯ ಇತಿಹಾಸ ಅನುಸಂಧಾನ ಪರಿಷತ್ತಿನ ಸಹಯೋಗದಲ್ಲಿ ಜ್ಞಾನಜ್ಯೋತಿ ಸಭಾಂಗಣದಲ್ಲಿ ಆಯೋಜಿಸಿದ್ದ ಕರ್ನಾಟಕ ಇತಿಹಾಸ ಪರಿಷತ್ತಿನ 36ನೇ ವಾರ್ಷಿಕ ಮಹಾಧಿವೇಶನ ಉದ್ಘಾಟಿಸಿ ಮಾತನಾಡಿದರು. ಅನೇಕ ವಿಭಾಗಗಳಲ್ಲಿ ಪ್ರಾಧ್ಯಾಪಕರ ಹುದ್ದೆಗಳು ಖಾಲಿ ಇರುವುದರಿಂದ, ವಿದ್ಯಾರ್ಥಿಗಳಿಗೆ ಸಮಯೋಚಿತ ಮಾರ್ಗದರ್ಶನ ದೊರಕದೆ, ಸಂಶೋಧನಾ ಕಾರ್ಯಗಳು ವಿಳಂಬವಾಗುತ್ತಿವೆ. ಇದರಿಂದ ವಿದ್ಯಾರ್ಥಿಗಳ ಶೈಕ್ಷಣಿಕ ಪ್ರಗತಿ ಮೇಲೆ ಪರಿಣಾಮ ಬೀರುತ್ತಿದೆ ಎಂದರು.

ಸಂಪಾದಕೀಯ

ಧರೆಗುರುಳುತ್ತಿರುವ ಆಪ್

ರಾಜಕೀಯದಾಗಸದಲ್ಲಿ ಹಠಾತ್ ಉನ್ನತಿ ಕಂಡ ಆಮ್ ಆದ್ಮಿ ಪಕ್ಷವು (ಆಪ್) ಇದೀಗ ಉಲ್ಕೆಯ ರೀತಿಯಲ್ಲಿ ಪತನದ ಹಾದಿ ಕಾಣುತ್ತಿರುವುದು ವಿಪರ್ಯಾಸವೇ ಸರಿ. ಎಲ್ಲರನ್ನೂ ಒಳಗೊಳ್ಳುವಂತೆ ಮಾಡುವ ನೀತಿ ಹೊಂದಿರುವುದಾಗಿ ಹೇಳಿಕೊಳ್ಳುವ ಪಕ್ಷದಿಂದ ಎಲ್ಲರೂ ಈಗ ಹೊರ ಸರಿಯುತ್ತಿದ್ದಾರೆ. ಕಳೆದ ಕೆಲ ವರ್ಷಗಳಲ್ಲಿ ಕೆಲವು ಪ್ರಮುಖ ಮುಖಂಡರು ಪಕ್ಷ ತ್ಯಜಿಸಿ ಹೊರಬಂದಿದ್ದರೆ, ಇದೀಗ ಏಳು ಮಂದಿ ರಾಜ್ಯಸಭಾ ಸದಸ್ಯರು ಒಮ್ಮೆಗೆ ಪಕ್ಷ ಬಿಡುವ ಮೂಲಕ ಆಪ್‌ಗೆ ಭಾರೀ ಆಘಾತ ನೀಡಿದ್ದಾರೆ. ಪಕ್ಷದಿಂದ ನಿಧಾನವಾಗಿ ದೂರಸರಿಯುವಂತೆ



ತೋರುತ್ತಿದ್ದ ಯುವ ಮುಖಂಡ ರಾಘವ್ ಚಡ್ಡಾ ಅವರ ರಾಜ್ಯಸಭಾ ನಾಯಕತ್ವವನ್ನು ಕಿತ್ತುಕೊಂಡು ಅವರಿಗೆ ಸೂಕ್ತ ಪಾಠ ಕಲಿಸಿದ್ದಾಗಿ ಬೀಗುತ್ತಿದ್ದ ಕೇಜ್ರಿವಾಲ್‌ರಿಗೆ ರಾಘವ್ ಚಡ್ಡಾ ಊಹಿಸದ ರೀತಿಯಲ್ಲಿ ಹೊಡೆತ ನೀಡಿ, ಇನ್ನೂ ಆರು ಮಂದಿಯನ್ನು ಪಕ್ಷದಿಂದ ದೂರ ಸೆಳೆದಿದ್ದಾರೆ. ರಾಜ್ಯಸಭೆಯಲ್ಲಿ ಕೇವಲ 10 ಸ್ಥಾನಗಳನ್ನು ಹೊಂದಿದ್ದ ಆಪ್‌ಗೆ ಇದೀಗ ಸದನದಲ್ಲಿ ಅಸ್ತಿತ್ವದ ಭೀತಿಯೇ ಎದುರಾಗಿದೆ. ಮೂರನೇ ಎರಡಕ್ಕಿಂತ ಹೆಚ್ಚಿನ ಸದಸ್ಯರು ಬಂಡೆದ್ದಿರುವುದರಿಂದ ಆಪ್ ಅವರನ್ನು ಪಕ್ಷದಿಂದ ಉಚ್ಚಾಟಿಸುವ ಪರಿಸ್ಥಿತಿಯಲ್ಲೂ ಇಲ್ಲವಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಮುಂದಿನ ವರ್ಷ ನಡೆಯಲಿರುವ ಪಂಜಾಬ್ ವಿಧಾನಸಭಾ ಚುನಾವಣೆಯಲ್ಲಿ ಆಪ್‌ಗೆ ಇದು ಪ್ರತಿಕೂಲವಾಗಿ ಪರಿಣಮಿಸುವ ಸಾಧ್ಯತೆಗಳಿವೆ. ಆಪ್‌ನ ಉನ್ನತ ನಾಯಕತ್ವದ ಕುರಿತಂತೆ, ಕೇಜ್ರಿವಾಲ್‌ರ ಸರ್ವಾಧಿಕಾರಿ ಧೋರಣೆಯ ಕುರಿತಂತೆ, ಪಂಜಾಬ್‌ನ ಮುಖ್ಯಮಂತ್ರಿ ಭಗವಂತ್ ಮಾನ್ ಕಾರ್ಯಶೈಲಿಯ ಕುರಿತಂತೆ ಆಪ್‌ನ ಇತರ ಮುಖಂಡರಲ್ಲಿ ಹಾಗೂ ಕಾರ್ಯಕರ್ತರಲ್ಲಿ ತೀವ್ರ ಅಸಮಾಧಾನವಿದೆ. ಪಕ್ಷದಲ್ಲಿ ಕೆಲವೇ ಕೆಲವರು ಕೂಟ ಕಟ್ಟಿಕೊಂಡು ಇತರ ನಾಯಕರನ್ನೆಲ್ಲ ಕಡೆಗಣನೆ ಮಾಡುತ್ತಿದ್ದಾರೆಂಬ ಆರೋಪವೂ ಜೋರಾಗಿದೆ.

ಕಳೆದ ಕೆಲವು ವರ್ಷಗಳಿಂದ ಆಮ್ ಆದ್ಮಿ ಪಕ್ಷದ ವರ್ಚಸ್ಸೂ ಕುಂದಿದೆ. ಅಣ್ಣಾ ಹಜಾರೆಯವರ ಭ್ರಷ್ಟಾಚಾರ ವಿರೋಧಿ ಚಳವಳಿಯ ಮೂಲಕ ಹುಟ್ಟಿಕೊಂಡ ಆಪ್ ಬಳಿಕ ತಾನೂ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಉನ್ನತ ಮುಖಂಡ ಕೇಜ್ರಿವಾಲ್ ಭ್ರಷ್ಟಾಚಾರದ ಕಾರಣಕ್ಕಾಗಿ ಜೈಲು ಪಾಲಾದುದು ಪಕ್ಷದ ಪಾಲಿನ ಅತಿದೊಡ್ಡ ವ್ಯಂಗ್ಯವೆನ್ನಬೇಕು. ಆಪ್ ಪ್ರತಿನಿಧಿಗಳು ಪಕ್ಷ ತ್ಯಜಿಸುತ್ತಿರುವುದು ಆಪ್ ಪಾಲಿಗೆ ಕೇವಲ ಸಂಖ್ಯೆಯ ಪ್ರಶ್ನೆಯಲ್ಲ, ಅದು ಪಕ್ಷದ ವಿಶ್ವಾಸಾರ್ಹತೆಯ ಪ್ರಶ್ನೆಯಾಗಿದೆ. ದಿಲ್ಲಿ ಮತ್ತು ಪಂಜಾಬ್‌ನಲ್ಲಿ ಆಪ್ ಸರಕಾರಗಳ ನಿರ್ವಹಣೆಯು ಜನರಲ್ಲಿ ಭ್ರಮನಿರಸನವನ್ನೂ ಉಂಟು ಮಾಡಿದೆ. ಇದಕ್ಕೆಲ್ಲ ಕಾರಣರಾದ ಕೇಜ್ರಿವಾಲ್ ತಮ್ಮ ವರ್ತನೆ ತಿದ್ದಿಕೊಳ್ಳುವರೆ? ಅದು ಅತ್ಯಂತ ಮುಖ್ಯ ಪ್ರಶ್ನೆ.

ಬೆಲೆಯನ್ನು ಹೇಳಲು ನಾವ್ಯಾರು?

ಕವಿಸೂಕ್ತೇಃ ದೈವಭಕ್ತೇಃ ಮಾತೃಪ್ರೀತೇಃ ಹರಿಸ್ತುತೇಃ ।
ಮೂಲ್ಯಂ ವಕ್ತುಂ ನ ಶಕ್ನೋತಿ ಶಾರದಾಪಿ ವಯಂ ತು ಕೇ॥ –ಸುವಚನ ಶತಕಂ

ಕವಿಯ ನುಡಿಯ, ದೈವಭಕ್ತಿಯ, ತಾಯಿಯ ಪ್ರೀತಿಯ, ಹರಿಸ್ತುತಿಯ ಬೆಲೆಯನ್ನು ಸಾಕ್ಷಾತ್ ಸರಸ್ವತಿಯೂ ಹೇಳಲಾರಳು, ಇನ್ನು ಅದನ್ನು ಹೇಳಲು ನಾವು ಯಾರು? -ಎಂಬುದು ಶ್ಲೋಕಾರ್ಥ.

ಶ್ಲೋಕ ಸಾಗರ
ಡಾ. ಸೋಂದಾ ಭಾಸ್ಕರ ಭಟ್

ಜಗತ್ತಿನಲ್ಲಿ ಎಲ್ಲದಕ್ಕೂ ಅದರದೇ ಆದ ವಿಶೇಷತೆ ಇರುತ್ತದೆ. ಕೆಲವನ್ನಷ್ಟು ಮಾತಿನಲ್ಲಿ ಹೇಳಬಹುದು. ಇನ್ನು ಕೆಲವನ್ನಷ್ಟು ಹೇಳಲು ಸಾಧ್ಯವಿಲ್ಲ. ಏಕೆಂದರೆ ನಾವು ಕಟ್ಟಿಕೊಡುವ ಶಬ್ದಾರ್ಥಗಳ ವ್ಯಾಪ್ತಿಯನ್ನು ಅದು ಮೀರಿರುತ್ತದೆ. ಯಾರು ಅನುಭವಿಸುತ್ತಾರೋ ಅವರಿಗೆ ಮಾತ್ರ ಅದು ಗೊತ್ತಾಗುತ್ತದೆ. ಅನುಭವಕ್ಕೆ ಗೋಚರವಾಗುವ ವಿಚಾರವನ್ನು ಮಾತಿನಲ್ಲಿ ಹಿಡಿದಿಡುವುದು ಕಷ್ಟದ ಕೆಲಸ ಅಥವಾ ಅಸಾಧ್ಯವಾದ ಕಾರ್ಯಕ.

ಇಂತಹ ನಾಲ್ಕು ಅಂಶಗಳನ್ನು ಪ್ರಕೃತ ಕಾರಿಕೆಯಲ್ಲಿ ಹೆಸರಿಸಿದ್ದಾರೆ. ಅಷ್ಟೇ ಅಲ್ಲ, ಸರಸ್ವತಿಯೂ ಅದರ ಬೆಲೆಯನ್ನು ಹೇಳಲಾರಳು ಎಂಬುದು ಕವಿಯ ಅಭಿಮತ.

ಕವಿಯ ನುಡಿಗೆ ಬೆಲೆ ಕಟ್ಟಲು ಸಾಧ್ಯವೇ? ಅದರ ಹಿರಿಮೆಯನ್ನು ಮಾತಿನ ಚೌಕಟ್ಟಿನಲ್ಲಿ ಹಿಡಿದಿಡಲು ಸಾಧ್ಯವೇ? ಕವಿಯ ಕಲ್ಪನೆಯೇ ಬೇರೆ. ಕವಿಯು ನೋಡುವ ದೃಷ್ಟಿ ಅನುಭವಿಸುವ ಪರಿ ಲೋಕಭಿನ್ನವಾಗಿರುತ್ತದೆ. ಆದ್ದರಿಂದಲೇ 'ರವಿ ಕಾಣದ್ದನ್ನು ಕವಿ ಕಾಣುತ್ತಾನೆ' ಎಂಬ ನಾಣ್ಣುಡಿ ಪ್ರಸಿದ್ಧವಾಗಿದೆ. ಜನರ ದೃಷ್ಟಿ ವಿಭಿನ್ನವಾಗಿರುವುದೇ ಇದಕ್ಕೆ ಕಾರಣ. ಜೋಗದಲ್ಲಿ ಶರಾವತಿ ಜಲಪಾತ ಸಾಮಾನ್ಯರಿಗೂ ಸಂತೋಷವನ್ನುಂಟು ಮಾಡಿದರೆ, ಅದ್ಭುತವೆನಿಸಿದರೆ ಸರ್ ಎಂ. ವಿಶ್ವೇಶ್ವರಯ್ಯರವರಿಗೆ 'ವೇಸ್ಟೆಡ್ ವೆಲ್ತ್' ಎಂದು ತೋರಿತಂತೆ. ಉಳಿದವರದ್ದು ಸೌಂದರ್ಯ ದೃಷ್ಟಿಯಾದರೆ ವಿಶ್ವೇಶ್ವರಯ್ಯನವರದ್ದು ವ್ಯವಹಾರ ದೃಷ್ಟಿ, ಅಭಿವೃದ್ಧಿ ದೃಷ್ಟಿ. ಕವಿ ಕಲ್ಪನೆಯ ಬೆಲೆಯನ್ನು ಹೇಳುವ ಸಾಕ್ಷಾತ್ ಸರಸ್ವತಿಯೂ ಸೋಲುತ್ತಾಳೆ.

ದೈವಭಕ್ತಿಯ ಮಹತ್ವ ದೈವಭಕ್ತನಿಗೇ ಗೊತ್ತು. ಅದರಿಂದ ಸಿಗುವ ಸಂತೋಷ ಆತನಿಗೆ ಮಾತ್ರ ಗೊತ್ತು. ದೊರಕುವ ನೆಮ್ಮದಿ ಅವನ ಅನುಭವಕ್ಕೆ ಬಂದಿರುತ್ತದೆ. ಉಳಿದವರು ಟೀಕಿಸಬಹುದು. ಹೀಗಳೆಯಬಹುದು. ದೈವಭಕ್ತಿಯ ಗಂಧಗಾಳಿ ಇಲ್ಲದವರು ಮತ್ತೇನು ತಾನೇ ಮಾಡಿಯಾರು? ದೈವವನ್ನೇ ನಂಬಿ ಬದುಕನ್ನು ಚೆನ್ನಾಗಿ ಕಟ್ಟಿಕೊಂಡಿದ್ದಾರೆ. ಮಾನಸಿಕ ನೆಮ್ಮದಿಯನ್ನು ಪಡೆದವರಿದ್ದಾರೆ. ದೈವಭಕ್ತಿಯ ಅನುಪಮ ಆನಂದವನ್ನು ಅವನು ಮಾತ್ರ ಅನುಭವಿಸಬಲ್ಲ. ಅದನ್ನು ಶಬ್ದದ ಮೂಲಕ ಕಟ್ಟಿಕೊಡಲು ಅಸಾಧ್ಯ.

ತಾಯಿಯ ಪ್ರೀತಿಯನ್ನು ಅನುಭವಿಸದವರಿಲ್ಲ. ತಾಯಿ ಮಮತೆಯನ್ನು ಅರಿಯದವರಿಲ್ಲ. ತಾಯಿಯ ತ್ಯಾಗ ಗೊತ್ತಿರದವರಿಲ್ಲ. ಇದನ್ನು ನಿರೂಪಿಸಲು ಸಾಕ್ಷಾತ್ ಶಾರದೆಯೂ ಸಮರ್ಥಳಾಗದೆ ಸೋಲನ್ನೊಪ್ಪಿಕೊಳ್ಳಬೇಕಾಗುತ್ತದೆ. ಇಂತಹ ಅಮೂಲ್ಯ ಅನುಭವವನ್ನು ಸಾಮಾನ್ಯರಾದ ನಾವು ಮಾತಿನ ಮೂಲಕ ಹೇಳಲು ಸಾಧ್ಯವೇ?

ಭಗವಂತನ ಸ್ತುತಿಯ ಮಹತ್ವವನ್ನು ಭಕ್ತಿಯಿಂದ ಸ್ತುತಿಸಿ ಮಾತ್ರ ಅನುಭವಿಸಬಲ್ಲ. ಅದರ ಮಹತ್ವ, ಉಂಟಾದ ಅನುಭೂತಿ... ಅನುಭವಿಸಿಯೇ ಪಡೆಯಬೇಕೇ ವಿನಾ ಕೇಳಿ ತಿಳಿಯಲು ಸಾಧ್ಯವಿಲ್ಲ.

ಈ ರೀತಿ ನಿರೂಪಿಸುವ ಕವಿಯು, ಶಬ್ದದ ಮೂಲಕ ಕಟ್ಟಿಕೊಡಲು ಸರಸ್ವತಿಯೇ ಸೋಲಬಹುದಾದರೆ ಸಾಮಾನ್ಯರಾದ ನಾವು ಅದೇನು ಹೇಳಲು ಸಾಧ್ಯ ಎನ್ನುತ್ತಾನೆ.

ಜೀವನದಲ್ಲಿ ಕೆಲವನ್ನು ಅನುಷ್ಠಾನಿಸಿ, ಅನುಭವಿಸಿ, ಅವಲೋಕಿಸಿ ತಿಳಿಯಬೇಕಾಗುತ್ತದೆ. ಅಮೂರ್ತವಾದ ಅನುಭವವನ್ನು ವಾಗ್ದೇವಿಯೂ ಹೇಳಲಾರಳು ಎಂದ ಮೇಲೆ ಪಾಮರರಾದ ನಾವು ಯಾವ ಲೆಕ್ಕ?

ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದ

▶ ಪಿಯೂಷ್ ಗೋಯಲ್



ಸೋಮವಾರ ಸಹಿ ಹಾಕಲಾಗಿರುವ ಭಾರತ-ನ್ಯೂಜಿಲೆಂಡ್ ಮುಕ್ತ ವ್ಯಾಪಾರ ಒಪ್ಪಂದವು(ಎಫ್‌ಟಿಎ), ಅಭಿವೃದ್ಧಿ ಹೊಂದಿದ ರಾಷ್ಟ್ರಗಳೊಂದಿಗೆ ಭಾರತದ ಒಡನಾಟದಲ್ಲಿ ಒಂದು ನಿರ್ಣಾಯಕ ಮೈಲಿಗಲ್ಲಾಗಿದೆ. ರೈತರು, ಮಹಿಳೆಯರು, ಯುವಜನರು ಮತ್ತು ಉದ್ಯೋಗ ಸೃಷ್ಟಿಸುವ ಕೈಗಾರಿಕೆಗಳಿಗೆ, ಜಾಗತಿಕ ಆರ್ಥಿಕ ಪಾಲುದಾರಿಕೆಯನ್ನು ಸ್ಪಷ್ಟ ಲಾಭಗಳಾಗಿ ಪರಿವರ್ತಿಸುವ ಪ್ರಧಾನಿ ನರೇಂದ್ರ ಮೋದಿ ಅವರ ದೂರದೃಷ್ಟಿಯ ನಿರ್ಣಾಯಕ ಮುನ್ನಡೆಯನ್ನು ಇದು ಪ್ರತಿಬಿಂಬಿಸುತ್ತದೆ.

ಯುನೈಟೆಡ್ ಕಿಂಗ್‌ಡಮ್ ಮತ್ತು ಐರೋಪ್ಯ ಒಕ್ಕೂಟ ಸೇರಿದಂತೆ ಪ್ರಮುಖ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳೊಂದಿಗೆ ಮಾಡಿಕೊಂಡ ಐತಿಹಾಸಿಕ ವ್ಯಾಪಾರ ಒಪ್ಪಂದಗಳ ಸರಣಿಯ ಮುಂದುವರಿದ ಭಾಗವಾಗಿ ಈ ಒಪ್ಪಂದ ರೂಪುಗೊಂಡಿದೆ. ಈ ಒಪ್ಪಂದಗಳು ಜಾಗತಿಕ ಮಾರುಕಟ್ಟೆಗಳಲ್ಲಿ ಭಾರತದ ಸ್ಥಾನವನ್ನು ಬಲಪಡಿಸುತ್ತವೆ ಮತ್ತು ಜಾಗತಿಕ ಅನಿಶ್ಚಿತತೆ ಮತ್ತು ಏರಿಳಿತಗಳ ನಡುವೆಯೂ ವಿಶ್ವದ ಅತ್ಯಂತ ಲಾಭದಾಯಕ ಆರ್ಥಿಕತೆಗಳಲ್ಲಿ ನಮ್ಮ ರಫ್ತುದಾರರಿಗೆ ಸ್ಪರ್ಧಾತ್ಮಕ ಮೇಲುಗೈಯನ್ನು ಒದಗಿಸುತ್ತವೆ.

ರಫ್ತು ಮತ್ತು ಉದ್ಯೋಗಗಳಿಗೆ ಬಲವಾದ ಉತ್ತೇಜನ

ಪರಸ್ಪರ ಲಾಭದಾಯಕವಾದ ಈ ಒಪ್ಪಂದದ ಪ್ರಮುಖ ಅಂಶವೆಂದರೆ, ಎಲ್ಲಾ ಭಾರತೀಯ ಉತ್ಪನ್ನಗಳ ಮೇಲಿನ ಸುಂಕವನ್ನು ತಕ್ಷಣವೇ ರದ್ದುಗೊಳಿಸುವ ನ್ಯೂಜಿಲೆಂಡ್‌ನ ಬದ್ಧತೆಯಾಗಿದೆ. ಪ್ರಸ್ತುತ ನಮ್ಮ ಪ್ರಮುಖ ರಫ್ತುಗಳು ಶೇ. 10ರಷ್ಟು ಸುಂಕವನ್ನು ಎದುರಿಸುತ್ತಿರುವ ಮಾರುಕಟ್ಟೆಯಲ್ಲಿನ ಈ ಮಹತ್ವದ ಅಡಚಣೆಯನ್ನು ಇದು ನಿವಾರಿಸುತ್ತದೆ. ಸಿದ್ಧ ಉಡುಪುಗಳು, ಕಾರ್ಪೆಟ್‌ಗಳು, ನೂಲು, ಬಟ್ಟೆಗಳು, ಪಾದರಕ್ಷೆಗಳು, ಬ್ಯಾಗ್‌ಗಳು, ಬೆಲ್ಟ್‌ಗಳು, ಆಟೋಮೊಬೈಲ್ ಘಟಕಗಳು, ಯಂತ್ರೋಪಕರಣಗಳು, ಉಪಕರಣಗಳು, ರತ್ನ ಮತ್ತು ಆಭರಣಗಳು ಹಾಗೂ ಕರಕುಶಲ ವಸ್ತುಗಳಂತಹ ಕಾರ್ಮಿಕ-ಪ್ರಧಾನ ವಲಯಗಳಿಗೆ ಇದು ದೊಡ್ಡ ಉತ್ತೇಜನ ನೀಡಲಿದೆ. ಉದ್ಯೋಗ ಸೃಷ್ಟಿಸುವ ಈ ಕೈಗಾರಿಕೆಗಳು ಭಾರತದ ಎಂಎಸ್‌ಎಂಇ ವ್ಯವಸ್ಥೆಯ ಬೆನ್ನೆಲುಬಾಗಿದ್ದು, ಇವು ಬೆಲೆ ಸ್ಪರ್ಧಾತ್ಮಕತೆ ಮತ್ತು ಮಾರುಕಟ್ಟೆ ಪ್ರವೇಶದ ಪ್ರಯೋಜನವನ್ನು ಪಡೆಯಲಿವೆ. ಇದು ರಫ್ತನ್ನು ಹೆಚ್ಚಿಸುವುದಲ್ಲದೆ, ಉತ್ಪಾದನಾ ಕ್ಲಸ್ಟರ್‌ಗಳು, ಕುಶಲಕರ್ಮಿ ಸಮುದಾಯಗಳು ಮತ್ತು ಸಣ್ಣ ಉದ್ಯಮಗಳಲ್ಲಿ ದೊಡ್ಡ ಪ್ರಮಾಣದ ಉದ್ಯೋಗ ಸೃಷ್ಟಿಗೆ ಕಾರಣವಾಗಲಿದೆ. ಈ ಒಪ್ಪಂದವು 2014ರಲ್ಲಿ ಮೋದಿ ಸರ್ಕಾರ ರಚನೆಯಾದಾಗಿನಿಂದ ಭಾರತದ ವ್ಯಾಪಾರ ನೀತಿಯನ್ನು ಮುನ್ನಡೆಸುತ್ತಿರುವ ವಿಶಾಲ ತತ್ವಶಾಸ್ತ್ರವನ್ನು ಪ್ರತಿಬಿಂಬಿಸುತ್ತದೆ. ಇದು ಒಳಗೊಳ್ಳುವಿಕೆ, ಸಬಲೀಕರಣ ಮತ್ತು ಸಹಭಾಗಿತ್ವದ ಸಮೃದ್ಧಿಯ ತತ್ವದೊಂದಿಗೆ ಆಳವಾಗಿ ಬೇರು ಬಿಟ್ಟಿದೆ. ಇಲ್ಲಿ ವ್ಯಾಪಾರವನ್ನು ಕೇವಲ ಸಂಖ್ಯೆಗಳಾಗಿ ನೋಡದೆ, ರೈತರು, ಕಾರ್ಮಿಕರು, ಮಹಿಳೆಯರು, ಯುವಕರು ಮತ್ತು ಹಿಂದುಳಿದವರಿಗೆ ಪ್ರಯೋಜನ ನೀಡುವ ರಾಷ್ಟ್ರೀಯ ಪರಿವರ್ತನೆಯ ಸಾಧನವಾಗಿ ನೋಡಲಾಗುತ್ತದೆ.

ನಾರೀಶಕ್ತಿ

ಈ ಒಪ್ಪಂದದ ಒಂದು ವಿಶಿಷ್ಟ ಲಕ್ಷಣವೆಂದರೆ, ಇದು ಭಾರತದ ಮೊದಲ ಮಹಿಳಾ ನೇತೃತ್ವದ ಎಫ್‌ಟಿಎ ಆಗಿದೆ. ಸಮಾಲೋಚನೆ ನಡೆಸಿದ ಇಡೀ ತಂಡದಲ್ಲಿ ಬಹುಪಾಲು ಮಹಿಳೆಯರೇ ಆಗಿದ್ದರು. ಇದರಲ್ಲಿ ಮುಖ್ಯ ಸಮಾಲೋಚಕರು, ಉಪಮುಖ್ಯ ಸಮಾಲೋಚಕರು, ವಲಯದ ಮುಖ್ಯಸ್ಥರು ಮತ್ತು ನ್ಯೂಜಿಲೆಂಡ್‌ಗೆ ಭಾರತದ ರಾಯಭಾರಿಯೂ ಮಹಿಳೆಯೇ ಆಗಿದ್ದಾರೆ. ಈ ಮೈಲಿಗಲ್ಲು ಮೋದಿ ಸರ್ಕಾರದಲ್ಲಿ ಮಹಿಳೆಯರಿಗೆ ನೀಡಲಾಗುತ್ತಿರುವ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ. ಇದು ಆಡಳಿತ, ನಾಯಕತ್ವ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಮಹಿಳೆಯರ ಭಾಗವಹಿಸುವಿಕೆಯನ್ನು ಹೆಚ್ಚಿಸುವ ಪ್ರಯತ್ನಗಳೊಂದಿಗೆ ಹೊಂದಿಕೆಯಾಗುತ್ತದೆ ಮತ್ತು ರಾಷ್ಟ್ರೀಯ ಅಭಿವೃದ್ಧಿಯ ಚಾಲಕಶಕ್ತಿಯಾಗಿ ನಾರೀಶಕ್ತಿಯ ಕಲ್ಪನೆಯನ್ನು ಬಲಪಡಿಸುತ್ತದೆ.

> **ರೈತರು, ಯುವಜನತೆ, ಉದ್ಯೋಗ ಮತ್ತು ಅಭಿವೃದ್ಧಿಗಾಗಿ ಮಹಿಳಾ ನೇತೃತ್ವದ ಮೈಲಿಗಲ್ಲು**

ರೈತರಿಗೆ ಮೊದಲ ಆದ್ಯತೆ

ಕೃಷಿ ಉತ್ಪಾದಕತೆಯನ್ನು ಹೆಚ್ಚಿಸಲು ಈ ಎಫ್‌ಟಿಎ ಅನ್ನು ಎಚ್ಚರಿಕೆಯಿಂದ ರೂಪಿಸಲಾಗಿದೆ. ಕಿವಿ, ಸೇಬು ಮತ್ತು ಜೇನುತುಪ್ಪಕ್ಕಾಗಿ ಕೃಷಿ ಉತ್ಪಾದಕತಾ ಕ್ರಿಯಾ ಯೋಜನೆಗಳನ್ನು ನ್ಯೂಜಿಲೆಂಡ್ ಬೆಂಬಲಿಸಲಿದೆ. ಈ ಉಪಕ್ರಮಗಳು ಸುಧಾರಿತ ನೆಟ್ಟ ವಸ್ತುಗಳು, ಸಂಶೋಧನಾ ಸಹಯೋಗ, ಬೆಳೆಗಾರರ ಸಾಮರ್ಥ್ಯ ವೃದ್ಧಿ, ತೋಟದ ನಿರ್ವಹಣಾ ಪದ್ಧತಿಗಳು, ಕೊಯ್ಲಿನ ನಂತರದ ಸುಧಾರಣೆಗಳು, ಆಹಾರ ಸುರಕ್ಷತಾ ವ್ಯವಸ್ಥೆಗಳು ಮತ್ತು ಉತ್ಕೃಷ್ಟತಾ ಕೇಂದ್ರಗಳ (ಸೆಂಟರ್ ಆಫ್ ಎಕ್ಸಲೆನ್ಸ್) ಸ್ಥಾಪನೆಯನ್ನು ಒಳಗೊಂಡಿವೆ. ಸೇಬು ಬೆಳೆಗಾರರು ಮತ್ತು ಸುಸ್ಥಿರ ಜೇನು ಸಾಕಣೆಗಾಗಿ ಕೈಗೊಳ್ಳುವ ಈ ಯೋಜನೆಗಳು ಉತ್ಪಾದನೆ ಮತ್ತು ಗುಣಮಟ್ಟವನ್ನು ಹೆಚ್ಚಿಸಲಿವೆ, ಇದು ರೈತರ ಸಮೃದ್ಧಿಯನ್ನು ಹೆಚ್ಚಿಸುತ್ತದೆ. ಇದೇ ವೇಳೆ, ಭಾರತವು ತನ್ನ ಪ್ರಮುಖ ಕೃಷಿ ಹಿತಾಸಕ್ತಿಗಳನ್ನು ದೃಢವಾಗಿ ರಕ್ಷಿಸಿದೆ. ಡೈರಿ ಉತ್ಪನ್ನಗಳು (ಹಾಲು, ಕ್ರೀಮ್, ಹಾಲಿನ ರಸ, ಮೊಸರು ಮತ್ತು ಚೀಸ್ ಸೇರಿದಂತೆ), ಈರುಳ್ಳಿ, ಚನಾ, ಬಟಾಣಿ, ಜೋಳ, ಬಾದಾಮಿ, ಸಕ್ಕರೆ ಮತ್ತು ಕೆಲವು ತೈಲಗಳಂತಹ ಸೂಕ್ಷ್ಮ ಉತ್ಪನ್ನಗಳನ್ನು ಸುಂಕ ದರಿಯಾಯಿತಿಗಳಿಂದ ಹೊರಗಿಡಲಾಗಿದೆ. ಇದರಿಂದ ದೇಶೀಯ ರೈತರು ವಿದೇಶಿ ಆಮದು ಸ್ಪರ್ಧೆಯಿಂದ ಸುರಕ್ಷಿತವಾಗಿರುತ್ತಾರೆ. ರೈತರು ಮತ್ತು ಮೀನುಗಾರರ ಹಿತಾಸಕ್ತಿಗಳನ್ನು ರಕ್ಷಿಸುವುದು ಭಾರತದ ಎಲ್ಲಾ ವ್ಯಾಪಾರ ಸಂಧಾನಗಳ ಕೇಂದ್ರಬಿಂದುವಾಗಿದೆ.

ಯುವಜನತೆ ಮತ್ತು ವೃತ್ತಿಪರರು

ವಿದ್ಯಾರ್ಥಿಗಳು ಮತ್ತು ನುರಿತ ವೃತ್ತಿಪರರಿಗೆ ಹೆಚ್ಚಿನ ಚಲನಶೀಲತೆಯು ಈ ಒಪ್ಪಂದದ ಪ್ರಮುಖ ಆಧಾರಸ್ತಂಭವಾಗಿದೆ, ಇದು ಭಾರತದ ಯುವಜನತೆಗೆ ಹೊಸ ಜಾಗತಿಕ ಅವಕಾಶಗಳನ್ನು ಸೃಷ್ಟಿಸುತ್ತದೆ.

ಯಾವುದೇ ದ್ವಿಪಕ್ಷೀಯ ವ್ಯಾಪಾರ ಒಪ್ಪಂದದಲ್ಲಿ ಮೊದಲ ಬಾರಿಗೆ, ನ್ಯೂಜಿಲೆಂಡ್ ಭಾರತೀಯ ವಿದ್ಯಾರ್ಥಿಗಳ ಚಲನಶೀಲತೆ ಮತ್ತು ಓದಿನ ನಂತರದ ಕೆಲಸದ ಅವಕಾಶಗಳಿಗಾಗಿ ವ್ಯವಸ್ಥಿತ ಚೌಕಟ್ಟನ್ನು ಪರಿಚಯಿಸಿದೆ. ಭಾರತೀಯ ವಿದ್ಯಾರ್ಥಿಗಳಿಗೆ ಯಾವುದೇ ಸಂಖ್ಯೆಯ ಮಿತಿಗಳಿಲ್ಲ (ನ್ಯೂಮೆರಿಕಲ್ ಕ್ಯಾಪ್ಸ್). ವಿದ್ಯಾರ್ಥಿಗಳು ಅಧ್ಯಯನದ ಸಮಯದಲ್ಲಿ ವಾರಕ್ಕೆ ಕನಿಷ್ಠ 20 ಗಂಟೆಗಳ ಕಾಲ ಕೆಲಸ ಮಾಡಲು ಅನುಮತಿಸಲಾಗುತ್ತದೆ. ವಿದ್ಯಾಭ್ಯಾಸದ ನಂತರದ ಕೆಲಸದ ಹಕ್ಕುಗಳು ಸ್ಟೆಮ್ (ಸ್ಟೆಮ್) ಪದವೀಧರರಿಗೆ ಮೂರು ವರ್ಷಗಳವರೆಗೆ ಮತ್ತು ಡಾಕ್ಟರೇಟ್ ವಿದ್ವಾಂಸರಿಗೆ ನಾಲ್ಕು ವರ್ಷಗಳವರೆಗೆ ವಿಸ್ತರಿಸಲ್ಪಡುತ್ತವೆ.

ಐಟಿ, ಎಂಜಿನಿಯರಿಂಗ್, ಆರೋಗ್ಯ ಸೇವೆ, ಶಿಕ್ಷಣ, ನಿರ್ಮಾಣ ಮತ್ತು ಯೋಗ, ಆಯುರ್ವೇದ, ಭಾರತೀಯ ಪಾಕ ಪದ್ಧತಿ ಹಾಗೂ ಸಂಗೀತ ಶಿಕ್ಷಣದಂತಹ ಸಾಂಪ್ರದಾಯಿಕ ಕ್ಷೇತ್ರಗಳಲ್ಲಿ 5,000 ಭಾರತೀಯ ವೃತ್ತಿಪರರಿಗೆ ಯಾವುದೇ ಸಮಯದಲ್ಲಿ ಮೂರು ವರ್ಷಗಳವರೆಗೆ ವಾಸ್ತವ್ಯ ಹೂಡಲು ತಾತ್ಕಾಲಿಕ ಉದ್ಯೋಗ ಪ್ರವೇಶ ವೀಸಾ (ಟೆಂಪರರಿ ಎಂಪ್ಲಾಯ್ ಮೆಂಟ್ ಎಂಟ್ರಿ ವೀಸಾ) ಮಾರ್ಗವನ್ನು ಈ ಒಪ್ಪಂದವು ಒದಗಿಸುತ್ತದೆ. ಇದರ ಜೊತೆಗೆ, ವರ್ಕಿಂಗ್ ಹಾಲಿಡೇ ವೀಸಾ ಯೋಜನೆ ವಾರ್ಷಿಕವಾಗಿ 1,000 ಯುವ ಭಾರತೀಯರಿಗೆ ನ್ಯೂಜಿಲೆಂಡ್‌ನಲ್ಲಿ 12 ತಿಂಗಳವರೆಗೆ ವಾಸಿಸಲು ಮತ್ತು ಕೆಲಸ ಮಾಡಲು ಅವಕಾಶ ನೀಡುತ್ತದೆ, ಇದು ಸಾಂಸ್ಕೃತಿಕ ವಿನಿಮಯವನ್ನು ಬಲಪಡಿಸುತ್ತದೆ ಮತ್ತು ಜಾಗತಿಕ ಅನುಭವವನ್ನು ಹೆಚ್ಚಿಸುತ್ತದೆ.

ಹೂಡಿಕೆ ಮತ್ತು ಆವಿಷ್ಕಾರ

ಭಾರತದಲ್ಲಿ 20 ಬಿಲಿಯನ್ ಡಾಲರ್ ಹೂಡಿಕೆಗೆ ನ್ಯೂಜಿಲೆಂಡ್ ಬದ್ಧವಾಗಿದೆ. ಇದು ಉತ್ಪಾದನೆ, ಮೂಲಸೌಕರ್ಯ, ನವೀಕರಿಸಬಹುದಾದ ಇಂಧನ, ಡಿಜಿಟಲ್ ಸೇವೆಗಳು, ನಾವೀನ್ಯತಾ ಪರಿಸರ ವ್ಯವಸ್ಥೆಗಳು ಮತ್ತು ಉದ್ಯೋಗ ಸೃಷ್ಟಿಗೆ ಬೆಂಬಲ ನೀಡುವ ನಿರೀಕ್ಷೆಯಿದೆ.

ಹೊಣೆಗಾರಿಕೆಯನ್ನು ಖಚಿತಪಡಿಸಿಕೊಳ್ಳಲು, ಹೂಡಿಕೆಯ ಬದ್ಧತೆಗಳು ಕಡಿಮೆಯಾದರೆ ಭಾರತವು ಸುಧಾರಣಾ ಕ್ರಮಗಳನ್ನು ತೆಗೆದುಕೊಳ್ಳಲು ಅನುವು ಮಾಡಿಕೊಡುವ ರೀಬ್ಯಾಲೆನ್ಸಿಂಗ್ ಏ ಕ್ಲಾಸ್ ಅನ್ನು ಇದರಲ್ಲಿ ಸೇರಿಸಲಾಗಿದೆ. ಸಂಶೋಧನೆ, ತಂತ್ರಜ್ಞಾನ ವರ್ಗಾವಣೆ, ಕೌಶಲ್ಯ ಅಭಿವೃದ್ಧಿ ಹಾಗೂ ನಾವೀನ್ಯತೆ-ಆಧಾರಿತ ವಲಯಗಳಲ್ಲಿ ಸಹಯೋಗವನ್ನು ಈ ಒಪ್ಪಂದವು ಪ್ರೋತ್ಸಾಹಿಸುತ್ತದೆ ಮತ್ತು ವ್ಯಾಪಾರವು ದೀರ್ಘಕಾಲೀನ ಅಭಿವೃದ್ಧಿ ಪಾಲುದಾರಿಕೆಗಳಿಂದ ಪೂರಕವಾಗಿದೆ ಎಂಬುದನ್ನು ಖಚಿತಪಡಿಸುತ್ತದೆ.

ವ್ಯಾಪಾರ ತಂತ್ರ

ಭಾರತ-ನ್ಯೂಜಿಲೆಂಡ್ ಎಫ್‌ಟಿಎಯು, ದೇಶೀಯ ಸೂಕ್ಷ್ಮತೆಗಳನ್ನು ಗೌರವಿಸುತ್ತಾ, ಭಾರತದ ಕಾರ್ಮಿಕ-ಪ್ರಧಾನ ವಲಯಗಳಿಗೆ ಅರ್ಥಪೂರ್ಣ ಮಾರುಕಟ್ಟೆ ಪ್ರವೇಶವನ್ನು ಮುಕ್ತಗೊಳಿಸುವ ಅಭಿವೃದ್ಧಿ ಹೊಂದಿದ ಆರ್ಥಿಕತೆಗಳೊಂದಿಗೆ ಪಾಲುದಾರಿಕೆ ಹೊಂದುವ ಸ್ಪಷ್ಟ ಮತ್ತು ವಿಶ್ವಾಸಾರ್ಹ ವ್ಯಾಪಾರ ತಂತ್ರವನ್ನು ಪ್ರತಿಬಿಂಬಿಸುತ್ತದೆ. ಭಾರತವು ಇಂದು ಶಕ್ತಿ ಮತ್ತು ವಿಶ್ವಾಸಾರ್ಹತೆಯ ಸ್ಥಾನದಿಂದ ಸಂಧಾನ ನಡೆಸುತ್ತಿದೆ. ವ್ಯಾಪಾರ ಒಪ್ಪಂದಗಳು ಸಾಕಷ್ಟು ರಕ್ಷಣೆಗಳಿಲ್ಲದೆ ಸೂಕ್ಷ್ಮ ವಲಯಗಳನ್ನು ಅಸುರಕ್ಷಿತಗೊಳಿಸುತ್ತಿದ್ದ ಹಿಂದಿನ ದಶಕಗಳಿಗಿಂತ ಭಿನ್ನವಾಗಿ, ಈಗಿನ ಮಾತುಕತೆಗಳು ಕೃಷಿ, ಡೈರಿ ಮತ್ತು ಇತರ ಸೂಕ್ಷ್ಮ ಕ್ಷೇತ್ರಗಳು ಸಂಪೂರ್ಣವಾಗಿ ರಕ್ಷಿತವಾಗಿರುವುದನ್ನು ಖಚಿತಪಡಿಸುತ್ತವೆ.ಮುಂದುವರಿದ ಆರ್ಥಿಕತೆಗಳೊಂದಿಗೆ ಭಾರತವು ತನ್ನ ಸಂಬಂಧವನ್ನು ಮತ್ತಷ್ಟು ಬಲಪಡಿಸುತ್ತಿದ್ದಂತೆ, ಅಭಿವೃದ್ಧಿ ಹೊಂದಿದ ಪ್ರಪಂಚದೊಂದಿಗಿನ ಈ ವ್ಯಾಪಾರ ಒಪ್ಪಂದಗಳು, ವ್ಯಾಪಾರ ನೀತಿಯನ್ನು ರಾಷ್ಟ್ರೀಯ ಅಭಿವೃದ್ಧಿ ಗುರಿಗಳೊಂದಿಗೆ ಹೇಗೆ ಜೋಡಿಸಬಹುದು ಎಂಬುದಕ್ಕೆ ಒಂದು ಪ್ರಬಲ ಉದಾಹರಣೆಯಾಗಿವೆ, ಮತ್ತು ವಿಕಸಿತ ಭಾರತ 2047ರ ಹಾದಿಯಲ್ಲಿ ಒಳಗೊಳ್ಳುವ ಬೆಳವಣಿಗೆ ಹಾಗೂ ದೀರ್ಘಕಾಲೀನ ಆರ್ಥಿಕ ಸ್ಥಿತಿಸ್ಥಾಪಕತ್ವವನ್ನು ಇವು ಖಚಿತಪಡಿಸುತ್ತವೆ.

(ಲೇಖಕರು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವರು)

ಉಳುಮೆಗೂ ಸಾಗಾಟಕ್ಕೂ ಹೆಸರುವಾಸಿಯಾದ ಖಿಲಾರಿ ದನಗಳು



▪ ಕೆ.ಎನ್. ಶೈಲೇಶ್ ಹೊಳ್ಳ
shyleshholla@gmail.com

ಕರ್ನಾಟಕದಲ್ಲಿ ಹೆಸರುವಾಸಿಯಾದ ಮತ್ತು ಹೆಚ್ಚಾಗಿ ಉತ್ತರ ಕರ್ನಾಟಕದಲ್ಲಿ ಚಿರಪರಿಚಿತ ಹಾಗೂ ಜನಪ್ರಿಯವಾದ ದನಗಳೆಂದರೆ ಖಿಲಾರಿ ದನಗಳು. ಈ ಖಿಲಾರಿ ಜಾತಿಯ ದನಗಳ ಆಕಾರ, ಮೈಕಟ್ಟು, ಚಪಲತೆ, ಹುರುಪು, ಕಷ್ಟ ಸಹಿಷ್ಣುತೆ ಮತ್ತು ಸಿಟ್ಟು ಹೆಚ್ಚಿನಂಶ ಅಮೃತಮಹಲ್ ದನಗಳನ್ನು ಹೋಲುತ್ತವೆ. ಆದರೆ ಈ ಜಾತಿಯ ದನಗಳು ಅಮೃತಮಹಲ್ ಜಾತಿಯ ದನಗಳಂತೆ ಶುದ್ಧ ಜಾತಿಯ ಒಂದೇ ತಳಿಯ ದನಗಳಲ್ಲ. ಈ ದನಗಳೂ ಅಮೃತಮಹಲ್ ದನಗಳಿಂದ ಉತ್ಪನ್ನವಾದ ಒಂದು ಉಪಜಾತಿ ಮತ್ತು ಇವುಗಳಲ್ಲಿ ಉತ್ತರ ಭಾರತದಲ್ಲಿಯ ದೊಡ್ಡ ಬಿಳಿಯ ಜಾತಿಯ ದನಗಳ ಮಿಶ್ರಣವು ಕಂಡುಬರುತ್ತದೆ ಎಂಬುದಾಗಿ ಕರ್ನಲ್ ಸಾ. ಆರ್ಥರ್ ಆಲಿವರ್ ತನ್ನ 'ಭಾರತದಲ್ಲಿಯ ಕೆಲವು ಮುಖ್ಯ ದನಗಳ ಸಂಕ್ಷಿಪ್ತ ಚರಿತ್ರೆ' ಎಂಬ ಪುಸ್ತಕದಲ್ಲಿ ದಾಖಲಿಸಿದ್ದಾನೆ. ಹಾಗೆಯೇ ಜಿ. ಮೊಲಿಸನ್ ಎಂಬಾತನು 'ಮುಂಬಯಿ ಇಲಾಖೆಯಲ್ಲಿಯ ದನಗಳ ತಳಿಗಳು' ಎಂಬ ಪುಸ್ತಕದಲ್ಲಿ, ನಾಸಿಕ್ ಜಿಲ್ಲೆಯಲ್ಲಿ ಸುಮಾರು 19ನೇ ಶತಮಾನದ ಆದಿ ಭಾಗದಲ್ಲಿ ಬರಗಾಲ ಬಿದ್ದಾಗ ದನಗಳ ಅಭಾವ ಉಂಟಾಗಲು ಆಗ ಗೌಡರ ದನಗರ್ ಎಂಬಾತನು ಮೈಸೂರು ದನಗಳ ಒಂದು ಹಿಂಡನ್ನು ನಾಗಪುರ ಪ್ರದೇಶಕ್ಕೆ ತೆಗೆದುಕೊಂಡು ಹೋದನೆಂದೂ, ಈ ಮೈಸೂರು ದನಗಳು ಅಲ್ಲಿಯ ಸ್ಥಳೀಯ ದನಗಳೊಡನೆ ಕೂಡಿ ಹುಟ್ಟಿದ ದನಗಳೇ ಖಿಲಾರಿ ದನಗಳೆಂದು ಹೆಸರಾದವು ಎಂಬುದಾಗಿ ಬರೆದಿರುವುದು ದಾಖಲಾಗಿದೆ. ಮುಂಬಯಿ ಇಲಾಖೆಯಲ್ಲಿ ಜಾನುವಾರು ತಜ್ಞರಾಗಿದ್ದ ಈ.ಜೆ. ಬ್ರೂಯಿನ್ ಈ ಖಿಲಾರಿ ಜಾತಿಯ ದನಗಳಲ್ಲಿಯೂ ಸಹ ಅಮೃತಮಹಲ್, ಆಟಪಾಡಿಮಹಲ್, ಮಸ್ವಾಡಖಿಲಾರ, ತಪತಿಖಿಲಾರ, ಜತ್‌ಖಿಲಾರ ಮತ್ತು ನಕಲಿಖಿಲಾರ ಎಂಬೆಲ್ಲಾ ಜಾತಿಯ ತಳಿಗಳು ಸಮಾವೇಶವಾಗಿರುತ್ತವೆ. ನಾವು ಇಂದು ಈ ದನಗಳನ್ನು ಮಾಸವಾಡ, ನಾಗೋಟಿ, ಜತ್, ಚಿಂಚಲಿ, ವಿಜಾಪುರ, ಸೊಲ್ಲಾಪುರ, ಅಥಣಿ, ಜಮಖಿಂಡಿ, ರಸುಂಡಿ, ಪಂಢರಪುರಗಳಲ್ಲಿ ಸೇರುವ ದನಗಳ ವಾರ್ಷಿಕ ಜಾತ್ರೆಯಲ್ಲಿ ಕಾಣಬಹುದಾಗಿದೆ ಎಂಬುದಾಗಿ ಹೇಳಿರುವುದು ದಾಖಲಾಗಿದೆ.

ಬಹಳ ಸೂಕ್ಷ್ಮವಾಗಿ ಪರಿಶೀಲಿಸಿ ನೋಡಿದಾಗ ಖಿಲಾರಿ ದನಗಳು ಬಹುಮಟ್ಟಿಗೆ ಎಲ್ಲಾ ವಿಧದಲ್ಲಿ ಅಮೃತಮಹಲ್ ದನಗಳನ್ನು ಹೋಲುತ್ತವೆ. ಇವುಗಳ ತಲೆ, ಮುಖ ಮತ್ತು ಕೊಂಬು, ಮುಖದ ಭಾಗ, ಕಣ್ಣುಗಳ ಮಧ್ಯದಿಂದ ಮೂಗಿನ ತುದಿಯವರೆಗೆ ಅಮೃತಮಹಲ್ ದನಗಳಿಗಿಂತ ಸ್ವಲ್ಪ ಉದ್ದವಾಗಿರುತ್ತದೆ. ಆದರೆ ಹಳ್ಳಿಕಾರ್ ದನಗಳಷ್ಟು ಉದ್ದವಾಗಿ ನೀಳಾಗಿರದೆ, ಸ್ವಲ್ಪ ಮೇಲಿಂದ ಕೆಳಗೆ ಒತ್ತಿದಂತೆ ಇರುತ್ತದೆ. ಖಿಲಾರಿ ದನಗಳ ಕುತ್ತಿಗೆ ಅಮೃತಮಹಲ್ ದನಗಳಿಗಿಂತ ಸ್ವಲ್ಪ ಗಿಡ್ಡದಾಗಿ ದಪ್ಪವಾಗಿರುತ್ತದೆ ಮತ್ತು ಕುತ್ತಿಗೆಯ ಮೇಲಿನ ಚರ್ಮವು ಬಿಗಿಯಾಗಿ ನಯವಾಗಿರುತ್ತದೆ. ಈ ದನಗಳ ಹಣೆ ಅಮೃತಮಹಲ್ ದನಗಳ ಹಣೆಯಂತೆ ಚಪ್ಪಟೆಯಾಗಿ ತಟ್ಟೆಯಂತಿರದೆ, ಹಳ್ಳಿಕಾರ್ ದನಗಳಂತೆ ಎರಡೂ ಕಣ್ಣಿನ ಮೇಲೆ ಉಬ್ಬಿಕೊಂಡು ಮಧ್ಯದಲ್ಲಿ ತಗ್ಗಾಗಿ, ಸೀಳು ಗೆರೆಯಿಂದ ಕೂಡಿರುತ್ತದೆ. ಈ ದನಗಳ ಮೈಬಣ್ಣ ಬಿಳಿಯ ಬಣ್ಣದಿಂದ ಕೂಡಿದ್ದರೂ ಕುತ್ತಿಗೆಯು ಕಿತ್ತಳೆ ಬಣ್ಣದಿಂದ ಕೂಡಿರುತ್ತದೆ. ಬೂದಿ ಬಣ್ಣದ ದನಗಳಲ್ಲಿ ಕಂದು ಬಣ್ಣದ ಛಾಯೆ ಮಿಶ್ರಿತವಾಗಿರುತ್ತದೆ. ಇವುಗಳಲ್ಲಿ ತೊಡೆಯ ಹಿಂಭಾಗವು ಬಿಲ್ಲಿನಾಕಾರವಾಗಿದ್ದು, ಬೆನ್ನಿನ ಡುಬ್ಬವು ಹೆಚ್ಚು ದಪ್ಪವಾಗಿ ದೊಡ್ಡದಾಗಿರುತ್ತದೆ. ಮೂಗಿನ ಸಿಂಬೆ ಮತ್ತು ಕಣ್ಣುಗಳ ಪೊರೆಯು ಕೆಂಪು ಬಣ್ಣದಾಗಿರುತ್ತದೆ. ಒಟ್ಟಿನಲ್ಲಿ ಹೇಳುವುದಾದರೆ ಖಿಲಾರಿ ಮತ್ತು ಅಮೃತಮಹಲ್ ದನಗಳು ಒಂದಕ್ಕೊಂದು ನೂರಾರು ವರ್ಷಗಳಿಂದ ಬೆರೆತು ಸಂವರ್ಧನೆ ಹೊಂದಿರುವುದರ ಪರಿಣಾಮವಾಗಿ ಅವುಗಳನ್ನು ಪ್ರತ್ಯೇಕವಾಗಿ ಗುರುತಿಸಿ ಹೇಳುವುದು ಸುಲಭ ಸಾಧ್ಯವಲ್ಲ. ಖಿಲಾರಿ ದನಗಳು ಎಲ್ಲಿ ಪ್ರಾರಂಭವಾಗುವವು ಮತ್ತು ಅಮೃತಮಹಲ್ ದನಗಳು ಎಲ್ಲಿಗೆ ಮುಗಿಯುವವು ಎಂದು ಹೇಳುವುದು ಸಾಧ್ಯವೇ ಇಲ್ಲವೆಂಬುದು ತಜ್ಞರ ಅಭಿಪ್ರಾಯ. ಚಿರಪರಿಚಿತವಾದ ಹೆಚ್ಚು ಅನುಭವವುಳ್ಳವರು ಮಾತ್ರ ಇವುಗಳನ್ನು ಗುರುತಿಸಲು ಸಾಧ್ಯವಾಗಬಹುದು ಎನ್ನಲಾಗುತ್ತದೆ.

ಇವು ಹೂಡುವುದಕ್ಕೂ ಮತ್ತು ತೀವ್ರವಾಗಿ ನಡೆಯುವುದಕ್ಕೂ ಅತ್ಯಂತ ಯೋಗ್ಯವಾದವುಗಳಾಗಿವೆ. ಇವುಗಳ ಕೋಡುಗಳು ಬುಡದಲ್ಲಿ ಒಂದಕ್ಕೊಂದು ಸಮೀಪವಾಗಿದ್ದು, ತುದಿಯಲ್ಲಿ ಅಗಲವಾಗಿದ್ದು ಚೂಪಾಗಿರುತ್ತವೆ. ಇದರ ಮುಖವು ಹಳ್ಳಿಕಾರ ದನಗಳಷ್ಟು ಉದ್ದವಾಗಿರದೆ ಸ್ವಲ್ಪ ಗಿಡ್ಡವಾಗಿರುತ್ತದೆ. ಈ ದನಗಳು ಬಹಳ ಉಗ್ರ ಸ್ವಭಾವದವುಗಳಾಗಿದ್ದು, ಇವುಗಳನ್ನು ಹಿಡಿತದಲ್ಲಿ ತರುವುದು ಸ್ವಲ್ಪ ಕಠಿಣವಾದರೂ ಉತ್ತಮ ಕೆಲಸ ಮಾಡುವ ಪ್ರಾಣಿಗಳಾಗಿವೆ. ಇವುಗಳ ಕಣ್ಣುಗಳು ಕಾಂತಿಯುತವಾಗಿದ್ದು ಎದ್ದು ಕಾಣುತ್ತವೆ. ಸ್ವಭಾವದಿಂದ ಇವು ಬಹಳ ಸಿಟ್ಟಿನ ಮತ್ತು ಹುರುಪಿನ ದನಗಳಾಗಿರುತ್ತವೆ. ಕಿವಿಗಳು ಸಣ್ಣದಾಗಿದ್ದು ತುದಿಯಲ್ಲಿ ಚೂಪಾಗಿರುತ್ತವೆ. ಕಾಲುಗಳು ಸ್ನಾಯುಗಳಿಂದ ಕೂಡಿ ಓಟಕ್ಕೆ ಅನುಕೂಲವಾಗಿರುತ್ತವೆ. ಗೊರಸು ಕಪ್ಪಾಗಿ ಗಟ್ಟಿಯಾಗಿರುತ್ತವೆ. ಬಾಲವು ಉದ್ದವಾಗಿ ಅಂದವಾಗಿರುತ್ತದೆ. ಹೋರಿಗಳ ಇಣಿ ಅಥವಾ ಡುಬ್ಬವು 50 ಅಂಗುಲ ಉದ್ದವಿರುತ್ತದೆ. ಎದೆಯ ಸುತ್ತಳತೆ 60ರಿಂದ 80 ಅಂಗುಲವಿದ್ದು, ಈ ರೀತಿಯ ಎದೆಯ ಬೆಳವಣಿಗೆಯು ಉತ್ತಮ ಹೂಡುವ ದನಗಳ ಲಕ್ಷಣವಾಗಿರುತ್ತದೆ. ಆಕಳುಗಳ ಇಣಿಯು 45ರಿಂದ 48 ಅಂಗುಲ ಉದ್ದವಿರುತ್ತದೆ. ಹೋರಿಗಳು 400ರಿಂದ 500 ಕೆ.ಜಿ. ತೂಕವಿರುತ್ತವೆ. ಆಕಳುಗಳು 350ರಿಂದ 400 ಕೆ.ಜಿ. ಸಾಮಾನ್ಯವಾಗಿ ತೂಗುತ್ತವೆ.

ಈ ತಳಿಯ ಆಕಳು ಕಡಿಮೆ ಹಾಲನ್ನು ನೀಡಿದರೂ ಹಾಲಿನ ಗುಣಮಟ್ಟ ಶ್ರೇಷ್ಠವಾಗಿರುತ್ತದೆ. ಇಂದಿಗೂ ಈ ದನಗಳು ಮಳೆ, ಗಾಳಿ, ಬಿಸಿಲಿನಲ್ಲಿಯೇ ತಿರುಗಾಡಿಕೊಂಡು ಬಯಲಿನಲ್ಲಿಯೇ ವಾಸವಾಗಿರುವ ಚಿತ್ರಣ ಸಾಮಾನ್ಯವಾಗಿ ಕಂಡುಬರುತ್ತದೆ. ಇವುಗಳು ಹೆಚ್ಚು ಶ್ರಮ ಜೀವಿಗಳಾಗಿದ್ದು, ಇವುಗಳಲ್ಲಿನ ಹೆಣ್ಣುಗಳು ಎರಡು ವರ್ಷಕ್ಕೊಮ್ಮೆ ಕರು ಹಾಕುತ್ತವೆ. ಗಂಡು ಕರುಗಳಿಗೆ ಇಂದಿಗೂ ಬೇಡಿಕೆ ಹೆಚ್ಚಿದ್ದು, ಸ್ವಭಾವದಲ್ಲಿ ಸಾಧುವಾಗಿರುತ್ತವೆ. ದನಗಳು ಮುಖ್ಯವಾಗಿ ಹೊಲದ ಮತ್ತು ಸಾರಿಗೆ ಕೆಲಸಗಳಿಗೆ ಬಹಳ ಉತ್ತಮವಾದುವುಗಳಾಗಿವೆ. ಇದಕ್ಕಾಗಿ ಇವು ದಕ್ಷಿಣ ಮಹಾರಾಷ್ಟ್ರ ಭಾಗದಲ್ಲಿ ಮತ್ತು ಉತ್ತರ ಕರ್ನಾಟಕ ಭಾಗಗಳಲ್ಲಿ ಹೆಚ್ಚು ಜನಪ್ರಿಯತೆಯನ್ನು ಗಳಿಸಿಕೊಂಡಿವೆ.

17ನೇ ಶತಮಾನದಲ್ಲಿ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಈ ಖಿಲಾರಿ ದನಗಳು ಉತ್ತಮ ಸ್ಥಿತಿಯಲ್ಲಿದ್ದವು ಎಂಬುದು ಕುಮಾರವ್ಯಾಸನ ಗದುಗಿನ ಭಾರತದಲ್ಲಿನ ಪದ್ಯಗಳಿಂದ ತಿಳಿದುಬರುತ್ತದೆ. ಈ ಜಾತಿಯ ದನಗಳು ದಕ್ಷಿಣ ಮಹಾರಾಷ್ಟ್ರದಲ್ಲಿ ಹೆಚ್ಚಾಗಿ ಕಂಡುಬರುವುದರಿಂದ ಇದಕ್ಕೆ ಖಿಲಾರ ಎಂದು ಹೆಸರು ಬಂದಿದೆ. ಖಿಲಾರ ಎಂದರೆ ದಕ್ಷಿಣ ದಿಕ್ಕು ಎಂದರ್ಥ. ಈ ದನಗಳ ಮೂಲಸ್ಥಾನ ಸಾತಪುಡ ಬೆಟ್ಟದ ಸುತ್ತಮುತ್ತಲಿನ ಹುಲ್ಲುಗಾವಲುಗಳಿಂದ ಕೂಡಿರುವ ಕಂದರ ಪ್ರದೇಶ ಮತ್ತು ಉತ್ತರ ಭಾಗ ಹಾಗೂ ಇಂದೂರಿನ ಸುತ್ತಮುತ್ತಲಿನ ಭಾಗಗಳಾಗಿವೆ. ಇವುಗಳ ಹಿಂಡನ್ನು ಖಿಲಾರಿ, ಧನಗರ್ ಮತ್ತು ಬಂಜಾರಿಗಳೆಂಬ ದನಗಾರರು ಸಾಕಿ ಬೆಳೆಸಿದ್ದು ತಿಳಿದುಬರುತ್ತದೆ. ತಮ್ಮ ದನಗಳ ಹಿಂಡನ್ನು ಗುಡ್ಡಗಾಡು ಪ್ರದೇಶಗಳಲ್ಲಿ ಮೇಯಿಸುವುದು, ಸಂವರ್ಧನೆ ಮಾಡಿ ಹಿಂಡು ಬೆಳೆಸುವುದು ಮತ್ತು ಹೋರಿ ಕರುಗಳನ್ನು ಮಾರಾಟ ಮಾಡುವುದನ್ನು ಖಿಲಾರಿ ದನಗಾರರು ತಮ್ಮ ಜೀವನದ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದರು. ಧನಗರ್ ಮತ್ತು ಬಂಜಾರಿಗಳೆಂಬ ದನಗಾರರು ಅಲ್ಪ ಸ್ವಲ್ಪ ಜಮೀನು ಸಾಗುವಳಿ ಮಾಡಿಕೊಂಡು ತಮ್ಮ ಒಕ್ಕಲುತನದ ಉದ್ಯೋಗದ ಜೊತೆಗೆ ಆರ್ಥಿಕ ಸ್ಥಿತಿಯನ್ನು ಉತ್ತಮಗೊಳಿಸುವುದಕ್ಕಾಗಿ ಪೂರಕ ಉದ್ಯೋಗವೆಂದು ಈ ಖಿಲಾರಿ ದನಗಳ ಹಿಂಡನ್ನು ಸಾಕಿ ಬೆಳೆಸಿಕೊಂಡಿದ್ದರು. ಒಬ್ಬೊಬ್ಬ ಜೋಪಾಸನೆಗಾರನ ಬಳಿ ಸುಮಾರು 25ರಿಂದ 200 ದನಗಳ ಹಿಂಡು ಇದ್ದದ್ದು ದಾಖಲೆಗಳಿಂದ ಸ್ಪಷ್ಟವಾಗುತ್ತದೆ. ಸಾಮಾನ್ಯವಾಗಿ ಇವರುಗಳಲ್ಲಿ 100 ದನಗಳ ಹಿಂಡಿನ ಗುಂಪನ್ನು ಇಬ್ಬರು ಕಾಯ್ದು ಮೇಯಿಸುತ್ತಿದ್ದರು. ಉತ್ತಮ ಪೀಳಿಗೆಯ ಉತ್ಪಾದನೆಗಾಗಿ ತಮ್ಮ ಆಕಳುಗಳಿಗೆ ಶ್ರೇಷ್ಠ ಜಾತಿಯ ಉತ್ತಮ ಹೋರಿಗಳಿಂದ ಸಂಕರಿಸುವುದರಲ್ಲಿ ವಿಶೇಷ ಆಸಕ್ತಿ ಉಳ್ಳವರಾಗಿದ್ದರು. ಅದಕ್ಕಾಗಿ ತಮ್ಮ ಹಿಂಡಿನಲ್ಲಿಯೇ ಬೀಜಕ್ಕಾಗಿ ಆರಿಸಿದ ಉತ್ತಮವಾದ ಹೋರಿಗಳನ್ನು ತಳಿ ಸಂವರ್ಧನೆಗಾಗಿ ಸಾಕಿಕೊಂಡಿದ್ದರು ಮತ್ತು ತಮ್ಮಲ್ಲಿನ ಹೋರಿ ಕರುಗಳನ್ನು ಹೆಚ್ಚು ಪ್ರೀತಿಯಿಂದ ಪಾಲಿಸಿ ಪೋಷಿಸುತ್ತಿದ್ದರು. ಗುಡ್ಡಗಾಡು ಪ್ರದೇಶಗಳ ಹತ್ತಿರವೇ ಗುಡಿಸಲುಗಳನ್ನು ಹಾಕಿಕೊಂಡು ಈ ದನಗಳ ಹಿಂಡಿನೊಂದಿಗೆ ವಾಸವಾಗಿರುತ್ತಿದ್ದರು. ರಾತ್ರಿ ದನಗಳನ್ನು ಕೂಡಿ ಹಾಕಿ ಬೆಳಗಾದ ಕೂಡಲೇ ಅವುಗಳನ್ನು ಮೇಯಲು ಹೊರಗೆ ಬಿಡುತ್ತಿದ್ದರು. ಹುಲ್ಲು ಕಡಿಮೆಯಾದಂತೆ ಗುಡ್ಡಗಾಡುಗಳಲ್ಲಿ ಹುಲ್ಲನ್ನು ಹುಡುಕಿಕೊಂಡು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ದನಗಳೊಂದಿಗೆ ವಲಸೆ ಹೋಗುತ್ತಿದ್ದರು. ಹೀಗೆ ತಿರುಗಾಡುತ್ತಿದ್ದರಿಂದಲೇ ಈ ದನಗಳ ಕಾಲುಗಳು ಬಲವಾದ ಸ್ನಾಯುಗಳಿಂದ ಕೂಡಿದ್ದು, ಗೊರಸುಗಳು ಕಬ್ಬಿಣದಂತೆ ಗಟ್ಟಿಯಾಗಿರುತ್ತಿದ್ದವು. ಇದೇ ಕಾರಣಕ್ಕೆ ಇರಬೇಕು ಇಂದಿಗೂ ಇವುಗಳ ಕಾಲುಗಳು ಮತ್ತು ಗೊರಸುಗಳು ಅತಿ ಗಟ್ಟಿಯಾಗಿ ಎಂತಹ ನೆಲದಲ್ಲೂ ಸಾಗಬಲ್ಲ ಶಕ್ತಿಯನ್ನು ಹೊಂದಿರುವುದು ಕಂಡುಬರುತ್ತದೆ.

ಮಮತಾ ಬ್ಯಾನರ್ಜಿ ಪದಚ್ಯುತಿ ಅಸಂಭವವೇನಲ್ಲ!

▶ ಮಜುಂದಾರ್

ಪಶ್ಚಿಮ ಬಂಗಾಳದಲ್ಲಿ ಯಾರು ಗೆಲ್ಲಬಲ್ಲರು? ಇದು ಎಲ್ಲರ ಕುತೂಹಲ ಕೆರಳಿಸಿರುವ ಪ್ರಶ್ನೆ. ಹಳೆಯ ವಿಶ್ಲೇಷಣಾ ಸಾಧನಗಳನ್ನೇ ಹಿಡಿದುಕೊಂಡ ಹೆಚ್ಚಿನ ರಾಜಕೀಯ ಪಂಡಿತರು ಪ.ಬಂಗಾಳದಲ್ಲಿ ಮಮತಾ ಬ್ಯಾನರ್ಜಿ ಸರಕಾರವನ್ನು ಪದಚ್ಯುತಗೊಳಿಸುವುದು ಕಷ್ಟ ಎಂದು ಹೇಳುತ್ತಿರುತ್ತಾರೆ. ಆದರೆ ಕೆಲವು ವಿಷಯಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆಗೆ ಒಳಪಡಿಸಿದರೆ ಬೇರೆಯೇ ಚಿತ್ರಣ ದೊರಕುತ್ತದೆ.


ಪ.ಬಂಗಾಳದಲ್ಲಿ ಟಿಎಂಸಿ ಈಗಲೂ ಬಲವಾಗಿದೆ ಎಂಬಂತಹ ಚಿತ್ರಣಗಳನ್ನು ಹರಿಯಬಿಡುತ್ತಿರುವಾಗಲೇ ದಿನಕಳೆದಂತೆ ಅದಕ್ಕೆ ಬಿಜೆಪಿ ಒಡ್ಡುತ್ತಿರುವ ಸವಾಲೂ ಹೆಚ್ಚುತ್ತಿದೆ ಎಂಬುದು ಅರಿವಿಗೆ ಬರುತ್ತಿದೆ.

ಮಮತಾ ಸರಕಾರಕ್ಕೆ ಆಡಳಿತ ವಿರೋಧಿ ಅಲೆ ಕಾಡುತ್ತಿರುವುದಂತೂ ಸಂಪೂರ್ಣ ಸತ್ಯ. ಇದಷ್ಟೇ ಅಲ್ಲದೆ ಈ ಬಾರಿಯ ಚುನಾವಣೆಯ ವಿಶೇಷತೆಯೆಂದರೆ ಮತದಾರರ ತಳಮಟ್ಟದಲ್ಲೇ ಅತ್ಯಂತ ಮಹತ್ವದ ಬದಲಾವಣೆಗಳು ಆಗುತ್ತಿವೆ.

ಇತ್ತೀಚಿನ ಮತದಾರ ಪಟ್ಟಿ ವಿಶೇಷ ಪರಿಷ್ಕರಣೆ (ಎಸ್ಐಆರ್) ಯಲ್ಲಿ ಪ.ಬಂಗಾಳದಲ್ಲಿ 91 ಲಕ್ಷ ಹೆಸರುಗಳನ್ನು ತೆಗೆದುಹಾಕಲಾಯಿತು. ಇಷ್ಟು ದೊಡ್ಡ ಪ್ರಮಾಣದ ಹೆಸರು ರದ್ಧತಿಯು ರಾಜಕೀಯ ಆಯಾಮವನ್ನು ದೊಡ್ಡದಾಗಿ ಬದಲಿಸುವಷ್ಟು ಮಹತ್ವಪೂರ್ಣವಾಗಿದೆ. ಇದರಿಂದಾಗಿ ಹಳೆಯ ಮತದಾನ ಸ್ವರೂಪವೇ ಕುಸಿಯಬಹುದು. ಯಾವುದೋ ಪಕ್ಷಕ್ಕೆ ಸುರಕ್ಷಿತವಾಗಿ ಕಂಡುಬಂದ ಸ್ಥಾನವೊಂದು ನಿಕಟ ಸ್ಪರ್ಧೆ ನೀಡುವಂತಾಗಬಹುದು. ಕಳೆದ ಚುನಾವಣೆಯಲ್ಲಿ ಬಹಳಷ್ಟು ಕ್ಷೇತ್ರಗಳಲ್ಲಿನ ಫಲಿತಾಂಶಗಳು ಅತ್ಯಂತ ಕಡಿಮೆ ಅಂತರ ಹೊಂದಿರುವುದರಿಂದ ಈ ಬಾರಿ ಅಂತಹ ಕ್ಷೇತ್ರಗಳಲ್ಲಿ ಏರುಪೇರಿನ ಫಲಿತಾಂಶ ಸಂಭವಿಸಬಹುದು. ಮತದಾರ ಪಟ್ಟಿಯಲ್ಲಿನ ಅತಿ ಸಣ್ಣ ಬದಲಾವಣೆ ಕೂಡಾ ಫಲಿತಾಂಶದಲ್ಲಿ ಏರುಪೇರು ಸೃಷ್ಟಿಸಬಹುದು.

ತೃಣಮೂಲ ಕಾಂಗ್ರೆಸ್‌ನ ಮತಗಳು ಯಾವ ರೀತಿ ಹಂಚಿಕೆಯಾಗಿದೆ ಎಂಬುದು ಅದರ ದುರ್ಬಲ ಅಂಶಗಳಲ್ಲೊಂದಾಗಿದೆ. ಪಕ್ಷವು ರಾಜ್ಯದಲ್ಲಿ ಒಟ್ಟಾಗಿ ಗಳಿಸುವ ಮತಪ್ರಮಾಣಕ್ಕೆ ಪ್ರಮುಖ ಕೊಡುಗೆ ನೀಡುವುದು ಕೆಲವೇ ಕೆಲವು ವಿಧಾನಸಭಾ ಕ್ಷೇತ್ರಗಳು. ಮುಖ್ಯವಾಗಿ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಅದಕ್ಕೆ ದೊಡ್ಡ ಅಂತರದ ಗೆಲುವುಗಳು ಸಿಗುತ್ತಿವೆ. ಒಂದು ರೀತಿಯಲ್ಲಿ ಇದು 'ವ್ಯರ್ಥಗೊಂಡ ಮತ'ಗಳಂತೆ. ಈ ಸ್ಥಾನಗಳಲ್ಲಿ ಸಿಗುವ ಹೆಚ್ಚು ಮತಗಳು ಇತರೆಡೆಗಳಲ್ಲಿ ಹೆಚ್ಚುವರಿ ಸ್ಥಾನಗಳನ್ನು ಗಳಿಸಲು ನೆರವಾಗುವುದಿಲ್ಲ.

ಕಳೆದ ಚುನಾವಣೆಯಲ್ಲಿ ಟಿಎಂಸಿ ಶೇ. 10ಕ್ಕಿಂತ ಹೆಚ್ಚು ಮತ ಅಂತರದಿಂದ ಗೆದ್ದ 114 ಸ್ಥಾನಗಳನ್ನು ಹೊಂದಿದೆ. ಬಿಜೆಪಿ ಬಳಿ ಇರುವುದು ಅಂತಹ ಸುರಕ್ಷಿತ ಕ್ಷೇತ್ರಗಳು ಕೇವಲ 35.





2024ರ ಲೋಕಸಭಾ ಚುನಾವಣೆಯಲ್ಲಿ ಟಿಎಂಸಿಗೆ ಸುಮಾರು 55.8 ಲಕ್ಷ ಇಂತಹ 'ವ್ಯರ್ಥ ಮತ'ಗಳು ಬಿದ್ದಿದ್ದವು (ಶೇ. 10ಕ್ಕಿಂತ ಹೆಚ್ಚು ಗೆಲುವಿನ ಅಂತರದ ಮತಗಳು). ಬಿಜೆಪಿಗೆ ದೊರಕಿದ್ದು ಇಂತಹ 11.9 ಲಕ್ಷ ಮತಗಳು ಮಾತ್ರ.

2021ರ ವಿಧಾನಸಭಾ ಚುನಾವಣೆಗೆ ಹೋಲಿಸಿದರೆ ಈ ಅಂತರವು ಇನ್ನೂ ಹೆಚ್ಚು. ಟಿಎಂಸಿಗೆ 65 ಲಕ್ಷ ಇಂತಹ ವ್ಯರ್ಥ ಮತಗಳು ಬಿದ್ದಿದ್ದರೆ, ಬಿಜೆಪಿಗೆ ಬಿದ್ದಿರುವುದು 5.5 ಲಕ್ಷ ಮತಗಳು. ನಿರೀಕ್ಷೆಯಂತೆಯೇ, ಟಿಎಂಸಿಗೆ ಈ ಬಗೆಯ ಹೆಚ್ಚುವರಿ ಮತಗಳು ಲಭಿಸಿದ್ದು ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ. ಅಂದರೆ ಇಡೀ ರಾಜ್ಯದಲ್ಲಿ ಟಿಎಂಸಿಯ ಒಟ್ಟು ಮತ ಗಳಿಕೆ ಹೆಚ್ಚಿದ್ದರೂ ಈ ಹೆಚ್ಚುವರಿ ಮತಗಳು ಸಿಗುತ್ತಿರುವುದು ಮುಸ್ಲಿಂ ಪ್ರಾಬಲ್ಯದ ಕೆಲವು ಸ್ಥಾನಗಳಲ್ಲಿ ಮಾತ್ರ.

> ಟಿಎಂಸಿ ಮತಗಳು ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿ ಹೆಚ್ಚಾಗಿದ್ದರೆ, ಬಿಜೆಪಿಯ ಲಾಭವೆಂದರೆ ಅದರ ಮತಗಳು ರಾಜ್ಯಾದ್ಯಂತ ಸಮಾನವಾಗಿ ಹಂಚಿಕೆಯಾಗಿರುವುದು.

ಇದಕ್ಕೆ ವಿರುದ್ಧವಾಗಿ ಬಿಜೆಪಿಯ ಮತಗಳು ರಾಜ್ಯಾದ್ಯಂತ ಬಹುತೇಕ ಸಮಾನವಾಗಿ ಹಂಚಿಕೆಯಾಗಿವೆ. ಈ ರೀತಿ ಸಮಾನವಾಗಿ ಹಂಚಿಕೆಯಾದ ಮತಗಳು ಸಣ್ಣ ಪ್ರಮಾಣದ ಸ್ವಿಂಗ್ ಸಂಭವಿಸಿದರೂ ಹಲವು ಬಾರಿ ಹೆಚ್ಚು ಸ್ಥಾನಗಳನ್ನು ಗಳಿಸಿಕೊಡುವುದಿದೆ.

2024ರ ಲೋಕಸಭಾ ಚುನಾವಣೆಯಲ್ಲಿ 58 ಸ್ಥಾನಗಳಲ್ಲಿ ನಿಕಟ ಸ್ಪರ್ಧೆ ಏರ್ಪಟ್ಟಿತ್ತು. ಅದನ್ನು ವಿಶ್ಲೇಷಿಸಿದರೆ ಕೇವಲ 1.92 ಮತಗಳು ಮತ್ತೊಂದೆಡೆಗೆ ವಾಲಿದರೂ (ಸ್ವಿಂಗ್) ರಾಜ್ಯದಲ್ಲಿ ಅಧಿಕಾರ ಸಮತೋಲನವು ವ್ಯತ್ಯಯವಾಗಲಿದೆ.

ಇದರ ಜತೆಗೇ ರಾಜ್ಯದಲ್ಲಿ ಈಗ ಆಡಳಿತ ವಿರೋಧಿ ಅಲೆಯೂ ಇದೆ. ಅದು ಹಲವು ಆಯಾಮಗಳಲ್ಲಿ ವ್ಯಕ್ತವಾಗುತ್ತಿದೆ ಕೂಡಾ. ರಾಜ್ಯದಲ್ಲಿ ಹೆಚ್ಚುತ್ತಿರುವ ರಾಜಕೀಯ ಹಿಂಸಾಚಾರ, ಮುಸ್ಲಿಂ ತುಷ್ಟೀಕರಣ, ನಿರುದ್ಯೋಗ, ದುರಾಡಳಿತ, ಹಗರಣಗಳು, ಮಹಿಳೆಯರ ಮೇಲಿನ ದೌರ್ಜನ್ಯ ಮೊದಲಾದ ಕುರಿತಂತೆ ಜನರಲ್ಲಿ ಅಸಮಾಧಾನ ಹೆಚ್ಚಿದೆ. 2011ರಿಂದ 2024ರ ಅವಧಿ ಯಲ್ಲಿ ರಾಜ್ಯದಲ್ಲಿ ಅತ್ಯಧಿಕ ರಾಜಕೀಯ ಕೊಲೆಗಳು ಸಂಭವಿಸಿವೆ. ಮಹಿಳೆಯರ ವಿರುದ್ಧದ ಅಪರಾಧದಲ್ಲೂ ಪ.ಬಂಗಾಳ ಕುಖ್ಯಾತಿ ಪಡೆದಿದೆ. ದೇಶದಲ್ಲೆ ಅಗ್ರ ಸ್ಥಾನದಲ್ಲಿದೆ. ಹಾಗೆಂದು ಮಹಿಳೆಯರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಶಿಕ್ಷೆಯಾಗಿರುವ ಪ್ರಮಾಣವೂ ಅತೀ ಕಡಿಮೆ. ಇದೆಲ್ಲ ಜನರಿಗೆ ಮಮತಾ ಆಡಳಿತದ ಮೇಲೆ ರೇಜಿಗೆ ಹುಟ್ಟಿಸಿದೆ. ಪ.ಬಂಗಾಳದ ರಾಜಕೀಯ ಫಲಿತಾಂಶವು ಲೆಕ್ಕಾಚಾರಗಳನ್ನು ಆಧರಿಸಿರುವಂತೆಯೇ ಭಾವನೆಗಳಿಂದಲೂ ರೂಪಿಸಲ್ಪಡುತ್ತವೆ. ಸದ್ಯಕ್ಕಂತೂ ರಾಜಕೀಯ ಲೆಕ್ಕಾಚಾರಗಳು ನಿಧಾನವಾಗಿ ಬಿಜೆಪಿ ಗೆಲುವಿನತ್ತ ವಾಲುತ್ತಿವೆ.

ಪಾರಂಪರಿಕ ಲೆಕ್ಕಾಚಾರಗಳು ಮಮತಾ ಜಯ ಗಳಿಸುವುದಾಗಿ ಹೇಳುತ್ತವೆ. ಆದರೆ ಅಂಕಿಅಂಶಗಳು ಯಾವಾಗಲೂ ಪರಂಪರೆಯನ್ನೆ ಅನುಸರಿಸುವುದಿಲ್ಲ. ತಳ ಮಟ್ಟದ ಬದಲಾವಣೆಗಳು ಈ ಲೆಕ್ಕಾಚಾರ ಬುಡಮೇಲು ಮಾಡುತ್ತವೆ. ಸದ್ಯಕ್ಕೆ ಪ.ಬಂಗಾಳದಲ್ಲಿ ಅಂತಹ ತಳಮಟ್ಟದ ಬದಲಾವಣೆ ಸಂಭವಿಸುತ್ತಲಿದೆ.

ಪ.ಬಂಗಾಳದಲ್ಲಿ ಈ ಬಾರಿ ಮೊದಲ ಹಂತದಲ್ಲಿ ಭಾರೀ ಪ್ರಮಾಣದ ಮತದಾನವಾಗಿದೆ. ಇದು ಕೂಡಾ ಆಡಳಿತ ವಿರೋಧಿ ಅಲೆಯ ಪ್ರತಿಬಿಂಬ ಎಂಬುದಾಗಿ ಕೆಲವು ರಾಜಕೀಯ ಪಂಡಿತರು ವಿಶ್ಲೇಷಿಸುತ್ತಿದ್ದಾರೆ.

ಯುದ್ಧ ಅಂತ್ಯಮಾಡಿ, ದಿಗ್ಬಂಧನ ತೆರವುಗೊಳಿಸಿ

ಜಲಸಂಧಿ ಮುಕ್ತಕ್ಕೆ ಇರಾನ್ ಪ್ರಸ್ತಾವನೆ



ಕೈರೋ: ಅಮೆರಿಕ ತನ್ನ ಆರ್ಥಿಕ ದಿಗ್ಬಂಧನವನ್ನು ತೆರವುಗೊಳಿಸಿ ಈಗಿನ ಯುದ್ಧವನ್ನು ಅಂತ್ಯಗೊಳಿಸಿದರೆ ಹಾರ್ಮುಜ್ ಜಲಸಂಧಿ ತೆರೆಯುವ ಬಗ್ಗೆ ಮರುಪರಿಶೀಲಿಸುವುದಾಗಿ ಇರಾನ್ ಪ್ರಸ್ತಾಪಿಸಿದೆ ಎಂದು ಪ್ರಾದೇಶಿಕ ಅಧಿಕಾರಿಗಳು ಸೋಮವಾರ ಖಚಿತಪಡಿಸಿದ್ದಾರೆ.

ಪಾಕಿಸ್ತಾನಿ ಮಧ್ಯಸ್ಥಗಾರರ ಮೂಲಕ ತಲುಪಿಸಲಾದ ಈ ಪ್ರಸ್ತಾವನೆ, ರಾಜತಾಂತ್ರಿಕ ವಿಧಾನದಲ್ಲಾದ ಬೆಳವಣಿಗೆಯನ್ನು ಸೂಚಿಸಿದೆ. ತೈಲ ರಫ್ತು ಮಾಡದಂತೆ ತಡೆದಿರುವ ಅಮೆರಿಕದ ದಿಗ್ಬಂಧನಕ್ಕೆ ಸಂಪೂರ್ಣ ಅಂತ್ಯವನ್ನು ಇರಾನ್ ಬಯಸಿದೆ. ಈ ಪ್ರಸ್ತಾವನೆ ಅನ್ವಯ ಇರಾನ್‌ನ ಪರಮಾಣು ಕಾರ್ಯಕ್ರಮದ ಕುರಿತಾದ ಚರ್ಚೆಗಳನ್ನು ನಂತರದ ಹಂತಕ್ಕೆ ಮುಂದೂಡಲಾಗುತ್ತದೆ. ಟೆಹ್ರಾನ್‌ನಿಂದ ಉತ್ತಮ ಪ್ರಸ್ತಾವನೆ ಬಂದಿದೆ ಎಂದು ಯುಎಸ್ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರೂ, ಇರಾನ್ ಪರಮಾಣು ಶಸ್ತ್ರಾಸ್ತ್ರಗಳನ್ನು ಪಡೆಯದಂತೆ ತಡೆಯುವುದು ಇನ್ನೂ ಕಟ್ಟುನಿಟ್ಟಾದ ಷರತ್ತಾಗಿ ಉಳಿದಿದೆ ಎಂದಿದ್ದಾರೆ.

ಆರ್ಥಿಕತೆಯ ಮೇಲೆ ಪರಿಣಾಮ: ಹಾರ್ಮುಜ್ ಜಲಸಂಧಿ ಜಾಗತಿಕ ತೈಲ ಮತ್ತು ಅನಿಲದ ಶೇ.20ರಷ್ಟು ಸಾಗಣೆಯಾಗುವ ಪ್ರಮುಖ ಸಮುದ್ರ ಮಾರ್ಗವೆನಿಸಿದೆ. ಫೆ.28, 2026ರಂದು ಸಂಘರ್ಷ ಪ್ರಾರಂಭವಾದಾಗಿನಿಂದ, ಇದರ ಮುಚ್ಚುವಿಕೆಯಿಂದ ಬ್ರೆಂಟ್ ಕಚ್ಚಾ ತೈಲ ಬೆಲೆ ಪ್ರತಿ ಬ್ಯಾರೆಲ್‌ಗೆ 108 ಡಾಲರ್‌ಗೆ ಏರಿದೆ.

ಪಾಕ್ ಮೇಲೆ ವಿಶ್ವಾಸವಿಲ್ಲ

ಟೆಹರಾನ್: ಮಧ್ಯಪ್ರಾಚ್ಯ ಸಂಘರ್ಷಕ್ಕೆ ಸಂಬಂಧಿಸಿ ಅಮೆರಿಕ ಮತ್ತು ಇರಾನ್ ನಡುವೆ ಈಗ ಮಧ್ಯವರ್ತಿ ಪಾತ್ರ ನಿರ್ವಹಿಸುತ್ತಿರುವ ಪಾಕಿಸ್ತಾನದ ವಿಶ್ವಾಸಾರ್ಹತೆ ಏನು ಎಂಬುದಾಗಿ ಇರಾನಿನ ಹಿರಿಯ ಕಾನೂನು ನಿರೂಪಕ ಪ್ರಶ್ನೆ ಮಾಡಿದ್ದಾರೆ. ಮಾತುಕತೆಗಾಗಿ ವಿವಿಧ ಹಾದಿಗಳನ್ನು ಕಂಡುಕೊಳ್ಳುವ ರಾಜತಾಂತ್ರಿಕ ಪ್ರಯತ್ನಗಳು ಮುಂದುವರಿಯುತ್ತವಾದರೂ, ಪಾಕಿಸ್ತಾನ ಅಮೆರಿಕದ ಹಿತಾಸಕ್ತಿಗಳನ್ನು ಕಾಯುವತ್ತ ವಾಲುತ್ತಿರುವ ದೇಶವಾಗಿದ್ದು, ಅದರ ವಿಶ್ವಾಸಾರ್ಹತೆ ಏನು ಎಂಬುದಾಗಿ ಇರಾನಿನ ಹಿರಿಯ ನಾಯಕ ಇಬ್ರಾಹಿಂ ರೆಜಾಯಿ ಪ್ರಶ್ನಿಸಿದ್ದಾರೆ. ಮುಂದುವರಿಯುತ್ತಿರುವ ಪ್ರಾದೇಶಿಕ ರಾಜತಾಂತ್ರಿಕತೆಯಲ್ಲಿ ಒಂದು ತಟಸ್ಥ ಮಧ್ಯಸ್ಥನಾಗಿ ಪಾಕಿಸ್ತಾನದ ಸೂಕ್ತತೆ ಮತ್ತು ಅರ್ಹತೆ ಏನು ಎಂಬುದಾಗಿ ಅವರು ಪ್ರಶ್ನಿಸಿದ್ದಾರೆ.

ಇರಾನ್‌ಗೆ ಪುಟಿನ್ ಅಭಯ

ಮಾಸ್ಕೋ: ಪಶ್ಚಿಮ ಏಷ್ಯಾದಲ್ಲಿ ಶಾಂತಿ ಸ್ಥಾಪನೆಗೆ ರಷ್ಯಾ ತನ್ನಿಂದಾದಷ್ಟು ಸಹಾಯ ಮಾಡಲು ಸಿದ್ಧವಿದೆ ಎಂದು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಇರಾನ್‌ಗೆ ಅಭಯ ನೀಡಿದ್ದಾರೆ.ಇರಾನ್ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಭೇಟಿ ಬಳಿಕ ಮಾತನಾಡಿರುವ ಪುಟಿನ್, ಇರಾನ್ ಜನರ ಧೈರ್ಯವನ್ನು ಪ್ರಶಂಸಿಸಿದರು. ಇದೇ ವೇಳೆ ಅರಾಘ್ಚಿ ಅವರು, ಅಮೆರಿಕದ ವಿರುದ್ಧ ಇರಾನ್ ತೋರಿದ ಶಕ್ತಿಯನ್ನು ಉಲ್ಲೇಖಿಸಿ, ರಷ್ಯಾದ ಬೆಂಬಲಕ್ಕೆ ಕೃತಜ್ಞತೆ ವ್ಯಕ್ತಪಡಿಸಿದರು. ಇತ್ತೀಚಿನ ಮಾತುಕತೆಗಳು ನಿರೀಕ್ಷಿತ ಫಲಿತಾಂಶ ನೀಡಲಿಲ್ಲ ಎಂದೂ ಹೇಳಿದರು.


ಅಣುಶಕ್ತಿಯಲ್ಲಿ ಭಾರತ ಸಾಧನೆ

ಫಾಸ್ಟ್ ಬ್ರೀಡರ್ ರಿಯಾಕ್ಟರ್‌ನ ಐತಿಹಾಸಿಕ ಮೈಲುಗಲ್ಲು

ಪರಮಾಣು ಕಾರ್ಯಕ್ರಮದಲ್ಲಿ ಮಹತ್ವದ ಪ್ರಗತಿ

ಈ ರಿಯಾಕ್ಟರ್‌ನ ವಿಭಿನ್ನತೆ ಏನು?

ಕೇವಲ ಯುರೇನಿಯಂ ಇಂಧನವನ್ನು ಅವಲಂಬಿಸಿರುವ ಸಾಂಪ್ರದಾಯಿಕ ಪ್ರೆಶರೈಸ್ಡ್ ಹೆವಿ ವಾಟರ್ ರಿಯಾಕ್ಟರ್‌ಗಳಿಗೆ ಹೋಲಿಸಿದರೆ, ಈ ಫಾಸ್ಟ್ ಬ್ರೀಡರ್ ರಿಯಾಕ್ಟರ್ ತಾನು ಬಳಸುವುದಕ್ಕಿಂತ ಹೆಚ್ಚಿನ ಇಂಧನವನ್ನು ಉತ್ಪಾದಿಸುತ್ತದೆ. ಇದು ಅಸ್ತಿತ್ವದಲ್ಲಿರುವ ರಿಯಾಕ್ಟರ್‌ಗಳಿಂದ ತ್ಯಾಜ್ಯವಾಗಿ ಬರುವ ಪ್ಲುಟೋನಿಯಂ ಅನ್ನು ಬಳಸಿಕೊಳ್ಳುತ್ತದೆ ಮತ್ತು ಕಾರ್ಯಾಚರಣೆಯ ಸಮಯದಲ್ಲಿ ಯುರೇನಿಯಂ ಅನ್ನು ಹೆಚ್ಚುವರಿ ಪ್ಲುಟೋನಿಯಂ ಆಗಿ ಪರಿವರ್ತಿಸುತ್ತದೆ.





ತಮಿಳುನಾಡಿನ ಕಲ್ಪಾಕ್ಕಂನಲ್ಲಿರುವ ಪ್ರೊಟೊಟೈಪ್ ಫಾಸ್ಟ್ ಬ್ರೀಡರ್ ರಿಯಾಕ್ಟರ್(ಪಿಎಫ್‌ಬಿಆರ್) ಕ್ರಿಟಿಕಾಲಿಟಿ ಹಂತವನ್ನು ತಲುಪುವ ಮೂಲಕ ಭಾರತ ತನ್ನ ದೀರ್ಘಕಾಲದ ಪರಮಾಣು ಶಕ್ತಿ ಕಾರ್ಯತಂತ್ರದಲ್ಲಿ ಪ್ರಮುಖ ಹೆಜ್ಜೆ ಇಟ್ಟಿದೆ. ಕ್ರಿಟಿಕಾಲಿಟಿ ಎಂದರೆ ಪರಮಾಣು ಸರಣಿ ಕ್ರಿಯೆಗಳು ತನ್ನಷ್ಟಕ್ಕೆ ತಾನೇ ನಿರಂತರವಾಗಿ ನಡೆಯುವ ಹಂತ. ಭಾರತದ ಅಣುಶಕ್ತಿ ಕಾರ್ಯಕ್ರಮದಲ್ಲಿ ಇದು ಅತ್ಯಂತ ಮಹತ್ವದ ಪ್ರಗತಿಯಾಗಿದ್ದು, ರಷ್ಯಾದ ನಂತರ ವಾಣಿಜ್ಯಿಕವಾಗಿ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಅನ್ನು ನಿರ್ವಹಿಸುವ ವಿಶ್ವದ ಎರಡನೇ ದೇಶ ಎಂಬ ಹೆಗ್ಗಳಿಕೆಗೆ ಭಾರತ ಪಾತ್ರವಾಗಲಿದೆ. ಪ್ರಧಾನಿ ನರೇಂದ್ರ ಮೋದಿ, ಈ ಸಾಧನೆಯನ್ನು ಭಾರತದ ಪರಮಾಣು ಮಹತ್ವಾಕಾಂಕ್ಷೆಯ ನಿರ್ಣಾಯಕ ಹಂತ ಎಂದು ಬಣ್ಣಿಸಿದ್ದಾರೆ ಮತ್ತು ಇದು ದೇಶದ ವೈಜ್ಞಾನಿಕ ಹಾಗೂ ಎಂಜಿನಿಯರಿಂಗ್ ಸಾಮರ್ಥ್ಯವನ್ನು ಬಲಪಡಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ಭಾರತದ ಮೂರು ಹಂತದ ಪರಮಾಣು ಯೋಜನೆಗಳು

ದೇಶದಲ್ಲಿ ಯುರೇನಿಯಂ ಪ್ರಮಾಣ ಕಡಿಮೆ ಇರುವುದರಿಂದ ಮತ್ತು ಹೇರಳವಾಗಿರುವ ಥೋರಿಯಂ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಉದ್ದೇಶದಿಂದ ರೂಪಿಸಲಾದ ಭಾರತದ ಮೂರು ಹಂತದ ಪರಮಾಣು ಕಾರ್ಯಕ್ರಮಕ್ಕೆ ಈ ರಿಯಾಕ್ಟರ್ ಅತ್ಯಂತ ಪ್ರಮುಖ. ವಿಶ್ವದ ಯುರೇನಿಯಂ ದಾಸ್ತಾನಿನಲ್ಲಿ ಭಾರತ ಕೇವಲ 1ರಿಂದ 2 ಪ್ರತಿಶತದಷ್ಟು ಮಾತ್ರ ಹೊಂದಿದ್ದರೆ, ವಿಶ್ವದ ಒಟ್ಟು ಥೋರಿಯಂ ದಾಸ್ತಾನಿನಲ್ಲಿ 25 ಪ್ರತಿಶತಕ್ಕಿಂತ ಹೆಚ್ಚಿನ ಪಾಲನ್ನು ಹೊಂದಿದೆ. ಮೊದಲ ಹಂತದಲ್ಲಿ ಸಾಂಪ್ರದಾಯಿಕ ರಿಯಾಕ್ಟರ್‌ಗಳು ಯುರೇನಿಯಂ ಇಂಧನವನ್ನು ಬಳಸುತ್ತವೆ. ಎರಡನೇ ಹಂತದಲ್ಲಿ ಫಾಸ್ಟ್ ಬ್ರೀಡರ್ ರಿಯಾಕ್ಟರ್‌ಗಳು ಪ್ಲುಟೋನಿಯಂ ಬಳಸಿ ಶಕ್ತಿಯನ್ನು ಉತ್ಪಾದಿಸುತ್ತವೆ. ಮೂರನೇ ಹಂತವು ಸಂಪೂರ್ಣವಾಗಿ ಥೋರಿಯಂ ಆಧಾರಿತವಾಗಿದ್ದು, ಇದು ಭವಿಷ್ಯದಲ್ಲಿ ಭಾರತ, ಯುರೇನಿಯಂ ಆಮದಿನ ಮೇಲೆ ಅವಲಂಬಿತವಾಗುವುದನ್ನು ತಪ್ಪಿಸುತ್ತದೆ.

ಇಂಧನ ಭದ್ರತೆಯ ಕಾರ್ಯತಂತ್ರ

ಭಾರತದ ಬೆಳೆಯುತ್ತಿರುವ ಆರ್ಥಿಕತೆ ಮತ್ತು ಜನಸಂಖ್ಯೆಯಿಂದಾಗಿ ವಿದ್ಯುತ್ ಬೇಡಿಕೆ ವೇಗವಾಗಿ ಹೆಚ್ಚುತ್ತಿದೆ. ಪ್ರಸ್ತುತ ಭಾರತದ ಒಟ್ಟು ಇಂಧನ ಬಳಕೆಯಲ್ಲಿ ಅಣುಶಕ್ತಿಯ ಪಾಲು ಕೇವಲ 3 ಪ್ರತಿಶತದಷ್ಟಿದೆ. ಸರ್ಕಾರ 2024ರಲ್ಲಿದ್ದ 8,180 ಮೆಗಾವ್ಯಾಟ್ ಸಾಮರ್ಥ್ಯವನ್ನು 2047ರ ವೇಳೆಗೆ 100 ಗಿಗಾವ್ಯಾಟ್‌ಗೆ ಏರಿಸುವ ಗುರಿ ಹೊಂದಿದೆ. ಬ್ರೀಡರ್ ರಿಯಾಕ್ಟರ್ ತಂತ್ರಜ್ಞಾನ, ಪಳೆಯುಳಿಕೆ ಇಂಧನಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡುತ್ತದೆ ಮತ್ತು ಜಾಗತಿಕ ತೈಲ ಮಾರುಕಟ್ಟೆಯ ಏರಿಳಿತಗಳಿಂದ ಭಾರತವನ್ನು ರಕ್ಷಿಸಿ ಇಂಧನ ಭದ್ರತೆಯನ್ನು ಹೆಚ್ಚಿಸುತ್ತದೆ ಎಂದು ತಜ್ಞರು ಅಭಿಪ್ರಾಯಪಡುತ್ತಾರೆ.

ಸವಾಲು ಮತ್ತು ಟೀಕೆಗಳು

ಈ ಯಶಸ್ಸಿನ ಹೊರತಾಗಿಯೂ, ತಾಂತ್ರಿಕ ಮತ್ತು ಆರ್ಥಿಕ ಸವಾಲುಗಳು ಹಾಗೆಯೇ ಉಳಿದಿವೆ ಎಂದು ತಜ್ಞರು ಎಚ್ಚರಿಸಿದ್ದಾರೆ. 2004ರಲ್ಲಿ ನಿರ್ಮಾಣ ಆರಂಭವಾದ ಈ ಯೋಜನೆ, ಹಲವು ವಿಳಂಬಗಳನ್ನು ಕಂಡಿದೆ ಮತ್ತು ಇದರ ವೆಚ್ಚವು ಅಂದಾಜು ಮಾಡಿದ್ದಕ್ಕಿಂತ ದುಪ್ಪಟ್ಟಾಗಿದೆ ಎಂದು ವರದಿಯಾಗಿದೆ. ಸೌರಶಕ್ತಿ ಅಥವಾ ಸಾಂಪ್ರದಾಯಿಕ ಅಣು ಸ್ಥಾವರಗಳಿಗೆ ಹೋಲಿಸಿದರೆ ಈ ರಿಯಾಕ್ಟರ್‌ನಿಂದ ಉತ್ಪಾದನೆಯಾಗುವ ವಿದ್ಯುತ್ ಬೆಲೆ ಗಣನೀಯವಾಗಿ ಹೆಚ್ಚಿರಬಹುದು ಎಂಬುದು ವಿಮರ್ಶಕರ ವಾದ. ಅಲ್ಲದೆ, ಜಾಗತಿಕವಾಗಿ ಇಂತಹ ರಿಯಾಕ್ಟರ್‌ಗಳ ನಿರ್ವಹಣೆ ಮತ್ತು ದಕ್ಷತೆಯ ವಿಷಯದಲ್ಲಿ ಹಲವು ದೇಶಗಳು ಈ ಹಿಂದೆ ಸವಾಲುಗಳನ್ನು ಎದುರಿಸಿವೆ.

ಮುಖ್ಯಾಂಶಗಳು

- ಕಲ್ಪಕ್ಕಂನಲ್ಲಿರುವ ಭಾರತದ ಪಿಎಫ್‌ಬಿಆರ್ ರಿಯಾಕ್ಟರ್ ಕಾರ್ಯಾಚರಣೆಯ ಪ್ರಮುಖ ಹಂತವಾದ ಕ್ರಿಟಿಕಾಲಿಟಿ ತಲುಪಿದೆ.
- ಈ ರಿಯಾಕ್ಟರ್ ತಾನು ಬಳಸುವ ಪರಮಾಣು ಇಂಧನಕ್ಕಿಂತ ಹೆಚ್ಚಿನ ಇಂಧನವನ್ನು ಉತ್ಪಾದಿಸುವ ಸಾಮರ್ಥ್ಯ ಹೊಂದಿದೆ.
- ವಾಣಿಜ್ಯಿಕ ಫಾಸ್ಟ್ ಬ್ರೀಡರ್ ರಿಯಾಕ್ಟರ್ ಹೊಂದಲಿರುವ ವಿಶ್ವದ ಎರಡನೇ ದೇಶ ಭಾರತ
- ಭಾರತದ ಮೂರು ಹಂತದ ಥೋರಿಯಂ ಆಧಾರಿತ ಪರಮಾಣು ಕಾರ್ಯಕ್ರಮಕ್ಕೆ ಈ ತಂತ್ರಜ್ಞಾನ ಅಗತ್ಯ
- ಇದರ ದೀರ್ಘಕಾಲದ ಆರ್ಥಿಕ ಲಾಭದ ಬಗ್ಗೆ ತಜ್ಞರಲ್ಲಿ ಭಿನ್ನಾಭಿಪ್ರಾಯ



ಪರಮಾಣು ತ್ಯಾಜ್ಯ ಕಡಿಮೆ

ಈ ಪ್ರಕ್ರಿಯೆ, ಸೀಮಿತ ಯುರೇನಿಯಂ ಸಂಪನ್ಮೂಲಗಳಿಂದ ಹೆಚ್ಚಿನ ಶಕ್ತಿಯನ್ನು ಹೊರತೆಗೆಯಲು ಸಹಾಯ ಮಾಡುತ್ತದೆ ಮತ್ತು ದೀರ್ಘಕಾಲದ ಪರಮಾಣು ತ್ಯಾಜ್ಯವನ್ನು ಕಡಿಮೆ ಮಾಡುತ್ತದೆ. ಕಲ್ಪಕ್ಕಂನ ಈ ರಿಯಾಕ್ಟರ್ 500 ಮೆಗಾವ್ಯಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ ಹೊಂದಿದ್ದು, ಇದನ್ನು ಅಣುಶಕ್ತಿ ಇಲಾಖೆ ಯಲ್ಲಿರುವ ಇಂದಿರಾ ಗಾಂಧಿ ಅಣು ಸಂಶೋಧನಾ ಕೇಂದ್ರ ವಿನ್ಯಾಸಗೊಳಿಸಿದೆ.

ಜಾಗತಿಕ ಪರಿಣಾಮಗಳು

ಅಮೆರಿಕ, ಫ್ರಾನ್ಸ್, ಜಪಾನ್ ಮತ್ತು ಚೀನಾ ಸೇರಿದಂತೆ ಹಲವು ದೇಶಗಳು ಫಾಸ್ಟ್ ಬ್ರೀಡರ್ ತಂತ್ರಜ್ಞಾನದ ಮೇಲೆ ಕೆಲಸ ಮಾಡುತ್ತಿವೆ. ಆದರೆ ಹೆಚ್ಚಿನ ವೆಚ್ಚ ಮತ್ತು ಎಂಜಿನಿಯರಿಂಗ್ ಸವಾಲುಗಳಿಂದಾಗಿ ಇದರ ವಾಣಿಜ್ಯ ಬಳಕೆ ಸೀಮಿತವಾಗಿದೆ. ಒಂದು ವೇಳೆ ಭಾರತವು ಈ ಯೋಜನೆಯನ್ನು ಯಶಸ್ವಿಯಾಗಿ ವಾಣಿಜ್ಯೀಕರಣಗೊಳಿಸಿದರೆ, ಅದು ಜಾಗತಿಕವಾಗಿ ಈ ತಂತ್ರಜ್ಞಾನದ ಬಗ್ಗೆ ಮತ್ತೆ ಆಸಕ್ತಿ ಮೂಡಿಸುವಂತೆ ಮಾಡುತ್ತದೆ ಮತ್ತು ಸುಧಾರಿತ ಅಣುಶಕ್ತಿ ಕ್ಷೇತ್ರದಲ್ಲಿ ಭಾರತದ ಸ್ಥಾನವನ್ನು ಬಲಪಡಿಸುತ್ತದೆ.

ಹೀಟ್‌ಸ್ಟ್ರೋಕ್ ಬಗ್ಗೆ ಎಚ್ಚರವಿರಲಿ

ಹೊಸದಿಲ್ಲಿ: ಬೇಸಿಗೆ ಅವಧಿಯಲ್ಲಿ ತಾಪ ಅಲೆ ದಿನಗಳು ಸಾಮಾನ್ಯಕ್ಕಿಂತ ಹೆಚ್ಚು ಇರುವ ಸಾಧ್ಯತೆ ಹಿನ್ನೆಲೆಯಲ್ಲಿ, ದೇಶದ ಎಲ್ಲಾ ಆರೋಗ್ಯ ಸಂಸ್ಥೆಗಳಲ್ಲಿ ಹೀಟ್‌ಸ್ಟ್ರೋಕ್ ನಿರ್ವಹಣಾ ಘಟಕಗಳನ್ನು ಕಡ್ಡಾಯವಾಗಿ ಆರಂಭಿಸುವಂತೆ ಕೇಂದ್ರ ಸರ್ಕಾರ, ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ನಿರ್ದೇಶನ ನೀಡಿದೆ.

ಕೇಂದ್ರ ಆರೋಗ್ಯ ಕಾರ್ಯದರ್ಶಿ ಪುಣ್ಯ ಸಲಿಲಾ ಶ್ರೀವಾಸ್ತವ ಅವರು ಏ.23ರಂದು ರಾಜ್ಯಗಳ ಮುಖ್ಯ ಕಾರ್ಯದರ್ಶಿಗಳಿಗೆ ಬರೆದ ಪತ್ರದಲ್ಲಿ, ತಾಪಾಘಾತ ಪ್ರಕರಣಗಳ ತ್ವರಿತ ಗುರುತಿಸುವಿಕೆ ಹಾಗೂ ಚಿಕಿತ್ಸೆಗಾಗಿ ಪ್ರತ್ಯೇಕ ಘಟಕಗಳನ್ನು ಪ್ರಾರಂಭಿಸುವುದರ ಜೊತೆಗೆ ಆಂಬುಲೆನ್ಸ್ ಸೇವೆಗಳು ಸಂಪೂರ್ಣ ಸಜ್ಜಾಗಿರಬೇಕು ಎಂದು ಸೂಚಿಸಿದ್ದಾರೆ. ಇದಲ್ಲದೆ, ಮುನ್ನೆಚ್ಚರಿಕಾ ಎಚ್ಚರಿಕೆಗಳನ್ನು ಸಮಯಕ್ಕೆ ಸರಿಯಾಗಿ ಸಾರ್ವಜನಿಕರಿಗೆ ತಲುಪಿಸುವುದು ಮತ್ತು ತಾಪಾಘಾತ ಪ್ರಕರಣಗಳನ್ನು ಸಮಗ್ರ ಆರೋಗ್ಯ ಮಾಹಿತಿ ವೇದಿಕೆಯಲ್ಲಿ ತಕ್ಷಣದ ಆಧಾರದ ಮೇಲೆ ದಾಖಲಿಸುವುದು ಅಗತ್ಯವೆಂದು ಅವರು ಒತ್ತಿಹೇಳಿದ್ದಾರೆ.

ಭಾರತೀಯ ಹವಾಮಾನ ಇಲಾಖೆ ನೀಡಿರುವ ಏಪ್ರಿಲ್-ಜೂನ್ 2026ರ ಹವಾಮಾನ ಮುನ್ನೋಟದ ಪ್ರಕಾರ, ಪೂರ್ವ, ಮಧ್ಯ ಹಾಗೂ ವಾಯುವ್ಯ ಭಾರತ ಭಾಗಗಳಲ್ಲಿ ತಾಪ ಅಲೆ ದಿನಗಳು ಹೆಚ್ಚಾಗಲಿದ್ದು, ದಕ್ಷಿಣಪೂರ್ವ ಉಪಖಂಡದಲ್ಲಿಯೂ ಉಷ್ಣತೆಯ ತೀವ್ರತೆ ಏರಿಕೆಯಾಗುವ ಸಾಧ್ಯತೆ ಇದೆ. ಒಡಿಶಾ, ಪಶ್ಚಿಮ ಬಂಗಾಳ, ತಮಿಳುನಾಡು, ಪುದುಚೇರಿ ಹಾಗೂ ಆಂಧ್ರ ಪ್ರದೇಶದ ಕರಾವಳಿ ಭಾಗಗಳಲ್ಲಿ ಉಷ್ಣ ಅಲೆ ಹೆಚ್ಚು ಕಾಣಿಸಿಕೊಳ್ಳಲಿದೆ.

ಕಿರುಸುದ್ದಿ

ಪಾಕ್‌ನಲ್ಲಿ ಉಗ್ರ ಹಫೀಜ್ ನಿಕಟವರ್ತಿ ಶೇಖ್ ವಧೆ

ಇಸ್ಲಾಮಾಬಾದ್: ನಿಷೇಧಿತ ಭಯೋತ್ಪಾದಕ ಸಂಘಟನೆ ಲಷ್ಕರ್- ಎ-ತೊಯ್ಬಾ ಹಿರಿಯ ಕಮಾಂಡರ್ ಶೇಖ್ ಯೂಸುಫ್ ಅಫ್ರಿದಿಯನ್ನು ಪಾಕಿಸ್ತಾನದ ಖೈಬರ್ ಪಖ್ತುನ್ಖ್ವಾದಲ್ಲಿ ಅಪರಿಚಿತ ಬಂದೂಕುಧಾರಿಗಳು ಗುಂಡಿಕ್ಕಿ ಕೊಂದಿದ್ದಾರೆ. ಪ್ರಾಥಮಿಕ ವರದಿಗಳ ಪ್ರಕಾರ, ಸಶಸ್ತ್ರ ದಾಳಿಕೋರರು ಹತ್ತಿರದಿಂದ ಗುಂಡು ಹಾರಿಸಿದ್ದಾರೆ. ಇದರಿಂದಾಗಿ ಅಫ್ರಿದಿ ಗಂಭೀರ ಗಾಯಗೊಂಡಿದ್ದು, ಆತ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

ದಾಳಿಕೋರರು ಘಟನೆ ನಂತರ ತಕ್ಷಣವೇ ಪರಾರಿಯಾಗಿದ್ದು, ಇಲ್ಲಿಯವರೆಗೆ ಯಾವುದೇ ಗುಂಪು ಈ ಘಟನೆಯ ಹೊಣೆ ಹೊತ್ತುಕೊಂಡಿಲ್ಲ. ಲಷ್ಕರ್-ಎ-ತೊಯ್ಬಾ ಪ್ರಾದೇಶಿಕ ರಚನೆಯ ಪ್ರಮುಖ ವ್ಯಕ್ತಿಯೆಂದು ಪರಿಗಣಿಸಲ್ಪಟ್ಟ ಅಫ್ರಿದಿ, 26/11ರ ಮುಂಬೈ ಭಯೋತ್ಪಾದಕ ದಾಳಿಯ ಮಾಸ್ಟರ್ ಮೈಂಡ್, ಗುಂಪಿನ ಮುಖ್ಯಸ್ಥ ಹಫೀಜ್ ಸಯೀದ್‌ನೊಂದಿಗೆ ನಿಕಟ ಸಂಬಂಧ ಹೊಂದಿದ್ದ ಎಂದು ಶಂಕಿಸಲಾಗಿದೆ. ವಾಯುವ್ಯ ಪಾಕಿಸ್ತಾನದಲ್ಲಿ ಸಂಸ್ಥೆಯ ಚಟುವಟಿಕೆಗಳ ನೇಮಕಾತಿ ಮತ್ತು ಸಮನ್ವಯದಲ್ಲಿ ಆತ ಮಹತ್ವದ ಪಾತ್ರ ವಹಿಸಿದ್ದಾನೆ ಎಂದು ಭದ್ರತಾ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪ.ಬಂಗಾಳದಲ್ಲಿ ಇನ್ನೂ 2 ತಿಂಗಳು ಕೇಂದ್ರ ಪಡೆ

ಕೋಲ್ಕತ್ತಾ: ಪಶ್ಚಿಮ ಬಂಗಾಳದಲ್ಲಿ ಅಂತಿಮ ಹಂತದ ಮತದಾನದಲ್ಲಿ ಮತದಾರರೆಲ್ಲರು ದೀದಿ ಗೂಂಡಾಗಳಿಗೆ ಹೆದರದೆ ನಿರ್ಭೀತಿಯಿಂದ ಮತಚಲಾಯಿಸಬೇಕು ಎಂದು ಕರೆ ನೀಡಿರುವ ಗೃಹ ಸಚಿವ ಅಮಿತ್ ಶಾ, ಬಂಗಾಳದಲ್ಲಿ ಚುನಾವಣೆ ನಂತರವೂ ಅರವತ್ತು ದಿನ ಕೇಂದ್ರೀಯ ಪಡೆಗಳ ಕಾವಲಿರುವುದು ಎಂದು ಘೋಷಿಸಿದ್ದಾರೆ.

ಸೋದರ ಸೋದರಿಯರೇ, ಏ.29ರಂದು ಮತದಾನ ಕೇಂದ್ರಗಳಿಗೆ ತೆರಳಿ ಮತ ಚಲಾಯಿಸಿ. ದೀದಿ ಗೂಂಡಾಗಳಿಗೆ ಹೆದರದಿರಿ. ಚುನಾವಣಾ ಆಯೋಗವು ಬಂಗಾಳದ ಮೂಲೆ ಮೂಲೆಗೂ ಸಿಆರ್‌ಪಿಎಫ್ ಭದ್ರತೆಯನ್ನು ನಿಯೋಜಿಸಿದೆ. ಇಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರವೂ ಎರಡು ತಿಂಗಳ ಕಾಲ ಕೇಂದ್ರೀಯ ಪಡೆಗಳ ಕಾವಲು ಮುಂದುವರೆಯಲಿದೆ ಎಂದು ಪುನರುಚ್ಚರಿಸಿದರು. ದ್ವಿತೀಯ ಹಂತ ಅಥವಾ ಕೊನೆ ಹಂತದ ಮತದಾನಕ್ಕೆ ಅಣಿಯಾಗಿರುವ ಬೆಹಾಲದಲ್ಲಿ ಬೃಹತ್ ರೋಡ್ ಶೋನಲ್ಲಿ ಪಾಲ್ಗೊಂಡ ಬಳಿಕ ನೆರೆದ ಜನಸ್ತೋಮವನ್ನು ಉದ್ದೇಶಿಸಿ ಸಚಿವ ಶಾ ಮಾತನಾಡಿದರು.

ತೆರೆದ ವಾಹನದಲ್ಲಿ ನಿಂತುಕೊಂಡು ರೋಡ್ ಶೋನಲ್ಲಿ ಪಾಲ್ಗೊಂಡ ಸಚಿವ ಶಾ, ರಸ್ತೆ ಇಕ್ಕೆಲಗಳಲ್ಲೂ ನೆರೆದಿದ್ದ ಅಭಿಮಾನಿ ಬೆಂಬಲಿಗರತ್ತ ಆತ್ಮೀಯವಾಗಿ ಕೈಬೀಸಿದರು. ಜನರು ಸಚಿವರತ್ತ ಪುಷ್ಪವೃಷ್ಟಿಗೈದರು. ಸಾವಿರಾರು ಬಿಜೆಪಿ ಕಾರ್ಯಕರ್ತರು, ಬೆಂಬಲಿಗರು ಪಕ್ಷದ ಧ್ವಜಗಳು ಮತ್ತು ಕೇಸರಿ ಹಸಿರು ಬಣ್ಣದ ಬಲೂನ್‌ಗಳೊಂದಿಗೆ ರೋಡ್ ಶೋನಲ್ಲಿ ಪಾಲ್ಗೊಂಡರು. ಜೈ ಶ್ರೀರಾಮ್, ಭಾರತ್ ಮಾತಾ ಕೀ ಜೈ ಘೋಷಣೆಗಳು ಮುಗಿಲುಮುಟ್ಟಿದ್ದವು.

ಏಳು ಎಎಪಿ ಸಂಸದರ ಬಿಜೆಪಿ ವಿಲೀನಕ್ಕೆ ಒಪ್ಪಿಗೆ

ಹೊಸದಿಲ್ಲಿ: ಆಮ್ ಆದ್ಮಿ ಪಕ್ಷ(ಆಪ್) ತೊರೆದ ರಾಘವ್ ಚಡ್ಡಾ ಮತ್ತು ಇತರ ಆರು ಸಂಸದರನ್ನು ಬಿಜೆಪಿಯೊಂದಿಗೆ ವಿಲೀನಗೊಳಿಸಲು ರಾಜ್ಯಸಭೆ ಅಧ್ಯಕ್ಷ ಸಿ. ಪಿ. ರಾಧಾಕೃಷ್ಣನ್ ಅವರು ಅನುಮೋದನೆ ನೀಡಿದ್ದಾರೆ. ಈ ಮೂಲಕ ರಾಜ್ಯಸಭೆಯಲ್ಲಿ ಎಎಪಿ ಸದಸ್ಯರ ಬಲ 3ಕ್ಕೆ ಕುಸಿದಿದೆ. ಬಿಜೆಪಿ ಬಲ 113ಕ್ಕೆ ಏರಿಕೆಯಾಗಿದೆ.

ಮೂವರು ಸಂಸದರಾದ ರಾಘವ್ ಚಡ್ಡಾ, ಸಂದೀಪ್ ಪಾಠಕ್ ಮತ್ತು ಅಶೋಕ್ ಮಿತ್ತಲ್ ಅವರು ಶುಕ್ರವಾರ ಆಪ್ ತೊರೆದು ಬಿಜೆಪಿಯ ನಾಯಕತ್ವದ ಸಮ್ಮುಖದಲ್ಲಿ ಬಿಜೆಪಿ ಸೇರಿದ್ದರು. ಜತೆಗೆ ಹರ್ಭಜನ್ ಸಿಂಗ್, ರಾಜಿಂದರ್ ಗುಪ್ತಾ, ವಿಕ್ರಂಜಿತ್ ಸಿಂಗ್ ಸಾಹ್ನಿ ಮತ್ತು ಸ್ವಾತಿ ಮಲಿವಾಲ್ ಕೂಡ ಬಿಜೆಪಿ ಸೇರಿದ್ದರು.



ಈ ಮಧ್ಯೆ ಆಪ್ ಸಂಸದ ಸಂಜಯ್ ಸಿಂಗ್ ಅವರು ಏಳು ಸಂಸದರನ್ನು ಅನರ್ಹಗೊಳಿಸುವಂತೆ ರಾಜ್ಯಸಭೆ ಅಧ್ಯಕ್ಷ ಸಿ.ಪಿ.ರಾಧಾಕೃಷ್ಣನ್ ಅವರಿಗೆ ಅಧಿಕೃತವಾಗಿ ಅರ್ಜಿ ಸಲ್ಲಿಸಿದ್ದರು.

ಅರ್ಜಿಯಲ್ಲಿ ಸಂವಿಧಾನದ ಹತ್ತನೇ ಪರಿಚ್ಛೇದದ 4ನೇ ಪರಿಚ್ಛೇದದ ಅನ್ವಯದಲ್ಲಿ ಉದ್ದೇಶಿತ ವಿಲೀನವನ್ನು ಪ್ರಶ್ನಿಸಿದ್ದು, ಅದರ 2(1)(ಎ) ಪರಿಚ್ಛೇದದಲ್ಲಿ ಸಂಸದರನ್ನು ಅನರ್ಹಗೊಳಿಸುವಂತೆ ಕೋರಿದ್ದರು. ಆದಾಗ್ಯೂ, ಹತ್ತನೇ ಪರಿಚ್ಛೇದದ ಪ್ರಕಾರ, ವಿಲೀನವು ಮೂರನೇ ಎರಡರಷ್ಟು ಸದಸ್ಯರನ್ನು ಒಳಗೊಂಡಿರುವುದರಿಂದ, ಮೂಲ ರಾಜಕೀಯ ಪಕ್ಷವು ಮತ್ತೊಂದು ರಾಜಕೀಯ ಪಕ್ಷದೊಂದಿಗೆ ವಿಲೀನಗೊಂಡರೆ ಸಂಸದರ ಅನರ್ಹತೆ ನಡೆಯುವುದಿಲ್ಲ.

ಫುಡ್ ಪಾಯಿಸನ್ ಶಂಕೆ ಕುಟುಂಬದ ನಾಲ್ವರ ಬಲಿ

ಮುಂಬೈ: ಬಿರಿಯಾನಿ ಸೇವಿಸಿದ ಬಳಿಕ ಕಲ್ಲಂಗಡಿ ತಿಂದಿದ್ದ ಒಂದೇ ಕುಟುಂಬದ ನಾಲ್ವರು ಸದಸ್ಯರು ತೀವ್ರ ಅಸ್ವಸ್ಥಗೊಂಡು ಮೃತಪಟ್ಟಿರುವ ಘಟನೆ ಬೆಳಕಿಗೆ ಬಂದಿದೆ. ಪ್ರಾಥಮಿಕವಾಗಿ ಫುಡ್ ಪಾಯಿಸನ್ ಈ ಸಾವಿಗೆ ಕಾರಣವಾಗಿರಬಹುದು ಎಂದು ಶಂಕಿಸಲಾಗಿದೆ.

ಮೃತರು 40 ವರ್ಷದ ವ್ಯಕ್ತಿ, ಅವರ ಪತ್ನಿ ಹಾಗೂ ಇಬ್ಬರು ಕಿರಿಯ ಪುತ್ರಿಯರು ಎಂದು ಗುರುತಿಸಲಾಗಿದೆ. ಮನೆಯಲ್ಲಿ ನಡೆದ ಸಮಾರಂಭದಲ್ಲಿ ಅತಿಥಿಗಳಿಗೆ ಬಿರಿಯಾನಿ ಊಟ ನೀಡಲಾಗಿತ್ತು. ಬಂದ ನೆಂಟರು ತೆರಳಿದ ಮೇಲೆ ಈ ಕುಟುಂಬ ಮಧ್ಯರಾತ್ರಿ 1 ಗಂಟೆ ವೇಳೆಗೆ ಕಲ್ಲಂಗಡಿ ಹಣ್ಣು ಸೇವಿಸಿ ಮಲಗಿತ್ತು.

ಬಿರಿಯಾನಿ ತಿಂದ ಬಳಿಕ ಕಲ್ಲಂಗಡಿ ಸೇವನೆ

ಕಲ್ಲಂಗಡಿ ತಿಂದ ಕೆಲವೇ ಗಂಟೆಗಳಲ್ಲಿ ನಾಲ್ವರಿಗೆ ವಾಂತಿ, ಜುರುಗು, ದೌರ್ಬಲ್ಯ ಸೇರಿದಂತೆ ತೀವ್ರ ಅಸ್ವಸ್ಥತೆ ಕಾಣಿಸಿಕೊಂಡಿತು. ಪರಿಸ್ಥಿತಿ ಹದಗೆಟ್ಟ ಹಿನ್ನೆಲೆಯಲ್ಲಿ ಅವರನ್ನು ತಕ್ಷಣವೇ ಆಸ್ಪತ್ರೆಗೆ ದಾಖಲಿಸಲಾಯಿತಾದರೂ, ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. 10ರಿಂದ 12 ಗಂಟೆಯೊಳಗೆ ಎಲ್ಲರೂ ಮೃತಪಟ್ಟಿದ್ದಾರೆ.ಈ ಘಟನೆಯಲ್ಲಿ ಬಿರಿಯಾನಿ ಸೇವಿಸಿದ್ದ ಇತರ ಅತಿಥಿಗಳಿಗೆ ಯಾವುದೇ ತೊಂದರೆ ಕಾಣಿಸದಿರುವುದು ಗಮನಾರ್ಹ. ಇದರಿಂದ ಕಲ್ಲಂಗಡಿಯೇ ಫುಡ್ ಪಾಯಿಸನ್‌ಗೆ ಕಾರಣವಾಗಿರಬಹುದು ಎಂಬ ಅನುಮಾನ ಗಟ್ಟಿಯಾಗುತ್ತಿದೆ. ಪೊಲೀಸರು ಮನೆದಿಂದ ಉಳಿದಿದ್ದ ಕಲ್ಲಂಗಡಿ ತುಂಡುಗಳನ್ನು ವಶಕ್ಕೆ ಪಡೆದು ಪ್ರಯೋಗಾಲಯ ಪರೀಕ್ಷೆಗೆ ಕಳುಹಿಸಿದ್ದಾರೆ. ಮೃತದೇಹಗಳ ಮರಣೋತ್ತರ ಪರೀಕ್ಷೆಯ ವರದಿ ಹಾಗೂ ಆಹಾರ ಮಾದರಿಗಳ ವಿಶ್ಲೇಷಣೆಯ ನಂತರವೇ ನಿಖರ ಕಾರಣ ಸ್ಪಷ್ಟವಾಗಲಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಲಡಾಖ್‌ನಲ್ಲಿ 5 ಹೊಸ ಜಿಲ್ಲೆಗಳ ರಚನೆಗೆ ಅಸ್ತು

ಶ್ರೀನಗರ: ಲಡಾಖ್ ಲೆಫ್ಟಿನೆಂಟ್ ಗವರ್ನರ್ ವಿನಯ್ ಕುಮಾರ್ ಸಕ್ಸೇನಾ ಅವರು ಕೇಂದ್ರಾಡಳಿತ ಪ್ರದೇಶದಲ್ಲಿ ಐದು ಹೊಸ ಜಿಲ್ಲೆಗಳ ರಚನೆಗೆ ಸೋಮವಾರ ಅನುಮೋದನೆ ನೀಡಿದ್ದಾರೆ. ಈ ಪ್ರದೇಶದ ಜನರ ಆಕಾಂಕ್ಷೆಗಳು ಮತ್ತು ದೀರ್ಘಕಾಲದ ಬೇಡಿಕೆಯನ್ನು ಪೂರೈಸಿದ್ದಾರೆ. ಈ ನಿರ್ಧಾರವನ್ನು ಲಡಾಖ್‌ಗೆ ಐತಿಹಾಸಿಕ ದಿನ ಎಂದು ಸಕ್ಸೇನಾ ಕರೆದಿದ್ದಾರೆ.

ಲಡಾಖ್‌ನಲ್ಲಿ ಐದು ಹೊಸ ಜಿಲ್ಲೆಗಳ ರಚನೆಯ ಅಧಿಸೂಚನೆಗೆ ಅನುಮೋದನೆ ನೀಡಿದ್ದೇನೆ. ಇದು ಲಡಾಖ್‌ನ ಜನರ ಆಕಾಂಕ್ಷೆಗಳು ಮತ್ತು ದೀರ್ಘಕಾಲದ ಬೇಡಿಕೆಯನ್ನು ಪೂರೈಸುತ್ತದೆ ಎಂದು ಲೆಫ್ಟಿನೆಂಟ್ ಗವರ್ನರ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿದ್ದಾರೆ. ನುಬ್ರಾ, ಶಾಮ್, ಚಾಂಗ್ಥಾಂಗ್, ಜನ್ಸ್ಕರ್ ಮತ್ತು ದ್ರಾಸ್ ಎಂಬ ಐದು ಹೊಸ ಜಿಲ್ಲೆಗಳ ಅನುಮೋದನೆಯೊಂದಿಗೆ ಲಡಾಖ್ ಈಗ ಏಳು ಜಿಲ್ಲೆಗಳನ್ನು ಹೊಂದಿದೆ.

ಕಮಲ ಸರ್ಕಾರ ಪ್ರಮಾಣ ಸಮಾರಂಭಕ್ಕೆ ಮತ್ತೆ ಬರುವೆ: ಪ್ರಧಾನಿ ಮೋದಿ ವಿಶ್ವಾಸ

ಪ.ಬಂಗಾಳದಲ್ಲಿ ಬಿಜೆಪಿಗೆ ಅಧಿಕಾರ ಖಚಿತ

ಕೋಲ್ಕತ್ತಾ: ವಿಧಾನಸಭಾ ಚುನಾವಣೆಗಳ ನಂತರ ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಸರ್ಕಾರ ರಚಿಸುವ ವಿಶ್ವಾಸ ವ್ಯಕ್ತಪಡಿಸಿರುವ ಪ್ರಧಾನಿ ನರೇಂದ್ರ ಮೋದಿ, ಮೇ 4ಕ್ಕೆ ಫಲಿತಾಂಶ ಘೋಷಣೆಯಾದ ಬೆನ್ನಲ್ಲೇ ಬಿಜೆಪಿ ಸರ್ಕಾರದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ಪಾಲ್ಗೊಳ್ಳಲು ರಾಜ್ಯಕ್ಕೆ ಮತ್ತೆ ನಾನು ಭೇಟಿ ಕೊಡುತ್ತೇನೆ. ಪಶ್ಚಿಮ ಬಂಗಾಳದ ಜನರ ಮೂಡ್ ಕಾಣುವಾಗ ರಾಜ್ಯದಲ್ಲಿ ಈ ಬಾರಿ ಬಿಜೆಪಿ ಅಧಿಕಾರಸೂತ್ರ ಹಿಡಿಯುವುದು ಅತ್ಯಂತ ಖಚಿತವೆನಿಸಿದೆ ಎಂದರು.

ಆಳುವ ಟಿಎಂಸಿಯು ಸಿಂಡಿಕೇಟ್ ರಾಜ್, ರಾಜಕೀಯ ಹಿಂಸಾಕಾಂಡ ಮತ್ತು ಆರ್ಥಿಕ ಕುಸಿತದಂತಹ ದುಸ್ಥಿತಿಯಲ್ಲಿ ಮುಳುಗಿದೆ ಎಂದು ಪ್ರಧಾನಿ ಮೋದಿ ಟಿಎಂಸಿ ಸರಕಾರವನ್ನು ತರಾಟೆಗೆತ್ತಿಕೊಂಡರು. ಟಿಎಂಸಿ ಕೇವಲ ದೂಷಣೆ ಭಾಷೆ, ಬೆದರಿಕೆ, ಸುಳ್ಳು ಪ್ರಚಾರ ಮತ್ತು ಬೆದರಿಕೆ ತಂತ್ರಗಳ ಮೂಲಕ ಪ.ಬಂ.ದಲ್ಲಿ ಪ್ರಜಾತಂತ್ರವನ್ನು ಅವಹೇಳನಗೈಯುತ್ತಿದೆ.

ವಿಧಾನಸಭಾ ಚುನಾವಣೆಯ ಎರಡನೇ ಹಂತದ ಮತದಾನಕ್ಕೆ ಪ್ರಚಾರಾಂತ್ಯ ದಿನವಾದ ಸೋಮವಾರ, ಉತ್ತರ 24 ಪರಗಣ ಜಿಲ್ಲೆಯ ಬರಾಕ್‌ಪೋರ್‌ನಲ್ಲಿ ಚುನಾವಣಾ ರ್ಯಾಲಿ ಉದ್ದೇಶಿಸಿ ಪ್ರಧಾನಿ ಮೋದಿ ಮಾತನಾಡಿದರು.

1857ರಲ್ಲಿ ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದ ಬರಾಕ್‌ಪೋರ್, ಇಂದೀಗ ಪ.ಬಂಗಾಳದಲ್ಲಿ ರಾಜಕೀಯ ಬದಲಾವಣೆಯನ್ನು ಸೃಜಿಸಲು ಅಣಿಯಾಗುತ್ತಿದೆ. ರಾಷ್ಟ್ರದ ಭವ್ಯ ಭವಿಷ್ಯಕ್ಕಾಗಿ ಪೂರ್ವ ವಲಯದ ಉನ್ನತಿ ಅತ್ಯಂತ ನಿರ್ಣಾಯಕ. ಭಾರತದ ಸರ್ವತೋಮುಖ ಅಭಿವೃದ್ಧಿಗಾಗಿ ಪ.ಬಂಗಾಳದ ಪ್ರಗತಿ ಅನಿವಾರ್ಯ. ಪ.ಬಂಗಾಳದ ಜನರ ಸೇವೆ ಮಾಡುವುದು, ಜನರ ಭದ್ರತೆ ಮತ್ತು ಸುರಕ್ಷೆ ನನ್ನ ಕರ್ತವ್ಯ ಮತ್ತು ಹೊಣೆಗಾರಿಕೆಯಾಗಿದೆ. ಒಡಿಶಾ, ಬಿಹಾರದ ನಂತರದಲ್ಲೀಗ ಕಮಲವು ಪ.ಬಂಗಾಳದಲ್ಲೂ ಅರಳಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.



ಸಿಕ್ಕಿಂನ 50ನೇ ರಾಜ್ಯೋತ್ಸವದಲ್ಲಿ ಭಾಗವಹಿಸಲು ಗ್ಯಾಂಗ್ಟಾಕ್‌ಗೆ ಆಗಮಿಸಿದ ಪ್ರಧಾನಿ ಮೋದಿಯವರು ಬೃಹತ್ ರೋಡ್ ಶೋ ನಡೆಸಿದರು.

ಜನರಿಗೆ ಮೋಸ ಮಾಡಿದೆ ಟಿಎಂಸಿ

ಮಾ, ಮಾಟಿ ಮತ್ತು ಮಾನುಷ್ ಘೋಷಣೆ ಮುಂದಿಟ್ಟು ಅಧಿಕಾರಕ್ಕೆ ಬಂದಿರುವ ಟಿಎಂಸಿ ಜನರಿಗೆ ಮೋಸ ಮಾಡಿದೆ. ರಾಜ್ಯದ ಅಭಿವೃದ್ಧಿಯ ದೃಷ್ಟಿಕೋನ ಟಿಎಂಸಿ ಸರಕಾರಕ್ಕಿಲ್ಲ. ಪ.ಬಂಗಾಳದಲ್ಲಿ ಉದ್ದಿಮೆಗಳು ಮುಚ್ಚುಗಡೆಯಾಗ್ತಿವೆ, ಕ್ರಿಮಿನಲ್ ಜಾಲಗಳು ಸಖತ್ ವಿಜೃಂಭಿಸುತ್ತಿವೆ. ಒಂದೆಡೆ ಗಿರಣಿಗಳು ಮುಚ್ಚುಗಡೆಯಾಗ್ತಿದ್ದರೆ ಮಗದೊಂದೆಡೆ ಕಚ್ಚಾ ಬಾಂಬ್ ತಯಾರಿ ಕಾರ್ಖಾನೆಗಳು ರಾಜಾರೋಷ ತಲೆ ಎತ್ತುತ್ತಿವೆ. ಗೂಂಡಾಗಳ ಬಳಿಕ ಜತೆ ಟಿಎಂಸಿ ಸಿಂಡಿಕೇಟ್ ವಿಸ್ತಾರವಾಗುತ್ತಿದೆ ಎಂದು ಪ್ರಧಾನಿ ಮೋದಿ ಆತಂಕ ವ್ಯಕ್ತಪಡಿಸಿದರು.

ಸುಪ್ರೀಂ ಕೋರ್ಟ್‌ನಿಂದ ಅರ್ಜಿದಾರರಿಗೆ ತೀಕ್ಷ್ಣ ಪ್ರಶ್ನೆ

ಸಮ್ಮತಿಯ ಸಂಬಂಧ ಅಪರಾಧ ಹೇಗೆ?

ಹೊಸದಿಲ್ಲಿ: ಪರಸ್ಪರ ಸಮ್ಮತಿಯ ಆಧಾರದ ಮೇಲೆ ನಡೆದ ಸಂಬಂಧದಲ್ಲಿ ಅಪರಾಧದ ಪ್ರಶ್ನೆ ಎಲ್ಲಿ ಉದ್ಭವಿಸುತ್ತದೆ ಎಂದು ಸುಪ್ರೀಂಕೋರ್ಟ್ ಸೋಮವಾರ ತೀಕ್ಷ್ಣವಾಗಿ ಪ್ರಶ್ನಿಸಿದೆ.

ಮದುವೆಯ ಭರವಸೆ ನೀಡಿ ಲೈಂಗಿಕ ದೌರ್ಜನ್ಯ ನಡೆದಿದೆ ಎಂಬ ಆರೋಪದ ಮೇಲೆ ದಾಖಲಾಗಿದ್ದ ಪ್ರಕರಣವನ್ನು ಮಧ್ಯಪ್ರದೇಶ ಹೈಕೋರ್ಟ್ ರದ್ದುಗೊಳಿಸಿದ್ದನ್ನು ಪ್ರಶ್ನಿಸಿ ಮಹಿಳೆ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಈ ಅಭಿಪ್ರಾಯ ವ್ಯಕ್ತವಾಗಿದೆ.ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಉಜ್ವಲ್ ಭುಯಾನ್ ಅವರ ಪೀಠ, ಮಹಿಳೆ ಮತ್ತು ಆರೋಪಿಯು 15 ವರ್ಷಗಳ ಕಾಲ ಒಂದೇ ಮನೆಯಲ್ಲಿದ್ದು ಸಹವಾಸ ನಡೆಸಿದ್ದು, ಅವರಿಗೆ ಮಗುವೂ ಇದೆ ಎಂಬುದನ್ನು ಗಮನಕ್ಕೆ ತಂದಿತು.

15 ವರ್ಷಗಳ ಸಹವಾಸ, ಮಗು ಇದ್ದರೂ ದೌರ್ಜನ್ಯ ಆರೋಪ

ಸಮ್ಮತಿಯ ಸಂಬಂಧವಿದ್ದಾಗ ಅಪರಾಧದ ಪ್ರಶ್ನೆ ಎಲ್ಲಿ ಉದ್ಭವವಾಗುತ್ತದೆ? ಇಷ್ಟು ವರ್ಷ ಒಟ್ಟಿಗೆ ಬದುಕಿ, ಮಗುವೂ ಹೊಂದಿದ ನಂತರ ಮದುವೆಯಾಗಿಲ್ಲ ಎಂಬ ಕಾರಣಕ್ಕೆ ದೌರ್ಜನ್ಯ ಎಂದು ಹೇಳುವುದು ಹೇಗೆ? ಎಂದು ನ್ಯಾ. ನಾಗರತ್ನ ಪ್ರಶ್ನಿಸಿದರು.

ಮಹಿಳೆಯ ಪರ ವಕೀಲರು, ಆರೋಪಿಯು ಮದುವೆಯಾಗುವುದಾಗಿ ಹೇಳಿ ಮಹಿಳೆಯನ್ನು ಲೈಂಗಿಕವಾಗಿ ದುರುಪಯೋಗ ಮಾಡಿಕೊಂಡಿದ್ದಾನೆ ಎಂದು ವಾದಿಸಿದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಾಲಯ, ಮದುವೆಗೆ ಮುನ್ನವೇ ಏಕೆ ಜೊತೆಯಾಗಿ ವಾಸಿಸಲು ಮುಂದಾದರು? ಎಂದು ಪ್ರಶ್ನಿಸಿತು.

ಇದೇ ವೇಳೆ, ಆರೋಪಿ ಈಗಾಗಲೇ ವಿವಾಹಿತನಾಗಿದ್ದು, ಆ ವಿಚಾರವನ್ನು ಮರೆಮಾಚಿದ್ದಾನೆ ಎಂಬ ವಾದವೂ ನ್ಯಾಯಾಲಯದ ಗಮನಕ್ಕೆ ತಂದಿತು. ಇದಕ್ಕೆ ನ್ಯಾಯಾಲಯ, ಮದುವೆಯಾಗಿದ್ದರೆ ಮಹಿಳೆಗೆ ಕಾನೂನುಬದ್ಧ ಹಕ್ಕುಗಳು ಸ್ಪಷ್ಟವಾಗುತ್ತವೆ. ಹಾಗೇ ದ್ವಿವಿವಾಹ ಅಥವಾ ಪಾಲನಾ ಪರಿಹಾರಕ್ಕಾಗಿ ಕ್ರಮ ಕೈಗೊಳ್ಳಬಹುದಾಗಿತ್ತು. ಆದರೆ ಮದುವೆಯಿಲ್ಲದ ಸಹವಾಸ ಸಂಬಂಧದಲ್ಲಿ ಈ ರೀತಿಯ ಅಪಾಯಗಳು ಸಹಜ, ಎಂದು ಅಭಿಪ್ರಾಯಪಟ್ಟಿತು. ಅವನು ಶಿಕ್ಷೆಗೆ ಒಳಗಾದರೂ ಮಹಿಳೆಗೆ ಏನು ಲಾಭ? ಮಗುವಿನ ಪಾಲನೆಗಾಗಿ ಆರ್ಥಿಕ ನೆರವು ಒದಗಿಸುವ ಬಗ್ಗೆ ಯೋಚಿಸಬಹುದು, ಎಂದು ನ್ಯಾ.ನಾಗರತ್ನ ಹೇಳಿದರು. ಏಳು ವರ್ಷದ ಮಗುವಿನ ಹಿತದೃಷ್ಟಿಯಿಂದ ಪರಿಹಾರ ನೀಡುವ ಸಾಧ್ಯತೆಯನ್ನು ಪರಿಗಣಿಸಲು ಸೂಚಿಸಿದರು.

ಈ ಹಿನ್ನೆಲೆಯಲ್ಲಿ, ನೋಟಿಸ್ ಜಾರಿಗೊಳಿಸಿದ ಸುಪ್ರೀಂ ಕೋರ್ಟ್, ಮಹಿಳೆ ಮತ್ತು ಆರೋಪಿಯ ನಡುವೆ ಸಂಧಾನದ ಮೂಲಕ ಪರಿಹಾರ ಕಂಡುಕೊಳ್ಳುವ ಸಾಧ್ಯತೆಯನ್ನು ಪರಿಶೀಲಿಸಲು ಸೂಚಿಸಿದೆ.

ಅತಿಥಿ ಶಿಕ್ಷಕರ ಹುದ್ದೆ: ಅರ್ಜಿ ಆಹ್ವಾನ

ಮಂಗಳೂರು: ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧೀನದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಮೌಲಾನ ಆಜಾದ್ ಮಾದರಿ ಶಾಲೆ, ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ ಮತ್ತು ಸರ್ಕಾರಿ ಮುಸ್ಲಿಂ ವಸತಿ ಶಾಲೆಗಳಿಗೆ ಅತಿಥಿ ಶಿಕ್ಷಕರ ಹುದ್ದೆಗಳಿಗೆ ಅರ್ಜಿ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗೆ ಮತ್ತು ಅರ್ಜಿ ಸಲ್ಲಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿಯವರ ಕಚೇರಿ ಸಂಪರ್ಕಿಸಬಹುದು. ಅರ್ಜಿಯನ್ನು ಮೇ 15ರೊಳಗಾಗಿ ಎಲ್ಲಾ ದಾಖಲೆಗಳೊಂದಿಗೆ ಸಲ್ಲಿಸಬೇಕು. ಮಾಹಿತಿಗಾಗಿ 9449006284ನ್ನು ಸಂಪರ್ಕಿಸಬಹುದು ಎಂದು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ತಿಳಿಸಿದ್ದಾರೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ

"ಜ್ಞಾನ ಸಂಗಮ" ಬೆಳಗಾವಿ–590018, ಕರ್ನಾಟಕ, ಭಾರತ

ಕ್ರಮ ಸಂಖ್ಯೆ: ವಿ.ತಾ.ವಿ./ಬೆ/ಸ್ಥಾ.ಅ./2026–27/ಐ.ಎಫ್.ಟಿ.ನಂ.13/352, ದಿನಾಂಕ: 24–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ–ದ್ವಿಲಕೋಟೆ ಪದ್ಧತಿ (ಕೆಪಿಪಿ ಪೋರ್ಟಲ್ ಮೂಲಕ)2ನೇ ಕರೆ

ಕುಲಸಚಿವರು, ವಿತಾವಿ, ಬೆಳಗಾವಿ ಇವರಿಂದ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ಸ್ ಕೆ.ಡಬ್ಲ್ಯೂ.ರ ಪ್ರಕಾರ ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಮಂತ್ರಿಸಲಾಗಿದೆ. ಕಾಮಗಾರಿ **ಹೆಸರು: ವಿತಾವಿಯ** ಪ್ರಾದೇಶಿಕ ಕೇಂದ್ರ ಮೈಸೂರಿನ ಹಾಸ್ಟೆಲ್‌ಗಳ ದುರಸ್ತಿ ಮತ್ತು ನವೀಕರಣ ಕಾಮಗಾರಿ ಮೊತ್ತ **ರೂ.1,52,45,418/–** (ತೆರಿಗೆ ರಹಿತ)2ನೇ ಕರೆ. ಇತರೆ ಮಾಹಿತಿಗಳನ್ನು **https://kppp.karnataka.gov.in** ವೆಬ್‌ಸೈಟ್ ಮೂಲಕ **ದಿನಾಂಕ: 24–04–2026** ರಿಂದ ಪಡೆದುಕೊಳ್ಳಬಹುದು.

ವಾ.ಸಾ.ಸಂ.ಇ./ಬೆಳಗಾವಿ/159/ ದೇಶಪಾಂಡೆಪಬ್ಲಿಸಿಟಿ/2026–27

ಸಹಿ/– ಕುಲಸಚಿವರು,
ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿ

ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ॥ ಎಂ.ಹೆಚ್.ಮರಿಗೌಡ ರಸ್ತೆ, ಬೆಂಗಳೂರು–560029.
ಫೋನ್: 26096832/26096910 ಫ್ಯಾಕ್ಸ್: 080–25536105 ಇಮೇಲ್: purchase@kmf.coop

ಸಂ. ಕಹಾಮ/ಖರೀದಿ/ಟೆಂಡರ್–908/2026–27 ದಿನಾಂಕ: 27.04.2026

ಟೆಂಡರ್ ಪ್ರಕಟಣೆ

(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ, ಬೆಂಗಳೂರು ಈ ಕೆಳಗೆ ತಿಳಿಸಿದ ಸೇವೆ ಒದಗಿಸಲು ಅರ್ಹ ಟೆಂಡರ್‌ದಾರರಿಂದ ಟೆಂಡರ್‌ನ್ನು ಆಹ್ವಾನಿಸಲಾಗಿದೆ (Tender No. KMF/2026-27/SE5208).

Sl. No.	Item Description	EMD (Rs.)
1	Hiring of Laboratory Services for Testing of Milk, Milk Products & other Raw Materials through the NABL Accrediated/ Certified Laboratory for 2 Years	1,60,000/-

ಇ–ಪ್ರೊಕ್ಯೂರ್‌ಮೆಂಟ್ **https://kppp.karnataka.gov.in** ಮೂಲಕ ಟೆಂಡರ್ ಅನ್ನು ದಿನಾಂಕ **08.05.2026** ರಂದು **05.00** ಗಂಟೆಯ ಒಳಗೆ ಸಲ್ಲಿಸಬಹುದಾಗಿದೆ. ಇಎಂಡಿ ಹಾಗೂ ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ಸೇಂಟ್ ಆನ್ಸ್ ಎಜುಕೇಷನ್ ಸೊಸೈಟಿ ನಂ.2, ಮಿಲ್ಲರ್ ರಸ್ತೆ, ಬೆಂಗಳೂರು–52

ಬೇಕಾಗಿದ್ದಾರೆ

ಮೇಲ್ಕಂಡ ಶಿಕ್ಷಣ ಸಂಸ್ಥೆ ವತಿಯಿಂದ ಪಾಲಹಳ್ಳಿ ಗ್ರಾಮದಲ್ಲಿ ನಡೆಯುತ್ತಿರುವ ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ ಶ್ರೀರಂಗ ಪಟ್ಟಣ, ತಾ॥ ಮಂಡ್ಯ ಜಿಲ್ಲೆಯಲ್ಲಿ ಖಾಲಿ ಇರುವ ಅನುದಾನಿತ ಶಿಕ್ಷಕರ ಈ ಕೆಳಗಿನ ಹುದ್ದೆ ತುಂಬಲು ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಇಲಾಖೆ, ಬೆಂಗಳೂರುರವರ ಅನುಮತಿ ಪತ್ರದ ಸಂಖ್ಯೆ: DPI, CPIO ಸಿ 8 (2):Fov 4/E 2013883/ ಖಾಹುಭ ಅನು/77)2025–26 ದಿನಾಂಕ 12.04.2026ರ ಅನ್ವಯ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ಕ್ರಮ ಸಂಖ್ಯೆ	ಹುದ್ದೆ ವಿವರ	ವಿದ್ಯಾರ್ಹತೆ	ಮೀಸಲಾತಿ	ಹುದ್ದೆಗಳ ಸಂಖ್ಯೆ
1	ಕನ್ನಡ ಸಹಶಿಕ್ಷಕರು	B.A., B.Ed.,	ಮೀಸಲಾತಿ ಅನ್ವಯಿಸುವುದಿಲ್ಲ	01

ವಿದ್ಯಾರ್ಹತೆಯುಳ್ಳ ಅಭ್ಯರ್ಥಿಗಳು ಪ್ರಕಟವಾದ 21 ದಿನಗಳ ಒಳಗಾಗಿ ಕಾರ್ಯದರ್ಶಿಗಳು, ಸೇಂಟ್ ಆನ್ಸ್ ಪ್ರೌಢಶಾಲೆ, ಪಾಲಹಳ್ಳಿ, ಶ್ರೀರಂಗಪಟ್ಟಣ ತಾಲೂಕು, ಮಂಡ್ಯ ಜಿಲ್ಲೆ–571606 ಇವರಿಗೆ ಅರ್ಜಿ ಸಲ್ಲಿಸುವುದು ಹಾಗೂ ಅರ್ಜಿಯ ಒಂದು ಪ್ರತಿಯನ್ನು ಉಪನಿರ್ದೇಶಕರು, ಸಾ.ಶಿ. ಇಲಾಖೆ, ಮಂಡ್ಯ ಇವರಿಗೆ ಕಳುಹಿಸುವುದು. **ದಿನಾಂಕ: 25.05.2026ರಂದು ಬೆಳಿಗ್ಗೆ 11.00 ಗಂಟೆಗೆ ಪಾಲಹಳ್ಳಿ ಗ್ರಾಮದಲ್ಲಿರುವ ಸೇಂಟ್ ಆನ್ಸ್ ಪ್ರೌಢಶಾಲೆ**ಯಲ್ಲಿ ತಮ್ಮ ಮೂಲ ಪ್ರಮಾಣ ಪತ್ರದೊಂದಿಗೆ ಆಯ್ಕೆ ಸಮಿತಿ ಮುಂದೆ ಸಂದರ್ಶನಕ್ಕೆ ಹಾಜರಾಗಲು ಕೋರಿದೆ.

ವಿ.ಸೂ.: ಸಂದರ್ಶನದ ವೇಳೆ ಅಭ್ಯರ್ಥಿಗಳಿಗೆ ಯಾವುದೇ ರೀತಿಯ ಭತ್ಯೆ ನೀಡಲಾಗುವುದಿಲ್ಲ.

ಪುತ್ತೂರು ಮಾರುಕಟ್ಟೆ ಧಾರಣೆ

27-04-2026 ಅಡಿಕೆ ಧಾರಣೆ ಕೆ.ಜಿ.ಗೆ

ಹೊಸ ಅಡಿಕೆ	445 - 475	ಹಳೆ ಕರಿಗೋಟು	245 - 275
ಚೋಲ್ ಅಡಿಕೆ	525 - 550	ಹಸಿ ಕೊಕ್ಕೋ	70 - 100
ಡಬಲ್ ಚೋಲ್	525 - 550	ಒಣ ಕೊಕ್ಕೋ	270 - 310
ಹೊಸ ಪಠೋರ	355 - 405	**ಕಾಳುಮೆಣಸು ಧಾರಣೆ**	
ಹಳೆ ಪಠೋರ	375 - 405	ಕಾಳುಮೆಣಸು	450 - 685
ಹೊಸ ಉಳ್ಳಿ	120 - 290	**ರಬ್ಬರ್ ಧಾರಣೆ : ಗ್ರೇಡ್**	
ಹಳೆ ಉಳ್ಳಿ	110 - 290	ಆರ್‌ಎಸ್‌ಎಸ್ 1	238.00
ಹೊಸ ಕೋಕಾ	325 - 345	ಆರ್‌ಎಸ್‌ಎಸ್ 2	207.00
ಹಳೆ ಕೋಕಾ	325 - 345	ಸ್ಕ್ರಾಪ್ 1	146.00
ಹೊಸ ಕರಿಗೋಟು	245 - 275	ಸ್ಕ್ರಾಪ್ 2	137.00

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನಿಯರರ ಕಛೇರಿ, ಲೋಕೋಪಯೋಗಿ ಇಲಾಖೆ ಮಂಗಳೂರು ವಿಭಾಗ, ಮಂಗಳೂರು

ಸಂಖ್ಯೆ:ಲೋ.ಇ:ಮಂ.ವಿ:ಟಿ.ಎನ್.ಡಿ:(04ಇ/55ಇ):2026–27:ಜೆಇ–1 ದಿನಾಂಕ: 24.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ

(ಕರ್ನಾಟಕ ಸಾರ್ವಜನಿಕ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ) /3ನೇ ಕರೆ

ಲೆಕ್ಕಶೀರ್ಷಿಕೆ: 5054–03–101–0–02–132 ಪ್ರಮುಖ ಜಿಲ್ಲಾ ರಸ್ತೆ ಸೇತುವೆಗಳ ನಿರ್ಮಾಣ ಯಡಿ ಇಂಡೆಂಟ್ ನಂ: 35595 ಈ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದ್ದು, ಟೆಂಡರನ್ನು ಸಲ್ಲಿಸುವ ಕೊನೆಯ **ದಿನಾಂಕ: 11.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಲೆಕ್ಕಶೀರ್ಷಿಕೆ: "5054–03–337–0–17–154 ರಾಜ್ಯ ಹೆದ್ದಾರಿ ರಸ್ತೆ ಕಾಮಗಾರಿಗಳು ಸುಧಾರಣೆಗಳು" ಯಡಿ ಇಂಡೆಂಟ್ ನಂ: 35851 ಈ ಕಾಮಗಾರಿಗಳಿಗೆ ಕೆ.ಪಿ.ಪಿ. ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ ಮತ್ತು **ಲೆಕ್ಕಶೀರ್ಷಿಕೆ: 8443 ವಿಪತ್ತು ಉಪಶಮನ ನಿಧಿ** ಇಂಡೆಂಟ್ ನಂ: 34059 ಈ ಕಾಮಗಾರಿಗೆ **3ನೇ ಕರೆಯಾಗಿ** ಟೆಂಡರ್ ಕರೆಯಲಾಗಿದ್ದು, ಈ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 04.05.2026 (ಅಪರಾಹ್ನ 5.00 ಗಂಟೆಯವರೆಗೆ ಮಾತ್ರ)** ನಿಗದಿಪಡಿಸಲಾಗಿರುತ್ತದೆ.

ಈ ಕಾಮಗಾರಿಗಳ ಕನಿಷ್ಠ ಅಂದಾಜು ಮೊತ್ತ ರೂ.50.00 ಲಕ್ಷ ಮತ್ತು ಗರಿಷ್ಠ ಮೊತ್ತ ರೂ.240.00 ಲಕ್ಷ ಆಗಿರುತ್ತದೆ. ಮೇಲಿನ ಕಾಮಗಾರಿಗಳಿಗೆ **KW-2 & KW-4** ಪ್ರಮಾಣಿತ ಟೆಂಡರ್ ಪ್ರಮಾಣಿತ ಟೆಂಡರ್ ದಾಖಲೆಯ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಮೇಲಿನ ಕಾಮಗಾರಿಗಳ ಕೆಲಸದ ಮೌಲ್ಯ, ಟೆಂಡರ್‌ಗೆ ಹಾಕಲಾದ ಮೊತ್ತ, ಇ.ಎಮ್.ಡಿ. ಮೊತ್ತ ಇತ್ಯಾದಿ ಕುರಿತು ಹೆಚ್ಚಿನ ವಿವರಗಳನ್ನು ಕೆ.ಪಿ.ಪಿ ಪೋರ್ಟಲ್ **(www.kppp.karnataka.gov.in)** ನಲ್ಲಿ ನೋಡಬಹುದು. ಹೆಚ್ಚಿನ ವಿವರಗಳಿಗಾಗಿ ವಿಷಯ ನಿರ್ವಾಹಕರು, ಕಾರ್ಯನಿರ್ವಾಹಕ ಇಂಜಿನಿಯರ್‌ರವರ ಕಛೇರಿ, ಲೋಕೋಪಯೋಗಿ ಇಲಾಖೆ, ಮಂಗಳೂರು ವಿಭಾಗ, ಮಂಗಳೂರು ಇವರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ: 0824–2423169.

DIPR/DK/KSMCA/131/26-27 dt.27.04.2026

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್

ಕರ್ನಾಟಕ ಸರ್ಕಾರ
ಸರ್ಕಾರಿ ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ, ವಿಜಯನಗರ ಜಿಲ್ಲೆ.

ಸಂಖ್ಯೆ:ತಾಸಾಆಕೂ/ಟೆಂಡರು/ಪಥ್ಯಾಹಾರ/09/2026–27ದಿನಾಂಕ:16.04.2026

ಇ–ಟೆಂಡರ್ ಪ್ರಕಟಣೆ

2026–27 ನೇ ಸಾಲಿಗಾಗಿ ತಾಲೂಕು ಸಾರ್ವಜನಿಕಆಸ್ಪತ್ರೆ, ಕೂಡ್ಲಿಗಿಯಲ್ಲಿಸಿದ್ಧಪಡಿಸಿದಪಥ್ಯಹಾರ, ಮತ್ತುಉತ್ತಮದರ್ಜೆಯ ಬ್ರೆಡ್ ಸರಬರಾಜಿಗಾಗಿ ಇ–ಪ್ರೋಕ್ಯೂರ್ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರನ್ನುಆಹ್ವಾನಿಸಲಾಗಿದೆ, ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ http://kppp.karnataka.gov.in ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲುಕೋರಿದೆ.

DietTender Office RefNo.: **TGH/K/TENDER/DIET/09/2026-27.** Supply of Diet and Breade-Tender No.: **DHFWS/2026-27/ IND2430.** Commencement of downloading of e-tender forms from website: **http://kppp.karnataka.gov.in ದಿನಾಂಕ:21–04–2026ರಿಂದ05–05–2026ರಂದು ಸಂಜೆ05.00 ಗಂಟೆಯವರೆಗೆ.** Last Date for seeking clarification if any: **ದಿನಾಂಕ:04–05–2026ರಂದುಮಧ್ಯಾಹ್ನ12.30 ಗಂಟೆಯವರೆಗೆ.** Last date for uploading of Tender in e-procurement platform: **ದಿನಾಂಕ:05–05–2026ರಂದು ಸಂಜೆ05.00ಗಂಟೆಯವರೆಗೆ.** Date, Time & Venue of Opening of Tenders: **ದಿನಾಂಕ:07–05–2026ರಂದುಬೆಳಗ್ಗೆ11:30ಗಂಟೆಗೆ,** ಮುಖ್ಯ ವೈದ್ಯಾಧಿಕಾರಿಗಳು,ತಾಲೂಕು ಸಾರ್ವಜನಿಕಆಸ್ಪತ್ರೆ, ಕೂಡ್ಲಿಗಿ ಇವರ ಕಛೇರಿಯಲ್ಲಿ ಇ–ಪ್ರೋಕ್ಯೂರ್ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು. Tender Value for supply of DIET& Bread: **Rs.70,00,000/-.** EMD: **Rs. 1,40,000/-**

ಇ–ಪ್ರೋಕ್ಯೂರ್ಮೆಂಟ್‌ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್ಮೆಂಟ್ ಪೋರ್ಟಲ್ ವೆಬ್‌ಸೈಟ್ http:// kppp.karnataka.gov.in ಮೂಲಕ ಮಾಹಿತಿ ಪಡೆಯಬಹುದುಅಥವಾಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/–ಮುಖ್ಯ ವೈದ್ಯಾಧಿಕಾರಿಗಳು
ತಾಲೂಕು ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿ, ವಿಜಯನಗರಜಿಲ್ಲೆ

ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/49

ಕರ್ನಾಟಕ ಸರ್ಕಾರ
ಕಲ್ಯಾಣ ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ

"ಅಭಿವೃದ್ಧಿ ಭವನ" ಐವಾನ–ಎ–ಶಾಹಿ, ಕಲಬುರಗಿ–585102, ದೂರವಾಣಿ: (08472) – 256767, 239556, 255564, ಫ್ಯಾಕ್ಸ್ : (08472) 227527
E-mail: hkadbgulb@gmail.com, Website : kkrdb.karnataka.gov.in

ಸಂಖ್ಯೆ:ಕಕಪ್ರಅಮಂ/ಲೆಕ್ಕ ಶಾಖೆ/ ಲೆಅ–2/33/2023–24/640 ದಿನಾಂಕ: 24.04.2026

–: ಸೇರ್ಪಡೆ ಅಧಿಸೂಚನೆ :–

ಈ ಕೆಳಕಂಡ ಸೇರ್ಪಡೆ ಅಧಿಸೂಚನೆಯನ್ನು ಮಂಡಳಿಯಿಂದ ಈಗಾಗಲೇ ಪ್ರಕಟಿಸಿದ ಇ–ಹರಾಜು ಟೆಂಡರ್ ಅಧಿಸೂಚನೆ ಸಂಖ್ಯೆ:KKRDB/Acc/AS-2/33/2025-26 ದಿನಾಂಕ:17–04–2026 ರಲ್ಲಿ ಸಾಮಾನ್ಯ ಷರತ್ತು ಹಾಗೂ ನಿರ್ಬಂಧನೆಗಳ ಕ್ರಮ ಸಂಖ್ಯೆ: xxviii ರ ನಂತರ ಈ ಕೆಳಕಂಡ ಹೊಸ ಷರತ್ತನ್ನು ಸೇರ್ಪಡಿಸಲಾಗಿದೆ.

(xxix) "ಬಿಡ್‌ದಾರರು ನಿಶ್ಚಿತ ಠೇವಣಿಗೆ Non-Callable ಬಡ್ಡಿ ದರವನ್ನು ನಮೂದಿಸಬೇಕು"

ಮೇಲ್ತಿಳಿಸಿದ ಟೆಂಡರ್ ಅಧಿಸೂಚನೆಯಲ್ಲಿ ಇನ್ನಾವುದೇ ಬದಲಾವಣೆಗಳು ಇರುವುದಿಲ್ಲ.

ಸಹಿ/– ಉಪ ಕಾರ್ಯದರ್ಶಿಗಳು,
ಕ.ಕ.ಪ್ರ.ಅ.ಮಂಡಳಿ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/84/ಕೆ.ಎಸ್.ಎಂ.ಸಿ.&ಎ/2026–27

ಪುರಸಭೆ ಕಾರ್ಯಾಲಯ ಲಕ್ಷ್ಮೇಶ್ವರ

ಕರ್ನಾಟಕ ಸರ್ಕಾರ

ತಾ: ಲಕ್ಷ್ಮೇಶ್ವರ ಜಿ: ಗದಗ
e-mail: itstaff_ulb_laxmeshwar@yahoo.co.in Phone:08487-272916
Website:www.laxmeshwartown.gov.in Fax no:08487-272916

ಕಂ/ಪ/ಪುಸಲ/ತಾಂ.ವಿ/ಇ–ಟೆಂಡರ್/ವಹಿ/2026–27 ದಿನಾಂಕ:–27–04–2026

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೋಕ್ಯೂರ್‌ಮೆಂಟ್ ಮೂಲಕ)

ಲಕ್ಷ್ಮೇಶ್ವರ ಪುರಸಭೆ ಸನ್ 2026–27 ನೇ ಸಾಲಿನ ಪುರಸಭೆ ನಿಧಿ ಅನುದಾನದಲ್ಲಿ 1 ರಿಂದ 23 ಕೊಳವೆ ಬಾವಿಯ ವಿವಿಧ ವ್ಯಾಸದ ಮೋಟರ ಹಾಗೂ ಸ್ಟಾರ್ಟ ಮತ್ತು 1 ರಿಂದ 23 ವಾರ್ಡಗಳಲ್ಲಿ ಬರುವತಂಹ ಬೀದಿ ದೀಪಗಳ ನಿರ್ವಹಣೆ ಒಟ್ಟು 2 ಕಾಮಗಾರಿ ಅಂದಾಜು ಮೊತ್ತ **ರೂ 39.27** ಲಕ್ಷಗಳಿಗೆ ಕೆ.ಟಿ.ಟಿ.ಪಿ ಕಾಯ್ದೆ ಅಧಿನಿಯಮ 2000 ರನ್ವಯ ಈ ಕೆಳಗಿನಂತೆ ಇಂಡೆಂಟ್‌ಗಳಲ್ಲಿ ಇ ಟೆಂಡರಗಳನ್ನು ಆಹ್ವಾನಿಸಿದ್ದು ಅರ್ಹ ಬಿಡ್‌ದಾರರು ಟೆಂಡರನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್ **https:/kppp.karnataka.gov.in** ಠೇವಣಿ (ಇಎಂಡಿ) ಮತ್ತು ಟೆಂಡರ ಫೀಯನ್ನು ಇ–ಪ್ರೋಕ್ಯೂರಮೆಂಟ್ ಪೋರ್ಟಲ್‌ನಲ್ಲಿ ಸೂಚಿಸಿದಂತೆ ಪಾವತಿಸಿ ಭಾಗವಹಿಸಬಹುದಾಗಿದೆ. ಟೆಂಡರ ಸಲ್ಲಿಸುವ ಕೊನೆಯ **ದಿನಾಂಕ: 06–05–2026 ರ ಸಂಜೆ 4.00** ಗಂಟೆಯವರೆಗೆ ಟೆಂಡರ ದಿನಾಂಕಗಳನ್ನು ನಿಗಧಿಪಡಿಸಲಾಗಿದೆ. ಹಾಗೂ ಟೆಂಡರಗೆ ಸಂಬಂಧಿಸಿದ ಯಾವುದೆ ಬದಲಾವಣೆಗಳು ಅಥವಾ ತಿದ್ದುಪಡಿಗಳನ್ನು ಇ–portal ನಲ್ಲಿ ಪ್ರಕಟಿಸಲಾಗುವುದು.

ಅ.ನಂ	ಕಾಮಗಾರಿಯ ಇಡೆಂಟ್ ವಿವರ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	DMA/2025-26SE7437	29.27
2	DMA/2025-26/SE7441	10.00

ಸಹಿ/–(ಶ್ರೀ ಮಹಾಂತೇಶ ಎಚ್ ಬೀಳಗಿ)
ಮುಖ್ಯಾಧಿಕಾರಿಗಳು
ಪುರಸಭೆ ಲಕ್ಷ್ಮೇಶ್ವರ

ಸಹಿ/–(ಶ್ರೀ ಗಂಗಪ್ಪ ಎಮ್)
ಉಪವಿಭಾಗಾಧಿಕಾರಿಗಳ ಗದಗ
ಅಧ್ಯಕ್ಷರು
ಪುರಸಭೆ ಲಕ್ಷ್ಮೇಶ್ವರ

ವಾ.ಸಾ.ಸಂ.ಇ/ಗದಗ/42/ದೇಶಪಾಂಡೆಪಬ್ಲಿಸಿಟಿ/2026–27

ಕೇರಳ ರಾಜ್ಯ ಲಾಟರಿ ಫಲಿತಾಂಶ ವಿವರ ಪ್ರಕಟ

ತಿರುವನಂತಪುರಂ: ಕೇರಳ ರಾಜ್ಯ ಲಾಟರಿಯ ಭಾಗ್ಯತಾರ (ನಂ.BT-51) ಡ್ರಾ ಏಪ್ರಿಲ್ 27ರಂದು ತಿರುವನಂತಪುರಂನ ಬೇಕರಿ ಜಂಕ್ಷನ್ ಬಳಿಯ ಗೋರ್ಕಿ ಭವನದಲ್ಲಿ ನಡೆದಿದ್ದು, ಫಲಿತಾಂಶ ವಿವರ ಇಂತಿದೆ.

1st Prize Rs.1,00,00,000/- [1 Crore]
BC 569038 (ENAKULAM)

Consolation Prize Rs.5,000/-
BA 569038 BB 569038 BD 569038 BE 569038
BF 569038 BG 569038 BH 569038 BJ 569038
BK 569038 BL 569038 BM 569038

2nd Prize Rs.30,00,000/- [30 Lakhs]
BC 866899 PATTAMBI

3rd Prize Rs.5,00,000/- [5 Lakhs]
BB 835444 (KOTTAYAM)

FOR THE TICKETS ENDING WITH THE FOLLOWING NUMBERS

4th Prize Rs.5,000/-
0797 0863 1160 1175 1444 1820 2424 3792 3982 5079 5392 5413 5972 6727 7769 8257 8715 8933 9548

5th Prize Rs.2,000/-
0808 4151 4372 6100 6708 9629

6th Prize Rs.1,000/-
0197 0250 0410 0868 1315 1505 1850 2307 2432 3731 4118 5456 5470 5904 6245 6458 6541 6610 6622 6675 6745 7482 7485 8528 8902

7th Prize Rs.500/-
0150 0237 0278 0405 0678 0716 1311 1455 1750 1883 1936 1937 2068 2423 2485 2509 2659 2812 3117 3261 3290 3457 3496 3639 3770 3783 3957 4192 4543 4614 4707 5048 5173 5192 5303 5642 5901 5994 6177 6248 6304 6359 6657 6667 6920 7269 7595 7616 7750 7874 8232 8304 8369 8482 8535 8593 8595 8753 8764 8845 8918 9073 9158 9252 9257 9268 9290 9296 9379 9414 9416 9577 9678 9796 9835 9876

8th Prize Rs.200/-
0046 0057 0114 0173 0253 0389 0764 0835 0906 1086 1098 1366 1376 1580 1716 1794 1801 1879 1917 2101 2242 2494 2703 2840 3189 3265 3291 3544 3545 3589 3601 3717 3727 3936 4132 4147 4310 4503 4528 4820 4840 4925 4958 5092 5190 5227 5401 5412 5415 5562 5637 5691 5814 5951 6067 6120 6251 6263 6387 6467 6590 6627 6637 7031 7144 7166 7245 7459 7514 7556 7562 7795 8058 8162 8330 8334 8441 8505 8831 8862 8940 8953 9024 9058 9142 9183 9200 9228 9292 9511 9788 9816 9868 9938

9th Prize Rs.100/-
0098 0119 0177 0188 0360 0487 0517 0665 0705 0708 0750 0882 0925 0950 1037 1046 1084 1191 1203 1287 1356 1430 1451 1536 1563 1648 1728 1804 1857 1904 1918 1992 2005 2236 2241 2397 2404 2467 2474 2486 2507 2533 2534 2693 2707 2712 2737 3043 3058 3181 3212 3316 3407 3437 3543 3591 3777 3813 3986 4004 4149 4390 4397 4465 4472 4495 4536 4577 4646 4824 4906 4981 5005 5168 5286 5303 5503 5570 5632 5713 5763 5827 5921 5940 6023 6025 6028 6048 6051 6068 6087 6228 6301 6378 6379 6423 6432 6469 6518 6660 6845 6988 7085 7120 7143 7247 7280 7291 7338 7341 7600 7605 7647 7765 7838 7932 8036 8055 8123 8129 8287 8315 8325 8340 8365 8385 8459 8470 8471 8655 8849 8868 8941 9137 9159 9312 9394 9588 9606 9642 9708 9747 9900 9982

IN THE COURT OF THE HONOURABLE I ADDITIONAL SENIOR CIVIL JUDGE AT MANGALURU

Between: O.S. No. 206/2025
Mr. Sathish Jappinamogaru Mahabala ...Plaintiff
And
Mrs. Dildar Jamali & Ors. ...Defendants

TO WHOMSOEVER IT MAY CONCERN

Take notice that the above suit is posted on **11/06/2026, at 11AM** for your appearance. If you fail to appear in person or through advocate, the suit will be decided in your absence.

Defendants Name and address

1. **MRS. DILDAR JAMALI**, Aged about 67 years
2. **MRS. SHAHEEN MOHAMMED IBRAHIM**, Aged about 58 years
3. **MRS. SHAHIDA KHALID**, Aged about 57 years
4. **MR. MOHAMMED ASLAM**, Aged about 55 years
5. **MRS. TAHASEEN ARA**, Aged about 45 years
6. **MRS. TASNEEM RUHI**, Aged about 44 years,

No. 1 is the wife and No. 2, 3, 4, 5 & 6 are the children of Late M. Gulam Mohammed, all are **residing at** : 23-8-527, Mangala Devi Cross Road, Mangalore -575001. D. K.

7. **MRS. AFSARI ANIZ SHEIK**, Aged about 46 years
8. **MISS. AMEERAH AZEEN**, Aged about 19 years
9. **MASTER. AYAAN HAMZA ANIZ SHEIK**, Aged about 17 years Minor represented by mother Afsari Aniz Sheikh
10. **MISS. ALAYNA AZAH ANIZ SHEIK**, Aged about 14 years Minor represented by mother Afsari Aniz Sheik
11. **MISS. AAMINAH ADA ANIZ SHEIK**, Aged about 12 years Minor represented by mother Afsari Aniz Sheik,

No. 7 is the wife and No. 8, 9, 10 & 11 are the children of late Mohammed Aniz Sheik, all are residing at 4-301, Laxmindranagar, 5th cross, Kunjibettu, VTC, Manipal, Udupi 576 104.

Given under my hand and the seal of the court on this **17th day of April 2026.**

BY ORDER OF COURT
Sd/-, Chief Ministerial Officer, Senior Civil Judge Court, Mangaluru,

Mangalore 17.03.2026

Sd/-, M.Damodar Advocate for Plaintiff

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಚೇರಿ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ

Ph.08472 - 220196 e-mail: midnglb@rediffmail.com/midnglb1@gmail.com

ಐಎಫ್‌ಟಿ.ನಂ.ಕಾನಿಅ/ಸನೀಅಅವಿ/ಕ/ಯೋಶಾ–4/ಕೆ.ಡಬ್ಲ್ಯೂ–4/2026–27/534 ದಿನಾಂಕ : 27.04.2026

ಅಲ್ಪಾವಧಿ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–4)

1) **ಕಾಮಗಾರಿ ವಿವರ :** ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ ಕಾರ್ಯಾಲಯದಿಂದ ಅರ್ಹ ಗುತ್ತಿಗೆದಾರರಿಂದ 2025–26ನೇ ಸಾಲಿನ 4702–ಆಣೆಕಟ್ಟು, ಪಿಕಪ್, ಬಂದಾರ ಯೋಜನೆ ಅಡಿ ಹಾಗೂ 4702–ಕೆರೆಗಳ ಆಧುನಿಕರಣ – ಪ್ರಧಾನ ಕಾಮಗಾರಿಗಳು ಯೋಜನೆ ಅಡಿಯಲ್ಲಿ ಕಾಮಗಾರಿಗಳಿಗಾಗಿ ಈ–ಟೆಂಡರ್ ಮುಖಾಂತರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ : **ಗರಿಷ್ಠ ರೂ. 14,49,15,217.67 ಕನಿಷ್ಠ ರೂ. 3,93,37,522.22,** 3) ಗುತ್ತಿಗೆದಾರರ ಅರ್ಹತೆ ವಿವರ : 1ನೇ ದರ್ಜೆ, 4) ಟೆಂಡರ ಅರ್ಜಿಯ ಬೆಲೆ ಮತ್ತು ಇ.ಎಂ.ಡಿ. ಮೊತ್ತದ ವಿವರ : ಅರ್ಜಿಯ ಬೆಲೆ ಕೆ.ಪಿ.ಪಿ.ಪಿ. ನಂತೆ ಇ.ಎಂ.ಡಿ. **ಗರಿಷ್ಠ ರೂ. 14,50,000.00, ಕನಿಷ್ಠ ರೂ.5,96,100.00,** 5) ಪ್ರಿ–ಬಿಡ್ ಮೀಟಿಂಗ್ ದಿನಾಂಕ : **08.05.2026 ಬೆಳಿಗ್ಗೆ 11.00 ಗಂಟೆಯವರೆಗೆ,** 6) ಟೆಂಡರ ಬಗ್ಗೆ ಮಾಹಿತಿ ಹಾಗೂ ಕ್ಲಾರಿಫಿಕೇಶನ್ ಕೊನೆಯ ದಿನಾಂಕ : **11.05.2026 ಬೆಳಿಗ್ಗೆ 11.00 ಗಂಟೆಯವರೆಗೆ** 7) ಟೆಂಡರ ಸ್ವೀಕರಿಸುವ ಕೊನೆಯ ದಿನಾಂಕ : **12.05.2026 ಸಾಯಂಕಾಲ 17.30** ಗಂಟೆಯವರೆಗೆ, 8) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : **13.05.2026 ಸಾಯಂಕಾಲ 17.30 ಗಂಟೆಯವರೆಗೆ,** 9) ಆರ್ಥಿಕ ಬಿಡ್ ತೆರೆಯುವ ದಿನಾಂಕ : **14.05.2026 ಸಾಯಂಕಾಲ 17.30 ಗಂಟೆಯವರೆಗೆ,** 10) ಹೆಚ್ಚಿನ ವಿವರಗಳಿಗೆ : ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಕಲಬುರಗಿ. 11) ಅಂತರಜಾಲ ತಾಣದ ವಿಳಾಸ : https://kppp.karnataka.gov.in

ಸಹಿ/– ಕಾರ್ಯನಿರ್ವಾಹಕ ಅಭಿಯಂತರರು
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ,
ವಿಭಾಗ, ಕಲಬುರಗಿ

ವಾ.ಸಾ.ಸಂ.ಇ.ಕಲಬುರಗಿ/78/ ದೇಶಪಾಂಡೆ ಪಬ್ಲಿಸಿಟಿ/2026–27

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ) ಕರ್ನಾಟಕ ಜಲಸಾರಿಗೆ ಮಂಡಳಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಚೇರಿ, ಕರ್ನಾಟಕ ಜಲಸಾರಿಗೆ ಮಂಡಳಿ, ಬೈತ್‌ಖೋಲ್, ಕಾರವಾರ

ಕ್ರ.ಸಂ. ಕಜಮಂ–04/ಕಾಮಗಾರಿ–II/2026–27 ದಿನಾಂಕ: 24.04.2026

ಆಸಕ್ತಿ ವ್ಯಕ್ತಪಡಿಸುವಿಕೆ (EXPRESSION OF INTEREST)

"Appointment of Independent Valuer for Determination of Land Value and Computation of Additional Concession Fee (ACF) for Keni Port Project, Karnataka" ಕಾಮಗಾರಿಯನ್ನು ಕೈಗೊಳ್ಳಲು ಪೂರ್ವ ಅನುಭವ ಹೊಂದಿರುವ ಹೆಸರಾಂತ, ವಿಶ್ವಾಸಾರ್ಹ, ಸಂಪನ್ಮೂಲ ಮತ್ತು ಅನುಭವಿ ಮತ್ತು ಸಮರ್ಥ ಸಲಹೆಗಾರ ಆಸಕ್ತ ಸಂಸ್ಥೆಗಳಿಂದ ಕೆಳ ಸಹಿದಾರರು ಕೊಟೇಶನ್‌ನ್ನು ಇ–ಪ್ರೊಕ್ಯೂರ್‌ಮೆಂಟ್ **(KPP Portal)** ನಲ್ಲಿ ಆಹ್ವಾನಿಸಿದ್ದಾರೆ.

Sl. No.	Description Of the Work	Qty.	Unit	Rate Excluding GST	
				Figures	words
1	2	3	4	5	6
1	Appointment of Independent Valuer for Determination of Land Value and Computation of Additional Concession Fee (ACF) for Keni Port Project, Karnataka	1	Job		

ಜಿಎಸ್‌ಟಿಯನ್ನು ಹೊರತುಪಡಿಸಿ ಅನ್ವಯವಾಗುವ ಎಲ್ಲಾ ತೆರಿಗೆಗಳು ಹಾಗೂ ಸುಂಕಗಳನ್ನು ಒಳಗೊಂಡಂತೆ ಸಂಪೂರ್ಣವಾಗಿ ಪೂರ್ಣಗೊಂಡ ದರಗಳನ್ನು ದಿನಾಂಕ: 08.05.2026 ರಂದು ಅಥವಾ ಮುಂಚಿತವಾಗಿ ಕೆಳಸಹಿದಾರರಿಗೆ ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಸಲ್ಲಿಸುವುದು. ಈ ಕೊಟೇಶನ್ ದರಗಳು ಅಂದಾಜು ಪಟ್ಟಿ ತಯಾರಿಸಲು / ಇಲಾಖೆಯ ಅನುದಾನ ಹಾಗೂ ಟೆಂಡರ್ ಉದ್ದೇಶದ ಮೌಲ್ಯಮಾಪನಗಳನ್ನು ಪಡೆಯುವ ಸಲುವಾಗಿ ಮಾತ್ರ ಸೀಮಿತವಾಗಿರುತ್ತದೆ. ವಿವರವಾದ ವಿವರಣೆಯು ಅನುಬಂಧ–Aರಲ್ಲಿ ನೀಡಲಾಗಿದೆ. ದಯವಿಟ್ಟು ದರಗಳನ್ನು ಸಲ್ಲಿಸುವ ಮೊದಲು ಇದನ್ನು ಪರಿಶೀಲಿಸಿ. ಯಾವುದೇ ಇತರ ಮಾಹಿತಿಗಾಗಿ ಮತ್ತು ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. **(1) E-mail: piwtdev.wks@gmail.com (2) Phone No. 08382 -221494**

ಸಹಿ/– ಬಂದರು ಇಂಜಿನೀಯರ್
ಕರ್ನಾಟಕ ಜಲಸಾರಿಗೆ ಮಂಡಳಿ, ಕಾರವಾರ

DIPR/KWR/KSMCA/77/26-27 Dt: 27.04.2026

ಪುರಸಭೆ ಕಾರ್ಯಾಲಯ ಹಳಿಯಾಳ (ಉ.ಕ)–581329

ಸಂ. /ಪು.ಹ/ಕಾಮಗಾರಿ ವಿಭಾಗ/ವಿವ//2026–27 ದಿನಾಂಕ: 27/04/2026

ಟೆಂಡರ್ ಮತ್ತು ಮರು ಟೆಂಡರ್ ಪ್ರಕಟಣೆ
(Kppp portal ಮುಖಾಂತರ ಮಾತ್ರ)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾಯ್ದೆ –1999 ನಿಯಮಾವಳಿ 2000 ರಂತೆ ಪುರಸಭೆ ಹಳಿಯಾಳದ 2026–27 ನೇ ಸಾಲಿನ ಎಸ್.ಎಫ್.ಸಿ Capital Assets ಮತ್ತು 2026–27ನೇ ಸಾಲಿನ ಪುರಸಭೆ ನಿಧಿ, 15ನೇ ಹಣಕಾಸು ಆಯೋಗದ ಬಡ್ಡಿ ಮೊತ್ತ ಹಾಗೂ SBM 2.0 ಯೋಜನೆಯಡಿ ಕಾಮಗಾರಿಗಳಿಗೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಸಿವ್ಹಿಲ್ ಗುತ್ತಿಗೆದಾರರಿಂದ ಟೆಂಡರ್ ಡಾಕ್ಯುಮೆಂಟ್ KW-1 ರ ನಿಬಂಧನೆಗೊಳಪಟ್ಟಂತೆ ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಮತ್ತು ಕಾಯ್ದೆ – 1999 ನಿಯಮಾವಳಿ 2000 ರಂತೆ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಟೆಂಡರ್ Kppp portal ನಲ್ಲಿ ನೊಂದಾಯಿತ ಗುತ್ತಿಗೆದಾರರಿಂದ ನಿಶ್ಚಿತ ಕಾಮಗಾರಿಯ ಹೆಸರನ್ನು ನಮೂದಿಸಿದ ಐಟಂವಾರು ಟೆಂಡರಗಳನ್ನು Kppp portal ಮೂಲಕ ಸ್ವೀಕರಿಸಲಾಗುವುದು. ಟೆಂಡರನಲ್ಲಿಯ ನಿಬಂಧನೆಗಳನ್ನು ಹಾಗೂ ಷರತ್ತುಗಳ ವಿವರಗಳನ್ನು http://kppp.karnataka.gov.in ರಲ್ಲಿ ಪಡೆಯಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ಪುರಸಭೆಯ ಅಂತರಜಾಲ www.haliyalatown.mrc.gov.in ನಲ್ಲಿ ಪಡೆಯಬಹುದು.

Sl. No	Work Indent No	Amount put to Tender (In Lakhs)	Contractor Category
1	DMA/2026-27/OW/ WORK_INDENT57629	5.63	Others
2	DMA/2025-26/OW/ WORK_INDENT56330/CALL-2	10.17	Others
3	DMA/2025-26/BD/ WORK_INDENT56599/CALL-2	12.70	Others

ಕ್ರ. ಸಂಖ್ಯೆ 1 ರ ಕಾಮಗಾರಿಗೆ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ. (1) Kppp portal ಮುಖಾಂತರ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 05/05/2026 17–00 ಗಂಟೆಯವರೆಗೆ. (2) Kppp portal ಮುಖಾಂತರ ಟೆಂಡರಗಳನ್ನು ತೆರೆಯುವ ದಿನಾಂಕ: 06/05/2026 17–30 ಗಂಟೆಗೆ. ಕ್ರ. ಸಂಖ್ಯೆ 2 ರಿಂದ 3 ರ ವರೆಗಿನ ಕಾಮಗಾರಿಗಳಿಗೆ ದಿನಾಂಕವನ್ನು ನಿಗಧಿಪಡಿಸಲಾಗಿರುತ್ತದೆ. (1) Kppp portal ಮುಖಾಂತರ ಟೆಂಡರಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 11/05/2026 17–00 ಗಂಟೆಯವರೆಗೆ. (2) Kppp portal ಮುಖಾಂತರ ಟೆಂಡರಗಳನ್ನು ತೆರೆಯುವ ದಿನಾಂಕ: 12/05/2026 17–30 ಗಂಟೆಗೆ. (ರಜಾ ಇದ್ದಲ್ಲಿ ಬೇರೆ ದಿನಾಂಕ ತಿಳಿಸಲಾಗುವುದು)

ಸಹಿ/– ಮುಖ್ಯಾಧಿಕಾರಿ,
ಪುರಸಭೆ, ಹಳಿಯಾಳ (ಉ.ಕ)

DIPR/KWR/KSMCA/78/26-27 dt: 27.04.2026

IN THE COURT OF PRINCIPAL CIVIL JUDGE AND JMFC AT PUTTUR D.K.

P & S.C. NO: 1/2026

Between:
1. Smt. Maimoona
W/o Abdul Khadar
Aged about 47 years
R/at Kukkaje House
Badagannuru Village
Puttur Taluk D.K-574223.
2. Aysamma W/o Ibrahim
Aged about 58 years
R/at Kukkaje House
Badagannuru Village
Puttur Taluk D.K-574223.
3. Rukiya
W/o Abdul Hameed K.H
Aged about 50 years
Karnadka House
Paduvannuru Village
Ishwaramangala Post
Puttur Taluk D.K
...Petitioners
And
Nil ...Respondent

PUBLIC NOTICE

Whereas the above named petitioners have filed petition under section 372 of Indian Succession Act seeking succession certificate in the name of 1st petitioner for claim of EPF organization ROC benefit of Late Smt. Nebisa, PPO NO:KN/MLR/17595. If anybody having any objection, here by directed to appear before this Court on **02.05.2026 at 11:00 AM.** Otherwise the Court will pass appropriate orders in their absence.

Given under my hand seal of this Court on this 16th day of March 2026.

(By order of the Court)
Sd/- Shirastedar
Principal Civil Judge
at Puttur D.K.

Sd/- Advocate for Petitioner

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ.

ಸಂಖ್ಯೆ:ಕಾಪಾಅ/ಪಂರಾಇಂ/ವಿಯಾ/ಮಾಮಮಮ&ಪಜಾ.ಪಪಂಯೋ/2026–27/ 175 ದಿ: 27.04.2026

ಸಂಕ್ಷಿಪ್ತ ಟೆಂಡರ ಪ್ರಕಟಣೆ (ಅಲ್ಪಾವಧಿ) KW-2, & 3 (ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

1) **ಕಾಮಗಾರಿಗಳ ಹೆಸರು ಮತ್ತು ಇಂಡೆಂಟ್ ಸಂಖ್ಯೆ:** (1) ಹುಣಸಗಿ ತಾಲ್ಲೂಕಿನ ಹೊಂಬಳಕಲ್ ಬಲಶೆಟ್ಟಿಹಾಳ ಗ್ರಾಮದ ಹಳೆಯ ಮಾರ್ಗಕ್ಕೆ ಸೇತುವೆ ನಿರ್ಮಾಣ RDPR/2025-26/RD/WORK_INDENT22817/ CALL-2 Others (2) ಸುರಪೂರ ತಾಲೂಕಿನ ಚನ್ನಪಟ್ಟಾ ಗ್ರಾಮದಲ್ಲಿ ಸಿ.ಡಿ. ನಿರ್ಮಾಣ RDPR/2025-26/RD/WORK_INDENT21785/CALL-2 (CAT-II(A) Bidders Only) 2) **ಲೆಕ್ಕ ಶೀರ್ಷಿಕೆ:**2025–26 ನೇ ಸಾಲಿನ ಮಾನ್ಯ ಮುಖ್ಯಮಂತ್ರಿಯವರ ಮೂಲಸೌಕರ್ಯ ಅಭಿವೃದ್ಧಿ ಯೋಜನೆ ಮತ್ತು 2025 26ನೇ ಸಾಲಿನ 5054 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಯೋಜನೆ 3) **ಟೆಂಡರಿಗಿಟ್ಟ ಅಂದಾಜು ಮೊತ್ತ:** ಕನಿಷ್ಠ 25.00 ಮತ್ತು ಗರಿಷ್ಠ ರೂ. 75.00 ಲಕ್ಷ 4) **ಗುತ್ತಿಗೆದಾರರ ದರ್ಜೆ:** 4ನೇ ಮತ್ತು 3ನೇ ದರ್ಜೆ ಮೇಲ್ಪಟ್ಟು 5) **ಟೆಂಡರ ಫಾರಂ ಪಡೆಯಲು ಕೊನೆಯ ದಿನಾಂಕ:** 29.04.2026 ರಿಂದ 08.05.2026 ಸಾಯಂಕಾಲ 4:00 ಗಂಟೆವರೆಗೆ 6) **ಟೆಂಡರ ಅರ್ಜಿ ಬೆಲೆ ಮತ್ತು ಇ.ಎಂ.ಡಿ. ಮೊತ್ತ:** ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ನಮೂದಿಸಿದಂತೆ (ಅರ್ಜಿ ಶುಲ್ಕ ಹಿಂದಿರುಗಿಸಲಾಗುವುದಿಲ್ಲಾ) 7) **ಟೆಂಡರ ಫಾರಂ ಸಲ್ಲಿಸುವ ಅಂತಿಮ ದಿನಾಂಕ:** 08.05.2026 ಸಾಯಂಕಾಲ 4:00 ಗಂಟೆವರೆಗೆ 8) **ಟೆಂಡರ ತೆರೆಯುವ ದಿನಾಂಕ ತಾಂತ್ರಿಕ ಬಿಡ್ (ಕೆ.ಡಬ್ಲ್ಯೂ– 3):** 11.05.2026 ಬೆಳ್ಳಿಗೆ 9:00 ನಂತರ 9) **ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್ (ಕೆ.ಡಬ್ಲ್ಯೂ– 2):** 11.05.2026 ಬೆಳ್ಳಿಗೆ 9.00 ನಂತರ 10) **ಟೆಂಡರ ತೆರೆಯುವ ದಿನಾಂಕ ಆರ್ಥಿಕ ಬಿಡ್(ಕೆ.ಡಬ್ಲ್ಯೂ– 3):**15.05.2026 ಬೆಳ್ಳಿಗೆ 11:00 ನಂತರ 11) **ಹೆಚ್ಚಿನ ವಿವರಗಳಿಗೆ ಸಂಪರ್ಕಿಸಬೇಕಾದ ವಿಳಾಸ (ಕಛೇರಿ ಅವಧಿಯಲ್ಲಿ):** ಕಾರ್ಯನಿರ್ವಾಹಕ ಅಭಿಯಂತರವರ ಕಛೇರಿ ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಯಾದಗಿರ. 12) **ಅಂತರಜಾಲ ತಾಣದ ವಿಳಾಸ:** https://kppp.karnataka.gov.in

ಸೂಚನೆ:– ಟೆಂಡರರಿಗೆ ಸಂಬಂದಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ https://kppp.karnataka.gov.in/ ವೆಬ್‌ಸೈಟ್‌ನಲ್ಲಿ ಪಡೆಯಬಹುದು (ರಜಾದಿನಗಳು ಹೊರತುಪಡಿಸಿ).

ಸಹಿ/– ಕಾರ್ಯಪಾಲಕ ಇಂಜಿನೀಯರರು,
ಪಂಚಾಯತ್ ರಾಜ್ ಇಂಜಿನೀಯರಿಂಗ್ ವಿಭಾಗ,
ಯಾದಗಿರ.

ವಾ.ಸಾ.ಸಂ.ಇ/ಯಾದಗಿರಿ/39/ಕೆ.ಎಸ್.ಎಂ.ಸಿ&ಎ/2026–27

pnb Housing Finance Limited — Ghar Ki Baat

ಅನುಬಂಧ 4 ಎ ಇ–ಹರಾಜು– ಸ್ಥಿರಾಸ್ತಿ(ಗಳ) ಸಾರ್ವಜನಿಕ ಮಾರಾಟ ನೋಟಿಸ್

ಸೆಕ್ಯುರಿಟೈಸೇಷನ್ ಅಂಡ್ ರೀಕನ್‌ಸ್ಟ್ರಕ್ಷನ್ ಆಫ್ ಫೈನಾನ್ಷಿಯಲ್ ಅಸೆಟ್ ಮತ್ತು ಎನ್‌ಫೋರ್ಸ್‌ಮೆಂಟ್ ಆಫ್ ಸೆಕ್ಯುರಿಟಿ ಇಂಟರೆಸ್ಟ್ ಕಾಯ್ದೆ–2002 ಮತ್ತು ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್) ನಿಯಮಾವಳಿ–2002ರ ನಿಯಮ 8(6)ರ ಅಡಿಯಲ್ಲಿ ಸ್ಥಿರಾಸ್ತಿಗಳ ಮಾರಾಟಕ್ಕೆ ಇ–ಹರಾಜು ಮಾರಾಟ ನೋಟಿಸ್

ನೋಂದಾಯಿತ ಕಚೇರಿ: 9ನೇ ಮಹಡಿ, ಅಂತರಿಕ್ಷ ಭವನ, 22, ಕಸ್ತೂರ್ಬಾ ಗಾಂಧಿ, ನವದೆಹಲಿ– 110001 ದೂರವಾಣಿ: 011–23357171, 23357172, 23705414, ವೆಬ್‌ಸೈಟ್: www.pnbhousing.com

ಮಂಗಳೂರು ಶಾಖಾ ಕಚೇರಿ: ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್, 2ನೇ ಮಹಡಿ, ಕ್ಯಾಬಿನ್ 7 & 8, ಕುಶೆ ಸದನ, ಕೆ.ಆರ್.ರಾವ್ ರಸ್ತೆ, ಪಿವಿಎಸ್ ಸರ್ಕಲ್, ಕೊಡಿಯಾಲ್‌ಬೈಲ್, ಮಂಗಳೂರು– 575003

ಈ ಮೂಲಕ ಸಾರ್ವಜನಿಕರಿಗೆ ಮತ್ತು ನಿರ್ದಿಷ್ಟವಾಗಿ ಕಲಂ ಸಂಖ್ಯೆ –ಎ ರಲ್ಲಿ ಸೂಚಿಸಿದ ಸಾಲಗಾರ(ರು) ಮತ್ತು ಜಾಮೀನುದಾರರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಕಲಂ ಸಂಖ್ಯೆ–ಡಿ ನಲ್ಲಿ ವಿವರಿಸಲಾದ ಸ್ಥಿರ ಆಸ್ತಿ(ಗಳು) ಭದ್ರತಾ ಸಾಲದಾರರಿಗೆ ಅಡಮಾನ/ಚಾರ್ಜ್ ಮಾಡಲಾಗಿದೆ, ಅದರ ರಚನಾತ್ಮಕ/ಭೌತಿಕ ಸ್ವಾಧೀನವನ್ನು ಮೆಸರ್ಸ್ ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್ (ಪಿಎನ್‌ಬಿ ಎಚ್‌ಎಫ್‌ಎಲ್)/ ಭದ್ರತಾ ಸಾಲದಾರರ ಅಧಿಕೃತ ಅಧಿಕಾರಿ (ಕಾಲಮ್ ಸಂಖ್ಯೆ – ಸಿ ನಲ್ಲಿ ವಿವರಿಸಿದಂತೆ) ತೆಗೆದುಕೊಂಡಿದ್ದಾರೆ. ಇವುಗಳನ್ನು ಕೆಳಗೆ ನಮೂದಿಸಿದ ವಿವರಗಳ ಪ್ರಕಾರ 'ಎಲ್ಲಿ ಇದೆಯೋ, ಏನಿದೆಯೋ ಮತ್ತು ಏನೇನು ಇದೆಯೋ ಅದು ಆಧಾರದಲ್ಲಿ' ಮಾರಾಟ ಮಾಡಲಾಗುತ್ತದೆ. ಈ ಮೂಲಕ ಸಾಲಗಾರ(ರು)/ಅಡಮಾನದಾರ(ರು)/ಕಾನೂನು ಉತ್ತರಾಧಿಕಾರಿಗಳು, ಕಾನೂನು ಪ್ರತಿನಿಧಿ, (ತಿಳಿದ ಅಥವಾ ತಿಳಿಯದ), ನಿರ್ವಾಹಕರು(ರು), ಆಡಳಿತದಾರ(ರು), ಉತ್ತರಾಧಿಕಾರಿ(ರು), ಆಯಾ ಸಾಲಗಾರರು/ಅಡಮಾನದಾರರ ನಿಯೋಜಿತ(ರು), (ಮರಣ ಹೊಂದಿದ ಹಿನ್ನೆಲೆಯಲ್ಲಿ) ಪ್ರಕರಣದಂತೆ ಕಾಲಂ ಸಂಖ್ಯೆ – ಎ ಯಲ್ಲಿ ಸೂಚಿಸಿದಂತೆ ಸೆಕ್ಯುರಿಟಿ ಇಂಟರೆಸ್ಟ್ ಎನ್‌ಫೋರ್ಸ್‌ಮೆಂಟ್ ರೂಲ್ಸ್, 2002ರ ನಿಯಮ 8(6) ಮತ್ತು 9(1)ರ ಅಡಿಯಲ್ಲಿ ಮತ್ತು ಆ ಬಳಿಕ ಆಗಿರುವ ತಿದ್ದುಪಡಿಗಳ ಅನ್ವಯ ಮಾರಾಟ ಮಾಡಲಾಗುತ್ತದೆ. ಮಾರಾಟದ ವಿವರವಾದ ನಿಯಮಗಳು ಮತ್ತು ಷರತ್ತುಗಳಿಗಾಗಿ, ದಯವಿಟ್ಟು ಮೆಸರ್ಸ್ ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್(ಪಿಎನ್‌ಬಿ ಎಚ್‌ಎಫ್‌ಎಲ್), ಭದ್ರತಾ ಸಾಲಗಾರರ ವೆಬ್‌ಸೈಟ್ ಅಂದರೆ www.pnbhousing.com. ನೋಡಿ.

ಸಾಲಸಂಖ್ಯೆ/ ಸಾಲಗಾರರು/ ಸಹ ಸಾಲಗಾರರು/ ಜಾಮೀನುದಾರರು/ ಕಾನೂನಾತ್ಮಕ ಉತ್ತರಾಧಿಕಾರಿ ಹೆಸರು (ಎ)	ಡಿಮ್ಯಾಂಡ್ ಮಾಡಲಾದ ಮೊತ್ತ & ದಿನಾಂಕ (ಬಿ)	ಸ್ವಾಧೀನ ಸ್ವರೂಪ (ಸಿ)	ಅಡಮಾನ ಮಾಡಲಾದ ಆಸ್ತಿಗಳ ವಿವರ (ಡಿ)	ಮೀಸಲು ಬೆಲೆ (ಆರ್‌ಪಿ) (ಇ)	ಇಎಂಡಿ (ಆರ್‌ಪಿಯ ಶೇಕಡ 10) (ಎಫ್)	ಬಿಡ್ ಸಲ್ಲಿಕೆ ಕೊನೆಯ ದಿನಾಂಕ(ಜಿ)	ಬಿಡ್ ಏರಿಕೆ ದರ (ಎಚ್)	ವೀಕ್ಷಣೆ ದಿನಾಂಕ ಹಾಗೂ ಸಮಯ (ಐ)	ಹರಾಜು ದಿನಾಂಕ ಮತ್ತು ಸಮಯ (ಜೆ)	ಋಣ ಭಾರಗಳು/ ನ್ಯಾಯಾಲಯ ಪ್ರಕರಣ ಯಾವುದಾದರೂ ಇದ್ದಲ್ಲಿ (ಕೆ)
ಎಚ್‌ಓಯು/ಎಂಎನ್‌ಎಲ್‌ಆರ್/0124/1205136 ಸತೀಶ ಎಚ್.ಇ, ಸವಿತಾ ಸವಿತಾ ಶಾಖಾ ಕಚೇರಿ: ಮಂಗಳೂರು	ರೂ. 6,29,458 & 04–08–2025	ಭೌತಿಕ ಸ್ವಾಧೀನ	ಸರ್ವೆ ನಂ. 184/6, ಮಾಲಾಡಿ ಗ್ರಾಮ, ಬೆಳ್ತಂಗಡಿ ತಾಲೂಕು, ಮಂಗಳೂರು, ದಕ್ಷಿಣ ಕನ್ನಡ, ಕರ್ನಾಟಕ– 574224, ಭಾರತ.	ರೂ. 15,59,000	ರೂ. 1,55,900	14–05–2026	ರೂ. 10,000	05–05–2026 ಬೆಳಗ್ಗೆ 11.00 ರಿಂದ ಸಂಜೆ 5.00	15–05–2026 ಮಧ್ಯಾಹ್ನ 02.00 ರಿಂದ ಸಂಜೆ 3.00	ತಿಳಿದಿಲ್ಲ

* ಇದರ ಜತೆಗೆ ಪೂರ್ಣ ಮೊತ್ತ ಪಾವತಿ ಮತ್ತು/ ಅಥವಾ ನಗದೀಕರಣಗೊಳ್ಳುವವರೆಗೆ ಅನ್ವಯವಾಗುವ ವಾರ್ಷಿಕ ಶೇಕಡ 18ರ ಬಡ್ಡಿ, ಸಾಂದರ್ಭಿಕ ವೆಚ್ಚಗಳು, ಖರ್ಚು, ಶುಲ್ಕ ಇತ್ಯಾದಿ. ** ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್‌ನ ಅಧಿಕೃತ ಅಧಿಕಾರಿಗೆ ತಿಳಿದಿರುವಂತೆ ಮತ್ತು ಮಾಹಿತಿ ಇರುವಂತೆ ಮೇಲೆ ಹೆಸರಿಸಿದ ಸ್ಥಿರಾಸ್ತಿ/ ಭದ್ರತಾ ಆಸ್ತಿಗಳಿಗೆ ಕಲಂ ನಂ. ಕೆ ಅಡಿಯಲ್ಲಿ ಬಹಿರಂಗಗೊಳಿಸಿದ ಋಣಭಾರಗಳು ಹೊರತುಪಡಿಸಿ ಯಾವುದೇ ಋಣಭಾರ ಇರುವುದಿಲ್ಲ. ಇದಲ್ಲದೇ ಸೃಷ್ಟಿಸಿದ/ ಪಾವತಿಸಬೇಕಾದ ಇಂಥ ಋಣಭಾರಗಳನ್ನು ಯಶಸ್ವಿ ಖರೀದಿದಾರರು/ ಬಿಡ್ಡರ್‌ಗಳು ಆತ/ ಆಕೆ ಪಾವತಿಸಬೇಕು. ಸಂಭಾವ್ಯ ಖರೀದಿದಾರರು/ಬಿಡ್ಡರ್‌ಗಳು ಸ್ವತಂತ್ರವಾಗಿ ಹೆಸರಿಸಿದ ಋಣಭಾರಗಳನ್ನು ದೃಢೀಕರಿಸಿಕೊಳ್ಳಬೇಕು. 1. ಈ ದಿನಾಂಕದವರೆಗೆ, ಮೇಲಿನ ಸ್ಥಿರ ಆಸ್ತಿಗಳು/ಭದ್ರತಾ ಸ್ವತ್ತುಗಳನ್ನು ಮಾರಾಟ ಮಾಡುವುದು, ಅನ್ಯಗೊಳಿಸುವುದು ಮತ್ತು/ಅಥವಾ ವಿಲೇವಾರಿ ಮಾಡುವುದಕ್ಕೆ ಪಿಎನ್‌ಬಿಎಚ್‌ಎಫ್‌ಎಲ್‌ನ ಅಧಿಕೃತ ಅಧಿಕಾರಿಯನ್ನು ನಿರ್ಬಂಧಿಸುವ ಮತ್ತು/ಅಥವಾ ನ್ಯಾಯಾಲಯದ ತಡೆಯಾಜ್ಞೆ ಇಲ್ಲ. 2. ನಿರೀಕ್ಷಿತ ಖರೀದಿದಾರರು/ಬಿಡ್‌ದಾರರು ಮತ್ತು ಆಸಕ್ತರು ಕಾಲಂ ನಂ.–ಕೆ ಯಲ್ಲಿ ತಿಳಿಸಲಾದ ಪ್ರಕ್ರಿಯೆಗಳು/ಆದೇಶಗಳು ಇತ್ಯಾದಿಗಳಲ್ಲಿ ಯಾವುದಾದರೂ ಇದ್ದರೆ ಸ್ವತಂತ್ರವಾಗಿ ಮನವಿಯ ಪರಿಶೀಲನೆಯನ್ನು ಮಾಡಹುದು. ಲಭ್ಯವಿರುವ ಶೀರ್ಷಿಕೆಯ ದಾಖಲೆಗಳ ಶೀರ್ಷಿಕೆ ಸೇರಿದಂತೆ ಆದರೆ ಅಷ್ಟಕ್ಕೇ ಸೀಮಿತವಾಗದೇ ಪಿಎನ್‌ಬಿಎಚ್‌ಎಫ್‌ಎಲ್ ಬಳಿ ಮತ್ತು ಟೆಂಡರ್/ಬಿಡ್ ಅರ್ಜಿ ನಮೂನೆಯನ್ನು ಸಲ್ಲಿಸುವ ಮೊದಲು ಅಥವಾ ಆಫರ್(ಗಳನ್ನು) ಮಾಡುವ ಮೊದಲು ಎಲ್ಲಾ ರೀತಿಯಲ್ಲೂ ತಮ್ಮನ್ನು ತೃಪ್ತಿಪಡಿಸಿಕೊಳ್ಳಿ. ಬಿಡ್ ಫಾರ್ಮ್‌ನೊಂದಿಗೆ ಈ ಹರಾಜಿನ ನಿಯಮಗಳು ಮತ್ತು ಷರತ್ತುಗಳಿಗೆ ಬಿಡ್ಡುದಾರರು ಸಹಿ ಹಾಕಬೇಕು. 3. ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 9(3) ರ ಪ್ರಕಾರ, ಬಿಡ್ಡುದಾರರು/ಖರೀದಿದಾರರು ಮಾರಾಟದ ಬೆಲೆಯ 25% ಮೊತ್ತವನ್ನು (ಇಎಂಡಿ ಮೊತ್ತವನ್ನು ಪಾವತಿಸಿದ್ದಲ್ಲಿ ಅದನ್ನು ಹೊರತುಪಡಿಸಿ) ಅದೇ ದಿನ ಅಥವಾ ಮುಂದಿನ ಕೆಲಸದ ದಿನಕ್ಕಿಂತ ಮೊದಲು ಠೇವಣಿ ಮಾಡಲು ಕಾನೂನುಬದ್ಧವಾಗಿ ಬದ್ಧರಾಗಿದ್ದಾರೆ, ಸೆಕ್ಯುರಿಟಿ ಇಂಟರೆಸ್ಟ್ (ಎನ್‌ಫೋರ್ಸ್‌ಮೆಂಟ್ ರೂಲ್ಸ್– 2002ರ ನಿಯಮ 9(2) ರ ಅನುಸಾರವಾಗಿ ಭದ್ರತಾ ಸಾಲದಾರರು ಮಾರಾಟದ ಬೆಲೆಯ 25% ರ ಸ್ವೀಕೃತಿಯ ನಂತರ ಮಾತ್ರವೇ (ಬಿಡ್ಡರ್(ಗಳು) ಪರವಾಗಿ ಮಾರಾಟವನ್ನು ದೃಢೀಕರಿಸುತ್ತಾರೆ. ಉಳಿದ 75% ಮಾರಾಟದ ದೃಢೀಕರಣ ಪತ್ರದ ಸ್ವೀಕೃತಿಯ ದಿನಾಂಕದಿಂದ 15 ದಿನಗಳ ಒಳಗೆ ಖರೀದಿದಾರರಿಂದ ಮಾರಾಟದ ಪರಿಗಣನೆಯ ಮೊತ್ತವನ್ನು ಠೇವಣಿ ಮಾಡಬೇಕು ಮತ್ತು ಅಂತಹ ಠೇವಣಿಯ ಪೂರ್ವನಿಯೋಜಿತವಾಗಿ, ಆಸ್ತಿ/ಭದ್ರಪಡಿಸಿದ ಆಸ್ತಿಯನ್ನು ಮರುಮಾರಾಟ ಮಾಡಲಾಗುತ್ತದೆ. 4. ತನ್ನ ಕಾರ್ಪೊರೇಟ್ ಕಚೇರಿಯನ್ನು 605ಎ, 6ನೇ ಮಹಡಿ, ಮೈತ್ರಿವನಂ, ಅಮೀರ್‌ಪೇಟೆ, ಹೈದರಾಬಾದ್– 500038, ವೆಬ್‌ಸೈಟ್: info@bankauctions.in ವಿಳಾಸದಲ್ಲಿ ಹೊಂದಿರುವ ಮೆಸರ್ಸ್ ಫೋರ್‌ಕ್ಲೋಶರ್‌ಇಂಡಿಯಾ.ಕಾಮ್, ಅಧಿಕೃತ ಅಧಿಕಾರಿಗೆ ಇ–ಹರಾಜು ಮಾರಾಟ ಮಾಡಲು ನೆರವಾಗುತ್ತದೆ. ಆಸ್ತಿಯ ಪರಿಶೀಲನೆಗೆ ಅಥವಾ ಬಿಡ್ ದಾಖಲೆಗಳನ್ನು ಪಡೆಯಲು ಮತ್ತು ಯಾವುದೇ ಇತರ ಪ್ರಶ್ನೆಗೆ ಅಥವಾ ನೋಂದಣಿಗಾಗಿ, ಯಾವುದೇ ಸಹಾಯಕ್ಕಾಗಿ ನೀವು ಪಿಎನ್‌ಬಿಎಚ್‌ಎಫ್‌ಎಲ್‌ನ ಅಧಿಕೃತ ಅಧಿಕಾರಿ ವಿಜಯ್ ಸುಂದ್ರಿಯಾಲ್/ಸುಂದರ್/ಬಾಲಾಜಿ/ವಿಜಯ್ ಮೊಬೈಲ್:742 8193765/9900296507/7022522855/7676930309, ಟೋಲ್‌ಫ್ರೀ ಸಂಖ್ಯೆ– 18001208800. auction@pnbhousing.com ಅವರನ್ನು ಸಂಪರ್ಕಿಸಹುದು ಅಥವಾ www.auction@pnbhousing.com ವೀಕ್ಷಿಸಬಹುದು.

ಸ್ಥಳ: ಮಂಗಳೂರು, ದಿನಾಂಕ: 28.04.2026

ಸಹಿ/–ಅಧಿಕೃತ ಅಧಿಕಾರಿ, ಪಿಎನ್‌ಬಿ ಹೌಸಿಂಗ್ ಫೈನಾನ್ಸ್ ಲಿಮಿಟೆಡ್

ಕಿರು ಸುದ್ದಿ

ಜನಿವಾರ ಪ್ರಕರಣ: ಕೂಟ ಮಹಾಜಗತ್ತು ಖಂಡನೆ

ಮಂಗಳೂರು: ಸಿಇಟಿ ಪರೀಕ್ಷಾ ಕೇಂದ್ರಗಳಲ್ಲಿ ಬ್ರಾಹ್ಮಣ ವಿದ್ಯಾರ್ಥಿಗಳಿಂದ ಜನಿವಾರವನ್ನು ಬಲವಂತವಾಗಿ ತೆಗೆಸಿದ ಅವಮಾನಕಾರಿ ಘಟನೆಯನ್ನು ಕೂಟ ಮಹಾಜಗತ್ತು ಮಂಗಳೂರು ಅಂಗಸಂಸ್ಥೆ ಖಂಡಿಸಿದೆ. ಜನಿವಾರ ಬ್ರಾಹ್ಮಣ ಸಮಾಜದ ಧಾರ್ಮಿಕ ಹಕ್ಕು, ಧಾರ್ಮಿಕ ಪರಂಪರೆ ಗೌರವದ ಪ್ರತೀಕವಾಗಿದೆ, ಇದನ್ನು ಅವಮಾನಿಸುವ ಯಾವುದೇ ನಡೆಯನ್ನು ಬ್ರಾಹ್ಮಣ ಸಮಾಜ ಯಾವತ್ತೂ ಸಹಿಸುವುದಿಲ್ಲ. ಕಳೆದ ಬಾರಿಯೂ ಇಂತಹ ಘಟನೆ ನಡೆದಿದ್ದು, ಆದರೂ ಸರಕಾರ, ಅಧಿಕಾರಿಗಳು ಎಚ್ಚೆತ್ತುಗೊಂಡಿಲ್ಲ ಎಂಬುದು ಸ್ಪಷ್ಟ. ಇಂತಹ ಘಟನೆ ಮುಂದಕ್ಕೆ ನಡೆಯದಂತೆ ಸಂಬಂಧಪಟ್ಟವರು ಎಚ್ಚರಿಕೆ ವಹಿಸಬೇಕೆಂದು ಕೂಟ ಮಹಾಜಗತ್ತಿನ ಮಂಗಳೂರು ಅಂಗಸಂಸ್ಥೆಯ ಅಧ್ಯಕ್ಷ ಶ್ರೀಧರ ಹೊಳ್ಳ ಒತ್ತಾಯಿಸಿದ್ದಾರೆ.

ಮುಡಿಪುನಡ್ಕ : ನೂತನ ಭಜನಾ ಮಂದಿರ ನಿರ್ಮಾಣಕ್ಕೆ ನಿರ್ಧಾರ

ನಿಡ್ಪಳ್ಳಿ: ಮುಡಿಪುನಡ್ಕದ ಶ್ರೀಕೃಷ್ಣ ಭಜನಾ ಮಂದಿರದಲ್ಲಿ ಒಂದು ದಿನದ ತಾಂಬೂಲ ಪ್ರಶ್ನೆ ನಡೆಯಿತು. ಜ್ಯೋತಿಷ್ಯ ಸಜೀಸ್ ಮುಳ್ಳೇರಿಯ ಅವರಿಂದ ಪ್ರಶ್ನಾ ಚಿಂತನೆ ನಡೆಯಿತು. ಭಜನಾ ಮಂದಿರ ನಿರ್ಮಾಣವಾಗಿ 25 ವರ್ಷ ಕಳೆದ ಕಾರಣ ನೂತನ ಮಂದಿರ ನಿರ್ಮಾಣ ಮತ್ತು ಉಪ ಕಟ್ಟಡಗಳ ನಿರ್ಮಾಣ ಮಾಡುವ ಬಗ್ಗೆ ಈ ಪ್ರಶ್ನಾ ಚಿಂತನೆ ನಡೆಸಲಾಯಿತು. ಮಂದಿರದ ಸುತ್ತ ಇರುವ ಜಾಗಕ್ಕೆ ಆವರಣ ಗೋಡೆ ರಚಿಸುವ ಬಗ್ಗೆಯೂ ನಿರ್ಧರಿಸಲಾಯಿತು. ಭಜನಾ ಮಂದಿರದ ಗೌರವಾಧ್ಯಕ್ಷ ನಾಗೇಶ ಗೌಡ ಪುಳಿತ್ತಡಿ, ಅಧ್ಯಕ್ಷ ಜಯಪ್ರಕಾಶ್ ಆಚಾರ್ಯ ಕುಡ್ಚಿಲ, ಕಾರ್ಯದರ್ಶಿ ಷಣ್ಮುಖ ಮುಂಡಾಜೆ, ಕೋಶಾಧಿಕಾರಿ ನಾರಾಯಣ ಪೂಜಾರಿ ಮುಡಿಪುನಡ್ಕ ಹಾಗೂ ಸದಸ್ಯರು, ಬೆಳ್ಳಿ ಹಬ್ಬ ಆಚರಣಾ ಸಮಿತಿ ಅಧ್ಯಕ್ಷ ಜನಾರ್ದನ ಪೂಜಾರಿ ಪದಡ್ಕ, ಕಾರ್ಯದರ್ಶಿ ಶ್ರೀನಿವಾಸ ಹೊಯಿಗೆಗದ್ದೆ ಮತ್ತಿತರರು ಉಪಸ್ಥಿತರಿದ್ದರು

ಕುತ್ತಿಕೋಲ್‌ನಲ್ಲಿ ಜುಗಾರಿ ದಂಧೆ: ಐವರ ಬಂಧನ

ಕಾಸರಗೋಡು: ಕುತ್ತಿಕೋಲ್ ಶ್ರೀ ತಂಬೂರಾಟಿ ಕ್ಷೇತ್ರ ಸಮೀಪದ ಗುಡ್ಡೆಯಲ್ಲಿ ಜುಗಾರಿ ದಂಧೆಯಲ್ಲಿ ಏರ್ಪಟ್ಟಿದ್ದ ಇಬ್ಬರನ್ನು ಬೇಡಗಂ ಪೊಲೀಸರು ಬಂಧಿಸಿದ್ದಾರೆ. ಸೋಮವಾರ ಮುಂಜಾನೆ 1.30ರ ವೇಳೆ ಜುಗಾರಿ ದಂಧೆ ಕೇಂದ್ರಕ್ಕೆ ಪೊಲೀಸರು ದಾಳಿ ನಡೆಸಿದ್ದಾರೆ. ಅಡೂರು ಪಳ್ಳಂಜಿ ಪುದಿಯಕ್ಕಂಡಂ ಹೌಸ್ ನಿವಾಸಿ ಗಂಗಾಧರನ್ (41), ಬಂದಡ್ಕ ಕುನ್ನುಮ್ಮಲ್ ನಿವಾಸಿ ಅಬೂಬಕ್ಕರ್ (24) ಬಂಧಿತರು. ಇವರಿಂದ ಆಟಕ್ಕೆ ಬಳಸಲಾಗಿದ್ದ 3880 ರೂಪಾಯಿಯನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಶನಿವಾರ ರಾತ್ರಿ ಇದೇ ಸ್ಥಳದಲ್ಲಿ ಜುಗಾರಿ ದಂಧೆಯಲ್ಲಿ ಏರ್ಪಟ್ಟಿದ್ದ ಮೂವರನ್ನು ಪೊಲೀಸರು ಬಂಧಿಸಿದ್ದರು. ಬಂದಡ್ಕ ಮಾರಿಪಡ್ಪು ಕುನ್ನೇಲ್ ಹೌಸ್‌ನ ಎನ್.ಕೆ.ರಾಧಾಕೃಷ್ಣನ್ (45)ಚಾಮಕೊಚ್ಚಿ ಅಣ್ಣಪ್ಪಾಡಿಯ ಎಸ್.ಸುಧಾಕರ (39), ಬೇಡಗಂ ಅಂಬಿಲಾಡಿ ಹೌಸ್‌ನ ಬಿ.ಅಶ್ರಫ್ (34) ಎಂಬವರನ್ನು ಬಂಧಿಸಿದ್ದರು.

ಇಂದು ಯಕ್ಷಗಾನ

ಶ್ರೀ ಕಟೀಲು ಯಕ್ಷಗಾನ ಮೇಳ

1. ಪ್ರೇಮ ಶ್ಯಾಮ ಶೆಟ್ಟಿ, 'ಶ್ರೀ ದುರ್ಗಾ ನಿವಾಸ', ಮೂಡುತೋಟ, ಬೆಳ್ಳಾಯೂರು, ಹಳೆಯಂಗಡಿ.
2. ರಮೇಶ್ ಪೂಜಾರಿ, 'ಪ್ರೇಮ ನಿಲಯ', ಮಣಿಬಚ್ಚಲು, ಚಾರ ವಯಾ ಹೆಬ್ರಿ.
3. ಪಾರ್ಥ ಕಿರಣ್ ಅಂಚನ್, 'ಕಿರಣ್ ನಿವಾಸ', ಕೆಲೆಸಿಬೆಟ್ಟು, ಹಳೆಯಂಗಡಿ.
4. ಲೀಲಾವತಿ ಚಂದಪ್ಪ ದಾಸ್, ಕೊಟ್ಟಾರ, ಚಾಂಡ್ತಿಮಾರ್ ಮನೆ, ಬಂಟ್ವಾಳ (ತಾ).
5. ಎಳತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನ, ವಯಾ ಕಿನ್ನಿಗೋಳಿ.
6. ಭಾಸ್ಕರ ಜಿ. ಶೆಟ್ಟಿ, ಹೊಸಲಕ್ಕೆ ಮನೆ, ಮೂಡುಶೆಡ್ಡೆ.
7. ಸುದರ್ಶನ್ ಆಚಾರ್ಯ, ಆಚಾರ್ಯ ಮನೆ, ಪುನರೂರು – ಶ್ರೀ ಕಟೀಲು ಕ್ಷೇತ್ರ ಸರಸ್ವತೀ ಸದನ.

ಶ್ರೀ ಧರ್ಮಸ್ಥಳ ಮೇಳ
ಹಳ್ಳಿಹೊಳೆಯಲ್ಲಿ
ಶ್ರೀ ನರಸಿಂಹ ಯಡಿಯಾಳ ಮತ್ತು ಮಕ್ಕಳು
ದೋಣಿಕಡವು ಮನೆ

ಶ್ರೀ ಪೆರ್ಡೂರು ಮೇಳ
ಪೆರ್ಡೂರಿನಲ್ಲಿ-**ಶ್ರೀಕೃಷ್ಣಪಾರಿಜಾತ**

ಶ್ರೀ ಹನುಮಗಿರಿ ಮೇಳ
ದೇಲಂಪುರಿಯಲ್ಲಿ

ಶ್ರೀ ಪಾವಂಜೆ ಮೇಳ
ಗೋಲಿಕಟ್ಟೆ-ಮಣ್ಣೋಳಿಗುಜ್ಜೆಯಲ್ಲಿ
ಶ್ರೀ ದೇವಿ ಮಹಾತ್ಮೆ

ಪುತ್ತೂರು ವಿವೇಕಾನಂದ ಕಾಲೇಜಿನಲ್ಲಿ ವಾರ್ಷಿಕೋತ್ಸವ | ಶಾಸಕ ಪೂಂಜ ಅಭಿಮತ

ಕಾಲೇಜ್ ಜೀವನ ಅವಿಸ್ಮರಣೀಯ

ಪುತ್ತೂರು: ಕಾಲೇಜ್ ಜೀವನದಲ್ಲಿ ವಿದ್ಯಾರ್ಥಿಗಳ ಮುಂದಿನ ಭವಿಷ್ಯ ಅಡಗಿದೆ. ನಾವು ಸಮಾಜಕ್ಕೆ ಹಾಗೂ ದೇಶಕ್ಕೆ ನಮ್ಮಿಂದಾದ ಕೊಡುಗೆಯನ್ನು ನೀಡಬೇಕು. ಸಮಾಜದಲ್ಲಿ ವ್ಯಕ್ತಿ ಹೇಗಿರುತ್ತಾನೆ ಎಂಬುದರ ಮೇಲೆ ಆತನ ವ್ಯಕ್ತಿತ್ವ ನಿರ್ಮಾಣವಾಗುತ್ತದೆ. ನಾವು ಜೀವನದಲ್ಲಿ ಮುನ್ನಡೆ ಸಾಧಿಸಿ ನಮ್ಮೊಂದಿಗೆ ಇರುವವರನ್ನೂ ಕೂಡಿಕೊಂಡು ಬೆಳೆಯಬೇಕು. ನಾವು ಇಂದು ಸಮಾಜದಲ್ಲಿ ಸಾಧಕರು ಎಂದು ಹೆಸರಿಸುವ ಎಲ್ಲರೂ ಕಷ್ಟ, ಸವಾಲುಗಳನ್ನು ಎದುರಿಸಿ ಮುಂದೆ ಬಂದವರಾಗಿರುತ್ತಾರೆ. ಅವರ ಜೀವನದಿಂದ ವಿದ್ಯಾರ್ಥಿಗಳು ಪ್ರೇರಣೆ ಪಡೆಯಬೇಕು ಎಂದು ಬೆಳ್ತಂಗಡಿ ಕ್ಷೇತ್ರದ ಶಾಸಕ ಹರೀಶ್ ಪೂಂಜ ಹೇಳಿದರು.

ನಗರದ ವಿವೇಕಾನಂದ ಕಲಾ ವಿಜ್ಞಾನ ವಾಣಿಜ್ಯ (ಸ್ವಾಯತ್ತ) ಕಾಲೇಜಿನಲ್ಲಿ ನಡೆದ ಕಾಲೇಜ್ ವಾರ್ಷಿಕೋತ್ಸವದಲ್ಲಿ ಅವರು ಮುಖ್ಯ ಅತಿಥಿಯಾಗಿ ಮಾತನಾಡಿದರು.

ಮಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಡಾ. ಗಣೇಶ ಸಂಜೀವ ಮಾತನಾಡಿ, ವಿದ್ಯಾರ್ಥಿಗಳು ಅವರ ಕನಸುಗಳನ್ನು ನನಸು ಮಾಡುವುದನ್ನು ಮಾತ್ರ ಯೋಚಿಸದೇ ಹೆತ್ತವರ ಆಶಯಗಳನ್ನೂ ತಿಳಿದು ಪೂರೈಸಬೇಕು.



ಪೋಷಕರು ತ್ಯಾಗ ಮಾಡಿ ಪರಿಶ್ರಮಪಟ್ಟು ಮಕ್ಕಳನ್ನು ಬೆಳೆಸುತ್ತಾರೆ. ಪ್ರಮಾಣಪತ್ರ ಸಿಕ್ಕ ಮಾತ್ರಕ್ಕೆ ಸುಶಿಕ್ಷಿತ ಎಂದಲ್ಲ, ಇತರರಿಗೆ ಗೌರವ ನೀಡಿ ವಿನಮ್ರವಾಗಿ ನಡೆದುಕೊಳ್ಳುವುದೂ ಅತ್ಯಗತ್ಯ. ಶಿಕ್ಷಕರ ಹಾಗೂ ಹೆತ್ತವರ ಕೊಡುಗೆಯನ್ನೂ ಸ್ಮರಿಸಿಕೊಳ್ಳಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ವಿವೇಕಾನಂದ ವಿದ್ಯಾವರ್ಧಕ ಸಂಘದ ಅಧ್ಯಕ್ಷ ಡಾ. ಕಲ್ಲಡ್ಕ ಪ್ರಭಾಕರ ಭಟ್, ವಾರ್ಷಿಕೋತ್ಸವ ಎಂದರೆ ಸಂಭ್ರಮದ ಕ್ಷಣ. ಇದು ವಿದ್ಯಾರ್ಥಿಗಳ ಪ್ರತಿಭೆಗೆ ಅವಕಾಶ ನೀಡುವ ವೇದಿಕೆಯಾಗಿದೆ. ನಾವು ಮಾಡುವ ಕೆಲಸ ಸಮಾಜಕ್ಕೆ, ದೇಶಕ್ಕೆ ಒಳ್ಳೆಯದನ್ನು ಮಾಡುತ್ತದೆಯೇ ಎಂದು ಚಿಂತಿಸಿ ಕಾರ್ಯಪ್ರವೃತ್ತರಾಗುವುದು ಮುಖ್ಯ. ಹಾಗೆ ಚಿಂತಿಸಿದರೆ ನಮ್ಮ ಬದುಕು ಸಾರ್ಥಕ ಎಂದರು.

ಕಾಲೇಜಿನ ಆಡಳಿತ ಮಂಡಳಿಯ ಸಂಚಾಲಕ ಮುರಳೀಕೃಷ್ಣ ಕೆ.ಎನ್. ಹಾಗೂ ಅಧ್ಯಕ್ಷ ಡಾ. ಶ್ರೀಪತಿ ಕಲ್ಲೂರಾಯ ಶುಭ ಹಾರೈಸಿದರು.

ಕಾಲೇಜಿನ ಪ್ರಾಂಶುಪಾಲ ಪ್ರೊ. ಶ್ರೀಕೃಷ್ಣ ಗಣರಾಜ ಭಟ್ ಸ್ವಾಗತಿಸಿ, ಕನ್ನಡ ವಿಭಾಗದ ಮುಖ್ಯಸ್ಥ ಹಾಗೂ ಆಡಳಿತ ವಿಭಾಗದ ವಿಶೇಷಾಧಿಕಾರಿ ಡಾ. ಮನಮೋಹನ ಎಂ. ವಂದಿಸಿದರು. ಕನ್ನಡ ವಿಭಾಗದ ಉಪನ್ಯಾಸಕ ಮಧು ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು. ಸ್ನಾತಕೋತ್ತರ ಅಧ್ಯಯನ ಕೇಂದ್ರದ ಡೀನ್ ಹಾಗೂ ಸ್ನಾತಕೋತ್ತರ ವಾಣಿಜ್ಯ ವಿಭಾಗದ ಮುಖ್ಯಸ್ಥೆ ಡಾ. ವಿಜಯ ಸರಸ್ವತಿ ಸಹಕರಿಸಿದರು. .

'ಸಾಂಸ್ಕೃತಿಕ ರಾಯಭಾರಿ'

ಬೆಳ್ತಂಗಡಿ ಶಾಸಕ ಹರೀಶ್ ಪೂಂಜ ಹಾಗೂ ಮಂಗಳೂರು ವಿಶ್ವವಿದ್ಯಾಲಯದ ಕುಲಸಚಿವ ಡಾ. ಗಣೇಶ್ ಸಂಜೀವ ಅವರನ್ನು ಸನ್ಮಾನಿಸಲಾಯಿತು. ಕಾರ್ಯಕ್ರಮದಲ್ಲಿ ವಿವಿಧ ದತ್ತಿನಿಧಿ ಬಹುಮಾನಗಳನ್ನು ಪ್ರತಿಭಾವಂತ ವಿದ್ಯಾರ್ಥಿಗಳಿಗೆ ನೀಡಲಾಯಿತು. ಶೈಕ್ಷಣಿಕವಾಗಿ ಹಾಗೂ ಸಾಂಸ್ಕೃತಿಕವಾಗಿ ಸಕ್ರಿಯವಾಗಿರುವ ವಿದ್ಯಾರ್ಥಿಗಳಿಗೆ 'ಸಾಂಸ್ಕೃತಿಕ ರಾಯಭಾರಿ' ಪುರಸ್ಕಾರವನ್ನು ನೀಡಲಾಯಿತು. ಕ್ರೀಡಾ ಕ್ಷೇತ್ರದಲ್ಲಿ ಸಾಧನೆ ಮಾಡಿದ ವಿದ್ಯಾರ್ಥಿಗಳನ್ನು, ಸಾಧಕ ಅಧ್ಯಾಪಕರನ್ನು ಸನ್ಮಾನಿಸಲಾಯಿತು.

ಕೆಎಂಎಫ್ ಸಂಸ್ಕರಣಾ ಕಾರ್ಖಾನೆ ಪುತ್ತೂರಿನಲ್ಲೇ ನಿರ್ಮಾಣ: ಶಾಸಕ

ಪುತ್ತೂರು: ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟದ ಹಾಲು ಸಂಸ್ಕರಣಾ ಕಾರ್ಖಾನೆ ನಿರ್ಮಿಸಲು ಪುತ್ತೂರು ಹೊರ ವಲಯದ ಕಟಾರದಲ್ಲಿ 10 ಎಕ್ರೆ ಸರಕಾರಿ ಜಮೀನು ನೀಡಲಾಗಿದ್ದು, ಅಲ್ಲಿ ಕಾರ್ಖಾನೆ ನಿರ್ಮಿಸಲು ಕೆಲ ಸಮಯದಿಂದ ಒಕ್ಕೂಟ ಮೀನಮೇಷ ಎಣಿಸುತ್ತಿತ್ತು. ಈ ವಿಚಾರದಲ್ಲಿ ನಾನು ನನ್ನ ಸ್ಪಷ್ಟ ನಿಲುವು ತಿಳಿಸಿದ್ದೆ. ಇದಾದ ಬಳಿಕ ಒಕ್ಕೂಟದವರು ವಾಸ್ತವ ಸ್ಥಿತಿ ಅರಿತುಕೊಂಡು ಪುತ್ತೂರಿನ ನಿಗದಿತ ಜಾಗದಲ್ಲೇ ಕಾರ್ಖಾನೆ ನಿರ್ಮಿಸಲು ನಿರ್ಧರಿಸಿದ್ದಾರೆ. ಮೇ 20ರಂದು ಕಟಾರದ ಸ್ಥಳ ಪರಿಶೀಲನೆ ನಡೆಸಲು ಆಗಮಿಸಲಿದ್ದಾರೆ ಎಂದು ಶಾಸಕ ಅಶೋಕ್ ರೈ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಒಕ್ಕೂಟದ ಸಭೆಯಲ್ಲಿ ಪುತ್ತೂರಿನಲ್ಲೇ ಕಾರ್ಖಾನೆ ನಿರ್ಮಿಸುವ ಸಂಬಂಧ ನಿರ್ಧಾರ ಕೈಗೊಳ್ಳಲಾಗಿದೆ ಎಂದು ನನಗೆ ಮಾಹಿತಿ ಬಂದಿದೆ. ಮುಂದಿನ ತಿಂಗಳು 20ರಂದು ಒಕ್ಕೂಟದ ನಿಯೋಗ ಸ್ಥಳ ಪರಿಶೀಲನೆಗೆ ಬರಲಿದೆ. ಈಗಾಗಲೇ ಕಟಾರದಲ್ಲಿ 10 ಎಕ್ರೆ ಜಾಗ ಒಕ್ಕೂಟಕ್ಕೆ ಸರಕಾರ ನೀಡಿದೆ. ಪಕ್ಕದಲ್ಲಿದ್ದ 4 ಎಕರೆ ಖಾಸಗಿ ಜಾಗವನ್ನೂ ಒಕ್ಕೂಟದಿಂದ ಖರೀದಿಸುವ ಬಗ್ಗೆ ಈ ಹಿಂದೆ ನಿರ್ಧರಿಸಲಾಗಿತ್ತು. ತಾಂತ್ರಿಕ ಕಾರಣದಿಂದ ಪ್ರಕ್ರಿಯೆ ಪೂರ್ತಿಗೊಂಡಿಲ್ಲ. ಅವರು ಇಲ್ಲಿ ಮೆಗಾ ಪ್ಲ್ಯಾಂಟ್ ನಿರ್ಮಿಸುವುದಾದರೆ ಇನ್ನೂ 7 ಎಕರೆ ಸರಕಾರಿ ಜಾಗ ನೀಡಲಾಗುವುದು ಎಂದು ಹೇಳಿದರು. ಪುತ್ತೂರಿನಲ್ಲಿ 10 ಎಕರೆ ಜಾಗ ನೀಡಬೇಕೆಂದು ಒಕ್ಕೂಟ ವತಿಯಿಂದ ಮನವಿ ಸಲ್ಲಿಸಲಾಗಿತ್ತು. ಅದರಂತೆ 10 ಎಕರೆ ಸರಕಾರಿ ಜಾಗವನ್ನು ರೂ.46 ಲಕ್ಷಗಳಿಗೆ ಮಂಜೂರು ಮಾಡಲಾಗಿತ್ತು. ಈ ಮಧ್ಯೆ, ಪುತ್ತೂರು ಯೋಜನೆ ಕೈಬಿಟ್ಟು ಬಂಟ್ವಾಳದಲ್ಲಿ ರೂ.60 ಕೋಟಿ ಕೊಟ್ಟು ಜಾಗ ಖರೀದಿಸಿ ಪ್ಲ್ಯಾಂಟ್ ನಿರ್ಮಿಸಲು ಪ್ರಯತ್ನ ನಡೆದಿರುವುದು ನನ್ನ ಗಮನಕ್ಕೆ ಬಂದ ಕಾರಣ ನಾನು ಪ್ರಬಲ ವಿರೋಧ ವ್ಯಕ್ತಪಡಿಸಿದ್ದೆ ಎಂದರು.

ಪುತ್ತೂರು ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜ್ ಅಂತಾರಾಷ್ಟ್ರೀಯ ಇಂಗ್ಲಿಷ್ ಭಾಷಾ ದಿನಾಚರಣೆ

ಪುತ್ತೂರು: ನಗರದ ಸಂತ ಫಿಲೋಮಿನಾ ಸ್ವಾಯತ್ತ ಕಾಲೇಜಿನಲ್ಲಿ ಇಂಗ್ಲಿಷ್ ವಿಭಾಗದ ವತಿಯಿಂದ 'ಲಿಟರೇಚುರ-2ಕೆ26' ಮತ್ತು ಅಂತಾರಾಷ್ಟ್ರೀಯ ಇಂಗ್ಲಿಷ್ ಭಾಷಾ ದಿನಾಚರಣೆ ಕಾಲೇಜಿನ ಎಸ್‌ಜೆಎಂ ಸಭಾಂಗಣದಲ್ಲಿ ನಡೆಯಿತು.

ಮುಖ್ಯ ಅತಿಥಿಯಾಗಿದ್ದ ಬ್ಯಾಂಕ್ ಆಫ್ ಬರೋಡಾ ಪುತ್ತೂರು ಪ್ರಾದೇಶಿಕ ಕಚೇರಿಯ ಸಹಾಯಕ ಜನರಲ್ ಮ್ಯಾನೇಜರ್ ಮತ್ತು ಉಪ ಪ್ರಾದೇಶಿಕ ಮುಖ್ಯಸ್ಥ ಅಮಿತ್ ಸಿ. ಶೆಟ್ಟಿ ಮಾತನಾಡಿ, ನಮ್ಮ ಸುತ್ತಮುತ್ತ ಅನೇಕ ಮಾದರಿ ವ್ಯಕ್ತಿಗಳಿದ್ದಾರೆ ತಮ್ಮ ಜೀವನದಲ್ಲಿ ಮೌಲ್ಯವನ್ನು ಸೃಷ್ಟಿಸಿಕೊಂಡಿರುವ ಮತ್ತು ಸಮಾಜದಲ್ಲಿ ಧನಾತ್ಮಕ ಬದಲಾವಣೆಗಳನ್ನು ತಂದಿರುವ ನಾಯಕರನ್ನು ನಾವು ಆದರ್ಶವಾಗಿ ತೆಗೆದುಕೊಳ್ಳಬೇಕು. ನಿಮ್ಮ ಗುರಿಗಳ ಬಗ್ಗೆ ನಿಮಗೆ ಅರಿವಿರಬೇಕು ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರೆ.ಫಾ.ಡಾ.ಆಂಟನಿಪ್ರಕಾಶ್ ಮೊಂತೇರೋ, ಜೀವನದಲ್ಲಿ ನಮಗೆ ಗುಣಮಟ್ಟ ಬೇಕು, ಶಿಸ್ತು ಬೇಕು ಮತ್ತು ಒಂದು ರೀತಿಯ ಗಂಭೀರತೆ ಇರಬೇಕು. ನಾವು ಆಚರಿಸುವ ಯಾವುದೇ ಭಾಷೆಗೆ ಗೌರವ ಸಿಗುವುದು ಆ ಭಾಷೆಗೆ ನಾವು ಎಷ್ಟು ಮೌಲ್ಯ ನೀಡುತ್ತೇವೆ ಎಂಬುದರ ಮೇಲೆ ಮಾತ್ರ ಎಂಬುದನ್ನು ನಾವು ಸದಾ ನೆನಪಿನಲ್ಲಿಡಬೇಕು. ಆದ್ದರಿಂದ, ನಿಮ್ಮ ಅಂತರಾತ್ಮದಿಂದ ಸಂವಹನ ನಡೆಸಿ, ನಿಮ್ಮ ವ್ಯಕ್ತಿತ್ವದ ಮೂಲಕ ಸಂವಹನ ನಡೆಸಿ ಎಂದು ಹೇಳಿದರು. ಇಂಗ್ಲಿಷ್ ಭಾಷಾ ದಿನಾಚರಣೆ ಅಂಗವಾಗಿ ಆಯೋಜಿಸಿದ ಸ್ಪರ್ಧೆಗಳ ವಿಜೇತರಿಗೆ ಮುಖ್ಯ ಅತಿಥಿಗಳು ಬಹುಮಾನ ವಿತರಿಸಿದರು. ಖ್ಯಾತ ಪ್ರೊ ಕಬಡ್ಡಿ ಆಟಗಾರ, ತರಬೇತುದಾರ ಹಾಗೂ ಬ್ಯಾಂಕ್ ಆಫ್ ಬರೋಡಾ ಪುತ್ತೂರು ಉದ್ಯೋಗಿ ಪ್ರಶಾಂತ್ ರೈ, ಇಂಗ್ಲೀಷ್ ವಿಭಾಗದ ಮುಖ್ಯಸ್ಥೆ ಡಾ. ಭಾರತಿ ಎಸ್. ರೈ ಉಪಸ್ಥಿತರಿದ್ದರು. ವಿದ್ಯಾರ್ಥಿನಿಯರಾದ ಮಾನಸ ಮತ್ತು ಅಪರ್ಣಾ ಪ್ರಾರ್ಥಿಸಿದರು. ಅಪೂರ್ವ ಪ್ರಾಸ್ತಾವಿಸಿದರು. ಪ್ರಿಯಾ ಅತಿಥಿಗಳನ್ನು ಪರಿಚಯಿಸಿದರು. ಶೀತಲ್ ರೈ ಸ್ವಾಗತಿಸಿ, ಐಶ್ವರ್ಯ ವಂದಿಸಿದರು. ಆಯಿಷತ್ ಜಬೀನಾ ಕಾರ್ಯಕ್ರಮ ನಿರ್ವಹಿಸಿದರು. ಇಂಗ್ಲಿಷ್ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ನೋವೆಲಿನ್ ಡಿ'ಸೋಜಾ, ಸುಷ್ಮ ಕ್ರಾಸ್ತ ಹಾಗೂ ವಿನಿಲ್ ರೋಹನ್ ಡಿ'ಸೋಜಾ ಸಹಕರಿಸಿದರು.



» ಸಮಾಜದಲ್ಲಿ ಧನಾತ್ಮಕ ಬದಲಾವಣೆಗಳನ್ನು ತಂದಿರುವ ನಾಯಕರನ್ನು ನಾವು ಆದರ್ಶವಾಗಿ ತೆಗೆದುಕೊಳ್ಳಬೇಕು.

» ನಿಮ್ಮ ಗುರಿಗಳ ಬಗ್ಗೆ ನಿಮಗೆ ಅರಿವಿರಬೇಕು

ನಟ್ಟಿಬೈಲ್-ರಾಮನಗರ ರಸ್ತೆಯಲ್ಲಿ ಘನವಾಹನ ಸಂಚಾರ: ಅವಕಾಶ ನೀಡದಂತೆ ಪೊಲೀಸರಿಗೆ ಮನವಿ

ಉಪ್ಪಿನಂಗಡಿ: ಕಾಮಗಾರಿಯ ನಿಮಿತ್ತ ಗಾಂಧಿ ಪಾರ್ಕ್ ಬಳಿ ಹಿರೇಬಂಡಾಡಿ ಮುಖ್ಯ ರಸ್ತೆಗೆ ವಾಹನ ಪ್ರವೇಶಿಸುವುದನ್ನು ತಡೆಯಲಾಗಿದ್ದು, ಬದಲಿ ಮಾರ್ಗವಾಗಿ ನಟ್ಟಿಬೈಲ್ -ರಾಮನಗರದ ಗ್ರಾ.ಪಂ. ರಸ್ತೆಯಲ್ಲಿ ವಾಹನ ಸಂಚಾರಕ್ಕೆ ಅನುವು ಮಾಡಿ ಕೊಡಲಾಗಿದೆ. ಆದರೆ, ಈ ರಸ್ತೆ ತೀರಾ ಇಕ್ಕಟ್ಟಾಗಿದ್ದು, ಪದೇ ಪದೇ ವಾಹನ ದಟ್ಟನೆಯುಂಟಾಗಿ ಸಮಸ್ಯೆಯಾಗುತ್ತಿರುವುದರಿಂದ ಇಲ್ಲಿ ಘನ ವಾಹನ ಸಂಚಾರಕ್ಕೆ ಅವಕಾಶ ಕೊಡಬಾರದೆಂದು ಸಾರ್ವಜನಿಕರು ಉಪ್ಪಿನಂಗಡಿ ಪೊಲೀಸ್ ಠಾಣೆಗೆ ಮನವಿ ಸಲ್ಲಿಸಿದ್ದಾರೆ.

ಕಿರಿದಾದ ರಸ್ತೆ

ನಟ್ಟಿಬೈಲ್‌ನ ಗ್ರಾ.ಪಂ. ರಸ್ತೆಯು ತೀರಾ ಕಿರಿದಾಗಿದ್ದು, ಘನ ವಾಹನಗಳು ಸಂಚರಿಸುವಾಗ ಇನ್ನೊಂದು ವಾಹನ ತೆರಳಲು ಸೈಡ್ ಬಿಟ್ಟು ಕೊಡಲು ಈ ರಸ್ತೆಯಲ್ಲಿ ಅವಕಾಶವಿಲ್ಲ. ಆದ್ದರಿಂದ ಈ ರಸ್ತೆಯು ಈಗ ಸದಾ ಟ್ರಾಫಿಕ್ ಜಾಮ್‌ನಿಂದ ಕೂಡಿದ್ದು, ಸುಗಮ ವಾಹನ ಸಂಚಾರಕ್ಕೆ ತಡೆಯಾಗುತ್ತಿದೆ. ಇಲ್ಲಿ ಕಲ್ಲು, ಕಬ್ಬಿಣ, ಸಿಮೆಂಟು, ಜಲ್ಲಿ ಸೇರಿದಂತೆ ಇನ್ನಿತರ ಸರಕುಗಳನ್ನು ಹೇರಿಕೊಂಡು ಘನ ವಾಹನಗಳು ಸಂಚರಿಸುವುದರಿಂದ ರಸ್ತೆಯೂ ಹದಗೆಡುವ ಸಾಧ್ಯತೆ ಇದೆ. ಅಲ್ಲದೇ, ಇಲ್ಲಿ ಸುಗಮ ವಾಹನ ಸಂಚಾರಕ್ಕೆ ತಡೆಯಾಗುವುದರಿಂದ ಆ್ಯಂಬುಲೆನ್ಸ್‌ಗಳು ಸೇರಿದಂತೆ ಇನ್ನಿತರ ಅಗತ್ಯ ಸೇವೆಯ ವಾಹನಗಳು ಸಾಗಲು ಕಷ್ಟಸಾಧ್ಯವಾಗುತ್ತದೆ. ಆದ್ದರಿಂದ ಇಲ್ಲಿ ಘನ ವಾಹನಗಳ ಸಂಚಾರಕ್ಕೆ ಅವಕಾಶ ನೀಡಬಾರದು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ಹಿರೇಬಂಡಾಡಿಗೆ ಹೋಗುವ ಹಾಗೂ ಆ ಕಡೆಯಿಂದ ಬರುವ ಘನ ವಾಹನಗಳಿಗೆ ಕೊಯಿಲ ಮೂಲಕವಾಗಿ ಹಳೆಗೇಟು-ಮರ್ಧಾಳ ರಾಜ್ಯ ಹೆದ್ದಾರಿಯ ಮೂಲಕ ಸಾಗಲು ಸೂಚಿಸಬೇಕೆಂದು ಮನವಿಯಲ್ಲಿ ಆಗ್ರಹಿಸಲಾಗಿದೆ. ಮನವಿ ನೀಡಿದ ನಿಯೋಗದಲ್ಲಿ ಉಪ್ಪಿನಂಗಡಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಯು.ಟಿ. ತೌಸೀಫ್, ದಂತ ವೈದ್ಯ ಡಾ. ರಾಜಾರಾಮ್ ಕೆ.ಬಿ., ಉಪ್ಪಿನಂಗಡಿ ಶ್ರೀ ಸಹಸ್ರಲಿಂಗೇಶ್ವರ-ಮಹಾಕಾಳಿ ದೇವಾಲಯದ ವ್ಯವಸ್ಥಾಪನಾ ಸಮಿತಿಯ ಸದಸ್ಯ ಕೃಷ್ಣರಾವ್, ಗ್ರಾ.ಪಂ. ಮಾಜಿ ಉಪಾಧ್ಯಕ್ಷೆ ವಿದ್ಯಾಲಕ್ಷ್ಮೀ ಪ್ರಭು, ಉಪ್ಪಿನಂಗಡಿ ವಲಯ ಕಾಂಗ್ರೆಸ್ ಅಧ್ಯಕ್ಷ ಆದಂ ಕೊಪ್ಪಳ, ಬೂತ್ ಕಾಂಗ್ರೆಸ್ ಅಧ್ಯಕ್ಷ ಲತೀಫ್ ಕುದ್ಲೂರು, ಪ್ರಮುಖರಾದ ಮನ್ಸೂರ್ ಕುದ್ಲೂರ್, ಸಿದ್ದೀಕ್ ಹ್ಯಾಪಿ ಟೈಮ್ಸ್, ಫಾರೂಕ್ ಜಿಂದಗಿ, ಮಜೀದ್ ಕುದ್ಲೂರು, ಸಾಲಿ ಆಕಿರೆ, ಹನೀಫ್, ಇಬ್ರಾಹಿಂ ಕುದ್ಲೂರು ಮತ್ತಿತರರು ಉಪಸ್ಥಿತರಿದ್ದರು.



ಪರೀಕ್ಷೆ ವೇಳೆ ಜನಿವಾರ ತೆಗೆಸಿದ ಪ್ರಕರಣ

ಅಭಾವಿಪ ತೀವ್ರ ಖಂಡನೆ

ಮಂಗಳೂರು: ಪರೀಕ್ಷೆಯ ವೇಳೆ ವಿದ್ಯಾರ್ಥಿಗಳನ್ನು ಜನಿವಾರ ತೆಗೆಸಲು ಒತ್ತಾಯಿಸುವುದು ಇದು ಸಂವಿಧಾನ ವಿರೋಧಿ ನೀತಿ ಹಾಗೂ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗುತ್ತದೆ. ಶಿಕ್ಷಣ ಕೇಂದ್ರಗಳಲ್ಲಿ ರಾಜಕೀಯ ಮತ್ತು ಧಾರ್ಮಿಕ ಪಕ್ಷಪಾತದ ಕೇಂದ್ರವಾಗಿಸಲು ರಾಜ್ಯ ಸರ್ಕಾರದ ಪ್ರಯತ್ನ ಮಾಡುತ್ತಿರುವುದು ದುರದೃಷ್ಟಕರ ಸಂಗತಿ ಎಂದು ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಹೇಳಿದೆ.

ಬೆಂಗಳೂರಿನ ಕೃಪಾನಿಧಿ ಕಾಲೇಜಿನಲ್ಲಿ ಸಾಮಾನ್ಯ ಪ್ರವೇಶ ಪರೀಕ್ಷೆಗೆ ಹಾಜರಾಗಿದ್ದ ವಿದ್ಯಾರ್ಥಿಗಳನ್ನು ಜನಿವಾರ ತೆಗೆಸಲು ಒತ್ತಾಯಿಸಲಾಗಿದೆ ಎಂಬ ಘಟನೆಗೆ ತೀವ್ರ ಖಂಡನೀಯವಾಗಿದೆ. ವಿದ್ಯಾರ್ಥಿಗಳ ಧಾರ್ಮಿಕ ಭಾವನೆಗಳಿಗೆ ಧಕ್ಕೆ ತರುವ ಈ ಕೃತ್ಯವನ್ನು ಎಬಿವಿಪಿ ಖಂಡಿಸುತ್ತದೆ. ಶೈಕ್ಷಣಿಕ ವಾತಾವರಣವನ್ನು ಹಾಳು ಮಾಡಿದವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಎಬಿವಿಪಿ ಕರ್ನಾಟಕ ದಕ್ಷಿಣ ಪ್ರಾಂತ ಕಾರ್ಯದರ್ಶಿ ಗೋಪಿ ರಂಗಸ್ವಾಮಿ ಆಗ್ರಹಿಸಿದ್ದಾರೆ.

ಶೈಕ್ಷಣಿಕ ಕ್ಯಾಂಪಸ್‌ಗಳಲ್ಲಿ ವಿದ್ಯಾರ್ಥಿಗಳ ಧಾರ್ಮಿಕ ನಂಬಿಕೆಗಳು ಮತ್ತು ಚಿಹ್ನೆಗಳನ್ನು ಗುರಿಯಾಗಿಸುವುದು ಅತ್ಯಂತ ಖಂಡನೀಯ. ವಿದ್ಯಾರ್ಥಿಗಳನ್ನು ಜನಿವಾರ ತೆಗೆಸಲು ಒತ್ತಾಯಿಸುವುದು ವೈಯಕ್ತಿಕ ಸ್ವಾತಂತ್ರ್ಯದ ಉಲ್ಲಂಘನೆಯಷ್ಟೇ ಅಲ್ಲ, ಒಂದು ನಿರ್ದಿಷ್ಟ ಸಿದ್ಧಾಂತವನ್ನು ಹೇರಲು ಮಾಡಿದ ಪ್ರಯತ್ನವಾಗಿದೆ. ರಾಜ್ಯ ಸರ್ಕಾರವು ಶಿಕ್ಷಣವು ಎಲ್ಲಾ ಜಾತಿ ಧರ್ಮಗಳ ಕೇಂದ್ರವಾಗಿರಬೇಕು. ಈ ಘಟನೆಗೆ ಸರ್ಕಾರ ತಕ್ಷಣವೇ ಉನ್ನತ ಮಟ್ಟದ ತನಿಖೆ ಮಾಡಬೇಕು ಮತ್ತು ತಪ್ಪಿತಸ್ಥರಿಗೆ ಕಠಿಣ ಶಿಕ್ಷೆ ಯಾಗಬೇಕು ಮತ್ತು ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ರಾಜ್ಯ ಸರ್ಕಾರ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದ್ದಾರೆ.

ಖರ್ಗೆ ವಿರುದ್ಧ ಪೋಸ್ಟ್: ಮಹಿಳೆಯ ವಿಚಾರಣೆ

ಮಡಿಕೇರಿ: ಪ್ರಧಾನಿ ಮೋದಿ ವಿರುದ್ಧ ರಾಷ್ಟ್ರೀಯ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಮಾಡಿದ ಹೇಳಿಕೆಯನ್ನು ಖಂಡಿಸಿ ಫೇಸ್ ಬುಕ್‌ನಲ್ಲಿ ಪೋಸ್ಟ್ ಹಂಚಿಕೊಂಡ ಮಹಿಳೆಯನ್ನು ಪೊನ್ನಂಪೇಟೆ ಪೊಲೀಸರು ವಿಚಾರಣೆ ನಡೆಸಿದ್ದಾರೆ. ಪೊನ್ನಂಪೇಟೆ ನಿವಾಸಿ, ಹಿಂದೂ ಪರ ಸಂಘಟನೆ ಹಾಗೂ ಬಿಜೆಪಿಯಲ್ಲಿ ಗುರುತಿಸಿಕೊಂಡಿರುವ ಮಂಜುಳಾ ಮಣಿಕಂಠ ಎಂಬವರೇ ಈ ಮಹಿಳೆ. ಇದನ್ನು ತೀವ್ರ ಖಂಡಿಸಿರುವ ಹಿಂದೂ ಪರ ಸಂಘಟನೆಗಳು, ಪ್ರಶ್ನೆ ಮಾಡುವವರನ್ನು ಹತ್ತಿಕ್ಕುವ ಪ್ರಯತ್ನ ನಡೆಸಲಾಗುತ್ತಿದೆ ಎಂದು ದೂರಿದೆ. ಸಂಜೆ 6 ಗಂಟೆಯ ನಂತರ ಮಹಿಳೆಯನ್ನು ಪೊಲೀಸ್ ಠಾಣೆಗೆ ಕರೆಸಿಕೊಂಡು ವಿಚಾರಣೆ ನಡೆಸಿರುವುದಕ್ಕೆ ಮಂಜುಳಾ ಮಣಿಕಂಠ ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಚೀಯಕಪೂವಂಡ ಕುಟುಂಬದವರ ಕೊಡವ ಕೌಟುಂಬಿಕ ಹಗ್ಗಜಗ್ಗಾಟ ಪಂದ್ಯಾವಳಿ

ನಾಪೋಕ್ಲು: ಸ್ಥಳೀಯ ಕೆಪಿಎಸ್ ಶಾಲಾ ಮೈದಾನದಲ್ಲಿ ಕಳೆದೆರಡು ದಿನಗಳಿಂದ ನಡೆಯುತ್ತಿರುವ ಚೀಯಕಪೂವಂಡ ಕುಟುಂಬದವರು ಆಯೋಜಿಸಿರುವ 5ನೇ ವರ್ಷದ ಕೊಡವ ಕೌಟುಂಬಿಕ ಹಗ್ಗಜಗ್ಗಾಟ ಪಂದ್ಯಾವಳಿಯಲ್ಲಿ ಅಂತಿಮವಾಗಿ ಮುಕ್ಕಾಟಿರ ಹರಿಹರ ತಂಡ ಚೀಯಕಪೂವಂಡ ಕಪ್ ಅನ್ನು ಮುಡಿಗೇರಿಸಿಕೊಂಡಿತು. ಮಹಿಳಾ ವಿಭಾಗದಲ್ಲಿ ಕಾಂಡಂಡ ತಂಡ ಚಾಂಪಿಯನ್ ಆಯಿತು. ವಿಜೇತ ಎರಡೂ ತಂಡಗಳಿಗೆ ಒಂದು ಲಕ್ಷ ರೂ. ನಗದು ಹಾಗೂ ಟ್ರೋಫಿ ವಿತರಿಸಲಾಯಿತು.

ಪುರುಷರ ವಿಭಾಗದ ರನ್ನರ್ಸ್ ಚೀಯಕಪೂವಂಡ ತಂಡಕ್ಕೆ 75 ಸಾವಿರ ರೂ.ಹಾಗೂ ಟ್ರೋಫಿ ಮತ್ತು ಮಹಿಳಾ ವಿಭಾಗದ ರನ್ನರ್ಸ್ ಪುದಿಯೋಕ್ಕಡ ತಂಡಕ್ಕೆ 75 ಸಾವಿರ ರೂ. ಮತ್ತು 16 ವರ್ಷದ ಒಳಗಿನ ಮಕ್ಕಳ ವಿಭಾಗದಲ್ಲಿ ಅಜ್ಜ ಮಾಡ ಕುಟುಂಬ ಚಾಂಪಿಯನ್ ಆಗಿ ಗೆಲುವು ಸಾಧಿಸಿ 20 ಸಾವಿರ ರೂ.ಹಾಗೂ ಟ್ರೋಫಿ , ರನ್ನರ್ಸ್ ಆಗಿ ಮುಕ್ಕಾಟಿರ ದೊಡ್ಡಪುಲಿಕೋಟು ಕುಟುಂಬ 15 ಸಾವಿರ ರೂ. ಹಾಗೂ ಟ್ರೋಫಿ ಪಡೆದುಕೊಂಡವು.

ಕೊಡವ ಕೌಟುಂಬಿಕ ಹಗ್ಗಜಗ್ಗಾಟ ಪಂದ್ಯಾವಳಿಯಲ್ಲಿ 295 ಕುಟುಂಬಗಳು ಪಾಲ್ಗೊಂಡಿದ್ದು 24 ತಂಡಗಳು ಭಾನುವಾರ ಪ್ರಶಸ್ತಿಗಾಗಿ ಸೆಣಸಾಡಿ, ಅಂತಿಮ ಪಂದ್ಯದಲ್ಲಿ ಮುಕ್ಕಾಟಿರ ಹರಿಹರ, ಕಾಂಡಂಡ ತಂಡಗಳು ಜಯಭೇರಿ ಬಾರಿಸಿದವು.

ಸಮಾರೋಪ ಸಮಾರಂಭದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಮಾತನಾಡಿ, ಕ್ರೀಡೆ ಕೊಡವ ಸಂಸ್ಕೃತಿಯ ಒಂದು ಭಾಗವಾಗಿದೆ. ಕೊಡಗು ಪುಟ್ಟ ಜಿಲ್ಲೆಯಾದರೂ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ ಕೀರ್ತಿಗೆ ಪಾತ್ರವಾಗಿದೆ. ಯುವಜನರ ಪ್ರತಿಭೆಯನ್ನು ಬೆಳೆಸಲು ಕ್ರೀಡಾಕೂಟಗಳು ವೇದಿಕೆ ಆಗಬೇಕು ಎಂದರು.

ಕೊಡವ ಜನಾಂಗಕ್ಕೆ 1963 ರಿಂದ 1919 ರವರೆಗೆ ಕೋವಿಯ ಹಕ್ಕು ಇತ್ತು. ಇದನ್ನು ಉಳಿಸಿಕೊಳ್ಳಲು ಕಾರಣಕರ್ತರಾದವರು ಚೀಯಕಪೂವಂಡ ಕುಟುಂಬಸ್ಥರು. ಇಂದು ಅದೇ ಕುಟುಂಬ ಕೇರ್ಬಲಿನಮ್ಮೆಯನ್ನು ಉತ್ತಮ ಕ್ರೀಡಾಕೂಟವನ್ನಾಗಿಸಿ ಹೆಸರು ಮಾಡಿದೆ ಎಂದರು.

ಡಿಸಿಸಿ ಬ್ಯಾಂಕಿನ ಅಧ್ಯಕ್ಷ ಕೊಡಂದೇರ ಬಾಂಡ್ ಗಣಪತಿ, ರೈತ ಸಂಘದ ಅಧ್ಯಕ್ಷ ಕಾಡ್ಯಮಡ ಮನು ಸೋಮಯ್ಯ , ರಾಷ್ಟ್ರೀಯ ಮಹಿಳಾ ಕೌನ್ಸಿಲ್‌ನ ಮುಖ್ಯಸ್ಥ ಶರತ್ ಪರಕೋತ್ ಇಲ್ಲಿಯ ಕೊಡವ ಸಮಾಜದ ಅಧ್ಯಕ್ಷ ಮುಂಡಂಡ ಸಿ.ನಾಣಯ್ಯ, ಚೀಯಕಪೂವಂಡ ಹಗ್ಗಜಗ್ಗಾಟ ಉತ್ಸವದ ಅಧ್ಯಕ್ಷ ಸಿ.ಕೆ.ಬೋಪಣ್ಣ ಮಾತನಾಡಿದರು.

ಟಗ್ ಆಫ್ ವಾರ್ ಅಕಾಡೆಮಿ ಅಧ್ಯಕ್ಷ ಪೊನ್ನಲತಂಡ ಕಿರಣ್ ಪೊನ್ನಪ್ಪ ಮಾತನಾಡಿ ಕ್ರೀಡಾಪಟುಗಳಿಗೆ ಉತ್ತಮ ತರಬೇತಿ ನೀಡಬೇಕು. ಆ ಮೂಲಕ ರಾಷ್ಟ್ರೀಯ ಅಂತಾರಾಷ್ಟ್ರೀಯ ಮಟ್ಟಕ್ಕೆ ಏರಬೇಕು ಎಂದರು. ಇದುವರೆಗೆ ಹಗ್ಗಜಗ್ಗಾಟ ಕ್ರೀಡಾಕೂಟ ಐದು ಬಾರಿ ನಡೆದಿದ್ದು ಈ ಬಾರಿ 195 ಕುಟುಂಬಗಳನ್ನು ಸೇರಿಸಿ ನಡೆಸಿದ ಕ್ರೀಡಾಕೂಟ ಭಾರತೀಯ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಾಗಿದೆ ಎಂದರು.

ಸಮಾರೋಪ ಸಮಾರಂಭದ ಅಧ್ಯಕ್ಷತೆಯನ್ನು ಚೀಯಕಪೂವಂಡ ಕುಟುಂಬದ ಅಧ್ಯಕ್ಷ ಸಿ.ಎಂ.ಅಪ್ಪಚ್ಚು ವಹಿಸಿದ್ದರು. ಮುಡ್ಯೋಳಂಡ ಕುಟುಂಬದ ಅಧ್ಯಕ್ಷ ಎಂ.ಟಿ.ತಿಮ್ಮಯ್ಯ, ಚೀಯಕ ಪೂವಂಡ ಕುಟುಂಬದ ಹಿರಿಯ ಸಿ.ಎ. ಚಿಟ್ಟಿಯಪ್ಪ ಸೇರಿದಂತೆ ಪದಾಧಿಕಾರಿಗಳು ಹಾಗೂ ನಿರ್ದೇಶಕರು ಉಪಸ್ಥಿತರಿದ್ದರು.

ಮುಂದಿನ ವರ್ಷ ಕೇರ್ಬಲಿನಮ್ಮೆಯನ್ನು ಮುಂಡ್ಯೋಳಂಡ ಕುಟುಂಬ ವಿರಾಜಪೇಟೆಯಲ್ಲಿ ಆಯೋಜಿಸಲಿದ್ದು ಇದರ ಧ್ವಜವನ್ನು ಈ ಸಂದರ್ಭ ಮುಂಡ್ಯೋಳಂಡ ಕುಟುಂಬದ ಅಧ್ಯಕ್ಷ ಎಂ.ಟಿ.ತಿಮ್ಮಯ್ಯ ಹಾಗೂ ಕುಟುಂಬಸ್ಥರಿಗೆ ಹಸ್ತಾಂತರಿಸಿ ಶುಭ ಹಾರೈಸಲಾಯಿತು.

ಪಂದ್ಯಗಳ ವೀಕ್ಷಕ ವಿವರಣೆಗಾರರಾಗಿ ಮಾಲೇಟಿರ ಶ್ರೀನಿವಾಸ್, ಬಾಳೆಯಡ ದಿವ್ಯ ಮಂದಪ್ಪ, ಕೊಟ್ಟಂಗಡ ರಾಜಾ ಸುಬ್ಬಯ್ಯ, ಪೊನ್ನೊಲತಂಡ ಕಿರಣ್ ಪೊನ್ನಪ್ಪ ಕಾರ್ಯನಿರ್ವಹಿಸಿದರು.

ಪಂದ್ಯಾಟದ ನಿರ್ದೇಶಕರಾಗಿ ಚಟ್ಟಂಗಡ ರವಿ ಸುಬ್ಬಯ್ಯ,ತೀರ್ಪುಗಾರರಾಗಿ ಚಟ್ಟಂಗಡ ಕಂಬ ಕಾರ್ಯಪ್ಪ, ಜಮ್ಮಡ ಗಿಲ್, ಕೋಣಿಯಂಡ ಮಂಜು ಮಾದಯ್ಯ, ಮುಂಡಚಾಡಿರ ಭರತ್, ಪೊನ್ನೊಲತಂಡ ಹರೀಶ್, ಪೊನ್ನೊಲತಂಡ ಯಶು, ಪೊನ್ನೊಲತಂಡ ಆರ್ಯನ್ ಸೋಮಯ್ಯ, ಪೊನ್ನೊಲತಂಡ ಆಯುಷ್ ಪೊನ್ನಣ್ಣ, ಬಾಳೆಕುಟ್ಟಿರ ಬೋಪಣ್ಣ, ಬೊಟ್ಟೋಳಂಡ ಪವಿನ್, ಕೋಣಿಯಂಡ ದೀಕ್ಷಿತ್ ಕಾರ್ಯನಿರ್ವಹಿಸಿದರು. ಪಂದ್ಯಗಳನ್ನು ವೀಕ್ಷಿಸಲು ಹೆಚ್ಚಿನ ಸಂಖ್ಯೆಯಲ್ಲಿ ಕ್ರೀಡಾಭಿಮಾನಿಗಳು ಆಗಮಿಸಿದ್ದರು.



16 ವರ್ಷದ ಮಕ್ಕಳ ವಿಭಾಗ ಅಜ್ಜ ಮಾಡ ಕುಟುಂಬ ಚಾಂಪಿಯನ್

2022ರಲ್ಲಿ ಪೊನ್ನೋಲತಂಡ ಕುಟುಂಬಸ್ಥರು ಆಯೋಜಿಸಿದ್ದ ಕೇರ್ ಬಲಿ ನಮ್ಮೆಯಲ್ಲಿ 40 ಕುಟುಂಬ ಪಾಲ್ಗೊಂಡಿದ್ದರೆ, 2023ರಲ್ಲಿ ಟಿ.ಶೆಟ್ಟಿಗೇರಿಯಲ್ಲಿ ನಡೆದ ಚೆಟ್ಟಂಗಡ ನಮ್ಮೆಯಲ್ಲಿ 171, 2024ರಲ್ಲಿ ನಾಪೋಕ್ಲುವಿನಲ್ಲಿ ನಡೆದ ಬೊಟ್ಟೋಳಂಡ ಕೇರ್ ಬಲಿನಮ್ಮೆಯಲ್ಲಿ 230, 2025 ರಲ್ಲಿ ನಡೆದ ಬಾಳೆಕುಟ್ಟೀರ ಕಪ್ ಕ್ರೀಡೆಯಲ್ಲಿ 282 ಹಾಗೂ 2026ರಲ್ಲಿ ಚೀಯಕಪೂವಂಡ ಕುಟುಂಬದವರು ಆಯೋಜಿಸಿದ್ದ ಕೊಡವ ಕೌಟುಂಬಿಕ ಹಗ್ಗಜಗ್ಗಾಟ ಪಂದ್ಯಾವಳಿಯಲ್ಲಿ 295 ಕುಟುಂಬಗಳನ್ನು ಸೇರಿಸಿ ನಡೆಸಿದ ಕ್ರೀಡಾಕೂಟ ಭಾರತೀಯ ಬುಕ್ ಆಫ್ ರೆಕಾರ್ಡ್‌ನಲ್ಲಿ ದಾಖಲಿಸಲಾಯಿತು. ಇದನ್ನು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಭಾರತೀಯ ಬುಕ್ ಆಫ್ ರೆಕಾರ್ಡ್‌ನ ಸಿಇಓ ಸಮೀಮ್ ರಜಾಕ್ ಘೋಷಿಸಿ (ಅರ್ಹತಾ ಪತ್ರ) ದಾಖಲಾತಿಯನ್ನು ಕುಟುಂಬದ ಪ್ರಮುಖರಿಗೆ ಹಸ್ತಾಂತರಿಸಿದರು.

ಕಿರು ಸುದ್ದಿ

ಉದ್ಯೋಗ ಖಾತರಿ ಕಾರ್ಮಿಕರಿಗೆ ಹಣ ವಿತರಿಸಿಲ್ಲ : ಐಕ್ಯವೇದಿಕೆ ಆರೋಪ

ಕಾಸರಗೋಡು: ಉದ್ಯೋಗ ಖಾತರಿ ಯೋಜನೆಗೆ ಕೇಂದ್ರ ಸರಕಾರ ಹಣ ಮಂಜೂರು ಮಾಡಿದ್ದರೂ ಅದನ್ನು ಕಾರ್ಮಿಕರಿಗೆ ವಿತರಿಸದೆ ರಾಜ್ಯ ಸರಕಾರ ವಂಚಿಸುತ್ತಿದೆ ಎಂದು ಹಿಂದೂ ಐಕ್ಯವೇದಿಕೆ ಆರೋಪಿ ಸಿದೆ. ಕೇಂದ್ರ ಸರಕಾರ ನೀಡಿದ 800 ಕೋ.ರೂ.ಗಳನ್ನು ಬೇರೆ ಅಗತ್ಯಗಳಿಗೆ ಬಳಸಿದುದ್ದರಿಂದ ಕಾರ್ಮಿಕರಿಗೆ ಮೂರು ತಿಂಗಳಿಂದ ವೇತನ ವಿತರಿಸಿಲ್ಲ. ಈ ಮೂಲಕ ರಾಜ್ಯ ಸರಕಾರ ಕಾರ್ಮಿಕರಿಗೆ ವಂಚನೆ ಎಸಗಿದೆ ಎಂದು ಹಿಂದೂ ಐಕ್ಯವೇದಿಕೆ ರಾಜ್ಯ ಉಪಾಧ್ಯಕ್ಷ ಇ.ಎಸ್.ಬಿಜು ಅವರು ಕೋಟ್ಟಾಯಂನಲ್ಲಿ ಆರೋಪಿಸಿದ್ದಾರೆ. ಉದ್ಯೋಗ ಖಾತರಿ ಯೋಜನೆ ಮೊತ್ತವನ್ನು ಆಯಾ ತಿಂಗಳು ಕೇಂದ್ರ ಸರಕಾರ ಮಂಜೂರು ಮಾಡುತ್ತಿದೆಯಾದರೂ ಮೂರು ತಿಂಗಳಿನಿಂದ ವಿತರಣೆಯಾಗಿಲ್ಲ. ಪ್ರತೀ ಪಂ.ಗೆ ತಲಾ ಒಂದೂ ವರೆ ಕೋಟಿಯಿಂದ 2 ಕೋ.ರೂ.ಗೆ ಕೇಂದ್ರ ಸರಕಾರ ಮಂಜೂರು ಮಾಡು ತ್ತಿದೆ. ಆದರೆ ಕಾರ್ಮಿಕರಿಗೆ ವೇತನ ವಿತರಿಸದೆ ರಾಜ್ಯ ಸರಕಾರ ಬಡವರ ಅನ್ನಕ್ಕೂ ತಡೆಯೊಡ್ಡುತ್ತಿದೆ. ಕಾರ್ಮಿಕರಿಗೆ ನೀಡಲಿರುವ ವೇತನ ಶೀಘ್ರ ವಿತರಿಸಲು ರಾಜ್ಯ ಸರಕಾರ ಕ್ರಮ ಕೈಗೊಳ್ಳಬೇಕೆಂದು ಹಿಂದೂ ಐಕ್ಯವೇದಿಕೆ ಒತ್ತಾಯಿಸಿದೆ.

ಎ.30-ಮೇ 2 - ಪಡುಬೆಳ್ಳೆ ದೇಗುಲ ಉತ್ಸವ

ಶಿರ್ವ: ಪಡುಬೆಳ್ಳೆ ಶ್ರೀಮಹಾಲಿಂಗೇಶ್ವರ ದೇಗುಲದ ವಾರ್ಷಿಕ ಮಹೋತ್ಸವ ಎ.30ರಿಂದ ಮೇ 2ರವರೆಗೆ ವೇದಮೂರ್ತಿ ಕುಕ್ಕಿಕಟ್ಟೆ ರಾಘವೇಂದ್ರ ತಂತ್ರಿ ನೇತೃತ್ವದಲ್ಲಿ, ಕ್ಷೇತ್ರದ ಪ್ರಧಾನ ಅರ್ಚಕ ವೇದಮೂರ್ತಿ ಮಧ್ವರಾಜ ಭಟ್ ಸಹಭಾಗಿತ್ವದಲ್ಲಿ ಸಂಪನ್ನಗೊಳ್ಳಲಿದೆ. ಎ.30ರಂದು ಉಷಃಕಾಲ ಪೂಜೆ, ಪಂಚಾಮೃತಾಭಿಷೇಕ, ಏಕಾದಶ ರುದ್ರಾಭಿಷೇಕ, ಮಧ್ಯಾಹ್ನ 11.30ಕ್ಕೆ ಮಹಾಪೂಜೆ, 12ರಿಂದ ನಾಗದೇವರ ಪೂಜೆ, ಬ್ರಾಹ್ಮಣ ಸುವಾಸಿನಿ ಆರಾಧನೆ, ರಾತ್ರಿ 7.30ರಿಂದ ಉತ್ಸವ ಬಲಿ, ರಂಗಪೂಜೆ, ರಾತ್ರಿ 8.30ರಿಂದ ಕಟ್ಟೆ ಪೂಜೆ, ಭೂತ ಬಲಿ, ಮೇ 1ರಂದು ಬೆಳಿಗ್ಗೆ ಪರಿವಾರ ದೈವಗಳ ತಂಬಿಲ, ರಾತ್ರಿ ಗಂಟೆ 7ಕ್ಕೆ ಶ್ರೀಧೂಮಾವತಿ ದೈವಸ್ಥಾನದಲ್ಲಿ ಸಂದರ್ಶನ, ರಾತ್ರಿ 8ರಿಂದ ಧೂಮಾವತಿ, ಬಂಟ ದೈವಗಳ ಮುಖಾಮುಖಿ, ರಾತ್ರಿ ಉತ್ಸವ ಬಲಿ, ಮೇ 2ರಂದು ಬೆಳಿಗ್ಗೆ ಸಂಪ್ರೋಕ್ಷಣೆ, ನವಕ ಪ್ರಧಾನ ಹೋಮ, ಮಂತ್ರಾಕ್ಷತೆ ಜರುಗಲಿದೆ ಎಂದು ಆಡಳಿತ ಮೊಕ್ತೇಸರ ಬೆಳ್ಳೆ ದೊಡ್ಡಮನೆ ಸುಭಾಷ್ಚಂದ್ರ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜೀವರಕ್ಷಕರ ನೇಮಕಾತಿ: ಅರ್ಜಿ ಆಹ್ವಾನ

ಕಾಸರಗೋಡು: 2026ರಲ್ಲಿ ಟ್ರಾಲಿಂಗ್ ನಿಷೇಧದ ಅವಧಿಗೆ ಜಿಲ್ಲೆಯಲ್ಲಿ ಸಮುದ್ರ ರಕ್ಷಣಾ ಕಾರ್ಯಾಚರಣೆಗಳಿಗಾಗಿ ದಿನ ವೇತನ ಆಧಾರದ ಮೇಲೆ ಜೀವರಕ್ಷಕರನ್ನು ನೇಮಿಸಿಕೊಳ್ಳಲು ಮೀನುಗಾರಿಕಾ ಇಲಾಖೆ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿದಾರರು ನೋಂದಾಯಿತ ಮೀನುಗಾರರಾಗಿರಬೇಕು ಮತ್ತು ಗೋವಾದ ರಾಷ್ಟ್ರೀಯ ಜಲ ಕ್ರೀಡಾ ಸಂಸ್ಥೆಯಲ್ಲಿ ಸಮುದ್ರ ರಕ್ಷಣಾ ಕಾರ್ಯಾಚರಣೆಗಳಲ್ಲಿ ತರಬೇತಿಯನ್ನು ಪೂರ್ಣಗೊಳಿಸಿರಬೇಕು. 20 ರಿಂದ 45 ವರ್ಷ ವಯಸ್ಸಿನವರಾಗಿರಬೇಕು ಮತ್ತು ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಲ್ಲಿ ಸಮುದ್ರದಲ್ಲಿ ಈಜಲು ದೈಹಿಕವಾಗಿ ಸದೃಢರಾಗಿರಬೇಕು ಎಂದು ತಿಳಿಸಲಾಗಿದೆ. ಕಾಸರಗೋಡು ಜಿಲ್ಲೆಯ ಖಾಯಂ ನಿವಾಸಿಗಳು, ಸಮುದ್ರ ರಕ್ಷಣಾ ರಕ್ಷಕರು ಮತ್ತು ಜೀವರಕ್ಷಕರಾಗಿ ಕೆಲಸ ಮಾಡಿದವರು ಮತ್ತು 2018ರಲ್ಲಿ ಪ್ರವಾಹ ರಕ್ಷಣಾ ಕಾರ್ಯಾಚರಣೆಗಳಲ್ಲಿ ಭಾಗವಹಿಸಿದವರಿಗೆ ಆದ್ಯತೆ ನೀಡಲಾಗುವುದು. ಹೆಚ್ಚಿನ ಮಾಹಿತಿಗೆ 04994 209841 ಕರೆ ಮಾಡಬಹುದು ಎಂದು ಪ್ರಕಟಣೆ ತಿಳಿಸಿದೆ.

ನಿಧನ ಸುದ್ದಿ

ತಿಮ್ಮಪ್ಪ ಪೂಜಾರಿ ಅಟ್ಲೊಟ್ಟು

ಬಂಟ್ವಾಳ : ಇಲ್ಲಿಗೆ ಸಮೀಪದ ಅಟ್ಲೊಟ್ಟು ನಿವಾಸಿ, ಪ್ರಗತಿಪರ ಕೃಷಿಕ ತಿಮ್ಮಪ್ಪ ಪೂಜಾರಿ ಅಟ್ಲೊಟ್ಟು (85) ಇವರು ಅಸೌಖ್ಯದಿಂದ ಸೋಮವಾರ ಮಧ್ಯಾಹ್ನ ಮಂಗಳೂರಿನ ಆಸ್ಪತ್ರೆಯೊಂದರಲ್ಲಿ ನಿಧನರಾದರು. ಮೃತರು ಪತ್ನಿ, ಪುತ್ರ ಮತ್ತು ಪುತ್ರಿಯನ್ನು ಅಗಲಿದ್ದಾರೆ. ಮೃತರು ಪ್ರಗತಿಪರ ಕೃಷಿಕರಾಗಿ, ಬಿಲ್ಲವ ಸಮಾಜದ ಗುರಿಕಾರರಾಗಿ, ಗ್ರಾಮ ದೈವದ ಚಾಕರಿ ನಡೆಸುತ್ತಿದ್ದರು.



ಬಾಲಕೃಷ್ಣ ಶೆಟ್ಟಿ

ಕುಂಬಳೆ: ಕುಂಬಳೆಯ ಹಿರಿಯ ಟೈಲರ್ ಮೀಂಜ ಕುಳೂರು ಕರಿಪ್ಪಾರ ನಿವಾಸಿ ಬಾಲಕೃಷ್ಣ ಶೆಟ್ಟಿ (62) ನಿಧನ ಹೊಂದಿದರು. ಅವರು ಕುಂಬಳೆಯಲ್ಲಿ ಟೈಲರಿಂಗ್ ಸಂಸ್ಥೆಯಲ್ಲಿ ಕಟ್ಟಿಂಗ್ ಮಾಸ್ಟರ್ ಆಗಿ ಕೆಲಸ ನಿರ್ವಹಿಸುತ್ತಿದ್ದರು. ಕಿಡ್ನಿ ಸಂಬಂಧ ಅಸೌಖ್ಯ ಬಾಧಿಸಿದ್ದ ಅವರನ್ನು ಪರಿಯಾರಂ ವೈದ್ಯಕೀಯ ಕಾಲೇಜು ಆಸ್ಪತ್ರೆಯಲ್ಲಿ ದಾಖಲಿಸಲಾಗಿತ್ತು. ಆದರೆ ಭಾನುವಾರ ಹೃದಯಾಘಾತದಿಂದ ನಿಧನ ಹೊಂದಿದರು. ಕೇರಳ ಸ್ಟೇಟ್ ಟೈಲರ್ಸ್ ಅಸೋಸಿಯೇಶನ್‌ನ ಮಾಜಿ ರಾಜ್ಯ ಸಮಿತಿ ಸದಸ್ಯರಾಗಿದ್ದ ಅವರು ಪ್ರಸ್ತುತ ಜಿಲ್ಲಾ ಸಮಿತಿ ಸದಸ್ಯನಾಗಿದ್ದರು. ಮೃತರು ಪತ್ನಿ ಶ್ಯಾಮಲಾ, ಮಕ್ಕಳಾದ ಪುಷ್ಪರಾಜ್, ಜಯರಾಜ್, ವಿಶ್ವರಾಜ್ ಅವರನ್ನು ಅಗಲಿದ್ದಾರೆ.



ಶ್ರೀ ಸಂಪುಟ ನರಸಿಂಹ ಸ್ವಾಮಿ ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ನರಸಿಂಹ ಜಯಂತಿ ಅಂಗವಾಗಿ ಸೂರ್ಯೋದಯದಿಂದ ಸೂರ್ಯಾಸ್ತದ ತನಕ ಏಕಾದಶಿ ನಾಮ ಸಂಕೀರ್ತನೆ ಮತ್ತು ದೇವರ ನಾಮಗಳ ಗಾಯನ ಪ್ರಾರಂಭವಾಯಿತು. ಶ್ರೀ ಮಠದ ದಿವಾನ ಸುದರ್ಶನ ಜೋಯಿಸ ದೀಪ ಬೆಳಗಿಸಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಮಠದ ವೇಣುಗೋಪಾಲ ಶಾಸ್ತ್ರಿ, ಕಲಾವಿದ ಯಜ್ಞೇಶ್ ಆಚಾರ್ ಮತ್ತಿತರರು ಉಪಸ್ಥಿತರಿದ್ದರು.

ಇಂದು ವಿತ್ತ ಸಚಿವರಿಂದ ಉಡುಪಿ ಐಐಜೆಜೆ ಕೇಂದ್ರದ ಲೋಕಾರ್ಪಣೆ

ಉಡುಪಿ: ಸರಕಾರದ ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ದಿ ಜೆಮ್ಸ್ ಆ್ಯಂಡ್ ಜುವೆಲರಿ ಎಕ್ಸ್‌ಪೋರ್ಟ್ ಪ್ರೊಮೋಶನ್ ಕೌನ್ಸಿಲ್ ಇಂಡಿಯಾ (ಜಿಜೆಇಪಿಸಿ) ಪ್ರಾಯೋಜಕತ್ವದಲ್ಲಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಜೆಮ್ಸ್ ಆ್ಯಂಡ್ ಜುವೆಲರಿಯ ಉಡುಪಿ ಕಚೇರಿ ಉದ್ಘಾಟನೆ ಕಾರ್ಯಕ್ರಮ ಎನ್‌ಎಚ್ 66ರ ಸನಿಹದ ಅಂಬಲಪಾಡಿ ಶಾಮಿಲಿ ಸಭಾಂಗಣದಲ್ಲಿ ಏ. 28ರ ಬೆಳಗ್ಗೆ 11ಕ್ಕೆ ನಡೆಯಲಿದೆ. ಭಾರತದ ಆಭರಣ ಮಹತ್ವಾಕಾಂಕ್ಷೆಗಳಿಗೆ ಉತ್ತೇಜನ ನೀಡುವ ಐಐಜೆಜೆ ಕೇಂದ್ರವನ್ನು ಕೇಂದ್ರ ಸರಕಾರದ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಉದ್ಘಾಟಿಸಲಿದ್ದಾರೆ. ಈ ಕೇಂದ್ರವು ಆಧುನಿಕ ತಂತ್ರಜ್ಞಾನವು ಮುಂದಿನ ಪೀಳಿಗೆಯ ವಿನ್ಯಾಸಕರು ಮತ್ತು ಕುಶಲಕರ್ಮಿಗಳನ್ನು ಸಶಕ್ತಗೊಳಿಸುವುದಕ್ಕೆ ಸಹಕಾರಿಯಾಗಲಿದೆ. ಐಐಜೆಜೆ ಉಡುಪಿಯಲ್ಲಿ ಪಿಎಂ ವಿಶ್ವಕರ್ಮ ಯೋಜನೆಯಡಿ ತರಬೇತಿ ಪಡೆದ ಹಳೆ ವಿದ್ಯಾರ್ಥಿಗಳು ಮತ್ತು ಅಭ್ಯರ್ಥಿಗಳೊಂದಿಗೆ ತೊಡಗಿಸಿಕೊಳ್ಳುವ ಮೂಲಕ ಸಬಲೀಕರಣ ಮತ್ತು ದೃಢವಾದ, ಕೌಶಲ ಸೃಷ್ಟಿಸುವ ಸರಕಾರದ ಬದ್ಧತೆಯನ್ನು ಸೂಚಿಸುತ್ತದೆ.



ಐಐಜೆಜೆ ಉಡುಪಿ ಉದ್ಘಾಟನೆಯು ರತ್ನ ಮತ್ತು ಆಭರಣ ವಲಯದಲ್ಲಿ ವಿಶೇಷವಾಗಿ ತಳಮಟ್ಟದಲ್ಲಿ ಭಾರತದ ಕೌಶಲ ಪರಿಸರವ್ಯವಸ್ಥೆಯನ್ನು ಬಲಪಡಿಸುವ ಮಹತ್ವದ ಹೆಜ್ಜೆಯಾಗಿದೆ. ಪ್ರತಿಭೆ ಯನ್ನು ಪೋಷಿಸುವ ಮೂಲಕ ಮತ್ತು ಮೌಲ್ಯವರ್ಧನೆಯನ್ನು ಉತ್ತೇಜಿಸುವ ಮೂಲಕ, ಈ ಉಪಕ್ರಮವು ಉದ್ಯಮದ ಜಾಗತಿಕ ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುತ್ತದೆ ಮತ್ತು ಅದರ ದೀರ್ಘಕಾಲೀನ ಬೆಳವಣಿಗೆಯ ಮಹತ್ವಾಕಾಂಕ್ಷೆಗಳನ್ನು ಬೆಂಬಲಿಸಲಿದೆ ಎಂದು ಜಿಜೆಇಪಿಸಿ ಅಧ್ಯಕ್ಷ ಕಿರಿಟ್ ಬನ್ಸಾಲಿ ತಿಳಿಸಿದ್ದಾರೆ.

ಪರಿಸರ ವಿರೋಧಿ ಕೃತ್ಯಕ್ಕೆ ಪ್ರೋತ್ಸಾಹ ನೀಡಿತೇ ಪರಿಸರ ಸಂರಕ್ಷಣೆ ಪಾಠ ಮಾಡುವ ಜಿಲ್ಲಾಡಳಿತ?

ತಂತಿ ಸರಿಸುವ ಬದಲು ತಲೆಯೇ ಕತ್ತರಿಸಿದ್ರು!

ಉಡುಪಿ: ಪರಿಸರ ಸಂರಕ್ಷಣೆಯ ಬಗ್ಗೆ ಪಾಠ ಮಾಡುವ, ಗಿಡ ನೆಡುವ ಕಾರ್ಯಕ್ರಮಗಳಿಗೆ ಚಾಲನೆ ನೀಡುವ ಜಿಲ್ಲಾಡಳಿತವೇ ಇಂದು ಪರಿಸರ ವಿರೋಧಿ ಕೃತ್ಯಕ್ಕೆ ಕೈಹಾಕಿದೆ. ಜಿಲ್ಲೆಯ ಸರ್ವೋಚ್ಚ ಅಧಿಕಾರ ಕೇಂದ್ರವಾದ ಜಿಲ್ಲಾಧಿಕಾರಿ ಕಚೇರಿ ಆವರಣದಲ್ಲೇ ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿದು ಹಾಕಿರುವುದು ಸಾರ್ವಜನಿಕರ ಹಾಗೂ ಪರಿಸರ ಪ್ರೇಮಿಗಳ ತೀವ್ರ ಆಕ್ರೋಶಕ್ಕೆ ಕಾರಣವಾಗಿದೆ.

ತಂತಿ ಸರಿಸುವ ಬದಲು ತಲೆಯೇ ಕತ್ತರಿಸಿದ ಆಡಳಿತ!

ಕೆಲವು ದಿನಗಳ ಹಿಂದೆ (ಏ. 24) ಮರದಿಂದ ಮಾವಿನಕಾಯಿ ಕೊಯ್ಯಲು ಹೋಗಿ ಸಿಬ್ಬಂದಿಯೊಬ್ಬರು ವಿದ್ಯುತ್ ಆಘಾತದಿಂದ ಮೃತಪಟ್ಟ ಘಟನೆಯ ನಂತರ ವಿವಿಧ ಸಂಘಟನೆಗಳು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ, ಮರಗಳ ಮೇಲೆ ಅಪಾಯಕಾರಿಯಾಗಿ ಹಾದುಹೋಗಿರುವ ವಿದ್ಯುತ್ ತಂತಿಗಳನ್ನು ಬೇರೆಡೆಗೆ ವರ್ಗಾಯಿಸಿ ಎಂದು ಕೇಳಿಕೊಂಡಿದ್ದವು. ಆದರೆ, ಬುದ್ಧಿವಂತರ ಜಿಲ್ಲೆಯ ಆಡಳಿತ ವರ್ಗ ಮಾಡಿದ್ದೇ ಬೇರೆ! ವಿದ್ಯುತ್ ತಂತಿಗಳನ್ನು ಸರಿಸುವ ಕಷ್ಟ ಬೇಡವೆಂದು, ದಶಕಗಳಿಂದ ನೆರಳು-ಹಣ್ಣು ನೀಡುತ್ತಿದ್ದ ಮರಗಳನ್ನೇ ಬುಡಮೇಲು ಮಾಡಿದೆ.

ಅಭಿವೃದ್ಧಿಯ ಅಬ್ಬರಕ್ಕೆ ಬಲಿಯಾಗುತ್ತಿದೆ ಕರಾವಳಿ

ಇಂದು ಕರಾವಳಿಯಲ್ಲಿ ತಾಪಮಾನ ಏರುತ್ತಿರುವುದಕ್ಕೆ ಮುಖ್ಯ ಕಾರಣ 'ಅಭಿವೃದ್ಧಿ' ಎಂಬ ಹೆಸರಿನಲ್ಲಿ ನಡೆಯುತ್ತಿರುವ ಪರಿಸರ ನಾಶ.

ಮರಗಳನ್ನು ಕಡಿದು ರಸ್ತೆ ನಿರ್ಮಿಸಿದ್ದರಿಂದ ಕರಾವಳಿಯ ತಂಪು ಮಾಯವಾಗಿದೆ.

ಕಾಂಕ್ರೀಟ್ ಕಾಡುಗಳು ಹೆಚ್ಚಾಗಿ, ಇಂಗಾಲದ ಡೈಆಕ್ಸೈಡ್ ಹೀರಿಕೊಳ್ಳುವ ಹಸಿರು ಹೊದಿಕೆ ಮಾಯವಾಗುತ್ತಿದೆ. ಈಗಾಗಲೇ ಬಿಸಿಲಿನ ತಾಪ ತಾಳಲಾರದೆ ಜನರು ಕಂಗಾಲಾಗಿರುವಾಗ, ಸರ್ಕಾರದ ಕಚೇರಿ ಆವರಣದಲ್ಲೇ ಹೀಗೆ ಮರಗಳನ್ನು ಕಡಿಯುವುದು ಗಾಯದ ಮೇಲೆ ಬರೆ ಎಳೆದಂತಾಗಿದೆ. ಪಕ್ಷಿಗಳ ಆಶ್ರಯತಾಣವಾಗಿದ್ದ, ಹಣ್ಣು ನೀಡುತ್ತಿದ್ದ ಮರಗಳನ್ನು ಕಡಿಯುವ ಮುನ್ನ ಪರ್ಯಾಯ ವ್ಯವಸ್ಥೆಯ ಬಗ್ಗೆ ಯೋಚಿಸದಿರುವುದು ಆಡಳಿತದ ಅಕ್ಷಮ್ಯ ನಿರ್ಲಕ್ಷ್ಯವನ್ನು ಎತ್ತಿ ತೋರಿಸುತ್ತದೆ. ಪರಿಸರ ಪ್ರೇಮಿಗಳ ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ.





ಅಭಿವೃದ್ಧಿಯ ಅಬ್ಬರ ಮತ್ತು ಕರಾವಳಿಯ ತಾಪಮಾನ

ಕರಾವಳಿ ಜಿಲ್ಲೆಗಳಲ್ಲಿ ಇಂದು ತಾಪಮಾನ ವಿಪರೀತವಾಗಿ ಏರಲು ಪ್ರಮುಖ ಕಾರಣವೆಂದರೆ ಅಭಿವೃದ್ಧಿಯ ಹೆಸರಿನಲ್ಲಿ ನಡೆಯುತ್ತಿರುವ ಅವೈಜ್ಞಾನಿಕ ಪರಿಸರ ನಾಶ. ರಾಷ್ಟ್ರೀಯ ಹೆದ್ದಾರಿ ಅಗಲೀಕರಣದ ಸಂದರ್ಭದಲ್ಲಿ ರಸ್ತೆಯ ಇಕ್ಕೆಲಗಳಲ್ಲಿದ್ದ ಸಾವಿರಾರು ದಶಕಗಳ ಹಳೆಯ ಮರಗಳನ್ನು ನಿರ್ದಾಕ್ಷಿಣ್ಯವಾಗಿ ಕಡಿಯಲಾಗಿದೆ. ಇದರ ಜೊತೆಗೆ ಹೆಚ್ಚುತ್ತಿರುವ ನಗರೀಕರಣವು ಹಸಿರು ಹೊದಿಕೆಯನ್ನು ನುಂಗಿ ಹಾಕುತ್ತಿದೆ. ಈ ಹಿಂದೆ ಕರಾವಳಿಯ ತಂಪು ಹವಾಮಾನಕ್ಕೆ ಸಾಕ್ಷಿಯಾಗಿದ್ದ ಮರಗಿಡಗಳು ಮಾಯವಾಗಿ, ಇಂದು ಕಾಂಕ್ರೀಟ್ ಕಟ್ಟಡಗಳು ಹೆಚ್ಚಾಗಿರುವುದರಿಂದ ಬಿಸಿಲಿನ ತಾಪ ತಾಳಲಾರದೆ ಜನರು ಕಂಗಾಲಾಗಿದ್ದಾರೆ. ಪ್ರಕೃತಿಯನ್ನು ಸಂರಕ್ಷಿಸಬೇಕಾದ ಸರ್ಕಾರಿ ಕಚೇರಿಗಳೇ ಇಂತಹ ಪರಿಸರ ವಿರೋಧಿ ಕೃತ್ಯಕ್ಕೆ ಮುಂದಾಗಿರುವುದು ದುರಂತದ ಸಂಗತಿ.

ಮಳೆಗಾಲದ ಸಿದ್ಧತೆಯ ಹೆಸರಿನಲ್ಲಿ 'ಹಸಿರು ಹನನ'

ಪ್ರತಿ ವರ್ಷ ಮಳೆಗಾಲ ಸಮೀಪಿಸುತ್ತಿದ್ದಂತೆ ಜಿಲ್ಲಾಡಳಿತ ಹಾಗೂ ನಗರಸಭೆಗಳು ಮಳೆಗಾಲದ ಮುನ್ನೆಚ್ಚರಿಕೆ ಅಥವಾ ಸಿದ್ಧತೆಯ ಹೆಸರಿನಲ್ಲಿ ನೂರಾರು ಮರಗಳಿಗೆ ಕೊಡಲಿ ಏಟು ಹಾಕುವುದನ್ನು ರೂಢಿಸಿಕೊಂಡಿವೆ. ವಿದ್ಯುತ್ ತಂತಿಗಳಿಗೆ ತಗುಲುವ ರೆಂಬೆಗಳನ್ನು ಮಾತ್ರ ಕತ್ತರಿಸುವ ಬದಲು, ಇಡೀ ಮರವನ್ನೇ ಬುಡಮೇಲು ಮಾಡುವ ಪ್ರವೃತ್ತಿ ಹೆಚ್ಚಾಗುತ್ತಿದೆ. ಇದು ಕೇವಲ ಸಿದ್ಧತೆಯಲ್ಲ, ಬದಲಾಗಿ ವ್ಯವಸ್ಥಿತವಾಗಿ ನಡೆಯುತ್ತಿರುವ ಹಸಿರು ನಾಶ. ಹೀಗೆ ಕಡಿಯುವ ಮರಗಳಿಗೆ ಪರ್ಯಾಯವಾಗಿ ಸಸಿಗಳನ್ನು ನೆಡುವ ಅಥವಾ ಬೆಳೆಸುವ ಕಾಳಜಿಯನ್ನು ಆಡಳಿತ ವ್ಯವಸ್ಥೆ ತೋರುತ್ತಿಲ್ಲ. ಮುನ್ನೆಚ್ಚರಿಕೆಯ ನೆಪದಲ್ಲಿ ಪ್ರತಿ ವರ್ಷವೂ ಅಮೂಲ್ಯ ಹಸಿರು ಸಂಪತ್ತನ್ನು ಬಲಿ ಪಡೆಯಲಾಗುತ್ತಿದೆ.

ಕುಕ್ಕರ್ ಬಾಂಬ್ ಬ್ಲಾಸ್ಟ್ ಆರೋಪಿಗೆ ಕಠಿಣ ಜೈಲು ಶಿಕ್ಷೆ: ವಿಹಿಂಪ ಸ್ವಾಗತ

ಮಂಗಳೂರು: ನಗರದಲ್ಲಿ ನಡೆದ ಕುಕ್ಕರ್ ಬಾಂಬ್ ಸ್ಫೋಟದ ಪ್ರಮುಖ ಆರೋಪಿ ಮೊಹಮ್ಮದ್ ಶಾರಿಕ್‌ಗೆ ಬೆಂಗಳೂರಿನ ಎನ್‌ಐಎ ವಿಶೇಷ ನ್ಯಾಯಾಲಯವು 10 ವರ್ಷಗಳ ಕಠಿಣ ಜೈಲು ಶಿಕ್ಷೆ ವಿಧಿಸಿರುವುದು ಸ್ವಾಗತಾರ್ಹ ಎಂದು ವಿಶ್ವ ಹಿಂದು ಪರಿಷತ್ ಪ್ರಾಂತ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ಹೇಳಿದ್ದಾರೆ.

ಆದರೆ, ಶಿಕ್ಷೆಯ ಪ್ರಮಾಣ ಕಡಿಮೆಯಾಗಿದೆ. ಆರೋಪಿಯು ಇತಿಹಾಸ ಪ್ರಸಿದ್ಧ ಕದ್ರಿ ದೇವಸ್ಥಾನವನ್ನು ಸ್ಫೋಟಿಸಿ ನೂರಾರು ಜನರ ಹತ್ಯೆಗೆ ಸಂಚು ರೂಪಿಸಿದ್ದ. ಕಂಕನಾಡಿ ಗರೋಡಿ ಶ್ರೀಬ್ರಹ್ಮಬೈದರ್ಕಳ ಕ್ಷೇತ್ರದ ರಸ್ತೆಯ ಎದುರು ಸಣ್ಣ ಪ್ರಮಾಣದಲ್ಲಿ ಸ್ಫೋಟಗೊಂಡು ಅವನ ಕೃತ್ಯ ವಿಫಲವಾಯಿತು. ಅವನ ಉದ್ದೇಶ ಕದ್ರಿ ದೇವಸ್ಥಾನವನ್ನು ಸ್ಫೋಟಿಸಿ ನೂರಾರು ಭಕ್ತರನ್ನು ಹತ್ಯೆ ಮಾಡುವುದಾಗಿತ್ತು. ಇದನ್ನು ಪರಿಗಣಿಸಿ ಶಿಕ್ಷೆಯ ಪ್ರಮಾಣ ಹೆಚ್ಚಾಗಬೇಕಿತ್ತು. ಶಿಕ್ಷೆಯ ಪ್ರಮಾಣ ಹೆಚ್ಚಿಸಲು ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬೇಕು ಎಂದು ರಾಷ್ಟ್ರೀಯ ತನಿಖಾ ದಳಕ್ಕೆ ಆಗ್ರಹಿಸುತ್ತೇವೆ ಎಂದು ಅವರು ಹೇಳಿದ್ದಾರೆ.

ಎನ್‌ಐಎ ಶಾಶ್ವತ ಕಚೇರಿ ಸ್ಥಾಪಿಸುವಂತೆ ಕ್ರಮ ಕೈಗೊಳ್ಳಿ

ಕಳೆದ ಹಲವು ವರ್ಷಗಳಿಂದ ಕರಾವಳಿಯನ್ನು ಗುರಿಯಾಗಿಸಿಟ್ಟುಕೊಂಡು, ಪದೇ ಪದೇ ವಿಧ್ವಂಸಕಚಟುವಟಿಕೆಗಳನಡೆಯುತ್ತಿದ್ದು, ಅಲ್ಲದೆ ದೇಶದ ಯಾವುದೊ ಭಾಗದಲ್ಲಿ ಭಯೋತ್ಪಾದಕ ಚಟುವಟಿಕೆ ನಡೆದಾಗ ಮಂಗಳೂರಿಗೆ ನಂಟು ಇರುವುದಲ್ಲದೆ ಹಲವರ ಬಂಧನವು ಆಗಿದೆ. ಕುಕ್ಕರ್ ಬಾಂಬ್ ಬ್ಲಾಸ್ಟ್, ಭಯೋತ್ಪಾದನೆಯನ್ನು ಬೆಂಬಲಿಸುವ ಗೋಡೆ ಬರಹ, ಸ್ಯಾಟ್‌ಲೈಟ್ ಫೋನ್ ಬಳಕೆ, ನಿಷೇಧಿತ ಸಂಘಟನೆಗಳ ಸಕ್ರೀಯತೆ, ನಿರಂತರ ಲವ್ ಜಿಹಾದ್‌ನಂತಹ ಪ್ರಕರಣಗಳು ನಡೆಯುತ್ತಿದ್ದು ಇದರಿಂದ ರಾಷ್ಟ್ರೀಯ ಭದ್ರತೆಗೆ ಧಕ್ಕೆಯಾಗುತ್ತಿದೆ, ಕರಾವಳಿ ಜನರ ಭದ್ರತೆಯ ಹಿತದೃಷ್ಟಿಯಿಂದ ಇನ್ನಾದರೂ ಮಂಗಳೂರಿನಲ್ಲಿ ಎನ್ ಐಎ ಶಾಶ್ವತ ಕಚೇರಿ ಸ್ಥಾಪಿಸಲು ಕ್ರಮ ಕೈಗೊಳ್ಳುವಂತೆ ರಾಜ್ಯ ಮತ್ತು ಕೇಂದ್ರ ಸರಕಾರಕ್ಕೆ ಆಗ್ರಹಿಸುತ್ತೇವೆ ಎಂದು ಶರಣ್ ಪಂಪ್‌ವೆಲ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಕನಾಡಿ ಗರೋಡಿಯಲ್ಲಿ ವಿಶೇಷ ಪೂಜೆ



ಕುಕ್ಕರ್ ಬ್ಲಾಸ್ಟ್ ಆರೋಪಿ ಭಯೋತ್ಪಾದಕ ಶಾರೀಕ್‌ಗೆ ಶಿಕ್ಷೆಯಾದ ಹಿನ್ನೆಲೆಯಲ್ಲಿ ಸೋಮವಾರ ಸಂಜೆ ಮಂಗಳೂರಿನ ಪ್ರಸಿದ್ಧ ಕ್ಷೇತ್ರ, ಕಂಕನಾಡಿ ಗರೋಡಿ ಶ್ರೀ ಬ್ರಹ್ಮಬೈದರ್ಕಳ ಕ್ಷೇತ್ರದಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಮಾಡಲಾಯಿತು. ದೊಡ್ಡ ಪ್ರಮಾಣದಲ್ಲಿ ನಡೆಯಬೇಕಿದ್ದ ಅನಾಹುತವನ್ನು ಶ್ರೀ ಕ್ಷೇತ್ರದ ದೈವಿಕ ಶಕ್ತಿಯೇ ತಪ್ಪಿಸಿ ಅಂದು ಮಂಗಳೂರನ್ನು ರಕ್ಷಿಸಿ ತಪ್ಪಿತಸ್ಥನಿಗೆ ಶಿಕ್ಷೆಯಾಗುವ ಮೂಲಕ ನ್ಯಾಯ ವನ್ನು ಒದಗಿಸಿಕೊಟ್ಟಿದೆ. ಈ ಹಿನ್ನಲೆ ಯಲ್ಲಿ ಸಾಮೂಹಿಕ ಪ್ರಾರ್ಥನೆ ಮಾಡಲಾಯಿತು. ಜೊತೆಗೆ ತಪಿತಸ್ಥನಿಗೆ ಶಿಕ್ಷೆಯ ಪ್ರಮಾಣ ಹೆಚ್ಚಾಗುವಂತೆ ದೇವರ ಸಾನಿಧ್ಯದಲ್ಲಿ ಪ್ರಾರ್ಥಿಸಲಾಯಿತು.

ಉಡುಪಿ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಸುರಂಗ ಮಾರ್ಗಕ್ಕೆ ಮನವಿ

ಉಡುಪಿ: ಉಡುಪಿ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ಅನುಕೂಲಕ್ಕಾಗಿ ಸುರಂಗ ಮಾರ್ಗ ನಿರ್ಮಿಸುವುದು ಸೇರಿದಂತೆ ವಿವಿಧ ಮೂಲಭೂತ ಸೌಕರ್ಯಗಳನ್ನು ಒದಗಿಸುವಂತೆ ಆಗ್ರಹಿಸಿ ಉಡುಪಿ ಯಾತ್ರಿ ಸಂಘದ ಪದಾಧಿಕಾರಿಗಳು ಸಂಸದ ಕೋಟ ಶ್ರೀನಿವಾಸ ಪೂಜಾರಿಯವರಿಗೆ ಮನವಿ ಸಲ್ಲಿಸಿದರು. ಮಣಿಪಾಲದ ರಜತಾದ್ರಿಯಲ್ಲಿರುವ ಸಂಸದರ ಕಚೇರಿಯಲ್ಲಿ ಶುಕ್ರವಾರ ನಡೆದ ಭೇಟಿಯಲ್ಲಿ ಸಂಘದ ಅಧ್ಯಕ್ಷ ಧೀರಜ್ ಶಾಂತಿ ಅವರು ರೈಲ್ವೆ ಪ್ರಯಾಣಿಕರು ಎದುರಿಸುತ್ತಿರುವ ಸಮಸ್ಯೆಗಳ ಬಗ್ಗೆ ಸಂಸದರ ಗಮನ ಸೆಳೆದರು.

ಸುರಂಗ ಮಾರ್ಗದ ಅವಶ್ಯಕತೆ

ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ರೈಲು ನಿಲ್ದಾಣ ಸೇರಿದಂತೆ ದೇಶದ ಪ್ರಮುಖ ನಿಲ್ದಾಣಗಳಲ್ಲಿರುವಂತೆ ಉಡುಪಿ ನಿಲ್ದಾಣದಲ್ಲೂ ಸುರಂಗ ಮಾರ್ಗ ನಿರ್ಮಿಸುವುದು ಅತ್ಯಗತ್ಯವಾಗಿದೆ. ಇದರಿಂದ ಹಿರಿಯ ನಾಗರಿಕರು ಒಂದು ಪ್ಲಾಟ್‌ಫಾರ್ಮ್‌ನಿಂದ ಮತ್ತೊಂದಕ್ಕೆ ಹೋಗಲು ಮೇಲ್ಸೇತುವೆ ಹತ್ತಿ ಇಳಿಯುವ ಶ್ರಮ ತಪ್ಪಲಿದೆ. ಅಲ್ಲದೆ, ನಿಲ್ದಾಣದ ಪೂರ್ವ ಭಾಗದ ನಿವಾಸಿಗಳಿಗೆ ಹಾಗೂ ವಿಶ್ವಪ್ರಸಿದ್ಧ ಮಣಿಪಾಲ ವಿದ್ಯಾಸಂಸ್ಥೆ ಮತ್ತು ಆಸ್ಪತ್ರೆಗಳಿಗೆ ತೆರಳುವ ಪ್ರಯಾಣಿಕರಿಗೆ ಹೆದ್ದಾರಿಯ ಜಂಜಡವಿಲ್ಲದೆ ನೇರವಾಗಿ ಸಂಚರಿಸಲು ಅನುಕೂಲವಾಗಲಿದೆ. ಮೀನು ವ್ಯಾಪಾರಿಗಳು ನಿಲ್ದಾಣದ ಮುಖ್ಯ ದ್ವಾರದ ಮೂಲಕ ಸರಕು ಸಾಗಿಸುವುದರಿಂದ ಉಂಟಾಗುವ ದುರ್ವಾಸನೆಯನ್ನು ತಡೆಯಲು ಈ ಸುರಂಗ ಮಾರ್ಗ ಸಹಕಾರಿಯಾಗಲಿದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ನಗರ ಸಾರಿಗೆ, ರೈಲು ನಿಲುಗಡೆ

ಉಡುಪಿ ಶ್ರೀಕೃಷ್ಣ ಮಠ, ವಿವಿಧ ಧಾರ್ಮಿಕ ಕ್ಷೇತ್ರಗಳು ಹಾಗೂ ಮಣಿಪಾಲದ ಶಿಕ್ಷಣ ಕೇಂದ್ರಗಳಿಗೆ ಪ್ರತಿನಿತ್ಯ ಸಾವಿರಾರು ಪ್ರಯಾಣಿಕರು ಆಗಮಿಸುತ್ತಾರೆ. ಅವರ ಹಿತದೃಷ್ಟಿಯಿಂದ ರೈಲುಗಳು ಬರುವ ಮತ್ತು ಹೊರಹೋಗುವ ಸಮಯಕ್ಕೆ ಸರಿಯಾಗಿ ನಿಲ್ದಾಣದಿಂದ ನಗರದ ವಿವಿಧೆಡೆಗೆ ನಗರ ಸಾರಿಗೆ ವ್ಯವಸ್ಥೆಯನ್ನು ಕಲ್ಪಿಸಬೇಕು ಎಂದು ಒತ್ತಾಯಿಸಲಾಯಿತು. ಇದರೊಂದಿಗೆ, ಎರ್ನಾಕುಲಂ-ಲೋಕಮಾನ್ಯ ತಿಲಕ್ ದುರಂತೋ ವೇಗದೂತ ರೈಲಿಗೆ ಉಡುಪಿ ನಿಲ್ದಾಣದಲ್ಲಿ ನಿಲುಗಡೆ ನೀಡಬೇಕು ಎಂಬುದು ಸಂಘದ ಪ್ರಮುಖ ಬೇಡಿಕೆಗಳಲ್ಲೊಂದಾಗಿದೆ.



ಪ್ರಮುಖ ರೈಲ್ವೆ ಯೋಜನೆಗಳ ಚರ್ಚೆ

2022ರಲ್ಲಿಯೇ ನಂದಿಕೂರು-ಮೂಡುಗೆರೆ ರೈಲು ಮಾರ್ಗದ ಸಮೀಕ್ಷಾ ವರದಿ ಸಲ್ಲಿಕೆಯಾಗಿದ್ದರೂ ರೈಲ್ವೆ ಮಂಡಳಿ ಅದನ್ನು ಕೈಬಿಟ್ಟಿರುವುದರ ಬಗ್ಗೆ ಸಂಸದರ ಜೊತೆ ಚರ್ಚಿಸಲಾಯಿತು. ಜೊತೆಗೆ, ಕೊಂಕಣ ರೈಲ್ವೆಯನ್ನು ಭಾರತೀಯ ರೈಲ್ವೆ ಇಲಾಖೆಯೊಂದಿಗೆ ವಿಲೀನಗೊಳಿಸುವ ಪ್ರಕ್ರಿಯೆಯಲ್ಲಿ ಉಂಟಾಗುತ್ತಿರುವ ವಿಳಂಬದ ಬಗ್ಗೆಯೂ ಪ್ರಸ್ತಾಪಿಸಲಾಯಿತು. ಯಾತ್ರಿಕರ ಹಿತದೃಷ್ಟಿಯಿಂದ ಉಡುಪಿ ಯಾತ್ರಿ ಸಂಘವು ನಡೆಸುತ್ತಿರುವ ನಿರಂತರ ಪ್ರಯತ್ನಗಳನ್ನು ಶ್ಲಾಘಿಸಿದ ಸಂಸದ ಕೋಟ ಶ್ರೀನಿವಾಸ ಪೂಜಾರಿ, ಈ ಬೇಡಿಕೆಗಳ ಕುರಿತು ಸಂಬಂಧಪಟ್ಟ ಇಲಾಖೆಗಳೊಂದಿಗೆ ಚರ್ಚಿಸಿ ಸಕಾರಾತ್ಮಕವಾಗಿ ಸ್ಪಂದಿಸುವ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಸಂಘದ ಕಾರ್ಯದರ್ಶಿ ಮಂಜುನಾಥ ಮಣಿಪಾಲ ಹಾಗೂ ಕಾರ್ಯಕಾರಿ ಸಮಿತಿ ಸದಸ್ಯ ಎಸ್. ಎಸ್. ತೋನ್ಸೆ ಉಪಸ್ಥಿತರಿದ್ದರು.

ಮತ ಎಣಿಕೆ ಅಧಿಕಾರಿಗಳ ರ‍್ಯಾಂಡಮೈಸೇಷನ್ ಕಾಸರಗೋಡು ಜಿಲ್ಲೆಯಲ್ಲಿ 540 ಅಧಿಕಾರಿಗಳು

ಕಾಸರಗೋಡು: ವಿಧಾನಸಭಾ ಚುನಾವಣೆಗೆ ಸಂಬಂಧಿಸಿದಂತೆ ಕಾಸರಗೋಡು ಜಿಲ್ಲೆಯಲ್ಲಿ ಮತ ಎಣಿಕೆಗಾಗಿ ಮೊದಲ ಹಂತದ ರ‍್ಯಾಂಡಮೈಸೇಷನ್ ಮೂಲಕ ಅಧಿಕಾರಿಗಳ ಆಯ್ಕೆ ಪ್ರಕ್ರಿಯೆಯನ್ನು ಜಿಲ್ಲಾ ಚುನಾವಣಾಧಿಕಾರಿಯಾದ ಜಿಲ್ಲಾಧಿಕಾರಿ ಅರ್ಜುನ್ ಪಾಂಡ್ಯನ್ ಅವರ ನೇತೃತ್ವದಲ್ಲಿ ಜಿಲ್ಲಾಧಿಕಾರಿ ಕಚೇರಿಯಲ್ಲಿ ಸೋಮವಾರ ಹಮ್ಮಿಕೊಳ್ಳಲಾಗಿತ್ತು.

ಇದರೊಂದಿಗೆ ಆರ್ಡರ್ ಸಾಫ್ಟ್‌ವೇರ್ ಮೂಲಕ ಯಾವ ಅಧಿಕಾರಿಗಳಿಗೆ ಮತ ಎಣಿಕೆಯ ಕಾರ್ಯವನ್ನು ನೀಡಲಾಗಿದೆ ಎಂಬುದನ್ನು ತಿಳಿದುಕೊಳ್ಳಬಹುದು. ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ಪ್ರತಿ ಇವಿಎಂ ಟೇಬಲ್‌ಗೆ 20 ಎಣಿಕೆ ಮೇಲ್ವಿಚಾರಕರು, 20 ಎಣಿಕೆ ಸಹಾಯಕರು ಮತ್ತು 20 ಸೂಕ್ಷ್ಮ ವೀಕ್ಷಕರು ಇದ್ದಾರೆ. ಅಂಚೆ ಮತಪತ್ರ ಟೇಬಲ್ ಕಾರ್ಯವನ್ನೂ ಪರಿಗಣಿಸಿದರೆ ಜಿಲ್ಲೆಯಲ್ಲಿ ಒಟ್ಟು 540 ಮಂದಿ ಅಧಿಕಾರಿಗಳಿಗೆ ಮತ ಎಣಿಕೆಯ ಕಾರ್ಯವನ್ನು ವಹಿಸಿಕೊಡಲಾಯಿತು.



ಪ್ರತಿ ವಿಧಾನಸಭಾ ಕ್ಷೇತ್ರದಲ್ಲಿ 14 ಇವಿಎಂ ಟೇಬಲ್‌ಗಳು ಇರಲಿವೆ. ಮಂಜೇಶ್ವರ ಕ್ಷೇತ್ರದಲ್ಲಿ 4 ಅಂಚೆ ಮತಪತ್ರಗಳ ಕೋಷ್ಟಕಗಳು, ಕಾಸರಗೋಡು ಕ್ಷೇತ್ರದಲ್ಲಿ 7 ಅಂಚೆ ಮತಪತ್ರಗಳ ಕೋಷ್ಟಕಗಳು, ಉದುಮ ಕ್ಷೇತ್ರದಲ್ಲಿ 9 ಅಂಚೆ ಮತಪತ್ರಗಳ ಕೋಷ್ಟಕಗಳು, ಕಾಞಂಗಾಡು ಕ್ಷೇತ್ರದಲ್ಲಿ 10 ಅಂಚೆ ಮತಪತ್ರಗಳ ಕೋಷ್ಟಕಗಳು ಮತ್ತು ತೃಕ್ಕರಿಪ್ಪುರ ಕ್ಷೇತ್ರದಲ್ಲಿ 12 ಅಂಚೆ ಮತಪತ್ರಗಳ ಕೋಷ್ಟಕಗಳನ್ನು ಸ್ಥಾಪಿಸಲಾಗುವುದು.

ಮತ ಎಣಿಕೆ ಕಾರ್ಯಕ್ಕೆ ಸಂಬಂಧಿಸಿದ ಎರಡನೇ ಹಂತದ ರ‍್ಯಾಂಡಮೈಸೇಷನ್ ಮೇ 2 ರಂದು ನಡೆಯಲಿದೆ. ಮೂರನೇ ಹಂತದ ರ‍್ಯಾಂಡಮೈಸೇಷನ್ ಮತ ಎಣಿಕೆಯ ದಿನವಾದ ಮೇ 4 ರಂದು ಬೆಳಗ್ಗೆ 5 ಗಂಟೆಗೆ ಎಣಿಕೆ ಕೇಂದ್ರಗಳಲ್ಲಿ ಆಯಾ ಕ್ಷೇತ್ರದ ಚುನಾವಣಾ ಅಧಿಕಾರಿಗಳ ನೇತೃತ್ವದಲ್ಲಿ ನಡೆಯಲಿದೆ.

ಸಭೆಯಲ್ಲಿ ಎಡಿಎಂ ಕೆ.ವಿ.ಶ್ರುತಿ, ಚುನಾವಣಾ ಉಪ ಕಲೆಕ್ಟರ್ ಎ.ಎನ್.ಗೋಪಕುಮಾರ್, ಜಿಲ್ಲಾ ಮಾಹಿತಿ ಅಧಿಕಾರಿ ಕೆ.ಲೀನಾ ಮತ್ತು 5 ವಿಧಾನಸಭಾ ಕ್ಷೇತ್ರಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಅಲ್ಲದೆ ಚುನಾವಣಾ ಅಧಿಕಾರಿಗಳು ಹಾಜರಿದ್ದರು.

14 ವರ್ಷ ಹಿಂದೆ ನಡೆದಿದ್ದ ತಣ್ಣೀರುಪಂಥ ಖತೀಜಮ್ಮ ಕೊಲೆ ಪ್ರಕರಣ

ತಲೆಮರೆಸಿಕೊಂಡಿದ್ದ ಅಪರಾಧಿ ಆಂಧ್ರದಲ್ಲಿ ಬಂಧನ

ಕಡಬ: ಹದಿನಾಲ್ಕು ವರ್ಷಗಳ ಹಿಂದೆ ಚಿನ್ನ ಎಗರಿಸಲೆತ್ನಿಸಿದಾಗ ತಡೆದ ಸಂಬಂಧಿ ಮಹಿಳೆಯನ್ನು ಕೊಲೆ ಮಾಡಿ ಅಪರಾಧಿಯಾಗಿ ನ್ಯಾಯಾಲಯದಿಂದ ಶಿಕ್ಷೆ ಪ್ರಕಟವಾದರೂ ಪೊಲೀಸರಿಗೆ ಸಿಗದೆ ತಲೆಮರೆಸಿಕೊಂಡಿದ್ದ ಸುಳ್ಯದ ಅಜ್ಜಾವರ ನಿವಾಸಿ ಅಬ್ದುಲ್ ಅಜೀಜ್ ಎಂಬಾತನನ್ನು ಕಡಬ ಪೊಲೀಸರು ಆಂಧ್ರಪ್ರದೇಶದಲ್ಲಿ ಪತ್ತೆ ಹಚ್ಚಿ ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆ.



2012ರ ಜನವರಿ 31ರಂದು ಕಡಬ ಠಾಣಾ ವ್ಯಾಪ್ತಿಯ ಕೊಂಬಾರು ಗ್ರಾಮದ ಆಮ್ಯೆತಡ್ಕ ಎಂಬಲ್ಲಿ ಮೋರಿಯೊಂದರ ಅಡಿಯಲ್ಲಿ ಕೊಳೆತ ಸ್ಥಿತಿಯಲ್ಲಿ ಮಹಿಳೆಯೋರ್ವರ ಮೃತದೇಹ ಪತ್ತೆಯಾಗಿತ್ತು. ಕಡಬ ಪೊಲೀಸ್ ಠಾಣೆಯಲ್ಲಿ ಈ ಸಂಬಂಧ ಪ್ರಕರಣ ದಾಖಲಾಗಿತ್ತು. ಮೃತಪಟ್ಟವರು ತಣ್ಣೀರುಪಂಥ ಗ್ರಾಮದ ಅಳಕೆ ಅಬ್ಬಾಸ್ ಎಂಬವರ ಪತ್ನಿ ಖತೀಜಮ್ಮ ಎಂಬುದನ್ನು ಪತ್ತೆ ಮಾಡಿದ್ದ ಪೊಲೀಸರು, ಇದೊಂದು ಕೊಲೆ ಪ್ರಕರಣ ಎನ್ನುವುದನ್ನು ಭೇದಿಸಿದ್ದರು. ಅಜೀಜ್ ಮತ್ತು ಆತನ ತಂಗಿಯರು ಸೇರಿ ಖತೀಜಮ್ಮ ಅವರನ್ನು ಕೊಲೆಗೈದಿದ್ದರು ಎಂದು ಪೊಲೀಸ್ ತನಿಖೆಯಲ್ಲಿ ಬೆಳಕಿಗೆ ಬಂದಿತ್ತು. 2012ರ ಜನವರಿ 9ರಂದು ಅಜೀಜ್ ತನ್ನ ತಂಗಿಯಂದಿರ ಜತೆ ಖತೀಜ ಅವರ ಮನೆಗೆ ಹೋಗಿ ಖತೀಜಮ್ಮರ ಚಿನ್ನವನ್ನು ಎಗರಿಸಲು ಪ್ರಯತ್ನಿಸಿದ್ದ. ಖತೀಜಮ್ಮ ಅವರು ಆಕ್ಷೇಪಿಸಿದಾಗ ಅಜೀಜ್, ಅವರ ಬಾಯಿಗೆ ಬಟ್ಟೆ ತುರುಕಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದಲ್ಲದೆ, ತಂಗಿಯಂದಿರ ಜತೆ ಸೇರಿ ಮೃತದೇಹವನ್ನು ಮಾರುತಿ ಆಮ್ನಿ ಕಾರಲ್ಲಿ ಹಾಕಿ ಮೋರಿಯ ಅಡಿಗೆ ಬಿಸಾಡಿ ಬಂದಿದ್ದರೆಂದು ಆರೋಪಿಸಲಾಗಿತ್ತು. ಆರೋಪಿಗಳೆಲ್ಲರ ಬಂಧನವಾಗಿತ್ತು. ಪ್ರಕರಣದ ತನಿಖಾಧಿಕಾರಿಯಾಗಿದ್ದ, ಪುತ್ತೂರು ಉಪವಿಭಾಗದ ಆಗಿನ ಸಹಾಯಕ ಪೊಲೀಸ್ ಅಧೀಕ್ಷಕ ಎಂ.ಎನ್. ಅನುಚೇತ್ ಆರೋಪಿಗಳ ವಿರುದ್ಧ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿದ್ದರು. ಪ್ರಕರಣದ ವಿಚಾರಣೆ ನಡೆಸಿದ್ದ ನ್ಯಾಯಾಲಯ ಆರೋಪಿಗಳನ್ನು ಖುಲಾಸೆಗೊಳಿಸಿತ್ತು. ಈ ಆದೇಶದ ವಿರುದ್ಧ ಸರಕಾರ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿತ್ತು. ಹೈಕೋರ್ಟ್ ನ್ಯಾಯಮೂರ್ತಿಗಳಾದ ಶ್ರೀನಿವಾಸ್ ಹರೀಶ್ ಕುಮಾರ್ ಹಾಗೂ ವಿಜಯ್ ಕುಮಾರ್ ಎ.ಪಾಟೀಲ್ ಅವರಿದ್ದ ದ್ವಿಸದಸ್ಯ ಪೀಠ ಆರೋಪಿ ಅಬ್ದುಲ್ ಅಜೀಜ್‌ಗೆ 10 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಮತ್ತು ರೂ.2,00,000 ದಂಡವನ್ನು ಪಾವತಿಸುವಂತೆ ಆದೇಶ ನೀಡಿದ್ದರು. ಸರಕಾರಿ ಅಭಿಯೋಜಕರಾಗಿದ್ದ ಕೆ.ಪಿ.ಯಶೋದ ಅವರು ನ್ಯಾಯಾಲಯದಲ್ಲಿ ಆರೋಪಿಯ ವಿರುದ್ಧ ವಾದ ಮಂಡನೆ ಮಾಡಿದ್ದರು. ಆದರೆ ಶಿಕ್ಷೆ ಪ್ರಕಟವಾದ ಬಳಿಕ ಆತ ಪೊಲೀಸರಿಂದ ತಲೆಮರೆಸಿಕೊಂಡಿದ್ದ. ಇದೀಗ ಕಡಬ ಪೊಲೀಸ್ ಠಾಣೆಯ ಉಪನಿರೀಕ್ಷಕ ಜಂಬೂರಾಜ್ ಮಹಾಜನ್ ಮತ್ತು ಸಿಬ್ಬಂದಿಗಳು ಆತನನ್ನು ಬಂಧಿಸಿದ್ದಾರೆ.



ಐಪಿಎಲ್-2026 ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಪಂಜಾಬ್	7	6	0	1	13	+1.333
ಆರ್‌ಸಿಬಿ	8	6	2	0	12	+1.919
ಹೈದರಾಬಾದ್	8	5	3	0	10	+0.815
ರಾಜಸ್ಥಾನ	8	5	3	0	10	+0.602
ಗುಜರಾತ್	8	4	4	0	8	-0.475
ಚೆನ್ನೈ	8	3	5	0	6	-0.121
ದಿಲ್ಲಿ	8	3	5	0	6	-1.060
ಕೆಕೆಆರ್	8	2	5	1	5	-0.751
ಮುಂಬೈ	7	2	5	0	4	-0.736
ಲಖನೌ	8	2	6	0	4	-1.106

ಕಿರುಸುದ್ದಿ

ಪಂಜಾಬ್ ಕಿಂಗ್ಸ್ ತಡೆಯಲು ರಾಯಲ್ಸ್‌ನಿಂದ ಸಾಧ್ಯವೇ?

ಚಂಡೀಗಢ: ಪ್ರಸಕ್ತ ಐಪಿಎಲ್ ಆವೃತ್ತಿಯಲ್ಲಿ ಚೇಸಿಂಗ್‌ನಲ್ಲಿ ಸಿಂಗ್ ಈಸ್ ಕಿಂಗ್ ಎನಿಸಿಕೊಂಡಿರುವ ಪಂಜಾಬ್ ಕಿಂಗ್ಸ್ ಅನ್ನು ರಾಜಸ್ಥಾನ್ ರಾಯಲ್ಸ್‌ಗೆ ಕಟ್ಟಿಹಾಕಲು ಸಾಧ್ಯವೇ? ಎಂಬ ಪ್ರಶ್ನೆ ಎಲ್ಲಾ ಐಪಿಎಲ್ ಅಭಿಮಾನಿಗಳಿಗೆ ಕಾಡುವಂತಿದೆ. ವೇಗಿ ಆರ್ಚರ್ ಮತ್ತು ಬರ್ಗರ್ ಮುಂದೆ ಪಂಜಾಬ್ ಕಿಂಗ್ಸ್ ಬ್ಯಾಟರ್‌ಗಳು ಎಂದಿನಂತೆ ಅಬ್ಬರಿಸುವರೇ ನೋಡಬೇಕಿದೆ. ಪವರ್‌ಪ್ಲೇನಲ್ಲಿ ಪಂಜಾಬ್ ಆರಂಭಿಕರಾದ ಪ್ರಿಯಾಂಶ್ ಮತ್ತು ಪ್ರಭ್‌ಸಿಮ್ರನ್ ಸ್ಫೋಟಕ ಆರಂಭ ನೀಡುತ್ತಾರೆ. ಇನ್ನು ದಾಂಡಿಗರಾದ ಕೂಪರ್ ಕೊನೊಲಿ, ನಾಯಕ ಶ್ರೇಯಸ್ ಅಯ್ಯರ್, ಸ್ಟೊಯ್ನಿಸ್, ಶಶಾಂಕ್ ಅವರನ್ನು ಒಳಗೊಂಡಿದೆ. ಆದರೆ ಬೌಲಿಂಗ್‌ನಲ್ಲಿ ಪಂಜಾಬ್ ನಿರೀಕ್ಷಿತ ಪ್ರದರ್ಶನ ನೀಡಿಲ್ಲ. ಕಿಂಗ್ಸ್ ಗೆದ್ದ ಅಷ್ಟೂ ಪಂದ್ಯಗಳನ್ನು ಬ್ಯಾಟರ್‌ಗಳ ಅಬ್ಬರದಿಂದ ಚೇಸ್ ಮಾಡಿ ಗೆದ್ದಿದೆ. ರಾಯಲ್ಸ್ ಏನೂ ಕಡಿಮೆಯಿಲ್ಲ, 15ರ ಪೋರ ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಸ್ಫೋಟಕ ಆರಂಭಿಕ ಜೋಡಿ ಹೊಂದಿದೆ. ಉಳಿದಂತೆ ಜ್ಯುರೆಲ್ ಸ್ಫೋಟಕ ಲಯದಲ್ಲಿದ್ದಾರೆ. ನಾಯಕ ಪರಾಗ್ ಲಯಕ್ಕೆ ಮರಳುವ ಅಗತ್ಯವಿದೆ. ಇದು ರಾತ್ರಿಯ ಪಂದ್ಯವಾಗಿದ್ದು, ಮಂಗಳವಾರ 7.30ಕ್ಕೆ ಆರಂಭವಾಗಲಿದೆ.

ಊಬರ್ ಕಪ್: ಆಸ್ಟ್ರೇಲಿಯಾ ಮಣಿಸಿ ಕ್ವಾರ್ಟರ್‌ಗೆ ಭಾರತ

ಹೊಸದಿಲ್ಲಿ: ಡೆನ್ಮಾರ್ಕ್‌ನಲ್ಲಿ ನಡೆಯುತ್ತಿರುವ ಥಾಮಸ್ ಆ್ಯಂಡ್ ಊಬರ್ ಕಪ್ 2026 ಬ್ಯಾಡ್ಮಿಂಟನ್ ಪಂದ್ಯಾವಳಿಯಲ್ಲಿ ಆಸ್ಟ್ರೇಲಿಯನ್ನರನ್ನು ಸೋಲಿಸಿದ ಭಾರತೀಯ ಪುರುಷರು ಕ್ವಾರ್ಟರ್ ಫೈನಲ್‌ಗೇರಿದ್ದಾರೆ. ಕ್ವಾರ್ಟರ್ ಫೈನಲ್ ಹಂತದಲ್ಲಿ ಚೀನಾ ಸವಾಲನ್ನು ಎದುರಿಸಲಿದ್ದಾರೆ. ಪುರುಷರ ವಿಭಾಗದ ಎ ಗುಂಪಿನ ಪಂದ್ಯದಲ್ಲಿ ಆಸ್ಟ್ರೇಲಿಯಾ ವಿರುದ್ಧ ಭಾರತೀಯರು 5–0 ಅಂತರದ ಗೆಲುವು ದಾಖಲಿಸಿದ್ದಾರೆ. ಮೊದಲ ಪಂದ್ಯದಲ್ಲಿ ಕೆನಡಾ ವಿರುದ್ಧ 4–1 ಅಂತರದಿಂದ ಗೆದ್ದಿದ್ದ ಭಾರತೀಯರು, ದ್ವಿತೀಯ ಪಂದ್ಯದಲ್ಲಿ ಆಸೀಸ್ ಎದುರು ಭರ್ಜರಿ ಜಯ ಸಾಧಿಸಿ ಕ್ವಾರ್ಟರ್ ಪ್ರವೇಶಿಸಿದ್ದಾರೆ. ಆಸ್ಟ್ರೇಲಿಯಾ ವಿರುದ್ಧದ ಅತಿ ಕಡಿಮೆ 23 ನಿಮಿಷದ ಪಂದ್ಯದಲ್ಲಿ ಆ್ಯಂಡಿಕಾ ಮತ್ತು ಸ್ಟೀಫನ್ ಸ್ಯಾಮ್ ಜೋಡಿ ವಿರುದ್ಧ ಹರಿಹರನ್ ಮತ್ತು ಎಂ.ಆರ್. ಅರ್ಜುನ್ ಜೋಡಿ 21–12, 21–10 ನೇರ ಗೇಮ್‌ಗಳ ಜಯ ಸಾಧಿಸಿದ್ದರು. ಲಕ್ಷ್ಯ ಸೇನ್ ತಮ್ಮ ಮೊದಲ ಪಂದ್ಯದಲ್ಲಿ ಸ್ಯಾಮ್ ಎದುರು 37 ನಿಮಿಷಗಳ ಹೋರಾಟದಲ್ಲಿ 21–14, 21–16 ನೇರ ಗೇಮ್‌ಗಳಿಂದ ಜಯಿಸಿದ್ದರು. ಸಿಂಗಲ್ಸ್ ವಿಭಾಗದ ಇನ್ನೊಂದು ಪಂದ್ಯದಲ್ಲಿ ಏಷ್ಯನ್ ಚಾಂಪಿಯನ್‌ಶಿಪ್ ರಜತ ಪದಕ ವಿಜೇತ ಆಯುಷ್ ಶೆಟ್ಟಿ 21–8, 21–6 ಗೇಮ್‌ಗಳಿಂದ ಶ್ರೇಯ್ ಥಾಂಡ್‌ರನ್ನು ಸೋಲಿಸಿದರು. ಡಬಲ್ಸ್ ವಿಭಾಗದಲ್ಲಿ ರಿಜ್ಕಿ ಹಿದಾಯತ್ ಮತ್ತು ಜ್ಯಾಕ್ ಯು ಜೋಡಿ ವಿರುದ್ಧ 21–14, 21–16 ನೇರ ಗೇಮ್‌ಗಳಿಂದ ಗೆದ್ದ ಸಾತ್ವಿಕ್ ಮತ್ತು ಚಿರಾಗ್ ಶೆಟ್ಟಿ ಜೋಡಿ 3–0 ಮುನ್ನಡೆ ಒದಗಿಸಿದರು. ಮೂರನೇ ಸಿಂಗಲ್ಸ್‌ನಲ್ಲಿ ರಿಶಿ ಹೋಂಡ ಭೂಪತಿ ಅವರನ್ನು 21–11, 21–17 ನೇರ ಗೇಮ್‌ಗಳಿಂದ ಭಾರತದ ಎಚ್.ಎಸ್ ಪ್ರಣಯ್ ಸೋಲಿಸಿದರು.

ಒಸಾಕಾ ಮಣಿಸಿ ಕ್ವಾರ್ಟರ್ ಫೈನಲ್‌ಗೇರಿದ ಸೆಬಲೆಂಕಾ!

ಮ್ಯಾಡ್ರಿಡ್: ವಿಶ್ವ ನಂ.1 ಆಟಗಾರ್ತಿ ಅರೀನಾ ಸೆಬಲೆಂಕಾ ನಾಲ್ಕು ಬಾರಿಯ ಗ್ರ್ಯಾಂಡ್ ಸ್ಲಾಮ್ ಚಾಂಪಿಯನ್ ನಯೊಮಿ ಒಸಾಕಾರನ್ನು ಸೋಲಿಸಿ 5ನೇ ಬಾರಿಗೆ ಮ್ಯಾಡ್ರಿಡ್ ಓಪನ್ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಸೋಮವಾರ ನಡೆದ ರೋಚಕ ಸೆಣಸಾಟದಲ್ಲಿ ಮೂರು ಬಾರಿಯ ಮ್ಯಾಡ್ರಿಡ್ ಚಾಂಪಿಯನ್ ಸೆಬಲೆಂಕಾ ಈ ಋತುವಿನ ಸತತ 15ನೇ ಗೆಲುವು ದಾಖಲಿಸಿ ತಮ್ಮ ಪ್ರಾಬಲ್ಯ ಮೆರೆದಿದ್ದಾರೆ. ಒಸಾಕಾ ವಿರುದ್ಧ 6–7(1–7), 6–3, 6–2 ಸೆಟ್ ಅಂತರದಲ್ಲಿ ಜಯಿಸಿದ್ದಾರೆ.



ಭುವನೇಶ್ವರ್ 3 ವಿಕೆಟ್, ಹ್ಯಾಜೆಲ್‌ವುಡ್ 4 ವಿಕೆಟ್ | ಆರ್‌ಸಿಬಿಗೆ 9 ವಿಕೆಟ್ ಗೆಲುವು

ಸ್ವಿಂಗ್ ಬಿರುಗಾಳಿಗೆ ಕಂಪಿಸಿದ ದಿಲ್ಲಿ!

ಹೊಸದಿಲ್ಲಿ: ಸ್ವಿಂಗ್ ಕಿಂಗ್ ಭುವನೇಶ್ವರ್ ಮತ್ತು ಹ್ಯಾಜೆಲ್‌ವುಡ್ ನೇತೃತ್ವದ ಆರ್‌ಸಿಬಿ ಸ್ವಿಂಗ್ ಬೌಲಿಂಗ್ ಬಿರುಗಾಳಿಯ ನೆರವಿನಿಂದ ಆರ್‌ಸಿಬಿ ಭರ್ಜರಿ 9 ವಿಕೆಟ್‌ಗಳಿಂದ ಗೆದ್ದು ದಿಲ್ಲಿ ಕ್ಯಾಪಿಟಲ್ಸ್ ವಿರುದ್ಧ ಕಳೆದ ಪಂದ್ಯದ ಸೋಲಿನ ಸೇಡು ತೀರಿಸಿಕೊಂಡಿದೆ. 76 ರನ್ ಸುಲಭ ಗುರಿ ಬೆನ್ನತ್ತಿದ ಆರ್‌ಸಿಬಿ ಇನ್ನೇನು ಪವರ್‌ಪ್ಲೇಗಿಂತ 3 ಹೆಚ್ಚುವರಿ ಎಸೆತಗಳಲ್ಲಿ (6.3) 77 ರನ್ ಚಚ್ಚಿ ಬಿಸಾಕಿ ತಾನು ಯಾಕೆ ಹಾಲಿ ಚಾಂಪಿಯನ್ ಎಂಬುದನ್ನು ಮನದಟ್ಟು ಮಾಡಿಸಿದೆ.

ಪವರ್‌ಪ್ಲೇ ಇನ್ನೂ ಪೂರ್ಣಗೊಳ್ಳುವ ಮೊದಲೇ, ನಾಲ್ಕು ಓವರ್‌ಗಳಲ್ಲಿ ಕ್ಯಾಪಿಟಲ್ಸ್ ತನ್ನ 6 ವಿಕೆಟ್‌ಗಳನ್ನು ಕಳೆದುಕೊಂಡಿತು. ಅದೂ ಎಷ್ಟು ರನ್ನಿಗೆ? ಕೇವಲ 8 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡ ದಿಲ್ಲಿ ಇನ್ನೇನು 20 ರನ್‌ಗಳೊಳಗೆ ಆಲೌಟ್ ಆಗುತ್ತೇನೋ ಎಂಬಂತಹ ಸ್ಥಿತಿ ನಿರ್ಮಾಣವಾಗಿತ್ತು. 7ನೇ ವಿಕೆಟ್‌ಗೆ ಜತೆಗೂಡಿದ ಪೊರೆಲ್ ಮತ್ತು ಮಿಲ್ಲರ್ 35 ರನ್ ಪೇರಿಸಿದರು. ಕಿಲ್ಲರ್ ಮಿಲ್ಲರ್ ಸ್ವಲ್ಪ ಧೈರ್ಯ ತೋರಿಸಿದ್ದು, 18 ಎಸೆತಗಳನ್ನು ಎದುರಿಸಿ 19 ರನ್ ಹೊಡೆದರು.

ಐಪಿಎಲ್ ಇತಿಹಾಸದಲ್ಲೇ ಇದು 12ನೇ ಅತಿ ಕಡಿಮೆ ಮೊತ್ತ

ಆರ್‌ಸಿಬಿಗೆ 9 ವಿಕೆಟ್ ಗೆಲುವು: 76 ರನ್ ಸುಲಭ ಗುರಿ ಬೆನ್ನತ್ತಿದ ಆರ್‌ಸಿಬಿ ಬ್ಯಾಟರ್‌ಗಳು ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗನೆ ಪಂದ್ಯ ಮುಗಿಸಿಕೊಟ್ಟರು. ಜೇಕಬ್ ಬೆಥೆಲ್ 20 ರನ್ ಹೊಡೆದು ವಿಕೆಟ್ ಒಪ್ಪಿಸಿದರೆ, ಕೊಹ್ಲಿ ಜತೆಗೂಡಿದ ಪಡಿಕ್ಕಲ್ 3 ಸಿಕ್ಸರ್ ಹೊಡೆದು ಮಿಂಚಿದರು. ಇಬ್ಬರೂ ಮುರಿಯದ 2ನೇ ವಿಕೆಟ್‌ಗೆ 51 ರನ್ ಕಲೆಹಾಕಿ ಗೆಲುವಿನ ದಡ ಸೇರಿಸಿದರು. 12 ಅಂಕಗಳೊಂದಿಗೆ ಆರ್‌ಸಿಬಿ 2ನೇ ಸ್ಥಾನದಲ್ಲೇ ಭದ್ರವಾಗಿದೆ.





8/6; ಅತಿ ಕಡಿಮೆ ಮೊತ್ತ!

ಸ್ವಿಂಗ್ ಕಿಂಗ್ ಭುವಿ ಕನಸಿನ ಬೌಲಿಂಗ್ ದಾಳಿ ನಡೆಸಿದ ಪರಿಣಾಮ ಐಪಿಎಲ್ ಇತಿಹಾಸದಲ್ಲೇ ದಿಲ್ಲಿ ಕ್ಯಾಪಿಟಲ್ಸ್ ಅತಿ ಕಡಿಮೆ ಮೊತ್ತಕ್ಕೆ ಮೊದಲ 6 ವಿಕೆಟ್‌ಗಳನ್ನು ಕಳೆದುಕೊಂಡ ವಿನೂತನ ಕಳಪೆ ಆಟದ ದಾಖಲೆಯನ್ನೂ ಬರೆಯಿತು. 2011ರಲ್ಲಿ ಡೆಕ್ಕನ್ ಚಾರ್ಜರ್ಸ್ ವಿರುದ್ಧ ಕೊಚ್ಚಿ ಟಸ್ಕರ್ಸ್ ಕೇರಳ ತಂಡ 11 ರನ್‌ಗಳಿಗೆ 6 ವಿಕೆಟ್ ಕಳೆದುಕೊಂಡಿದ್ದು ಈವರೆಗಿನ ಐಪಿಎಲ್ ದಾಖಲೆಯಾಗಿತ್ತು. ಅದೂ ಏ.27ರಂದೇ ನಡೆದ ಪಂದ್ಯವಾಗಿತ್ತು. 2017ರಲ್ಲಿ ಡೇರ್‌ಡೆವಿಲ್ಸ್ 24ಕ್ಕೆ 6 ವಿಕೆಟ್, 2014ರಲ್ಲಿ ಆರ್‌ಸಿಬಿ 28ಕ್ಕೆ 6 ವಿಕೆಟ್ ಮತ್ತು 2013ರಲ್ಲಿ ಸನ್‌ರೈಸರ್ಸ್ 29ಕ್ಕೆ 6 ವಿಕೆಟ್ ಕಳೆದುಕೊಂಡಿದ್ದವು.

ಸಂಕ್ಷಿಪ್ತ ಸ್ಕೋರ್

ದಿಲ್ಲಿ ಕ್ಯಾಪಿಟಲ್ಸ್ 75/10 (16.3)
ಪೊರೆಲ್ 30(33), ಮಿಲ್ಲರ್ 19(18), ಜೇಮಿಸನ್ 12(13).ಭುವನೇಶ್ವರ್ 5ಕ್ಕೆ 3, ಹ್ಯಾಜೆಲ್‌ವುಡ್ 12ಕ್ಕೆ 4, ಸುಯಷ್ 7ಕ್ಕೆ 1, ರಸಿಕ್ 21ಕ್ಕೆ 1.
ಆರ್‌ಸಿಬಿ:77/1 (6.3)
ಬೆಥೆಲ್ 20(11), ಕೊಹ್ಲಿ 23(15)*, ಪಡಿಕ್ಕಲ್ 34(13)*,ಜೇಮಿಸನ್ 42ಕ್ಕೆ 1.

ಪವರ್‌ಪ್ಲೇ ಅತಿ ಕಡಿಮೆ ಮೊತ್ತ!

ದಿಲ್ಲಿ ಕ್ಯಾಪಿಟಲ್ಸ್ ಐಪಿಎಲ್ ಇತಿಹಾಸದಲ್ಲೇ ಅತಿ ಕಡಿಮೆ ಪವರ್‌ಪ್ಲೇ ಸ್ಕೋರ್ ಕಲೆಹಾಕಿ ಕಳಪೆ ದಾಖಲೆಯನ್ನು ಬರೆದಿದೆ. ಕಳೆದ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 264 ರನ್ ಹೊಡೆದಿದ್ದ ಕ್ಯಾಪಿಟಲ್ಸ್ ತಂಡ, ಇಂತಹದ್ದೊಂದು ಕಳಪೆ ದಾಖಲೆಯನ್ನೂ ಬರೆದಿದೆ. ಪವರ್‌ಪ್ಲೇನ 6 ಓವರ್‌ಗಳಲ್ಲಿ ದಿಲ್ಲಿ ಸ್ಕೋರ್ 6 ವಿಕೆಟ್ ನಷ್ಟಕ್ಕೆ 13 ರನ್ ಆಗಿತ್ತು. ಇದು ಐಪಿಎಲ್ ಇತಿಹಾಸದಲ್ಲೇ ಅತಿ ಕಡಿಮೆ ಪವರ್‌ಪ್ಲೇ ಸ್ಕೋರ್.

ಪವರ್‌ಪ್ಲೇ ಅತಿ ಕಡಿಮೆ ರನ್

- 13/6 - ದಿಲ್ಲಿ, ಆರ್‌ಸಿಬಿ ವಿರುದ್ಧ (2026)
- 14/2 - ರಾಜಸ್ಥಾನ್, ಆರ್‌ಸಿಬಿ ವಿರುದ್ಧ (2009)
- 14/3 - ಹೈದರಾಬಾದ್, ರಾಜಸ್ಥಾನ್ ವಿರುದ್ಧ (2022)
- 15/2 - ಸಿಎಸ್‌ಕೆ, ಕೆಕೆಆರ್ ವಿರುದ್ಧ (2011)
- 16/1 - ಪಂಜಾಬ್, ಆರ್‌ಪಿಎಸ್ ವಿರುದ್ಧ (2017).

ಬಿರುಗಾಳಿಯಿಂದ ಆಟಕ್ಕೆ ಅಡ್ಡಿ!



ದಿಲ್ಲಿ ತಂಡ 9 ಓವರ್‌ಗಳಲ್ಲಿ 7 ವಿಕೆಟ್ ಕಳೆದುಕೊಂಡು 43 ರನ್ ಗಳಿಸಿದ್ದ ಸಂದರ್ಭದಲ್ಲಿ ಭಾರೀ ಬಿರುಗಾಳಿ ಬೀಸಿದ್ದು, ತುಸು ಸಮಯ ಆಟಕ್ಕೆ ಅಡ್ಡಿಯಾಗಿತ್ತು. ಇದರಿಂದ ಸುಯಷ್ ಮೊದಲ ಎಸೆತದಲ್ಲಿ ವಿಕೆಟ್ ಕೀಪರ್ ಜಿತೇಶ್ ಶರ್ಮಾ ಪೊರೆಲ್‌ಗೊಂದು ಜೀವದಾನ ನೀಡಿದ್ದರು. 10ನೇ ಓವರ್ ಮುಗಿಯುವ ಮುನ್ನ ಬಿರುಗಾಳಿಯಿಂದ ಬ್ಯಾಟರ್ ಪೊರೆಲ್ ಕಣ್ಣಿಗೆ ಕಸ ಬಿದ್ದಿದ್ದು, ಆರ್‌ಸಿಬಿಯ ವೆಂಕಟೇಶ್ ಅಯ್ಯರ್ ಕಸ ತೆಗೆದು ಕ್ರೀಡಾಸ್ಫೂರ್ತಿ ಮೆರೆದರು.

ಸೂಪರ್ ಓವರ್ ಗೆದ್ದ ಕೆಕೆಆರ್ | ರಿಂಕು, ನರೇನ್ ಪರಾಕ್ರಮ

ಮೂರೇ ಎಸೆತಕ್ಕೆ ಶರಣಾದ ಜೈಂಟ್ಸ್



ಲಖನೌ: ಅಂಕಪಟ್ಟಿಯಲ್ಲಿ ಕೊನೆಯ 2 ಸ್ಥಾನದಲ್ಲಿದ್ದ ತಂಡಗಳ ನಡುವಿನ ರೋಚಕ ಪಂದ್ಯ, ಐಪಿಎಲ್ 19ನೇ ಆವೃತ್ತಿಯ ಮೊದಲ ಸೂಪರ್ ಓವರ್‌ಗೆ ಸಾಕ್ಷಿಯಾಯಿತು. ಸೂಪರ್ ಓವರ್‌ನಲ್ಲಿ ಸುನೀಲ್ ನರೇನ್ ಅದ್ಭುತ ಬೌಲಿಂಗ್‌ನಿಂದಾಗಿ ಕೆಕೆಆರ್ ಸುಲಭ ಜಯ ದಾಖಲಿಸಿತು.

ಸೂಪರ್ ಓವರ್‌ನಲ್ಲಿ ಮೂರು ಎಸೆತಗಳಷ್ಟೇ ಬ್ಯಾಟ್ ಬೀಸಿದ ಲಖನೌ ಕೇವಲ 1 ರನ್ ಗಳಿಸಿದ್ದು, 2 ವಿಕೆಟ್ ಕಳೆದುಕೊಂಡಿತ್ತು. 2 ರನ್ ಬೆನ್ನತ್ತಿದ ಕೆಕೆಆರ್ ಪರ ರಿಂಕು ಮೊದಲ ಎಸೆತದಲ್ಲೇ ಬೌಂಡರಿ ಹೊಡೆದರು. ಕೆಕೆಆರ್ ಗೆಲ್ಲಬೇಕಿದ್ದ ಪಂದ್ಯವನ್ನು ಸೂಪರ್ ಓವರ್ ತನಕ ಬರಲು ಕಾರಣ ಕಾರ್ತಿಕ್ ತ್ಯಾಗಿ ಕಳಪೆ ಕೊನೆಯ ಓವರ್. ಎರಡು ಫುಲ್ಟಾಸ್ ನೋಬಾಲ್ ಎಸೆಯುವ ಮೂಲಕ ತ್ಯಾಗಿ ಲಖನೌ ನೆರವಾದರೆ, ಕೊನೆಯ ಎಸೆತದಲ್ಲಿ ಸಿಕ್ಸರ್ ಹೊಡೆದು ಮೊಹಮ್ಮದ್ ಶಮಿ ಟೈ ಸಾಧಿಸಲು ನೆರವಾದರು.

ರಿಂಕು, ನರೇನ್ ಪರಾಕ್ರಮ: ಪಂದ್ಯದುದ್ದಕ್ಕೂ ರಿಂಕು ಸಿಂಗ್ ಬ್ಯಾಟಿಂಗ್ ಮತ್ತು ಕ್ಷೇತ್ರರಕ್ಷಣೆಯಲ್ಲೂ ಮಿಂಚುವ ಮೂಲಕ ನೈಟ್ ರೈಡರ್ಸ್ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. 91ಕ್ಕೆ 7 ವಿಕೆಟ್ ಕಳೆದುಕೊಂಡಿದ್ದ ಕೆಕೆಆರ್‌ಗೆ ಆಪತ್ಬಾಂಧವನಾಗಿ ರಿಂಕು ಐಪಿಎಲ್‌ನ ತಮ್ಮ ವೈಯಕ್ತಿಕ ಅತ್ಯುತ್ತಮ 83 ರನ್ ಚಚ್ಚಿದ್ದರು. ಲಖನೌ ನಾಯಕ ಪಂತ್ (42) ವಿಕೆಟ್ ಕಬಳಿಸಿದ್ದ ನರೇನ್, ಸೂಪರ್ ಓವರ್‌ನಲ್ಲೂ ಮಿಂಚಿದರು. ಸೂಪರ್ ಓವರ್‌ನಲ್ಲಿ ನರೇನ್, ಪೂರನ್ ಮತ್ತು ಮಾರ್ಕ್ರಂ ವಿಕೆಟ್ ಕಬಳಿಸಿದ್ದರು.

ಕೆಕೆಆರ್: 155/7 (20)
ರಿಂಕು ಅಜೇಯ 83(51), ಮೊಹ್ಸಿನ್ 23ಕ್ಕೆ 5.
ಲಖನೌ: 155/8 (20)
ರಿಷಭ್ ಪಂತ್ 42(38), ಶಮಿ ಅಜೇಯ 11(6), ನರೇನ್ 23ಕ್ಕೆ 1.

ಸಂಕ್ಷಿಪ್ತ ಸ್ಕೋರ್

ಸೂಪರ್ ಓವರ್
ಲಖನೌ: 1/2 (0.3), ನರೇನ್ 1ಕ್ಕೆ 2 ವಿಕೆಟ್.
ಕೆಕೆಆರ್: 4/0 (0.1), ರಿಂಕು ಅಜೇಯ 4 ರನ್.

ಪೂರನ್‌ಗೆ ಸೂಪರ್ ಓವರ್ ದೇಜಾ ವು!

ಲಖನೌ-ಕೆಕೆಆರ್ ಸೂಪರ್ ಓವರ್‌ನಲ್ಲಿ ಲಖನೌ ಪರ ನಿಕೋಲಸ್ ಪೂರನ್ ಅವರನ್ನು ಭಡ್ತಿ ನೀಡಿ ಕಳುಹಿಸಲಾಗಿತ್ತು. ಕೆಕೆಆರ್ ಪರ ಸುನೀಲ್ ನರೇನ್ ಬೌಲಿಂಗ್‌ಗಿಳಿದ್ದರು. ಇಬ್ಬರೂ ವಿಂಡೀಸ್ ಆಟಗಾರರ ನಡುವೆ ಪೈಪೋಟಿ ಎದುರಾಗಿತ್ತು. ಇದು ದೇಜಾ ವು (ಹಿಂದೆಲ್ಲೋ ನಡೆದಿರುವ) ಅನುಭೂತಿ ನೀಡಿತ್ತು. 2014ರ ಸಿಪಿಎಲ್ ಸೂಪರ್ ಓವರ್ ಪಂದ್ಯವೊಂದರಲ್ಲಿ ಪೂರನ್ ಅವರನ್ನು ನರೇನ್ ಔಟ್ ಮಾಡಿದ್ದರು. 2020ರ ಐಪಿಎಲ್‌ನಲ್ಲಿ ಪಂಜಾಬ್ ಪರ ಆಡಿದ್ದ ಪೂರನ್, ಆರ್‌ಸಿಬಿ ವಿರುದ್ಧ ಸೂಪರ್ ಓವರ್ ಪಂದ್ಯವನ್ನು ಗೆದ್ದಿದ್ದಾಗ 2014ರ ಸೂಪರ್ ಓವರ್ ನೆನಪಾಗಿತ್ತು ಎಂದಿದ್ದರು. ಇದೀಗ 2014ರ ಸಿಪಿಎಲ್ ಸೂಪರ್ ಓವರ್ ಕ್ಷಣವೇ 2026ರ ಐಪಿಎಲ್‌ನಲ್ಲಿ ಇತಿಹಾಸ ಮರುಕಳಿಸಿದೆ. ಪೂರನ್ ವೈಫಲ್ಯ ಕಂಡಿದ್ದು, ನರೇನ್ ವಿಕೆಟ್ ಕಬಳಿಸಿದ್ದಾರೆ.

2 ನೋಬಾಲ್ ಎಸೆದ ತ್ಯಾಗಿ!

ಕೆಕೆಆರ್ ವೇಗಿ ಕಾರ್ತಿಕ್ ತ್ಯಾಗಿ ಲಖನೌ ವಿರುದ್ಧ ಕೊನೆಯ ಓವರ್‌ನಲ್ಲಿ ಎರಡು ಎತ್ತರದ ನೋಬಾಲ್ ಎಸೆದಿದ್ದರು. ಆದರೂ ಅಂಪಾಯರ್‌ಗಳು ಅವರಿಗೆ ಓವರ್ ಪೂರ್ಣಗೊಳಿಸಲು ಅವಕಾಶ ನೀಡಿದ್ದರು. ಎಂಸಿಸಿ ಕ್ರಿಕೆಟ್ ನಿಯಮದ ಪ್ರಕಾರ, ಒಂದು ಓವರ್‌ನಲ್ಲಿ ಬೌಲರ್‌ವೊಬ್ಬ ಎರಡು ಬೀಮಾರ್ ಎಸೆಯುವಂತಿಲ್ಲ. ಮಾರ್ಗಸೂಚಿ 41.7.3 ಪ್ರಕಾರ, ಅಪಾಯಕಾರಿ ಎಸೆತ ಎಂದೆನಿಸಿದರೆ ಅಂಪಾಯರ್ ನೋಬಾಲ್ ನೀಡಬೇಕು ಮತ್ತು 41.7.4ರ ಪ್ರಕಾರ, ಅಪಾಯಕಾರಿ ಎಸೆತವನ್ನು ಬೌಲರ್ ಮುಂದುವರಿಸಿದರೆ ಇನ್ನೊಮ್ಮೆ ನೋಬಾಲ್ ಸನ್ನೆ ಮಾಡಿ ಬೌಲರನ್ನು ಅಮಾನತು ಮಾಡಬೇಕು. ತ್ಯಾಗಿ ಎಸೆದ ಎರಡನೇ ನೋಬಾಲ್, ಅಪಾಯಕಾರಿ ಎಸೆತವಲ್ಲ ಎಂಬ ನಿಲುವಿಗೆ ಅಂಪಾಯರ್ಸ್ ಬಂದಿದ್ದರು.

ಮ್ಯಾಡ್ರಿಡ್ ಓಪನ್: 16ರ ಸುತ್ತಿಗೆ ಸಿನ್ನರ್, ಗಾಫ್

ಮ್ಯಾಡ್ರಿಡ್: ಸ್ಪೇನ್ ರಾಜಧಾನಿಯಲ್ಲಿ ನಡೆಯುತ್ತಿರುವ ಮ್ಯಾಡ್ರಿಡ್ ಓಪನ್ ಮಾಸ್ಟರ್ಸ್ 1000 ಪಂದ್ಯಾವಳಿಯಲ್ಲಿ ಇಟಲಿ ಟೆನಿಸಿಗ ಯಾನಿಕ್ ಸಿನ್ನರ್ 16ರ ಸುತ್ತನ್ನು ಪ್ರವೇಶಿಸಿದ್ದಾರೆ. ಭಾನುವಾರ ತಡರಾತ್ರಿ ಪಂದ್ಯದಲ್ಲಿ ಡೆನ್ಮಾರ್ಕ್ ಅರ್ಹತಾ ಸುತ್ತಿನ ಆಟಗಾರ ಎಲ್ಮರ್ ಮೊಲ್ಲರ್ ಅವರನ್ನು 6–2, 6–3 ನೇರ ಸೆಟ್‌ಗಳಿಂದ ಸೋಲಿಸಿ ಸಿನ್ನರ್ ಮುಂದಿನ ಹಂತ ಪ್ರವೇಶಿಸಿದ್ದಾರೆ.



ಟೆನಿಸ್ ಇತಿಹಾಸದಲ್ಲಿಯೇ ಸತತ 5ನೇ ಮಾಸ್ಟರ್ಸ್ 1000 ಟೂರ್ನಿ ಗೆದ್ದ ಮೊದಲ ಆಟಗಾರನೆಂಬ ದಾಖಲೆ ಬರೆಯುವ ಗುರಿಯನ್ನು ಸಿನ್ನರ್ ಹೊಂದಿದ್ದಾರೆ. ಇನ್ನೋರ್ವ ಇಟಲಿ ಆಟಗಾರ ಲೊರೆನ್ಸೊ ಮೂಸೆಟ್ಟಿ ಸಹ 16ರ ಸುತ್ತು ಪ್ರವೇಶಿಸಿದ್ದಾರೆ. ಹೊಟ್ಟೆನೋವಿನಿಂದ ಬಳಲುತ್ತಿದ್ದ ಅಮೆರಿಕ ಆಟಗಾರ್ತಿ ಕೊಕೊ ಗಾಫ್ ವಾಂತಿ ಮಾಡಿದ್ದರೂ, ಸೊರನಾ ಅವರನ್ನು 4–6, 7–5, 6–1ರಿಂದ ಮಣಿಸಿ 16ರ ಸುತ್ತನ್ನು ಪ್ರವೇಶಿಸಿದ್ದಾರೆ.

ಆರ್‌ಸಿಬಿ–ಗುಜರಾತ್ ಪಂದ್ಯದ ವೇಳೆ ನಡೆದ ಘಟನೆ

ಸಿಸಿಟಿವಿ ಕೇಬಲ್ ಕತ್ತರಿಸಿದವರ ಸೆರೆ

ಬೆಂಗಳೂರು: ಐಪಿಎಲ್ ಕ್ರಿಕೆಟ್ ಪಂದ್ಯದ ನಡುವೆ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಭದ್ರತಾ ಲೋಪದ ಆತಂಕ ಸೃಷ್ಟಿಸಿದ್ದ ಘಟನೆಗೆ ಇದೀಗ ಅಚ್ಚರಿಯ ತಿರುವು ಸಿಕ್ಕಿದೆ.

ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಗುಜರಾತ್ ಟೈಟಾನ್ಸ್ ನಡುವಿನ ಪಂದ್ಯದ ವೇಳೆ ಸುಮಾರು 240ಕ್ಕೂ ಹೆಚ್ಚು ಸಿಸಿಟಿವಿ ಕ್ಯಾಮೆರಾಗಳ ಕೇಬಲ್ ಕತ್ತರಿಸಿ ಪೊಲೀಸರನ್ನು ಹೈರಾಣಾಗಿಸಿದ್ದ ಕಿಡಿಗೇಡಿಗಳನ್ನು ಕಬ್ಬನ್ ಪಾರ್ಕ್ ಪೊಲೀಸರು ಬಂಧಿಸಿದ್ದಾರೆ. ಆದರೆ, ಈ ಕೃತ್ಯದ ಹಿಂದೆ ಯಾವುದೇ ವಿಧ್ವಂಸಕ ಸಂಚಿರಲಿಲ್ಲ, ಬದಲಾಗಿ ಬಾಕಿ ಸಂಬಳಕ್ಕಾಗಿ ನಡೆದ ಪ್ರತಿಭಟನೆ ಎಂಬುದು ವಿಚಾರಣೆಯಿಂದ ಬಯಲಾಗಿದೆ.

ಸಂಬಳದ ವಿವಾದವೇ ಮುಳುವಾಯಿತು: ಕ್ರೀಡಾಂಗಣದ ಸಿಸಿಟಿವಿ ನಿರ್ವಹಣೆಯ ಉಪಗುತ್ತಿಗೆ ಪಡೆದಿದ್ದ ಐವಿಎಸ್ ಡಿಜಿಟಲ್ ಸೊಲ್ಯೂಷನ್ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದ ಮಂಜುನಾಥ್ ಹಾಗೂ ಅಬ್ದುಲ್ ಕಲಾಂ ಎಂಬುವರೇ ಈ ಕೃತ್ಯದ ರೂವಾರಿಗಳು. ಹಲವು ತಿಂಗಳಿಂದ ಬರಬೇಕಿದ್ದ ಸಂಬಳವನ್ನು ಕಂಪನಿ ನೀಡದ ಕಾರಣ ರೋಸಿಹೋಗಿದ್ದ ಈ ಇಬ್ಬರು ಸಿಬ್ಬಂದಿ, ಸಂಸ್ಥೆಗೆ ಹಾಗೂ ಪೊಲೀಸರಿಗೆ ತಕ್ಕ ಪಾಠ ಕಲಿಸಲು ನಿರ್ಧರಿಸಿದ್ದರು. ಪಂದ್ಯದ ದಿನವೇ ಸರ್ವರ್ ರೂಂಗೆ ಅನಧಿಕೃತವಾಗಿ ಪ್ರವೇಶಿಸಿ, ಎನ್‌ವಿಆರ್ ಮತ್ತು ಫೈಬರ್ ಸಂಪರ್ಕಗಳನ್ನು ಕಡಿತಗೊಳಿಸಿ ಇಡೀ ಭದ್ರತಾ ವ್ಯವಸ್ಥೆಯನ್ನು ಅಸ್ತವ್ಯಸ್ತಗೊಳಿಸಿದ್ದರು.



ಪೊಲೀಸರ ಸಮಯಪ್ರಜ್ಞೆ: ಪಂದ್ಯದ ಸಂಜೆಯ ಹೊತ್ತಿಗೆ ಏಕಾಏಕಿ ಸಿಸಿಟಿವಿ ಫೀಡ್ ಸ್ಥಗಿತಗೊಂಡಾಗ ಭದ್ರತಾ ನಿಯಂತ್ರಣ ಕೊಠಡಿಯಲ್ಲಿದ್ದ ಪೊಲೀಸರು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಸಾವಿರಾರು ಪ್ರೇಕ್ಷಕರು ಸೇರುವ ಹೈ-ವೋಲ್ಟೇಜ್ ಪಂದ್ಯದ ವೇಳೆ ಇದು ಯಾವುದೋ ದೊಡ್ಡ ಸಂಚಿನ ಭಾಗವಿರಬಹುದು ಎಂದು ಶಂಕಿಸಲಾಗಿತ್ತು. ತಕ್ಷಣವೇ ಕಾರ್ಯಪ್ರವೃತ್ತರಾದ ಹಿರಿಯ ಅಧಿಕಾರಿಗಳು ಬದಲಿ ತಾಂತ್ರಿಕ ವ್ಯವಸ್ಥೆಯನ್ನು ಕಲ್ಪಿಸುವ ಮೂಲಕ ಪರಿಸ್ಥಿತಿಯನ್ನು ಹತೋಟಿಗೆ ತಂದರು. ಒಂದು ವೇಳೆ ಪೊಲೀಸರು ಸಮಯಪ್ರಜ್ಞೆ ಮೆರೆಯದಿದ್ದರೆ ಪಂದ್ಯದ ಭದ್ರತೆಗೆ ದೊಡ್ಡ ಹೊಡೆತ ಬೀಳುವ ಸಾಧ್ಯತೆಯಿತ್ತು.

ಸದ್ಯ ಆರೋಪಿಗಳನ್ನು ಬಂಧಿಸಿರುವ ಕಬ್ಬನ್ ಪಾರ್ಕ್ ಪೊಲೀಸರು ತನಿಖೆ ಮುಂದುವರಿಸಿದ್ದಾರೆ. ತಾಂತ್ರಿಕ ಆಧಾರದ ಮೇಲೆ ಈ ಕಿಡಿಗೇಡಿಗಳನ್ನು ಪತ್ತೆಹಚ್ಚಲಾಗಿದ್ದು ಇಬ್ಬರೂ ತಮ್ಮ ತಪ್ಪನ್ನು ಒಪ್ಪಿಕೊಂಡಿದ್ದಾರೆ.

ದಕ್ಷಿಣ ಆಫ್ರಿಕಾ ವಿರುದ್ಧ 5 ಪಂದ್ಯಗಳ ಟಿ–20 ಸರಣಿ

ವನಿತೆಯರಿಗೆ ಸರಣಿ ಸೋಲು

ಬೆನೋನಿ: ದ.ಆಫ್ರಿಕಾ ಪ್ರವಾಸದಲ್ಲಿ ನಡೆದ ಟಿ20 ಸರಣಿಯಲ್ಲಿ ಹರ್ಮನ್‌ಪ್ರೀತ್ ಕೌರ್ ನೇತೃತ್ವದ ಭಾರತೀಯ ವನಿತೆಯರು 4–1 ಅಂತರದಲ್ಲಿ ಹೀನಾಯ ಸರಣಿ ಸೋಲುಂಡಿದ್ದಾರೆ. ಸೋಮವಾರ ರಾತ್ರಿ ನಡೆದ ಐದನೇ, ಅಂತಿಮ ಟಿ20 ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವನಿತೆಯರು 23 ರನ್‌ಗಳ ಅಂತರದಿಂದ ಗೆಲುವು ಸಾಧಿಸಿದ್ದಾರೆ.

ಟಾಸ್ ಗೆದ್ದ ದಕ್ಷಿಣ ಆಫ್ರಿಕಾ ಮೊದಲು ಬ್ಯಾಟಿಂಗ್ ಮಾಡಿತ್ತು. ಪವರ್‌ಪ್ಲೇನಲ್ಲಿ ಆಫ್ರಿಕಾ ವನಿತೆಯರು ವಿಕೆಟ್ ನಷ್ಟವಿಲ್ಲದೆ 49 ರನ್ ಗಳಿಸಿ ಉತ್ತಮ ಅಡಿಪಾಯ ಹಾಕಿಕೊಂಡಿತ್ತು. ನಾಯಕಿ ಲೌರಾ ವೋಲ್ವಾರ್ಡ್ಟ್ ಅವರ ಜವಾಬ್ದಾರಿಯುತ, 11 ಬೌಂಡರಿ ಮತ್ತು 2 ಸಿಕ್ಸರ್‌ಗಳಿದ್ದ ಸ್ಫೋಟಕ 92 ರನ್ ನೆರವಿನಿಂದ ದಕ್ಷಿಣ ಆಫ್ರಿಕಾ 20 ಓವರ್‌ಗಳಲ್ಲಿ 6 ವಿಕೆಟ್ ನಷ್ಟಕ್ಕೆ 155 ರನ್ ಕಲೆಹಾಕಿತು. ರೇಣುಕಾ, ಶ್ರೀಚಾರಣಿ ಮತ್ತು ದೀಪ್ತಿ ಬೌಲಿಂಗ್ ದಾಳಿಗೆ ಅದು ಕುಸಿತ ಕಂಡರೂ ಸ್ಪರ್ಧಾತ್ಮಕ ಮೊತ್ತ ಪೇರಿಸಿತು.

ಫುಲ್‌ಮಾಲಿ, ರಿಚಾ ಹೋರಾಟ ವ್ಯರ್ಥ: ಭಾರತ ಪರ ಭಾರ್ತಿ ಫುಲ್‌ಮಾಲಿ 40 ರನ್ ಮಾಡಿದ್ದು ವೈಯಕ್ತಿಕ ಗರಿಷ್ಠವಾಗಿದ್ದು, ಕೊನೆಯ ಓವರ್‌ವರೆಗೂ ಸಿಕ್ಸರ್ ಹೊಡೆದಿದ್ದ ಏಕೈಕ ಬ್ಯಾಟರ್ ಆಗಿದ್ದರು. ಆದರೆ ಕೊನೆಯಲ್ಲಿ ರಿಚಾ ಘೋಷ್ ಆಕ್ರಮಣಕಾರಿ ಆಟದಿಂದ ಸಿಕ್ಸರ್ ಹೊಡೆದರೂ ಪಂದ್ಯದಲ್ಲಿ ಭಾರತ ಸೋಲುಂಡಿತು. ದಕ್ಷಿಣ ಆಫ್ರಿಕಾ ನಾಯಕಿ ಲೌರಾ ವೋಲ್ವಾರ್ಡ್ಟ್ ಭಾರತ ವಿರುದ್ಧದ ಐದು ಪಂದ್ಯಗಳ ಟಿ20 ಸರಣಿಯಲ್ಲಿ ಶೇ.100 ಟಾಸ್ ಗೆದ್ದಿದ್ದಾರೆ. ಭಾರತ ತಂಡದ ನಾಯಕಿ ಹರ್ಮನ್ ಪ್ರೀತ್ ಕೌರ್ ಎದುರು ವೋಲ್ವಾರ್ಡ್ಟ್ ಸತತ 5ನೇ ಬಾರಿ ಟಾಸ್ ಗೆದ್ದರು. ಮೊದಲ ಮೂರು ಪಂದ್ಯಗಳನ್ನು ದಕ್ಷಿಣ ಆಫ್ರಿಕಾ ಗೆದ್ದಿದ್ದು, ನಾಲ್ಕನೇ ಪಂದ್ಯವನ್ನು ಭಾರತದ ವನಿತೆಯರು ಗೆದ್ದಿದ್ದರು. ಕೊನೆಯ ಪಂದ್ಯ ಮತ್ತೆ ಆಫ್ರಿಕಾ ಗೆದ್ದು, 4–1 ಮುನ್ನಡೆ ಸಾಧಿಸಿತು.

ಸಂಕ್ಷಿಪ್ತ ಸ್ಕೋರ್

ದಕ್ಷಿಣ ಆಫ್ರಿಕಾ (ವ):155/6(20)
ವೋಲ್ವಾರ್ಡ್ಟ್ 92(56)*, ಲೂಸ್ 23(23), ರೇಣುಕಾ 23ಕ್ಕೆ 2, ಚಾರಣಿ 22ಕ್ಕೆ 2, ದೀಪ್ತಿ 37ಕ್ಕೆ 2.
ಭಾರತ (ವ): 132/8 (20)
ಭಾರ್ತಿ ಫುಲ್‌ಮಾಲಿ 40(30), ರಿಚಾ ಘೋಷ್ 25(15)*, ಎಂಲಾಬ್ 15ಕ್ಕೆ 2, ಡಿ ಕರ್ಕ್ 26ಕ್ಕೆ 2.

ಏಷ್ಯನ್ ಬೀಚ್ ಗೇಮ್ಸ್: ಭಾರತೀಯರಿಗೆ ದಾಖಲೆಯ 6ನೇ ಪ್ರಶಸ್ತಿ

ಭಾರತ ವನಿತೆಯರೇ ಕಬಡ್ಡಿ ಚಾಂಪಿಯನ್!

ಸಾನ್ಯಾ: ಚೀನಾದಲ್ಲಿ ನಡೆದ ಏಷ್ಯನ್ ಬೀಚ್ ಗೇಮ್ಸ್ 2026ರ ಕಬಡ್ಡಿ ಸ್ಪರ್ಧೆಯಲ್ಲಿ ಭಾರತೀಯ ಮಹಿಳಾ ಕಬಡ್ಡಿ ತಂಡ ಸ್ವರ್ಣ ಪದಕವನ್ನು ಗೆದ್ದುಕೊಂಡು ಚಾಂಪಿಯನ್ ಪಟ್ಟ ಉಳಿಸಿಕೊಂಡಿದೆ. ಇದು ಏಷ್ಯನ್ ಬೀಚ್ ಗೇಮ್ಸ್‌ನ 6ನೇ ಆವೃತ್ತಿಯಾಗಿದ್ದು, ಭಾರತೀಯ ವನಿತೆಯರಿಗೆ ಇದು ಸತತ 6ನೇ ಪ್ರಶಸ್ತಿಯಾಗಿದೆ.

ಸೋಮವಾರ ನಡೆದ ಫೈನಲ್‌ನಲ್ಲಿ ಶ್ರೀಲಂಕಾ ವನಿತೆಯರ ವಿರುದ್ಧ 47–31 ಅಂಕಗಳ ಜಯ ಸಾಧಿಸಿದ ಭಾರತೀಯ ವನಿತೆಯರಿಗೆ ಇದು ಸತತ 6ನೇ ಏಷ್ಯನ್ ಬೀಚ್ ಗೇಮ್ಸ್ ಪ್ರಶಸ್ತಿಯಾಗಿದೆ. ಪುರುಷರ ವಿಭಾಗದಲ್ಲಿ ಭಾರತೀಯರ ಸತತ ಎರಡನೇ ಬಾರಿಗೆ ರಜತ ಪದಕವನ್ನು ಗೆದ್ದು ರನ್ನರ್ ಅಪ್ ಪ್ರಶಸ್ತಿಗೆ ತೃಪ್ತರಾಗಿದ್ದಾರೆ.

ಫೈನಲ್ ಮೊದಲಾರ್ಧ ಭಾರತ ಮಹಿಳೆಯರು 20–18 ಅಂಕಗಳ ಮುನ್ನಡೆ ಸಾಧಿಸಿದ್ದರು. ಸೆಮಿಫೈನಲ್‌ನಲ್ಲಿ ಭಾರತೀಯ ಮಹಿಳಾ ಕಬಡ್ಡಿ ತಂಡವು ಬಾಂಗ್ಲಾದೇಶ ತಂಡವನ್ನು 50–31 ಅಂಕಗಳಿಂದ ಸೋಲಿಸಿತ್ತು. ಆರು ಸದಸ್ಯರ ಭಾರತ ವನಿತೆಯರ ತಂಡ ನಾಯಕಿ ರಿತು, ಮನೀಶಾ ಕುಮಾರಿ, ಸಿಮ್ರನ್ ಕಂಬೋಜ್, ಮನ್‌ಪ್ರೀತ್ ಕೌರ್, ನಿಕಿತಾ ಮತ್ತು ನಿಕಿತಾ ಚೌಹಾನ್ ಅವರನ್ನು ಒಳಗೊಂಡಿದೆ. 2016ರ ಆವೃತ್ತಿಯ ಫೈನಲ್‌ನಲ್ಲಿ ಥೈಲ್ಯಾಂಡ್ ತಂಡವನ್ನು ಭಾರತ ಪರಾಭವಗೊಳಿಸಿ ಚಾಂಪಿಯನ್ ಆಗಿತ್ತು.




ಭಾರತೀಯ ಪುರುಷರಿಗೆ ಸತತ ರಜತ

ಕಳೆದ ಆವೃತ್ತಿಯಲ್ಲಿ ಪುರುಷರ ವಿಭಾಗದ ಕಬಡ್ಡಿ ಫೈನಲ್‌ನಲ್ಲಿ ಬದ್ಧವೈರಿ ಪಾಕಿಸ್ತಾನ ವಿರುದ್ಧ ಸೋತು ರಜತ ಪದಕ ಪಡೆದುಕೊಂಡಿದ್ದ ಭಾರತ, ಈ ಆವೃತ್ತಿಯ ಬೀಚ್ ಗೇಮ್ಸ್ ಕಬಡ್ಡಿ ಫೈನಲ್‌ನಲ್ಲಿ ಇರಾನ್ ಎದುರು ಫೈನಲ್‌ನಲ್ಲಿ 31–44 ಅಂಕಗಳ ಅಂತರದಿಂದ ಸೋಲುಂಡಿದೆ. ಪಂದ್ಯದ ಮೊದಲಾರ್ಧದಲ್ಲೇ 11–23 ಅಂಕಗಳ ಹಿನ್ನಡೆ ಅನುಭವಿಸಿದ್ದ ಭಾರತ, ದ್ವಿತೀಯಾರ್ಧ ಮೇಲೇಳಲು ಸಾಧ್ಯವಾಗಿಲ್ಲ. ಸೆಮಿಫೈನಲ್‌ನಲ್ಲಿ ಭಾರತ ಕಳೆದ ಬಾರಿಯ ಚಾಂಪಿಯನ್ ಪಾಕಿಸ್ತಾನವನ್ನು 50–27 ಅಂಕಗಳಿಂದ ಭರ್ಜರಿ ಸೋಲುಣಿಸಿತ್ತು.

ಪದಬಂಧ 5967

▸ ರಾಜಾ ಸಂಗಮೇಶ ಹಿರೇಮಠ



ಎಡದಿಂದ ಬಲಕ್ಕೆ
1.ಕಾರ್ಯಕ್ರಮ ಮುಂತಾದವುಗಳಲ್ಲಿ ಪಾಲುಗೊಳ್ಳು (5)
3.ಹೆಸರಿಲ್ಲದಂತೆ ನಾಶ ಮಾಡು (3)
5.ಮನುವಿನಿಂದ ಹುಟ್ಟಿದ ಬುದ್ಧಿವಂತ ಪ್ರಾಣಿ (3)
6.ಮರದ ಕೆಳಗೆ ಕಾಣಿಸಿದ ಮಹಿಳೆ (3)
8.ಒಳ್ಳೆಯದರ, ವಿಜಯದ ಸಂಕೇತವೆನಿಸುವ ಹಬ್ಬ (3)
10.ಅದರಲ್ಲಿಯೇ ಮಗ್ನನಾಗುವಿಕೆ (3)
13.ಶಿವ ಮೊದಲಿರುವ ಮಣ್ಣಿನ ಮಡಕೆ (3)
15.ಒಣಕೊಬ್ಬರಿ–ಗೋಟು ತೆಂಗು (3)
16.ರಾಣಿ ಹಿಡಿದಿರುವ ಥಾಲು (3)
17.ವ್ಯಕ್ತಿಗಳ ನಡುವಿನ ಜೈವಿಕ ಬಾಂಧವ್ಯ (5)

ಮೇಲಿನಿಂದ ಕೆಳಕ್ಕೆ
1.ಭಾರತದ ಖಗೋಳ ಶಾಸ್ತ್ರಜ್ಞ (3)
2.ಸುರ–ಮಧು ಒಳಗೊಂಡ ಇಂಪಾದುದು (4)
3.ಶಾಶ್ವತವಾದ ಪದವಿ–ಮೋಕ್ಷ (4)
4.ಮಕರದ ಮೇಲೆ ಕುಳಿತುಕೊಂಡ ದುಂಬಿ (4)
7.ನಾಟಕ–ಸಿನಿಮಾಗಳ ನಡುವಿನ ವಿರಾಮ (4)
9.ಪರಸ್ಪರ ಸಹಾಯ (4)
10.ಅತಿಯಾದ ಆಶ್ಚರ್ಯ (4)
11.ಅಲೆಗಳಿಂದ ಕೂಡಿದ ನದಿ (4)
12.ಕಾಳಿನಿಂದ ಮೊಳಕೆ ಬರುವುದು (4)
14.ವಿರುದ್ಧಾಭಿಪ್ರಾಯ ಸೂಚಿಸು (3)

5964 ಉತ್ತರ

ಎಡದಿಂದ ಬಲಕ್ಕೆ:
1.ಭದ್ರಲಕ್ಷಣ
3.ಕಂಬಳಿ 4.ದಾರಂದ
5.ಪ್ರಪಾತ 7.ಕನಸು
9.ಮಾತಂಗ 10.ಚಿಗರೆ
12.ಅಣಕು 14.ಪದುಮ
16.ರಸನ 17.ಬತ್ತೀಸ
18.ನಟಿಕೆಮುರಿ

ಮೇಲಿನಿಂದ ಕೆಳಕ್ಕೆ :
1.ಭರತ 2.ತಂಗುದಾಣ
3.ಕಂದಕ 6.ಪಾಣಿಗ್ರಹಣ
8.ನಜರುಕೈದು
11.ಗಜಾನನ 13.ಸರಕು
15.ಮಜೂರಿ

ಕಿರುಸುದ್ದಿ

ಬಾಲ್ಯ ವಿವಾಹ: ವರ ಸೇರಿದಂತೆ 4 ಮಂದಿಯ ವಿರುದ್ಧ ಕೇಸು ದಾಖಲು

ಕಾಸರಗೋಡು: ಬಾಲ್ಯ ವಿವಾಹ ನಡೆಸಿದ ಆರೋಪದಂತೆ ನಾಲ್ವರ ವಿರುದ್ಧ ಚಂದೇರ ಪೊಲೀಸರು ಕೇಸು ದಾಖಲಿಸಿಕೊಂಡಿದ್ದಾರೆ. ವರನಾದ ಎಡಚಾಕ್ಕೆ ನಿವಾಸಿ ಶಬೀರ್ ಶೇಖ್ (28), ಪಡನ್ನ ಗ್ರಾಮ ಪಂಚಾಯತ್ ಸದಸ್ಯ ಪಿ.ಕೆ.ತಾಜುದ್ದೀನ್ (48), ವಿವಾಹ ಸಮಾರಂಭಕ್ಕೆ ನೇತೃತ್ವ ನೀಡಿದ ರೆಹಮ್ಮತ್ತುಲ್ಲ ಮದನಿ (62) ಮತ್ತು ಬಾಲಕಿಯ ತಂದೆ (55) ಎಂಬವರ ವಿರುದ್ಧ ಕೇಸು ದಾಖಲಿಸಲಾಗಿದೆ. ಹದಿನಾರು ವರ್ಷದ ಬಾಲಕಿಯ ವಿವಾಹ ಏ.13ರಂದು ಶಬೀರ್ ಶೇಖ್‌ನೊಂದಿಗೆ ನಡೆದಿತ್ತೆಂಬ ಆರೋಪದಂತೆ ಕಾಸರಗೋಡು ಚೈಲ್ಡ್‌ಲೈನ್‌ಗೆ ದೂರು ಲಭಿಸಿತ್ತು. ಈ ಬಗ್ಗೆ ಜಿಲ್ಲಾ ಶಿಶು ಕಲ್ಯಾಣ ಅಭಿವೃದ್ಧಿ ಇಲಾಖೆಯ ನೇತೃತ್ವದಲ್ಲಿರುವ ಬಾಲ್ಯ ವಿವಾಹ ತಡೆ ಅಧಿಕಾರಿ ಬಿಜಿ ಎಂಬವರ ನೇತೃತ್ವದ ತಂಡ ತನಿಖೆ ನಡೆಸಿ ಹೊಸದುರ್ಗ ಪ್ರಥಮ ದರ್ಜೆ ನ್ಯಾಯಾಲಯಕ್ಕೆ ವರದಿ ಸಲ್ಲಿಸಿತ್ತು. ಅದರಂತೆ ನ್ಯಾಯಾಲಯ ನೀಡಿದ ನಿರ್ದೇಶ ಪ್ರಕಾರ ವರ ಸಹಿತ ನಾಲ್ವರ ವಿರುದ್ಧ ಚಂದೇರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಪೊಲೀಸ್ ಕರ್ತವ್ಯಕ್ಕೆ ಅಡ್ಡಿ: ದೂರು ದಾಖಲು

ಪುತ್ತೂರು: ಪುತ್ತೂರು ಜಾತ್ರೆಯ ಬಂದೋಬಸ್ತ್ ಕರ್ತವ್ಯ ನಿರ್ವಹಿಸುತ್ತಿದ್ದ ಪೊಲೀಸರಿಬ್ಬರಿಗೆ ಕಾರಿನಲ್ಲಿ ಬಂದ ಅಪರಿಚಿತ ವ್ಯಕ್ತಿಯೋರ್ವ ಅವಾಚ್ಯ ಶಬ್ದಗಳಿಂದ ನಿಂದಿಸಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪದಲ್ಲಿ ಪುತ್ತೂರು ನಗರ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಬಂಟ್ವಾಳ ಗ್ರಾಮಾಂತರ ಪೊಲೀಸ್ ಠಾಣೆಯ ಹೆಡ್ ಕಾನ್‌ಸ್ಟೇಬಲ್ ಅರುಣ್ ಚೌಹಾನ್ ಮತ್ತು ಬೆಳ್ತಂಗಡಿ ಸಂಚಾರ ಪೊಲೀಸ್ ಠಾಣೆಯ ಸಂತೋಷ್ ರಾಗಳೆ ಅವರು ಪುತ್ತೂರು ಜಾತ್ರೆಯ ಸಂದರ್ಭ ಏ. 17ರಂದು ಹಾರಾಡಿ ರೈಲ್ವೇ ಬ್ರಿಡ್ಜ್ ಬಳಿ ಕರ್ತವ್ಯ ನಿರ್ವಹಿಸುತ್ತಿದ್ದರು. ಸಂಚಾರ ಹಿತದೃಷ್ಟಿಯಿಂದ ರೈಲ್ವೇ ಸ್ಟೇಷನ್ ರೋಡ್‌ಗೆ ಯಾವುದೇ ವಾಹನಗಳನ್ನು ಬಿಡದಂತೆ ಬ್ಯಾರಿಕೇಡ್ ಬಳಸಿ ತಾತ್ಕಾಲಿಕ ನಿರ್ಬಂಧ ವಿಧಿಸಿ ವಾಹನಗಳು ಹೋಗದಂತೆ ಬಂದೋಬಸ್ತ್ ಮಾಡುತ್ತಿದ್ದಾಗ ಕಾರೊಂದರಲ್ಲಿ ಬಂದ ಅಪರಿಚಿತ ವ್ಯಕ್ತಿಯೋರ್ವ ರೈಲ್ವೇ ಸ್ಟೇಷನ್ ರಸ್ತೆಗೆ ಹೋಗಲು ಬಲವಂತವಾಗಿ ಬ್ಯಾರಿಕೇಡ್ ತಳ್ಳಿದ್ದಲ್ಲದೆ ಪೊಲೀಸರ ಕರ್ತವ್ಯಕ್ಕೆ ಅಡ್ಡಿಪಡಿಸಿದ್ದಾಗಿ ಆರೋಪಿಸಿ ಅರುಣ್ ಚೌಹಾನ್ ಅವರು ನೀಡಿದ ದೂರಿನಂತೆ ಪುತ್ತೂರು ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಿನ್ನಾಭರಣ, ನಗದು ಇದ್ದ ಬಸ್ ಪ್ರಯಾಣಿಕಳ ಪರ್ಸ್ ಕಳವು

ಬಂಟ್ವಾಳ: ಕೆ.ಎಸ್.ಆರ್.ಟಿ.ಸಿ. ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆಯೋರ್ವರ ಲಕ್ಷಾಂತರ ರೂ ಮೌಲ್ಯದ ನಗ, ನಗದು ಇರಿಸಲಾದ ಪರ್ಸ್ ಕಳವಾದ ಘಟನೆ ನಡೆದಿದ್ದು, ಈ ಬಗ್ಗೆ ಬಂಟ್ವಾಳ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಬರಿಮಾರು ಗ್ರಾಮದ ಕಾಗೆಕಾನ ಬಲ್ಯ ನಿವಾಸಿ ಕ್ರಿಸ್ತಿನ್ ವೇಗಸ್ ಅವರ ನಗ-ನಗದು ಇದ್ದ ಪರ್ಸ್ ಕಳವಾಗಿದೆ. ಪರ್ಸ್‌ನಲ್ಲಿ ಐದುವರೆ ಪವನ್ ತೂಕದ ಚಿನ್ನದ ಕರಿಮಣಿ ಸರ ಮತ್ತು ನಾಲ್ಕು ಗ್ರಾಂ ತೂಕದ ಚಿನ್ನದ ಉಂಗುರ ಒಟ್ಟು 48 ಗ್ರಾಂ ತೂಕದ ಚಿನ್ನಾಭರಣ ಮತ್ತು ಸುಮಾರು 3500 ಸಾ.ರೂ. ನಗದು, ಎಟಿಎಂ, ವೋಟರ್ ಐಡಿ ಕಾರ್ಡ್‌ನ್ನು ಚಿಕ್ಕ ಪರ್ಸಿನಲ್ಲಿಟ್ಟು ಅದನ್ನು ದೊಡ್ಡಪರ್ಸಿನಲ್ಲಿಟ್ಟಿದ್ದರೆನ್ನಲಾಗಿದೆ. ಇವರು ಪತಿಯ ಜೊತೆ ಉಜಿರೆಯಲ್ಲಿ ಸಂಬಂಧಿಕರ ಮೆಹಂದಿ ಕಾರ್ಯಕ್ರಮಕ್ಕೆ ಹೋಗಿ ವಾಪಸು ಮಂಗಳೂರು ಕಡೆಗೆ ಬರುವ ಬಸ್‌ನಲ್ಲಿ ಘಟನೆ ಸಂಭವಿಸಿದೆ. ಬಿ.ಸಿ.ರೋಡಿನಲ್ಲಿ ಬಸ್ ಇಳಿದು ನೋಡುವಾಗ ಪರ್ಸ್ ಕಳವಾದ ವಿಚಾರ ಬೆಳಕಿಗೆ ಬಂದಿದೆ. ಕಳವಾದ ಚಿನ್ನಾಭರಣ ಸಹಿತ ನಗದು ಸೇರಿಒಟ್ಟು ಮೌಲ್ಯ 6,24 ಲ.ರೂ. ಎಂದು ಅಂದಾಜಿಸಲಾಗಿದೆ.

ಅಕ್ರಮ ಮರಳುಗಾರಿಕೆ ಅಡ್ಡೆಗೆ ಪೊಲೀಸರ ದಾಳಿ

ಕಡಬ: ಬಲ್ಯ ಗ್ರಾಮದ ಕೊಲ್ಯದಕಟ್ಟ ಎಂಬಲ್ಲಿ ಗುಂಡ್ಯ ಹೊಳೆಯಿಂದ ಅಕ್ರಮವಾಗಿ ಮರಳು ಸಂಗ್ರಹಿಸಿ ಸಾಗಾಟ ಮಾಡಲು ಯತ್ನಿಸುತ್ತಿದ್ದ ತಂಡವೊಂದನ್ನು ಕಡಬ ಪೊಲೀಸರು ದಾಳಿ ನಡೆಸಿ ವಶಕ್ಕೆ ಪಡೆದಿದ್ದಾರೆ. ಕಾರ್ಯಾಚರಣೆ ವೇಳೆ ಮೂವರು ಆರೋಪಿಗಳನ್ನು ವಶಕ್ಕೆ ಪಡೆಯಲಾಗಿದೆ. ಮರಳು, ಸಾಗಾಟಕ್ಕೆ ಬಳಸುತ್ತಿದ್ದ ಪಿಕ್ ಅಪ್ ವಾಹನ ವಶಪಡಿಸಿಕೊಳ್ಳಲಾಗಿದೆ. ಕಡಬ ಪೊಲೀಸ್ ಉಪನಿರೀಕ್ಷಕ ಜಂಬುರಾಜ್ ಮಹಾಜನ್ ಅವರು ಸಿಬ್ಬಂದಿಗಳೊಂದಿಗೆ ಪ್ರಕರಣವೊಂದರ ತನಿಖೆಗಾಗಿ ಬಲ್ಯ ಗ್ರಾಮದ ಕಡೆಗೆ ತೆರಳುತ್ತಿದ್ದ ವೇಳೆ ಹೊಸ್ಮಠ ಎಂಬಲ್ಲಿ ಅಕ್ರಮ ಮರಳುಗಾರಿಕೆ ಬಗ್ಗೆ ಖಚಿತ ಮಾಹಿತಿ ಲಭಿಸಿದೆ. ಕೂಡಲೇ ಪೊಲೀಸರು ಕೊಲ್ಯದಕಟ್ಟದ ಗುಂಡ್ಯ ಹೊಳೆಯ ದಡಕ್ಕೆ ತೆರಳಿದಾಗ ಅರಣ್ಯ ಪ್ರದೇಶದ ವ್ಯಾಪ್ತಿಗೆ ಬರುವ ಸ್ಥಳದಲ್ಲಿ ಅಕ್ರಮವಾಗಿ ಮರಳನ್ನು ರಾಶಿ ಹಾಕಿ ಸಾಗಾಟಕ್ಕೆ ಸಿದ್ಧತೆ ನಡೆಸುತ್ತಿರುವುದು ಕಂಡುಬಂದಿದ್ದು, ಸೊತ್ತುಗಳ ಸಮೇತ ಸ್ಥಳದಲ್ಲಿದ್ದ ನಾರಾಯಣ (54), ಪ್ರಸನ್ನ (33), ಗಿರೀಶ್ (41) ಅವರನ್ನು ವಶಕ್ಕೆ ಪಡೆಯಲಾಗಿದೆ. ಕಡಬ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಎಲ್‌ಪಿಜಿ ಸಿಲಿಂಡರ್ ಬುಕ್ಕಿಂಗ್‌ಗೆ ಜನಸಾಮಾನ್ಯರ ಪರದಾಟ
ಗ್ರಾಹಕರಿಗೆ 'ಕೆವೈಸಿ' ಗುಮ್ಮ!

ಸುದೀಪ್ ರಾಜ್ ಸುಳ್ಯ

ಉಡುಪಿ: ಅಡುಗೆ ಅನಿಲ ಗ್ರಾಹಕರಿಗೆ ಈಗ ಹೊಸ ಸಂಕಷ್ಟ ಎದುರಾಗಿದೆ.

ಕಳೆದ ಕೆಲವು ದಿನಗಳಿಂದ ಗ್ಯಾಸ್ ಏಜೆನ್ಸಿಗಳು ಕೆವೈಸಿ ಅಪ್ಡೇಟ್ ಕಡ್ಡಾಯ ಮಾಡಿರುವುದರಿಂದ ಇದು ಗ್ರಾಹಕರಲ್ಲಿ ಒಂದಷ್ಟು ಗೊಂದಲಕ್ಕೆ ಕಾರಣವಾಗಿದೆ. ಮಾಹಿತಿ ಕೊರತೆಯ ನಡುವೆ ಜಾರಿಗೆ ಬಂದಿರುವ ಈ ನಿಯಮದಿಂದಾಗಿ ಹಲವು ಗ್ರಾಹಕರು ಈಗ ಗ್ಯಾಸ್ ಸಿಲಿಂಡರ್ ಬುಕ್ ಮಾಡಲಾಗದೆ ಅತಂತ್ರರಾಗಿದ್ದಾರೆ.

ಬುಕ್ಕಿಂಗ್ ವಿಫಲ!

ಸಾಮಾನ್ಯವಾಗಿ ಗ್ರಾಹಕರಿಗೆ ಗ್ಯಾಸ್ ಬುಕ್ ಮಾಡಲು ನಿಗದಿಪಡಿಸಿದ ದೂರ ವಾಣಿ ನಂಬರ್‌ಗೆ ಕರೆ ಮಾಡಿದ ಕೂಡಲೇ ಮೊಬೈಲ್‌ಗೆ ಒಟಿಪಿ ಬರುತ್ತಿದೆ. ಆದರೆ, ಕೆವೈಸಿ ಅಪ್‌ಡೇಟ್ ಆಗದ ಹೊರತು ಬುಕ್ಕಿಂಗ್ ಪ್ರಕ್ರಿಯೆ ಪೂರ್ಣಗೊಳ್ಳುತ್ತಿಲ್ಲ. ಈ ಬಗ್ಗೆ ಮೊದಲೇ ಯಾವುದೇ ಸ್ಪಷ್ಟ ಮಾಹಿತಿ ಇಲ್ಲದ ಕಾರಣ, ಗ್ರಾಹಕರು ಬುಕ್ಕಿಂಗ್‌ಗೆ ಪ್ರಯತ್ನಿಸಿದಾಗಲೆಲ್ಲಾ ವಿಫಲ ವಾಗುತ್ತಿದೆ. ಇದು ಡಿಜಿಟಲ್ ವ್ಯವಸ್ಥೆಯ ಬಗ್ಗೆ ಅಷ್ಟಾಗಿ ಅರಿವಿಲ್ಲದ ಗ್ರಾಮೀಣ ಭಾಗದ ಗ್ರಾಹಕರಿಗೆ ಮಾತ್ರ ಸದ್ಯ ಅತೀ ದೊಡ್ಡ ತಲೆನೋವಾಗಿ ಪರಿಣಮಿಸಿದೆ.



ಗ್ಯಾಸ್ ಸೆಂಟರ್‌ಗಳಲ್ಲಿ ಕಂಡಿದೆ ಸರತಿ ಸಾಲು

ಉಡುಪಿ ಜಿಲ್ಲೆಯ ಕೆಲವೆಡೆ ತಮ್ಮ ಖಾತೆಗಳನ್ನು ಸಕ್ರಿಯಗೊಳಿಸಿಕೊಳ್ಳಲು ಗ್ರಾಹಕರು ಈಗ ಗ್ಯಾಸ್ ಬುಕ್ಕಿಂಗ್ ಕೇಂದ್ರಗಳು ಹಾಗೂ ಏಜೆನ್ಸಿಗಳ ಮುಂದೆ ಸಾಲುಗಟ್ಟುತ್ತಿದ್ದಾರೆ. ಬೆಳಗ್ಗೆಯಿಂದಲೇ ನೂರಾರು ಸಂಖ್ಯೆಯಲ್ಲಿ ಜನರು ಕೆವೈಸಿ ದಾಖಲೆಗಳನ್ನು ಹಿಡಿದು ಕಾಯುತ್ತಿರುವುದು ಕಂಡುಬರುತ್ತಿದೆ. ಯಾವುದೇ ಮುನ್ಸೂಚನೆ ನೀಡದೆ ದಿಢೀರ್ ಈ ನಿಯಮ ತಂದಿರುವುದರಿಂದ ಕೆಲಸ ಕಾರ್ಯಗಳನ್ನು ಬಿಟ್ಟು ಸಾಲಿನಲ್ಲಿ ನಿಲ್ಲುವಂತಾಗಿದೆ ಎಂದು ಗ್ರಾಹಕರು ಅಸಮಾಧಾನ ವ್ಯಕ್ತಪಡಿಸುತ್ತಿದ್ದಾರೆ.

ಹೊಸ ಖಾತೆಗೂ ಬ್ರೇಕ್

ಒಂದು ಕಡೆ ಹಳೆಯ ಗ್ರಾಹಕರು ಕೆವೈಸಿ ಸಂಕಷ್ಟ ಎದುರಿಸುತ್ತಿದ್ದರೆ, ಇನ್ನೊಂದೆಡೆ ಹೊಸ ಗ್ಯಾಸ್ ಸಂಪರ್ಕ ಪಡೆಯಲು ಬಯಸುವ ಮಂದಿಗೂ ನಿರಾಸೆ ಕಾದಿದೆ. ಪ್ರಸ್ತುತ ಎಲ್ಲೆಡೆ ಅಡುಗೆ ಅನಿಲದ ಬೇಡಿಕೆ ಹೆಚ್ಚಾಗಿದ್ದು, ಅದಕ್ಕೆ ತಕ್ಕಂತೆ ಪೂರೈಕೆ ಇಲ್ಲದೆ ಗ್ಯಾಸ್ ಪೂರೈಕೆ ವ್ಯತ್ಯಯದ ಕಾರಣದಿಂದಾಗಿ ಸದ್ಯಕ್ಕೆ ಯಾವುದೇ ಹೊಸ ಗ್ಯಾಸ್ ಖಾತೆಗಳನ್ನುತೆರೆಯಲು ಏಜೆನ್ಸಿಗಳು ಮುಂದಾಗುತ್ತಿಲ್ಲ. ಇದರಿಂದಾಗಿ ಹೊಸ ಮನೆಗೆ ಶಿಫ್ಟ್ ಆದವರು ಅಥವಾ ಹೊಸ ಸಂಪರ್ಕದ ನಿರೀಕ್ಷೆಯಲ್ಲಿದ್ದವರು ಸಂಕಷ್ಟಕ್ಕೆ ಸಿಲುಕಿದ್ದಾರೆ.

ಮಾಹಿತಿ ಕೊರತೆಯೇ ವಿಳಂಬಕ್ಕೆ ಕಾರಣ?

ಕೆವೈಸಿ ಮಾಡಿಸಿಕೊಳ್ಳಲು ಯಾವ ದಾಖಲೆ ಬೇಕು? ಎಲ್ಲಿ ಮಾಡಿಸಬೇಕು? ಎಂಬ ಬಗ್ಗೆ ಗ್ರಾಹಕರಿಗೆ ಸರಿಯಾದ ಮಾಹಿತಿ ತಲುಪುತ್ತಿಲ್ಲ. ಏಜೆನ್ಸಿಗಳು ಮತ್ತು ಸಂಬಂಧಪಟ್ಟ ಇಲಾಖೆಗಳು ಜನರಿಗೆ ಈ ಬಗ್ಗೆ ಸೂಕ್ತ ಅರಿವು ಮೂಡಿಸದೆ ನಿಯಮ ಜಾರಿ ಮಾಡಿರುವುದು ಗೊಂದಲಕ್ಕೆ ತುಪ್ಪ ಸುರಿದಂತಾಗಿದೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಗಮನಹರಿಸಿ, ಗೊಂದಲ ಬಗೆಹರಿಸಬೇಕೆಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

ಸ್ನಾನಕ್ಕೆ ನದಿಗೆ ಇಳಿದ ಯುವಕ ನಾಪತ್ತೆ



ಕಡಬ: ಸ್ನಾನಕ್ಕೆಂದು ನದಿಗೆ ಇಳಿದ ಯುವಕನೊಬ್ಬ ನೀರಿನ ಸೆಳೆತಕ್ಕೆ ಸಿಲುಕಿ ನಾಪತ್ತೆಯಾಗಿರುವ ಘಟನೆ ಸೋಮವಾರ ಸಂಜೆ ಕಡಬ ಪೊಲೀಸ್ ಠಾಣಾ ವ್ಯಾಪ್ತಿಯ ಐತೂರು ಗ್ರಾಮದ ಕೋರಿಯಾರ್ ಪ್ರದೇಶದಲ್ಲಿ ನಡೆದಿದೆ.

ನಾಪತ್ತೆಯಾದ ಯುವಕನನ್ನು ಮಂಜು ಅವರ ಪುತ್ರ ರಕ್ಷಿತ್ (26) ಎಂದು ಗುರುತಿಸಲಾಗಿದೆ. ಮೂಲತಃ ಮರ್ದಾಳನಿವಾಸಿಯಾಗಿರುವರಕ್ಷಿತ್ ಕುಟುಂಬದವರೊಂದಿಗೆ ಬಾಡಿಗೆ ಮನೆಯಲ್ಲಿ ವಾಸವಿದ್ದು, ರಬ್ಬರ್ ಟ್ಯಾಪಿಂಗ್ ಕೆಲಸ ಮಾಡುತ್ತಿದ್ದರು ಎಂದು ತಿಳಿದುಬಂದಿದೆ.

ಸೋಮವಾರ ಸಂಜೆ ತನ್ನ ಸ್ನೇಹಿತರ ಗುಂಪಿನೊಂದಿಗೆ ಐತ್ತೂರು ಗ್ರಾಮದ ಕೋರಿಯಾರ್ ಸಮೀಪದ 'ಅರಬ್ಬಿ ತೋಡು' ಪ್ರದೇಶಕ್ಕೆ ಸ್ನಾನಕ್ಕಾಗಿ ತೆರಳಿದ್ದ ವೇಳೆ ಈ ದುರ್ಘಟನೆ ಸಂಭವಿಸಿದೆ. ಈಜಲು ತಿಳಿದಿದ್ದರೂ, ನೀರಿನ ಸೆಳೆತ ಅಥವಾ ಆಳದ ಅಂದಾಜು ತಪ್ಪಿದ್ದರಿಂದ ರಕ್ಷಿತ್ ನೀರಲ್ಲಿಮುಳುಗಿನಾಪತ್ತೆಯಾಗಿದ್ದಾರೆ ಎಂದು ಶಂಕಿಸಲಾಗಿದೆ.

ಘಟನೆ ನಡೆದ ತಕ್ಷಣ ಸ್ನೇಹಿತರು ಹಾಗೂ ಸ್ಥಳೀಯರು ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಾಹಿತಿ ತಿಳಿದ ಕೂಡಲೇ ಕಡಬ ಪೊಲೀಸರು ಹಾಗೂ ಪುತ್ತೂರಿನಿಂದ ಅಗ್ನಿಶಾಮಕ ದಳದ ಸಿಬ್ಬಂದಿ ಸ್ಥಳಕ್ಕೆ ಧಾವಿಸಿ, ಸ್ಥಳೀಯರ ಸಹಕಾರದೊಂದಿಗೆ ನಾಪತ್ತೆಯಾದ ಯುವಕನಿಗಾಗಿ ಶೋಧ ಕಾರ್ಯಾಚರಣೆ ಆರಂಭಿಸಿದ್ದಾರೆ. ಸೂಕ್ತ ರಸ್ತೆ ಸಂಪರ್ಕ ಇಲ್ಲದೆ ಇರುವುದರಿಂದ ಘಟನೆ ನಡೆದ ಸ್ಥಳಕ್ಕೆ ಅಗ್ನಿಶಾಮಕ ವಾಹನ ತೆರಳಲು ಸಾಧ್ಯವಾಗಿಲ್ಲ. ನೀರಿನಲ್ಲಿ ಹುಡುಕಾಟ ನಡೆಸುವುದಕ್ಕಾಗಿ ಮುಳುಗು ತಜ್ಞ ಈಶ್ವರ್ ಮಲ್ಪೆ ತಂಡದವರ ನೆರವು ಪಡೆಯಲು ನಿರ್ಧರಿಸಲಾಗಿದ್ದು, ಕತ್ತಲಾದ ಕಾರಣ ಶೋಧ ಕಾರ್ಯವನ್ನು ಮಂಗಳವಾರ ಬೆಳಗ್ಗೆ ಮುಂದುವರಿಸುವ ಸಾಧ್ಯತೆಗಳಿವೆ.

ಲಾಯಿಲದಿಂದ ಹಳೆಕೋಟೆವರೆಗೂ ಕಂಡಿತು ಟ್ರಾಫಿಕ್ ಜಾಮ್
ತಾಸುಗಳ ಕಾಲ ತ್ರಾಸ ತ್ರಾಸ!

ಬೆಳ್ತಂಗಡಿ: ನಿರಂತರ ಉಂಟಾದ ಭಾರಿ ಟ್ರಾಫಿಕ್ ಜಾಮ್‌ನಿಂದ ವಾಹನ ಸವಾರರು ಸಾರ್ವಜನಿಕರು ಪರದಾಡಿದ ವಿದ್ಯಮಾನ ಸೋಮವಾರ ನಡೆದಿದೆ.

ಬೆಳಿಗ್ಗೆ 10 ಗಂಟೆಗೆ ಆರಂಭವಾದ ಟ್ರಾಫಿಕ್ ಜಾಮ್ ಮಧ್ಯಾಹ್ನದವರೆಗೂ ಮುಂದುವರೆಯಿತು. ಕಚೇರಿ, ಇತರ ಅಗತ್ಯ ಕೆಲಸಗಳಿಗೆ ತೆರಳುವ ಮಂದಿ ಪರದಾಡುವಂತಾಯಿತು.

ಲಾಯಿಲದಿಂದಲೇ ಆರಂಭವಾದ ಟ್ರಾಫಿಕ್ ಜಾಮ್ ಬೆಳ್ತಂಗಡಿಯ ಹಳೆಕೋಟೆವರೆಗೂ ಸುಮಾರು 3 ಕಿ.ಮೀ. ವ್ಯಾಪ್ತಿಯಲ್ಲಿ ಕಂಡು ಬಂತು. ಪ್ರಖರ ಬಿಸಿಲಿನ ವಾತಾವರಣವು ಇದ್ದು ಟ್ರಾಫಿಕ್ ಜಾಮ್ ಉಂಟಾದ ಕಾರಣ ವಾಹನ ಸವಾರರು ಬಳಲುವಂತಾಯಿತು.



ತಾಲೂಕಿನ ಅಲ್ಲಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿ, ಪ್ರತಿಭಟನಾ ಸಭೆಗಳು, ಸಭೆ-ಸಮಾರಂಭಗಳ ಕಾರಣ ಹೆಚ್ಚಿದ ವಾಹನ ಭರಾಟೆ, ಸೋಮವಾರ ಸಂತೆ ಹಿನ್ನೆಲೆಯಲ್ಲಿ ರಸ್ತೆ ಬದಿ ತಲೆ ಎತ್ತಿದ ಅಂಗಡಿಗಳು, ಪ್ರವಾಸಿಗರ ಸಂಖ್ಯೆಯಲ್ಲಿ ಉಂಟಾದ ಹೆಚ್ಚಳ,ಬೇಕಾಬಿಟ್ಟಿ ನುಗ್ಗುವ ದ್ವಿಚಕ್ರ,ತ್ರಿಚಕ್ರ ವಾಹನಗಳು, ಅವ್ಯವಸ್ಥಿತ ಪಾರ್ಕಿಂಗ್ ಇತ್ಯಾದಿ ಟ್ರಾಫಿಕ್ ಜಾಮ್‌ಗೆ ಕಾರಣವಾಯಿತು.

ರಸ್ತೆ ಬದಿ ಅಲ್ಲಲ್ಲಿ ಸಂಚಾರಿ ಪೊಲೀಸರು ಕಂಡುಬಂದರೂ ಅವರು ಸಂಚಾರವನ್ನು ನಿಯಂತ್ರಿಸುವಲ್ಲಿ ವಿಫಲರಾದರು.

ಉಜಿರೆಯಲ್ಲೂ ಸಮಸ್ಯೆ

ತಾಲೂಕಿನ ಪ್ರಮುಖ ಪೇಟೆಯಾದ ಉಜಿರೆಯಲ್ಲಿ ರಸ್ತೆ ಅಗಲೀಕರಣ,ರಸ್ತೆ ಬದಿ ವಾಹನ ಪಾರ್ಕಿಂಗ್, ತೆರವುಗೊಂಡ ವೃತ್ತದ ಬಳಿ ಯಾವುದೇ ಸೂಚನೆಗಳು ಇಲ್ಲದಿರುವ ಕಾರಣ ಬೇಕಾಬಿಟ್ಟಿ ನುಗ್ಗಿ ಬರುವ ವಾಹನಗಳಿಂದ ಅಪಾಯಕಾರಿ ಪರಿಸ್ಥಿತಿ ನಿರ್ಮಾಣವಾಗಿದೆ. ಜನರು ರಸ್ತೆಯನ್ನು ದಾಟಲು ಸಂಕಷ್ಟ ಅನುಭವಿಸುತ್ತಿದ್ದಾರೆ. ಖಾಸಗಿ, ಬಾಡಿಗೆ ವಾಹನಗಳು ರಸ್ತೆಯಲ್ಲೇ ನಿಲ್ಲುತ್ತಿವೆ. ಇಲ್ಲಿ ಸಂಚಾರಿ ಠಾಣೆಯ ಪೊಲೀಸರು ಕರ್ತವ್ಯ ನಿರ್ವಹಿಸುತ್ತಿದ್ದು ಅವರು ಸೂಕ್ತ ಸಂಚಾರ ವ್ಯವಸ್ಥೆ ಮಾಡಬೇಕಾದ ಅಗತ್ಯವಿದೆ.

ಮುದ್ದಾದ ಗಂಡುಮಗುವಿಗೆ ರೈಲಿನಲ್ಲಿ ಜನ್ಮ ನೀಡಿದ ಗೃಹಿಣಿ!

ಬಂಟ್ವಾಳ: ಮಂಗಳೂರಿನಿಂದ - ಬೆಂಗಳೂರಿಗೆ ಸಂಚರಿಸುತ್ತಿದ್ದ ರೈಲಿನಲ್ಲಿ ತುಂಬು ಗರ್ಭಿಣಿ ಮಹಿಳೆಯೋರ್ವರು ಹೆರಿಗೆ ನೋವು ಕಾಣಿಸಿಕೊಂಡು ಬಿ.ಸಿ.ರೋಡಿನ ರೈಲ್ವೆ ನಿಲ್ದಾಣದಲ್ಲಿ ಬೋಗಿಯಲ್ಲಿಯೇ ಗಂಡು ಮಗುವಿಗೆ ಜನ್ಮ ನೀಡಿದ ಘಟನೆ ಭಾನುವಾರ ರಾತ್ರಿ ನಡೆದಿದೆ.

ಮೈಸೂರಿನ ಸವಣೂರು ನಿವಾಸಿ ಪೊನ್ನಮ್ಮ ಎಂಬವರೇ ಗಂಡು ಮಗುವಿಗೆ ಜನ್ಮ ನೀಡಿದವರಾಗಿದ್ದಾರೆ. ಮಂಗಳೂರು ರೈಲು ನಿಲ್ದಾಣದಲ್ಲಿ ತನ್ನ ಊರಿಗೆ ತೆರಳಲೆಂದು ರೈಲು ಹತ್ತಿದ್ದ ಇವರಿಗೆ ರೈಲು ಮುಂದಕ್ಕೆ ಬರುತ್ತಿದ್ದಂತೆ ಹೆರಿಗೆಯ ನೋವು ಕಾಣಿಸಿಕೊಂಡಿತ್ತು, ಈ ಸಂದರ್ಭ ಪಕ್ಕದಲ್ಲಿ ಕುಳಿತಿದ್ದ ಮುಸ್ಲಿಂ ಮಹಿಳೆಯರು ಉಪಚರಿಸಿದ್ದಲ್ಲದೆ, ರೈಲ್ವೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ.

ರೈಲ್ವೆ ಇಲಾಖೆ ತಕ್ಷಣ ಸ್ಪಂದಿಸಿ ಬಿ.ಸಿ.ರೋಡು ನಿಲ್ದಾಣದಲ್ಲಿ ರೈಲನ್ನು ನಿಲ್ಲಿಸಲಾಗಿದ್ದು, ಸ್ಥಳೀಯ ಖಾಸಗಿ ಆಸ್ಪತ್ರೆಯ ವೈದ್ಯರನ್ನು ಕರೆಸಿಕೊಂಡು ರೈಲು ಬೋಗಿಯೊಳಗೆ ಹೆರಿಗೆಗಾಗಿ ವ್ಯವಸ್ಥೆ ಮಾಡಿಕೊಡಲಾಯಿತು, ವೈದ್ಯರ ತಂಡ ಯಶಸ್ವಿಯಾಗಿ ಹೆರಿಗೆ ಮಾಡಿಸಿ ಹೆಚ್ಚಿನ ಆರೈಕೆಗಾಗಿ ಆ್ಯಂಬುಲೆನ್ಸ್ ಮೂಲಕ ತಾಯಿ- ಮಗುವನ್ನು ವೈದ್ಯರ ತಂಡ ತಮ್ಮ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಪರೀಕ್ಷೆ ನಡೆಸಿದಲ್ಲದೆ, ಬಳಿಕ ಹೆಚ್ಚಿನ ಚಿಕಿತ್ಸೆಯ ಮಂಗಳೂರಿನ ವೆನ್ಲಾಕ್ ಆಸ್ಪತ್ರೆಗೆ ದಾಖಲಿಸಿದ್ದಾರೆ.

ಮಗು - ತಾಯಿ ಆರೋಗ್ಯ ವಾಗಿದ್ದರೂ ಹೆಚ್ಚಿನ ಚಿಕಿತ್ಸೆಯ ಹಿನ್ನಲೆ ಯಲ್ಲಿ ಮಂಗಳೂರಿಗೆ ಸಾಗಿಸಲಾಗಿದೆ ಎಂದು ವೈದ್ಯಕೀಯ ಮೂಲಗಳು ತಿಳಿಸಿವೆ.

ರಾತ್ರಿ ಸುಮಾರು 7.20 ರ ಹೊತ್ತಿಗೆ ಈ ರೈಲು ಬಿಸಿ.ರೋಡಿನ ರೈಲ್ವೆ ನಿಲ್ದಾಣ ತಲುಪಿತ್ತು. ಸುಮಾರು ಒಂದು ತಾಸುಗಳ ಕಾಲ ರೈಲು ಇಲ್ಲೇ ನಿಲುಗಡೆಯಾಗಿದ್ದು, ಗೃಹಿಣಿಯ ಹೆರಿಗೆ ಪ್ರಕ್ರಿಯೆ ಮುಗಿದ ಬಳಿಕ ರಾತ್ರಿ 8.20 ಕ್ಕೆ ಬಿ.ಸಿ.ರೋಡಿನಿಂದ ರೈಲು ಬೆಂಗಳೂರಿನತ್ತ ಸಾಗಿತು.



ಸಮಯಕ್ಕೆ ಸರಿಯಾಗಿ ಬಂದ ವೈದ್ಯಕೀಯ ತಂಡ

ಬಸುರಿ ಮಹಿಳೆಯ ಹೆರಿಗೆಗಾಗಿ ರೈಲು ನಿಲ್ದಾಣಕ್ಕೆ ವೈದ್ಯರ ತಂಡವನ್ನು ಕರೆದುಕೊಂಡು ಬರುವಂತೆ ಕಲ್ಲಡ್ಕದ ಸುಜ್ಞಾನ ಆ್ಯಂಬುಲೆನ್ಸ್ ವಾಹನದ ಚಾಲಕ ಲೋಕೇಶ್ ಅವರಿಗೆ ಕರೆ ಬಂದ ತಕ್ಷಣ ಕೇವಲ ಮೂರು ನಿಮಿಷದಲ್ಲಿ ಬಿ.ಸಿ.ರೋಡಿನ ಸೋಮಯಾಜಿ ಆಸ್ಪತ್ರೆಯಿಂದ ವೈದ್ಯರನ್ನು ಕರೆಸಿಕೊಂಡು ರೈಲು ನಿಲ್ದಾಣಕ್ಕೆ ಬಂದಿದ್ದಾರೆ. ವೈದ್ಯರು ಮಹಿಳೆಯನ್ನು ಹೆರಿಗೆ ಮಾಡಿಸಿದ ಕೂಡಲೇ ತಾಯಿ, ಮಗುವನ್ನು ಸೋಮಯಾಜಿ ಆಸ್ಪತ್ರೆಗೆ ಅದೇ ಆ್ಯಂಬುಲೆನ್ಸ್‌ನಲ್ಲಿ ಕರೆದುಕೊಂಡು ಹೋಗಿ ಚಿಕಿತ್ಸೆ ನೀಡಲಾಗಿದೆ. ಕೈಕಂಬದ ಸಮಾದ್, ಬಂಟ್ವಾಳ ನಗರ ಠಾಣಾ ಪೊಲೀಸರು ಹಾಗೂ ಸಾರ್ವಜನಿಕರು ಸಹಕರಿಸಿದರು. ಸುದ್ದಿ ತಿಳಿದ ಮಂಗಳೂರು ರೈಲ್ವೆ ಪೊಲೀಸರು ತಂಡ ಕೂಡ ಆಗಮಿಸಿ ಮಾಹಿತಿಯನ್ನು ಪಡೆದುಕೊಂಡರು.

ಮಡಿಕೇರಿ ತಾಲೂಕಿನ ಚೇರಂಬಾಣೆ ಗ್ರಾಮದಲ್ಲಿ ಘಟನೆ
ಗುಂಡು ಹಾರಿಸಿಕೊಂಡು ಶಿಕ್ಷಕಿ ಆತ್ಮಹತ್ಯೆ

ಮಡಿಕೇರಿ: ಶಿಕ್ಷಕಿಯೊಬ್ಬರು ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿಕೊಂಡಿರುವಘಟನೆಮಡಿಕೇರಿತಾಲೂಕಿನ ಚೇರಂಬಾಣೆ ಗ್ರಾಮದಲ್ಲಿ ನಡೆದಿದೆ.

ಚೇರಂಬಾಣೆ ಸರ್ಕಾರಿ ಪ್ರಾಥಮಿಕ ಶಾಲೆಯ ಶಿಕ್ಷಕಿ ಅಂಜಪಂಡ ಯು. ರೋಹಿಣಿ (51) ಆತ್ಮಹತ್ಯೆ ಮಾಡಿಕೊಂಡ ಶಿಕ್ಷಕಿ. ಸರಕಾರದ ಜನಗಣತಿ ಕಾರ್ಯದ ಒತ್ತಡ ಇವರ ಸಾವಿಗೆ ಕಾರಣವೇ ಎಂಬ ಶಂಕೆ ವ್ಯಕ್ತವಾಗಿದೆ.



ರೋಹಿಣಿ ಅವರು ಕಳೆದ 25 ವರ್ಷಗಳಿಂದ ತಮ್ಮ ವೃತ್ತಿ ಜೀವನದಲ್ಲಿ ಸಾವಿರಾರು ಮಕ್ಕಳಿಗೆ ದಾರಿದೀಪವಾಗಿದ್ದರು. ಅಲ್ಲದೆ ಎಲ್ಲರ ಅಚ್ಚುಮೆಚ್ಚಿನ ಶಿಕ್ಷಕಿಯಾಗಿದ್ದರೆನ್ನಲಾಗಿದೆ. ಆದರೆ ಭಾನುವಾರ ತಮ್ಮ ಮನೆಯಲ್ಲೇ ಒಂಟಿ ನಳಿಗೆ ಕೋವಿಯಿಂದ ಗುಂಡು ಹಾರಿಸಿಕೊಂಡು ಆತ್ಮಹತ್ಯೆ ಮಾಡಿದ್ದಾರೆ. ಶನಿವಾರ ರಾತ್ರಿ 12 ಗಂಟೆಯವರೆಗೂ ಕೆಲಸ ಮಾಡಿ ಮಲಗಿದ್ದ ಅವರು ಮುಂಜಾನೆ 5 ಗಂಟೆ ವೇಳೆಗೆ ತಮ್ಮ ಮನೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಗುಂಡಿನ ಸಿಡಿದ ಶಬ್ದ ಕೇಳುತ್ತಿದ್ದಂತೆ ಪಕ್ಕದ ಕೊಠಡಿಯಲ್ಲಿ ಮಲಗಿದ್ದ ಅವರ ಪತಿ ಕರುಂಬಯ್ಯ ಹಾಗೂ ಮಗಳು ಎದ್ದು ಹೋಗಿ ನೋಡಿದಾಗ ರೋಹಿಣಿ ಆತ್ಮಹತ್ಯೆ ಮಾಡಿಕೊಂಡಿರುವುದು ಬೆಳಕಿಗೆ ಬಂದಿದೆ. ಕೂಡಲೇ ಪೊಲೀಸರಿಗೆ ಕರೆ ಮಾಡಿ ಮಾಹಿತಿ ನೀಡಿದ್ದಾರೆ. ಸ್ಥಳಕ್ಕೆ ಬಂದ ಭಾಗಮಂಡಲ ಠಾಣೆ ಪೊಲೀಸರು ಮೃತದೇಹವನ್ನು ಕೊಡಗು ಜಿಲ್ಲಾಸ್ಪತ್ರೆಗೆ ಮರಣೋತ್ತರ ಪರೀಕ್ಷೆಗೆ ರವಾನಿಸಿದ್ದಾರೆ.

ಜನಗಣತಿ ಕೆಲಸ ಒತ್ತಡ ?

ಈ ಬಗ್ಗೆ ಮಾತನಾಡಿರುವ ರೋಹಿಣಿ ಅವರ ಪತಿ ಕರುಂಬಯ್ಯ ಅವರು, ಯಾವಾಗಲೂ ಟೆನ್ಷನ್ ಎಂದು ಹೇಳುತ್ತಿದ್ದರು. ಜನಗಣತಿ ಆರಂಭವಾದ ಬಳಿಕ ಎಲ್ಲಾ ಕೆಲಸ ಮುಗಿಸಿ ಮಲಗುವುದು ರಾತ್ರಿ 12 ಗಂಟೆಯಾಗುತ್ತಿತ್ತು. ಇವರಿಗೆ 250ಕ್ಕೂ ಹೆಚ್ಚು ಮನೆಗಳ ಜನಗಣತಿ ಮಾಡಲು ಕೊಟ್ಟಿದ್ದರು. ಅದು ಸಾಧ್ಯವಾಗದೇ ಮತ್ತೊಬ್ಬ ಸಹಾಯಕರನ್ನು ಕೊಡುವಂತೆ ತಹಶೀಲ್ದಾರ್‌ಗೆ ಮನವಿ ಮಾಡಿದ್ದರೂ, ಯಾವುದೇ ಸ್ಪಂದನೆ ಸಿಕ್ಕಿರಲಿಲ್ಲ. ಈ ಒತ್ತಡದಿಂದ ಅವರು ಸಾವನ್ನಪ್ಪಿರಬಹುದೆಂದು ಶಂಕಿಸಿದ್ದಾರೆ.

ಆದರೆ ಮಡಿಕೇರಿ ತಾಲೂಕು ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಮೋಹನ್ ಪೆರಾಜೆ ಅವರ ಪ್ರಕಾರ, ಇಲಾಖೆ ಎಂದ ಮೇಲೆ ಒತ್ತಡಗಳು ಇರುತ್ತವೆ. ಆದರೆ ಆತ್ಮಹತ್ಯೆ ಮಾಡಿಕೊಳ್ಳುವಂತಹ ಯಾವುದೇ ಒತ್ತಡಗಳು ಇರಲಿಲ್ಲ. ರೋಹಿಣಿ ಅವರು ತುಂಬಾ ಧೈರ್ಯವಂತೆಯಾಗಿದ್ದವರು. ಎಂತಹದ್ದೇ ಕೆಲಸಗಳನ್ನು ವಹಿಸಿದ್ದರೂ ಕೆಲಸದಿಂದ ಹಿಂದೆ ಸರಿಯು ತ್ತಿರಲಿಲ್ಲ. ಹೀಗಾಗಿ ಜನಗಣತಿ ಕಾರ್ಯದಿಂದ ಬೇಸತ್ತು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂಬುದನ್ನು ನಂಬಲಾಗುತ್ತಿಲ್ಲ ಎಂದು ಹೇಳಿದ್ದಾರೆ.

ಸಾವಿರಾರು ವಿದ್ಯಾರ್ಥಿಗಳಿಗೆ ದಾರಿದೀಪವಾಗಿದ್ದ ಈ ಶಿಕ್ಷಕಿಯ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ತನಿಖೆ ನಡೆಸುತ್ತಿದ್ದಾರೆ.

ನಿಟ್ಟೆಯಲ್ಲಿ ಅಪಘಾತ: ಗಾಯಗೊಂಡಿದ್ದ ವಿದ್ಯಾರ್ಥಿನಿ ಮೃತ್ಯು

ಕಾರ್ಕಳ: ಕಾರ್ಕಳತಾಲೂಕಿನನಿಟ್ಟೆಯ ಕಾಲೇಜು ಬಳಿ ಬೈಕಿಗೆ ಕಾರು ಡಿಕ್ಕಿಯಾಗಿ ಬೈಕ್ ಸವಾರ ನವೀನ್ ಚಂದ್ರ ಮೂಲ್ಯ ಸ್ಥಳದಲ್ಲೇ ಮೃತಪಟ್ಟು, ಅವರ ಮಗಳು ಪ್ರೇರಣಾ ಗಂಭೀರವಾಗಿ ಗಾಯ ಗೊಂಡು ಆಸ್ಪತ್ರೆಗೆ ದಾಖಲಾಗಿದ್ದು, ಇದೀಗ ಆಕೆಯೂ ಕೂಡ ಚಿಕಿತ್ಸೆ ಫಲಿಸದೇ ಮೃತಪಟ್ಟಿದ್ದಾರೆ.



ಏ.24 ರಂದು ಪರೀಕ್ಷೆಗೆ ಹೋಗಿದ್ದ ಮಗಳು ಪ್ರೇರಣಾ ಹಾಗೂ ತಂದೆ ನವೀನ್ ಚಂದ್ರ ಮೂಲ್ಯ ಬೈಕಿನಲ್ಲಿ ಮನೆಗೆ ತೆರಳುತ್ತಿದ್ದ ವೇಳೆ ಪೆಟ್ರೋಲ್ ಬಂಕ್ ಬಳಿ ಕಾಲೇಜಿನ ವಿದ್ಯಾರ್ಥಿಗಳಿದ್ದ ಕಾರು ಬೈಕಿಗೆ ಅಪ್ಪಳಿಸಿತ್ತು. ನವೀನ್‌ಚಂದ್ರ ಅವರು ರಸ್ತೆಗೆ ಎಸೆಯಲ್ಪಟ್ಟು ದಾರುಣವಾಗಿ ಮೃತಪಟ್ಟಿದ್ದರು. ಮಗಳು ಪ್ರೇರಣಾ ಗಂಭೀರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ಸಾವು ಬದುಕಿನ ನಡುವೆ ಹೋರಾಡಿ ಸೋಮವಾರ ಬೆಳಗ್ಗೆ ಉಸಿರು ನಿಲ್ಲಿಸಿದ್ದಾರೆ.

ಕುಟುಂಬಕ್ಕೆ ಆಧಾರವಾಗಿದ್ದ ತಂದೆ ಹಾಗೂ ಬದುಕಬೇಕಿದ್ದ ಮಗಳು ತಮ್ಮದಲ್ಲದ ತಪ್ಪಿಗೆ ಜೀವ ಕಳೆದುಕೊಂಡಿದ್ದು, ಈ ಅಪಘಾತಕ್ಕೆ ಕಾರಣರಾದ ವಿದ್ಯಾರ್ಥಿಗಳ ವಿರುದ್ಧ ಸಾರ್ವಜನಿಕ ವಲಯದಲ್ಲಿ ತೀವ್ರ ಆಕ್ರೋಶ ವ್ಯಕ್ತವಾಗಿದೆ.

ಇತ್ತ ಪತಿ ಹಾಗೂ ಮಗಳನ್ನು ಕಳೆದುಕೊಂಡ ತಾಯಿ ಹಾಗೂ ಅವರ ಸಂಬಂಧಿಕರ ನೋವು ಆಕ್ರಂದನ ಮುಗಿಲುಮುಟ್ಟಿದೆ.

2025-26ನೇ ಸಾಲಿನಲ್ಲಿ 1,270 ಕೋಟಿ ರೂ. ವ್ಯವಹಾರ | ಅಂದಾಜು10.61 ಕೋಟಿ ರೂ. ನಿವ್ವಳ ಲಾಭ | ಇನ್ನಷ್ಟು ಅತ್ಯಾಧುನಿಕ ವ್ಯವಸ್ಥೆಗಳತ್ತ ಚಿತ್ತ
ಮತ್ತೊಂದು ಸಾಧನೆ ದಾಖಲಿಸಿದ ದ.ಕ. ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ

ಮಂಗಳೂರು: ದಕ್ಷಿಣ ಕನ್ನಡ ಸಹಕಾರಿ ಹಾಲು ಉತ್ಪಾದಕರ ಒಕ್ಕೂಟ ನಿಯಮಿತ ಮಂಗಳೂರು 2025-26ನೇ ಸಾಲಿನಲ್ಲಿ ಅಂದಾಜು10.61 ಕೋಟಿ ರೂ. ನಿವ್ವಳ ಲಾಭ ಗಳಿಸಿದೆ ಎಂದು ಒಕ್ಕೂಟ ಅಧ್ಯಕ್ಷ ರವಿರಾಜ ಹೆಗ್ಡೆ ತಿಳಿಸಿದರು.

ಒಕ್ಕೂಟವು 2025-26ನೇ ಸಾಲಿನಲ್ಲಿ 1,270 ಕೋಟಿ ರೂ. ವ್ಯವಹಾರ ನಡೆಸಿದೆ. ಹಿಂದಿನ ಸಾಲಿನಲ್ಲಿ 1,174 ಕೋಟಿ ರೂ. ವ್ಯವಹಾರ ನಡೆಸಿದ್ದು, ಶೇ. 8.18ರಷ್ಟು ಅಭಿವೃದ್ಧಿ ದಾಖಲಿಸಿದೆ. ಕಳೆದ ಸಾಲಿನಲ್ಲಿ ನಿವ್ವಳ ಲಾಭ 12.79 ಕೋಟಿ ರೂ. ಗಳಿಸಿತ್ತು ಎಂದು ಸೋಮವಾರ ಸುದ್ದಿಗೋಷ್ಠಿಯಲ್ಲಿ ಅವರು ತಿಳಿಸಿದರು.

2025-26 ನೇ ಸಾಲಿನಲ್ಲಿ ಹಾಲು ಶೇಖರಣೆ ಸರಾಸರಿ ದಿನವಹಿ 4.07 ಲಕ್ಷ ಲೀಟರ್ ಇದ್ದು, 2024-25 ನೇ ಸಾಲಿಗೆ ಹೋಲಿಸಿದಲ್ಲಿ ಶೇ.19 ರಷ್ಟು ಪ್ರಗತಿಯಾಗಿದೆ. ಒಕ್ಕೂಟ51,693ಸಂಖ್ಯೆಯಸಕ್ರಿಯ ಸದಸ್ಯರನ್ನು ಹೊಂದಿದೆ. ಹೈನುಗಾರರು ಸರಬರಾಜು ಮಾಡಿದ ಹಾಲಿಗೆ ಅನುಗುಣವಾಗಿ ಲೀಟರ್ ಒಂದಕ್ಕೆ ಈಗಾಗಲೇ 1.50 ರೂ. ಪ್ರೋತ್ಸಾಹಧನ ರೂಪದಲ್ಲಿ ನೀಡುತ್ತಿದ್ದು, 2026ರ ಫೆ. 21 ರಿಂದ ಮೇ 31ರವರೆಗೆ ಪುನಃ ವಿಶೇಷ ಪ್ರೋತ್ಸಾಹಧನವಾಗಿ 1ರೂ. ಸೇರಿ ಒಟ್ಟು 2.50 ರೂ. ಲೀಟರ್ ಒಂದಕ್ಕೆ ಹೆಚ್ಚುವರಿ ದರದೊಂದಿಗೆ ಈ ಸಾಲಿನಲ್ಲಿ ಒಟ್ಟು 23.99 ಕೋಟಿ ರೂ. ಪ್ರೋತ್ಸಾಹಧನವಾಗಿ ನೀಡಲಾಗಿದೆ ಎಂದರು.

ಹೈನುಗಾರಿಕೆಗೆ ಪೂರಕವಾದ ವಿವಿಧ ಯೋಜನೆಗಳಾದ ಮಿನಿ ಡೇರಿ, ಹಾಲು ಕರೆಯುವ ಯಂತ್ರ, ರಬ್ಬರ್ ಮ್ಯಾಟ್, ವಾಣಿಜ್ಯ ಡೇರಿ ಘಟಕ ಯೋಜನೆ, ಹಸಿರು ತಾಕು ಸ್ಥಾಪನೆ, ಹೊರ ರಾಜ್ಯದಿಂದ ರಾಸು ಖರೀದಿ, ಕರು ಸಾಕಾಣಿಕಾ ಯೋಜನೆಗಾಗಿ ಅನುದಾನಗಳ ರೂಪದಲ್ಲಿ 6.64 ಕೋಟಿ ರೂ. ನೀಡಲಾಗಿದೆ. ಹಾಲು ಶೇಖರಣಾ ಅಭಿವೃದ್ಧಿಗಾಗಿ 2026-27 ನೇ ಸಾಲಿನಲ್ಲಿ ವಿವಿಧ ಯೋಜನೆಗಳೊಂದಿಗೆ ಕಡಸು ಅಭಿವೃದ್ಧಿ ಯೋಜನೆಗಾಗಿ 60ಲ ಕ್ಷ ರೂ. ಕಾಯ್ದಿರಿಸಿದ್ದು, ಯೋಜನೆ ಅನುಷ್ಠಾನಗೊಳಿಸಲಾಗುವುದು. ಒಂದು ಕಡಸುವಿಗೆ 12 ಸಾವಿರ ರೂ. ಅನುದಾನ ನೀಡಲಾಗುವುದು ಎಂದು ಹೇಳಿದರು.



ಒಕ್ಕೂಟದ ವ್ಯಾಪ್ತಿಯಲ್ಲಿ 1,781 ಸಕ್ರಿಯ ಡೀಲರ್ ಗಳಿದ್ದು, 42 ಪಾರ್ಲರ್, 91 ಫ್ರಾಂಚೈಸಿ, 15 ಟಿಸಿಡಿ ಗಳ ಮುಖಾಂತರ 2025-26ರ ಸಾಲಿನಲ್ಲಿ ದಿನವಹಿ ಸರಾಸರಿ ಹಾಲು ಮಾರಾಟ 3,87,360 ಲೀಟರ್, ಮೊಸರು ಮಾರಾಟ 81.979 ಕೆ.ಜಿ, ಪನೀರ್ 2.8 ಟನ್, ತುಪ್ಪ 6.1 ಟನ್. ವಿವಿಧ ಸಿಹಿ ಉತ್ಪನ್ನ 850 ಕೆ.ಜಿ.ಸುವಾಸಿತ ಹಾಲು 2,000 ಲೀಟರ್, ಮಜ್ಜಿಗೆ 5,043 ಲೀಟರ್ ಮತ್ತು ಲಸ್ಸಿ 4,250 ಲೀಟರ್‌ಗಳನ್ನು ಮಾರಾಟ ಮಾಡಿ ದಿನವಹಿ 3.03 ಕೋಟಿ ರೂ. ಮಾರಾಟ ವ್ಯವಹಾರ ಆಗುತ್ತಿದೆ.

ಒಕ್ಕೂಟದಲ್ಲಿ ನವೀನ ತಂತ್ರಜ್ಞಾನದ ಯಂತ್ರೋಪಕರಣಗಳನ್ನು, ನೂತನ ಗೋಡೌನ್, ಐಸ್ ಕ್ರೀಂ ಕೋಲ್ಡ್ ಸ್ಟೋರೇಜ್, ಮತ್ತು ನವೀಕರಿಸಿದ ರೆಫ್ರಿಜರೇಶನ್ ಘಟಕನ್ನು 12.81 ಕೋಟಿ ರೂ. ಗಳಲ್ಲಿ ನಿರ್ಮಿಸಿ ಬಳಸಲಾಗುತ್ತಿದೆ ಎಂದು ಅವರು ವಿವರಿಸಿದರು.

ಒಕ್ಕೂಟ ನಿರ್ದೇಶಕರಾದ ಸುಚರಿತ ಶೆಟ್ಟಿ, ಚಂದ್ರಶೇಖರ್, ಮಮತಾ ಶೆಟ್ಟಿ, ವ್ಯವಸ್ಥಾಪಕ ನಿರ್ದೇಶಕ ವಿವೇಕ್, ಶೇಖರಣೆ ಮತ್ತು ತಾಂತ್ರಿಕ ವಿಭಾಗ ವ್ಯವಸ್ಥಾಪಕ ರವಿರಾಜ್ ಉಡುಪ ಉಪಸ್ಥಿತರಿದ್ದರು.

ಗುಣಮಟ್ಟ ದಲ್ಲಿ 1ನೇ ಸ್ಥಾನ

ಮಂಗಳೂರು ಕೇಂದ್ರ ಕಚೇರಿಯಲ್ಲಿ 7 ಕೋಟಿ ರೂ. ವೆಚ್ಚದಲ್ಲಿ ನೂತನ ಗೋಡೌನ್ ಮತ್ತು ಉಡುಪಿ ಡೇರಿಯಲ್ಲಿ 4.25 ಕೋಟಿ ರೂ. ವೆಚ್ಚದಲ್ಲಿ ಆಡಳಿತ ಕಚೇರಿ ನಿರ್ಮಾಣ ಪ್ರಗತಿ ಹಂತದಲ್ಲಿದ್ದು, ಈ ಸಾಲಿನಲ್ಲಿ ಉದ್ಘಾಟನೆಗೊಳ್ಳಲಿದೆ. ಮುಂದಿನ ಯೋಜನೆಗಳಾದ ಮೆಗಾ ಡೇರಿ, ಐಸ್ ಕ್ರೀಂ ಪ್ಲಾಂಟ್, ಪನೀರ್ ಘಟಕ, ನೀರು ಬಾಟ್ಲಿಂಗ್ ಘಟಕಗಳ ಸ್ಥಾಪನೆಗೆ ಆಡಳಿತ ಮಂಡಳಿ ಯೋಜನೆ ರೂಪಿಸುತ್ತಿದೆ. ರಾಜ್ಯದ ಹಾಲು ಒಕ್ಕೂಟಗಳ ಪೈಕಿ ದ.ಕ ಒಕ್ಕೂಟ ರೈತರ ಹಾಲಿಗೆ ಅತಿ ಹೆಚ್ಚು ದರ ಪಾವತಿಸುತ್ತಿದೆ. ಗುಣಮಟ್ಟ ದಲ್ಲಿ ಒಂದನೇ ಸ್ಥಾನವನ್ನು ಕಾಯ್ದುಕೊಂಡಿದೆ ಎಂದು ರವಿರಾಜ್ ಹೆಗ್ಡೆ ತಿಳಿಸಿದರು.

Hosadigantha Kannada Daily Printed & Published by P.S.Prakash on behalf of Jnanabharathi Prakashana Limited. published at : 2nd Floor, Micasa, Near KSRTC Bus stand, Bejai, Mangaluru - 575 004, Phone : 2497091 to 2497093. Fax : 2497098. RNI:29813/78, Printed at Digantha Mudrana Ltd., D/No.5-184-185, Industrial Estate, Yeyyadi, Mangaluru - 575 008. . Editor: P.S.Prakash, Group Editor: Vinayak S. Bhat, Resident Editor : Prakash Ilanthila.

ಹೊಸ ದಿಗಂತ
ರಾಷ್ಟ್ರ ಜಾಗೃತಿಯ ದೈನಿಕ
ಸಂಗಮ
ದಕ್ಷಿಣ ಕನ್ನಡ | ಉಡುಪಿ | ಕೊಡಗು | ಕಾಸರಗೋಡು
ಮಂಗಳವಾರ 28, ಏಪ್ರಿಲ್ 2026 | e-mail diganthamlr@gmail.com | Website www.hosadigantha.com | e-paper epaper.hosadigantha.com | MANGALURU

ಇಂದಿನ ಹವಾಮಾನ

ದಕ್ಷಿಣ ಕನ್ನಡ	ಉಡುಪಿ
36° 26°	34° 27°



ಪುಟ 2

ಮಂಗಳೂರು ದ. ಮಂಡಲ ಮಹಿಳಾ ಮೋರ್ಚಾದಿಂದ ಜನಾಕ್ರೋಶ ಪ್ರತಿಭಟನೆ




ಪುಟ 5

ಕಾಸರಗೋಡು ಜಿಲ್ಲೆಯಲ್ಲಿ ಬತ್ತಿ ಬರಡಾಗಿವೆ ಜಲಮೂಲಗಳು

ಸುದ್ದಿ ಅಪ್ಡೇಟ್‌ಗಾಗಿ Google lensನಲ್ಲಿ ಈ QR ಕೋಡ್ ಸ್ಕ್ಯಾನ್ ಮಾಡಿ, whatsApp ಗ್ರೂಪ್ ಇಂದೇ ಸೇರಿ!

ಪೆರಡಾಲದಲ್ಲಿ ಸಂಗೀತ ಲೋಕ ಧರೆಗಿಳಿಸಿದ 'ವಯಲಿನ್ ಹುಡುಗಿ' ಗಂಗಾ ಶಶಿಧರನ್ ತ್ರಿಶೂರ್!



ಕಾಸರಗೋಡು ಜಿಲ್ಲೆಯ ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಪ್ರಯುಕ್ತ ಭಾನುವಾರ ಹಮ್ಮಿಕೊಳ್ಳಲಾಗಿದ್ದ ಅಂತಾರಾಷ್ಟ್ರೀಯ ಖ್ಯಾತಿಯ ಪ್ರಸಿದ್ಧ ಬಾಲಪ್ರತಿಭೆ 12ರ ಹರೆಯದ ಗಂಗಾ ಶಶಿಧರನ್ ತ್ರಿಶೂರ್ ಅವರ 'ಗಂಗಾ ತರಂಗಂ' ವಯಲಿನ್ ಫ್ಯೂಶನ್ ಕಾರ್ಯಕ್ರಮ ನೆರೆದಿದ್ದ ಅಸಂಖ್ಯಾತ ಪ್ರೇಕ್ಷಕರ ಮನ ಸೂರೆಗೊಂಡಿತು. (ಹೆಚ್ಚಿನ ವಿವರ ಪುಟ 5)

ಸುತ್ತಮುತ್ತ

ಕರಾವಳಿಗೆ ಮೋಡ ಬಿಸಿಲಿನ ಅಗ್ನಿ ಪರೀಕ್ಷೆ; ಹುಸಿಯಾದ ನಿರೀಕ್ಷೆ

ಮಂಗಳೂರು: ದಕ್ಷಿಣ ಕನ್ನಡ ಜಿಲ್ಲೆಯ ಸಹಿತ ಕರಾವಳಿ ಭಾಗದಲ್ಲಿ ಸೋಮವಾರ ಮೋಡ ಬಿಸಿಲಿನ ಕಣ್ಣಾಮುಚ್ಚಾಲೆ ಕಂಡುಬಂದಿತ್ತು.

ತಾಪಮಾನದಲ್ಲಿನ ಸತತ ಏರಿಕೆ ನಾಗರಿಕರನ್ನು ಹೈರಾಣಾಗಿಸಿದ್ದು, ಬೇಸಗೆ ಮಳೆಯ ನಿರೀಕ್ಷೆ ಹುಸಿಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗರಿಷ್ಠ 35, ಉಡುಪಿ ಜಿಲ್ಲೆಯಲ್ಲಿ ಗರಿಷ್ಠ 34, ಕಾಸರಗೋಡು ಜಿಲ್ಲೆಯಲ್ಲಿ ಗರಿಷ್ಠ 34 ಡಿಗ್ರಿ ಸೆಲ್ಸಿಯೆಸ್ ತಾಪಮಾನ ಸೋಮವಾರ ದಾಖಲಾಗಿತ್ತು.

ಗುಡುಗಿನಿಂದ ಕೂಡಿದ ಸಾಧಾರಣ ಮಳೆ?

ಹವಾಮಾನ ಇಲಾಖೆ ಮುನ್ಸೂಚನೆಯಂತೆ ಮುಂದಿನ ಎರಡು ದಿನಗಳಲ್ಲಿ ಇನ್ನಷ್ಟು ಬಿಸಿಯ ವಾತಾವರಣ ಸಾಧ್ಯತೆಯಿದ್ದು, ಒಂದೆರಡು ಕಡೆಗಳಲ್ಲಿ ಗುಡುಗಿನಿಂದ ಕೂಡಿದ ಸಾಧಾರಣ ಮಳೆ ಬೀಳುವ ಸಾಧ್ಯತೆ ಇದೆ.

117 ದಶಲಕ್ಷ ಯೂನಿಟ್‌ಗೆ ಏರಿದ ಬಳಕೆ!

ಕಂಗಾಲಾದ ಕೇರಳ

ಎಲ್ಲೆಡೆ ಅಘೋಷಿತ ಲೋಡ್ ಶೆಡ್ಡಿಂಗ್ ಶುರು

ಕಾಸರಗೋಡು: ಕೇರಳ ರಾಜ್ಯದಲ್ಲಿ ವಿದ್ಯುತ್ ಬಳಕೆ ಈ ಬಾರಿ ಸಾರ್ವಕಾಲಿಕ ದಾಖಲೆ ಮುರಿದು ಮುನ್ನುಗ್ಗುತ್ತಿದ್ದು, ಹೊರೆ ತಗ್ಗಿಸಲು ಜಿಲ್ಲೆಯ ಸಹಿತ ಉತ್ತರ ಕೇರಳದ ಕೆಲವೆಡೆ ಅಘೋಷಿತ ಲೋಡ್ ಶೆಡ್ಡಿಂಗ್ ಶುರುವಾಗಿದೆ. »ಪುಟ 6



- ಪೂರ್ವ ಸೂಚನೆ ಇಲ್ಲದೆ ಕಾಸರಗೋಡು ಜಿಲ್ಲೆಯ ಎಲ್ಲೆಡೆ ಪವರ್ ಕಟ್
- ಇನ್ನು ದಿನನಿತ್ಯ ಅರ್ಧ ತಾಸು ವಿದ್ಯುತ್ ನಿಲುಗಡೆಗೆ ಸಿದ್ಧತೆ

15 ನಿಮಿಷ 'ಕಟ್'?

ರಾತ್ರಿ ವೇಳೆ 15 ನಿಮಿಷ ವಿದ್ಯುತ್ ಲೋಡ್ ಶೆಡ್ಡಿಂಗ್ ಏರ್ಪಡಿಸುವಂತೆ ರಾಜ್ಯದ ಎಲ್ಲಾ ವಿದ್ಯುತ್ ಸೆಕ್ಷನ್ ಕಚೇರಿಗಳಿಗೆ ವಿದ್ಯುತ್ ಮಂಡಳಿ ಮೌಖಿಕ ನಿರ್ದೇಶನ ನೀಡಿದೆ.

ಮಹಾಲಿಂಗೇಶ್ವರಗೆ ಸೀಯಾಳಾಭಿಷೇಕ

ಮಳೆಗಾಗಿ ಸೀಮೆ ಒಡೆಯಗೆ ಮೊರೆ

ನಾಡಿನ ಸಮೃದ್ಧಿಗೆ ವಿಶೇಷ ಪ್ರಾರ್ಥನೆ

ಪುತ್ತೂರು: ಮಹತೋಭಾರ ಶ್ರೀ ಮಹಾಲಿಂಗೇಶ್ವರ ದೇವಳದಲ್ಲಿ ಲೋಕ ಕಲ್ಯಾಣಾರ್ಥ ಪ್ರಾರ್ಥಿಸಿ ಸೋಮವಾರ ಶ್ರೀ ದೇವರಿಗೆ ಸೀಯಾಳಾಭಿಷೇಕ ಸೇವೆಯನ್ನು ನೂರಾರು ಮಂದಿ ಭಕ್ತರ ಸಮ್ಮುಖದಲ್ಲಿ ನಡೆಸಲಾಯಿತು. ದೇವರ ನಡೆಯಲ್ಲಿ ಬೆಳಗ್ಗೆ ಸಾಮೂಹಿಕ ಪ್ರಾರ್ಥನೆ ನಡೆಸಲಾಯಿತು. »ಪುಟ 6



ಸುತ್ತ ಮುತ್ತ

ಇಂದು ಜನಸಂಪರ್ಕ ಸಭೆ

ಸುಳ್ಯ: ಸುಳ್ಯ ಮತ್ತು ಸುಬ್ರಹ್ಮಣ್ಯ ಮೆಸ್ಕಾಂ ಉಪವಿಭಾಗ ಮಟ್ಟದ ಜನಸಂಪರ್ಕ ಸಭೆ ಮಂಗಳವಾರ (ಏ.28) ಸುಳ್ಯ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆಯಲಿದೆ. ಪೂರ್ವಾಹ್ನ 11ರಿಂದ ಪೂರ್ವಾಹ್ನ 12ರವರೆಗೆ ಮೆಸ್ಕಾಂ ಕಾರ್ಯ ಮತ್ತು ಪಾಲನಾ ವೃತ್ತದ ಅಧೀಕ್ಷಕ ಇಂಜಿನಿಯರ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರು ಹಾಜರಾಗಿ ತಮ್ಮ ಕುಂದುಕೊರತೆಗಳನ್ನು ಸಲ್ಲಿಸಬಹುದೆಂದು ಪ್ರಕಟಣೆಯಲ್ಲಿ ತಿಳಿಸಿದೆ.

ಇಂದು ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ನೇಮ ನಡಾವಳಿ

ಪುತ್ತೂರು: ಪುತ್ತೂರು ಸೀಮೆಯ ಕಾರಣಿಕ ದೈವಸ್ಥಾನ ಬಲ್ನಾಡು ಶ್ರೀ ದಂಡನಾಯಕ ಉಳ್ಳಾಲ್ತಿ ದೈವಗಳ ನೇಮ ನಡಾವಳಿ ಏ.28ರಂದು ಬೆಳಗ್ಗೆ 6ರಿಂದ ಆರಂಭಗೊಳ್ಳಲಿದೆ.

ಸೋಮವಾರ ಮಧ್ಯಾಹ್ನ ಬಲ್ನಾಡು ಶ್ರೀ ವಿನಾಯಕ ದೇವಸ್ಥಾನದಲ್ಲಿ ದೇವತಾ ಪ್ರಾರ್ಥನೆ, ವಿಶೇಷ ಮಹಾಪೂಜೆ, ಸಂಜೆ ರಂಗಪೂಜೆ, ಶ್ರೀ ದಂಡ ನಾಯಕ ದೈವಸ್ಥಾನದಲ್ಲಿ ಪೂರ್ವಾಹ್ನ 9.20ಕ್ಕೆ ಮಿಥುನ ಲಗ್ನದಲ್ಲಿ ಮಕರತೋರಣಾರೋಹಣ, ರಾತ್ರಿ ಭಂಡಾರದ ಕೊಟ್ಟಿಗೆಯಿಂದ ದೈವಗಳ ಭಂಡಾರವನ್ನು ಪಲ್ಲಕ್ಕಿಯಲ್ಲಿ ದೈವಸ್ಥಾನಕ್ಕೆ ತಂದ ಬಳಿಕ ಅನ್ನ ಸಂತರ್ಪಣೆ, ತಂಬಿಲಾದಿಗಳು ನಡೆದವು. ಏ.28ರಂದು ಬೆಳಗ್ಗೆ 6 ಗಂಟೆಯಿಂದ ದಂಡನಾಯಕ ದೈವದ ವಾಲಸರಿ ನೇಮ ನಡೆದು ಬಳಿಕ 10ರಿಂದ ಶ್ರೀ ಉಳ್ಳಾಲ್ತಿ ನೇಮದ ಅನಂತರ ಅನ್ನ ಸಂತರ್ಪಣೆ, ಅಪರಾಹ್ನ ಕಾಳರಾಹು ಮತ್ತು ಮಲರಾಯ ದೈವಗಳ ನೇಮ ನಡೆಯಲಿದೆ.

ಮಲ್ಲಿಗೆ ಹರಕೆ

ಏ.28ರಂದು ಏರು ಹೊತ್ತಿನಲ್ಲಿ ನಡೆಯುವ ಉಳ್ಳಾಲ್ತಿ ಅಮ್ಮನ ನೇಮಕ್ಕೆ ಸೀಮೆಯ ಪ್ರತಿ ಮನೆಯಿಂದಲೂ ಮಲ್ಲಿಗೆ ಚೆಂಡುಗಳನ್ನು, ಕುಂಕುಮ, ಎಳನೀರು ಮತ್ತು ಕಾಣಿಕೆಯನ್ನು ಚಾಚೂ ತಪ್ಪದೆ ಸಮರ್ಪಿಸುವುದು ವಾಡಿಕೆ. ನೇಮೋತ್ಸವದಲ್ಲಿ ಪಾಲ್ಗೊಳ್ಳಲು ಅಸಾಧ್ಯವಾದವರು ನೇಮಕ್ಕೆ ತೆರಳುವ ಭಕ್ತಾದಿಗಳ ಕೈಯಲ್ಲಿ ತಮ್ಮ ಕಾಣಿಕೆ, ಹರಕೆ ಸೀರೆ, ಮಲ್ಲಿಗೆ ಹೂವನ್ನು ಕಳುಹಿಸುತ್ತಾರೆ.

ಸೀರೆ ಅರ್ಪಣೆ

ಉಳ್ಳಾಲ್ತಿ ದೈವಕ್ಕೆ ವಾರ್ಷಿಕ ನೇಮ ನಡಾವಳಿಯ ಪರ್ವ ಸಂದರ್ಭದಲ್ಲಿ ಸೀರೆ ಅರ್ಪಣೆ ಹರಕೆ ನಡೆಯುತ್ತದೆ. ಏ.28ರಂದು ವಾಡಿಕೆಯಂತೆ ಮತ್ತು ಹರಕೆ ರೂಪದಲ್ಲಿ 5 ಸಾವಿರಕ್ಕೂ ಹೆಚ್ಚು ಸಂಖ್ಯೆಯಲ್ಲಿ ಉಳ್ಳಾಲ್ತಿ ತಾಯಿಗೆ ಸೀರೆ ಸಮರ್ಪಣೆಯಾಗುತ್ತದೆ. ಕಷ್ಟಕಾಲದಲ್ಲಿ ಹೇಳಿದ ಹರಕೆ ನೆರವೇರುತ್ತದೆ ಎಂಬ ನಂಬಿಕೆ ಮತ್ತು ಮನೆಯಿಂದ ಕಾಣಿಕೆ ರೂಪದಲ್ಲಿ ಹಣದ ಜತೆಗೆ ಸೀರೆಯನ್ನು ಸಮರ್ಪಿಸುವ ಸಂಪ್ರದಾಯವನ್ನು ಭಕ್ತರು ಪಾಲಿಸುತ್ತಾರೆ.

ಸನಾತನ ಧರ್ಮವು ಪರಮ ಸಹಿಷ್ಣು: ಆಶಿಕ್ ಗೋಪಾಲಕೃಷ್ಣ



ಸುರತ್ಕಲ್: ನಿರ್ದಿಷ್ಟವಾದ ಜನ್ಮದಿನಾಂಕ ಜನಕನಿಲ್ಲದ ಮಾತ್ರಕ್ಕೆ ಸನಾತನ ಧರ್ಮವನ್ನು ಧರ್ಮ ಅಲ್ಲ ಎಂದು ವಾದಿಸುವುದಾದರೆ ಅದು ಒಂದು ವಿಜ್ಞಾನ ಅನ್ನಬಹುದು. ಯಾಕಂದ್ರೆ ವಿಜ್ಞಾನಕ್ಕೂ ಆ ರೀತಿಯ ನಿರ್ದಿಷ್ಟತೆ ಇಲ್ಲ, ಕಾಲಕ್ಕೆ ತಕ್ಕಂತೆ ಹೊಸ ಹೊಸ ಆವಿಷ್ಕಾರದೊಂದಿಗೆ ಹೊಸ ವಿಜ್ಞಾನಿಗಳು ಸೇರಿಕೊಳ್ಳುತ್ತಾ ಇದ್ದಾರೆ. ಅದೇ ರೀತಿ ಸನಾತನ ಧರ್ಮದಲ್ಲೂ ಕೂಡಾ ಕಾಲ ಕಾಲಕ್ಕೆ ಮಹಾ ಪುರುಷರು ಹುಟ್ಟುತ್ತಲೇ ಇದ್ದಾರೆ ಎಂದು ಉಳ್ಳಾಲ ನಗರ ಪ್ರಖಂಡ ವಿಶ್ವ ಹಿಂದೂ ಪರಿಷದ್ ಸಹ ಕಾರ್ಯದರ್ಶಿ ಆಶಿಕ್ ಗೋಪಾಲಕೃಷ್ಣ ಹೇಳಿದರು. ಅವರು ಸುರತ್ಕಲ್ ಗೋವಿಂದ ದಾಸ ಕಾಲೇಜಿನ ಎ. ವಿ. ಹಾಲ್‌ನಲ್ಲಿ ಶನಿವಾರ ಆಯೋಜಿಸಲಾದ 29ನೇ ತಿಂಗಳಿನ ಮಂಥನ ಕಾರ್ಯಕ್ರಮದಲ್ಲಿ ಮುಖ್ಯ ವಕ್ತಾರರಾಗಿ ಭಾಗವಹಿಸಿ, 'ಸನಾತನ ಧರ್ಮ - ಭಾರತೀಯ ಚಿಂತನೆ ' ಎಂಬ ವಿಚಾರದ ಬಗ್ಗೆ ಮಾತನಾಡಿದರು. ಧರ್ಮ ಭೀರುಗಳಿಗೂ ಧರ್ಮ ನಿಂದಕರಿಗೂ ಸಮಾನವಾದ ಗೌರವ ಕೊಡುವ ವಿಶಾಲ ದೃಷ್ಟಿ ಇಲ್ಲಿದೆ. ಹಾಗಾಗಿ ಸಹಿಸಿಕೊಳ್ಳುವುದರ ಹೊರತಾಗಿ ಒಪ್ಪಿಕೊಳ್ಳುವ ಮಾನಸಿಕತೆ ಇದೆ. ಆದ್ದರಿಂದ ಇಲ್ಲಿ ಸಂಘರ್ಷದ ಬದಲಾಗಿ ಹೊಂದಾಣಿಕೆಯಿಂದ ಬದುಕುವ ಚಿಂತನೆ ಇದೆ ಎಂದು ವಿವರಿಸಿದರು. ಶ್ರೀರಂಗ ಮಾಳಿಗೆ ಉಪಸ್ಥಿತರಿದ್ದರು. ತಾರಾ ಧನುರಾಜ್ ಸ್ವಾಗತಿಸಿ, ಸುನೀತಾ ಶೇಖರ್ ವಂದಿಸಿದರು. ಅನನ್ಯ ವೈಯಕ್ತಿಕ ಗೀತೆ ಹಾಡಿ ಸಂಜಯ್ ನಿರೂಪಿಸಿದರು.

ನಾಳೆ ವಿವಿಧೆಡೆ ವಿದ್ಯುತ್ ವ್ಯತ್ಯಯ

ಮಂಗಳೂರು: ವಿದ್ಯುತ್ ಮಾರ್ಗಗಳಲ್ಲಿ ತುರ್ತು ನಿರ್ವಹಣಾ ಕಾಮಗಾರಿಗಳನ್ನು ಹಮ್ಮಿಕೊಂಡಿರುವುದರಿಂದ ಗಾಂಧೀನಗರ, ಶಂಕರನಗರ, ಶಾಂತಿನಗರ, ಮಾಲಾಡಿ, ಮಲ್ಲಿ ಲೇಔಟ್, ಅಂಬಿಕಾನಗರ, ವಿದ್ಯಾನಗರ, ಪಂಜಿಮೊಗರು, ರಾಯಿಕಟ್ಟೆ, ಕೂಳೂರು ಜಂಕ್ಷನ್, ಮೇಲುಕೊಪ್ಪಳ, ಮಾಲೆಮಾರ್ ರಕ್ತೇಶ್ವರಿ ದೇವಸ್ಥಾನ, ರಾಷ್ಟ್ರೀಯ ಹೆದ್ದಾರಿಯ ಪೂರ್ವ ಭಾಗದ ಪ್ರದೇಶಗಳು, ಕೊಟ್ಟಾರ, ಪ್ರೇಮಾ ಲೇ ಔಟ್, ಬಂಗ್ರಕೂಳೂರು, ಮುಲ್ಲಕಾಡು ಸೀವೇಜ್ ಪ್ಲಾಂಟ್, ಬಂಗ್ರಕೂಳೂರು ವೆಟ್ ವೆಲ್, ಪ್ರೇಮಾ ಲೇ ಔಟ್ ವೆಟ್ ವೆಲ್, ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.29ರಂದು ಬೆಳಿಗ್ಗೆ 10ರಿಂದ ಸಂಜೆ 5.30ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ ಎಂದು ಮೆಸ್ಕಾಂ ಪ್ರಕಟಣೆ ತಿಳಿಸಿದೆ.

ಮಂಗಳೂರು ದಕ್ಷಿಣ ಮಂಡಲ ಮಹಿಳಾ ಮೋರ್ಚಾದಿಂದ ಜನಾಕ್ರೋಶ ಪ್ರತಿಭಟನಾ ಪಾದಯಾತ್ರೆ

ಮಸೂದೆಗೆ ಅಡ್ಡಿ ಪ್ರಜಾಪ್ರಭುತ್ವದ ಆಶಯಕ್ಕೆ ದಕ್ಕೆ: ಕಾಮತ್



ಮಂಗಳೂರು: ಕೇಂದ್ರ ಸರ್ಕಾರ ಮಹಿಳೆಯರಿಗೆ ಶೇ.33 ಮೀಸಲಾತಿ ನೀಡುವುದನ್ನು ವಿರೋಧಿಸಿ ಪ್ರಜಾಪ್ರಭುತ್ವದ ಆಶಯಕ್ಕೆ ಅಡ್ಡಿಯುಂಟುಮಾಡಿದ ಮಹಿಳಾ ವಿರೋಧಿ ಕಾಂಗ್ರೆಸ್ ವಿರುದ್ಧ ಮಂಗಳೂರು ನಗರ ದಕ್ಷಿಣ ಮಂಡಲದ ಮಹಿಳಾ ಮೋರ್ಚಾ ನೇತೃತ್ವದಲ್ಲಿ 'ಜನಾಕ್ರೋಶ ಪ್ರತಿಭಟನಾ ಪಾದಯಾತ್ರೆ' ನಗರದ ಪಿವಿಎಸ್ ಬಿಜೆಪಿ ಜಿಲ್ಲಾ ಕಚೇರಿಯಿಂದ ಲಾಲ್ ಬಾಗ್‌ನ ಮನಪಾ ಕಚೇರಿವರೆಗೆ ಸೋಮವಾರ ನಡೆಯಿತು.

ಈ ವೇಳೆ ಶಾಸಕ ವೇದವ್ಯಾಸ ಕಾಮತ್ ಮಾತನಾಡಿ, ಮೋದಿ ಸರ್ಕಾರದ ಮಹತ್ವಾಕಾಂಕ್ಷಿಯ ಮಹಿಳಾ ಮಸೂದೆಯನ್ನು ಬಲಿಕೊಟ್ಟ ಕಾಂಗ್ರೆಸ್ ಹಾಗೂ ಇತರ ಪಕ್ಷಗಳಿಗೆ ಭವಿಷ್ಯತ್ತಿನಲ್ಲಿ ದೇಶದ ಮಹಿಳೆಯರು ಪಾಠ ಕಲಿಸಲಿದ್ದಾರೆ. ಎಷ್ಟು ಕೋಟಿ ಮಹಿಳೆಯರ ಮೀಸಲಾತಿ ಹಕ್ಕನ್ನು ಕಸಿದುಕೊಂಡವರನ್ನು ಇತಿಹಾಸ ಎಂದಿಗೂ ಮರೆಯುವುದಿಲ್ಲ ಎಂದರು.

ವಿಧಾನ ಪರಿಷತ್ ಸದಸ್ಯ ಕಿಶೋರ್ ಕುಮಾರ್ ಮಾತನಾಡಿ, ದೇಶದ ರಾಷ್ಟ್ರಪತಿಯಂತಹ ಸ್ಥಾನದಲ್ಲಿ ಮಹಿಳೆಯರು ಇದ್ದಾರೆ. ಅವರು ದೇಶವನ್ನು ಮುನ್ನಡೆಸಲು ಸಮರ್ಥರು. ಹಾಗಿದ್ದೂ ಕಾಂಗ್ರೆಸ್ ಮಹಿಳೆಯರಿಗೆ ಅವಮಾನಿಸುವ ಕೆಲಸ ಮಾಡುತ್ತಿದೆ ಎಂದರು.

ಬಿಜೆಪಿ ಜಿಲ್ಲಾ ಕಾರ್ಯದರ್ಶಿ ಪೂರ್ಣಿಮಾ ಮಾತನಾಡಿ, ಕೇಂದ್ರ ಸರಕಾರ ದೇಶದ ಎಲ್ಲ ಕ್ಷೇತ್ರಗಳಲ್ಲಿ ನಾರಿಶಕ್ತಿಗೆ ಆದ್ಯತೆ ನೀಡಿ, ರಾಜಕೀಯವಾಗಿ ಮಹಿಳೆಯರನ್ನು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ಸಂಸತ್ತಿನಲ್ಲಿ ನಾರಿಶಕ್ತಿ ವಂದನಾ ಮಸೂದೆ ಮಂಡಿಸಿತ್ತು. ತೊಟ್ಟಿಲು ತೂಗುವ ಕೈಗಳು ದೇಶವನ್ನು ಸಹ ಆಳಬಲ್ಲವು ಎಂಬುದನ್ನು ಮೋದೀಜಿಯವರು ಅರ್ಥೈಸಿಕೊಂಡಿದ್ದಾರೆ. ಆದರೆ, ಕಾಂಗ್ರೆಸ್‌ಗೆ ಇನ್ನೂ ಅರ್ಥವಾಗಿಲ್ಲ ಎಂದರು.

ಬಿಜೆಪಿ ಮಹಿಳಾ ಮೋರ್ಚಾ ಮಂಗಳೂರು ದಕ್ಷಿಣ ಮಂಡಲ ಅಧ್ಯಕ್ಷೆ ಪೂರ್ಣಿಮಾ ರಾವ್ ಮಾತನಾಡಿ, ದೇಶಕ್ಕೆ ಅಗತ್ಯವಿರುವ ಪ್ರತೀ ಸುಧಾರಣೆಗಳಿಗೂ ಅಡ್ಡಿಪಡಿಸುವುದೇ ಕಾಂಗ್ರೆಸ್ಸ್ ಹುಟ್ಟುಗುಣ. ಡಿಜಿಟಲ್ ಪೇಮೆಂಟ್, ತ್ರಿವಳಿ ತಲಾಖ್ ನಿಷೇಧ, ಸಮಾನ ನಾಗರಿಕ ಸಂಹಿತೆ, ಅಕ್ರಮ ವಲಸಿಗರನ್ನು ಹೊರಹಾಕುವುದು, ಸೇರಿದಂತೆ ಈಗ ಶೇ.33 ಮಹಿಳಾ ಮೀಸಲಾತಿಗೂ ಅಡ್ಡಗಾಲು ಹಾಕಿ ತಾವು ಎಂದಿಗೂ ಮಹಿಳಾ ವಿರೋಧಿಗಳು ಎಂಬುದನ್ನು ಸಾಬೀತು ಪಡಿಸಿದ್ದಾರೆ ಎಂದು ಹೇಳಿದರು.

ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲದ ಅಧ್ಯಕ್ಷ ರಮೇಶ್ ಕಂಡೆಟ್ಟು, ಪ್ರಧಾನ ಕಾರ್ಯದರ್ಶಿ ಗಳಾದ ರಮೇಶ್ ಹೆಗ್ಡೆ, ಲಲೇಶ್ ಕುಮಾರ್, ಮಹಿಳಾ ಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಧ್ಯಾ ವೆಂಕಟೇಶ್, ಮಂಡಲದ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ಕಮಲಾಕ್ಷಿ ಶಬರಿ ಶೆಟ್ಟಿ ಪ್ರಮುಖರಾದ ಪ್ರಮುಖರಾದ ವಿನೋದ್ ಮೆಂಡನ್, ಭಾಸ್ಕರಚಂದ್ರ ಶೆಟ್ಟಿ ರಾಮ ಪ್ರಸಾದ್, ಪ್ರವೀಣ್ ನಿಡ್ಡೆಲ್, ನಿಕಟಪೂರ್ವ ಮನಪಾ ಸದಸ್ಯರು, ಸೇರಿದಂತೆ ಮಂಡಲದ ಮಹಿಳಾ ಮೋರ್ಚಾ ಪದಾಧಿಕಾರಿಗಳು ಉಪಸ್ಥಿತರಿದ್ದರು.

> **ಮಹಿಳಾ ಮೀಸಲಾತಿ ಮಸೂದೆ ಐತಿಹಾಸಿಕ ವಾದುದು. ಇದರ ಜಾರಿಗಾಗಿ ಕೇಂದ್ರ ಸರ್ಕಾರ ಮುಂದಾಗಿತ್ತು. ಆದರೆ ಕಾಂಗ್ರೆಸ್ ಮಸೂದೆ ಕಡೆಗಣಿಸಿತು. ಅಲ್ಲದೇ ಕಾಂಗ್ರೆಸ್ ಮತ್ತು ಮಿತ್ರ ಪಕ್ಷಗಳ ಸಂಭ್ರಮಿಸಿದ್ದನ್ನು ಬಿಜೆಪಿ ಮಂಗಳೂರು ನಗರ ದಕ್ಷಿಣ ಮಂಡಲದ ಮಹಿಳಾ ಮೋರ್ಚಾವು ತೀವ್ರವಾಗಿ ಖಂಡಿಸುತ್ತದೆ.**
> • ಪೂರ್ಣಿಮಾ, ಬಿಜೆಪಿ ಜಿಲ್ಲಾ ಕಾರ್ಯದರ್ಶಿ

ಪುತ್ತೂರಿನಲ್ಲಿ ಬಿಜೆಪಿ ಪ್ರತಿಭಟನೆ | ಮಾಜಿ ಶಾಸಕಿ ಮಲ್ಲಿಕಾ ಪ್ರಸಾದ್ ಆರೋಪ

ಕಾಂಗ್ರೆಸ್‌ಗೆ ಮಹಿಳೆ ಪ್ರಧಾನಿಯಾಗುವ ಆತಂಕ



ಪುತ್ತೂರು: ಮಹಿಳೆಯರಿಗೆ ಆಡಳಿತ ವ್ಯವಸ್ಥೆಯಲ್ಲೂ ಅವಕಾಶ ಕಲ್ಪಿಸುವ ಮಹತ್ವದ ಕಾಯಿದೆ ಜಾರಿಗೊಳಿಸಲು ಕೇಂದ್ರ ಸರಕಾರ ಮುಂದಾಗಿತ್ತು. ಆದರೆ, ಮಹಿಳೆಗೆ ಶಾಸನಸಭೆಗಳಲ್ಲಿ ಶೇ.33 ಮೀಸಲಾತಿ ಕಲ್ಪಿಸಿದರೆ ಮುಂದೊಂದು ದಿನ ಮಹಿಳೆ ದೇಶದ ಪ್ರಧಾನಿಯಾಗಬಹುದು ಎಂಬ ಆತಂಕದಿಂದ ಕಾಂಗ್ರೆಸ್ ಮತ್ತದರ ಮಿತ್ರಪಕ್ಷಗಳು ಸಂಸತ್ತಿನಲ್ಲಿ ನಾರಿಶಕ್ತಿ ವಂದನಾ ಮಸೂದೆ ಅಂಗೀಕಾರವಾಗದಂತೆ ಅಡ್ಡಗಾಲಿಡುತ್ತಿವೆ ಎಂದು ಮಾಜಿ ಶಾಸಕಿ ಮಲ್ಲಿಕಾ ಪ್ರಸಾದ್ ಆರೋಪಿಸಿದರು.

ಮಹಿಳಾ ಮೀಸಲಾತಿಯ ಐತಿಹಾಸಿಕ ನಾರಿಶಕ್ತಿ ವಂದನ್ ಮಸೂದೆ ಸಂಸತ್ತಿನಲ್ಲಿ ಮಂಜೂರಾಗದೇ ಇರಲು ಕಾರಣವಾದ ಕಾಂಗ್ರೆಸ್ ಪಕ್ಷದ ವಿರುದ್ಧ ಪುತ್ತೂರಿನ ಅಮರ್ ಜವಾನ್ ಜ್ಯೋತಿ ಸ್ಮಾರಕದ ಬಳಿ ಸೋಮವಾರ ಬಿಜೆಪಿ ವತಿಯಿಂದ ನಡೆದ ಜನಾಕ್ರೋಶ ಮಹಿಳಾ ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಅವರು ಮಾತನಾಡಿದರು.

ಕಾಂಗ್ರೆಸ್ ಪಕ್ಷದ ಧೋರಣೆಯಿಂದಾಗಿ ದೇಶದ ಮಹಿಳೆಯರು ಕೆರಳಿದ್ದಾರೆ. ನಾರಿಯ ಸಿಟ್ಟು ಕಾಂಗ್ರೆಸ್ ಪಾಲಿಗೆ ಮಾರಿಯಾಗಲಿದೆ ಎಂದವರು ಎಚ್ಚರಿಸಿದರು.

ಪುತ್ತೂರು ಗ್ರಾಮಾಂತರ ಮಂಡಲ ಬಿಜೆಪಿ ಅಧ್ಯಕ್ಷ ದಯಾನಂದ ಶೆಟ್ಟಿ ಉಜಿರೆಮಾರು ಮಾತನಾಡಿದರು.

> **ಸಂಸತ್ತಿನಲ್ಲಿ ಮಹಿಳೆಗೆ ಮೀಸಲಾತಿಯನ್ನು ನಾವು ಭಿಕ್ಷೆಯಾಗಿ ಕೇಳುತ್ತಿಲ್ಲ, ಅದು ನಮ್ಮ ಹಕ್ಕು. ನ್ಯಾಯಯುತವಾಗಿ ಸಿಗಬೇಕಾದ ಗೌರವವಾಗಿದೆ.**
> • ವಿದ್ಯಾ ಗೌರಿ, ಜಿಲ್ಲಾ ಬಿಜೆಪಿ ಕಾರ್ಯದರ್ಶಿ

ಜಿಲ್ಲಾ ಬಿಜೆಪಿ ಕಾರ್ಯದರ್ಶಿ ವಿದ್ಯಾ ಗೌರಿ ಮಾತನಾಡಿ, ಕಾಂಗ್ರೆಸ್ ನಡೆಯನ್ನು ಖಂಡಿಸಿದರು. ಮಾಜಿ ಶಾಸಕ ಸಂಜೀವ ಮಠಂದೂರು, ಬಿಜೆಪಿ ನಗರ ಮಂಡಲ ಅಧ್ಯಕ್ಷ ಶಿವಕುಮಾರ್ ಪಿ.ಬಿ. ಕಲ್ಲಿಮಾರ್, ಪಕ್ಷದ ಜಿಲ್ಲಾ ಉಪಾಧ್ಯಕ್ಷ ಪ್ರಸನ್ನ ಕುಮಾರ್ ಮಾರ್ತ, ರಾಜ್ಯ ಒಬಿಸಿ ಮೋರ್ಚಾ ಕಾರ್ಯದರ್ಶಿ ಆರ್.ಸಿ. ನಾರಾಯಣ್ ರೆಂಜ, ಮುಖಂಡರಾದ ಮುರಳಿಕೃಷ್ಣ ಹಸಂತಡ್ಕ, ಸಾಜ ರಾಧಾಕೃಷ್ಣ ಆಳ್ವ, ನಾಗೇಶ್ ಟಿ.ಎಸ್., ರಾಜೇಶ್ ಬನ್ನೂರು, ಪುರುಷೋತ್ತಮ ಗೌಡ ಮುಂಗ್ಲಿಮನೆ, ವಿರೂಪಾಕ್ಷ ಭಟ್, ಉಜ್ವಲ್ ಪ್ರಭು, ಭಾಮಿ ಜಗದೀಶ್ ಶೆಣೈ, ಸುಂದರ ಪೂಜಾರಿ ಬಡಾವು, ಚಂದ್ರಶೇಖರ್ ಬಪ್ಪಳಿಗೆ, ನಗರಸಭೆ ಮಾಜಿ ಅಧ್ಯಕ್ಷೆ ಲೀಲಾವತಿ ಅಣ್ಣು ನಾಯ್ಕ, ಮಹಿಳಾ ನಾಯಕಿಯರಾದ ದೀಕ್ಷಾ ಪೈ, ಗೌರಿ ಬನ್ನೂರು, ಸ್ವರ್ಣಲತಾ ಹೆಗ್ಡೆ, ಮೋಹಿನಿ ವಿಶ್ವನಾಥ, ಶಶಿಕಲಾ, ದಿವ್ಯಾ ಪುರುಷೋತ್ತಮ ಗೌಡ ಮುಂಗ್ಲಿಮನೆ, ಜಯಶ್ರೀ ಶೆಟ್ಟಿ ವಸಂತಲಕ್ಷ್ಮೀ, ಜಯಲಕ್ಷ್ಮೀ ಶಗ್ರಿತ್ತಾಯ, ವಿಮಲಾ ಸುರೇಶ್, ಇಂದಿರಾ ಆಚಾರ್ಯ, ಜಯಶ್ರೀ ಶೆಟ್ಟಿ, ಮೀನಾಕ್ಷಿ ಮಂಜುನಾಥ ಮತ್ತಿತರರು ಉಪಸ್ಥಿತರಿದ್ದರು. ಯಶೋಧಾ ಸ್ವಾಗತಿಸಿ, ಸ್ವರ್ಣಲತಾ ಹೆಗ್ಡೆ ವಂದಿಸಿದರು.

ಬಂಟ್ವಾಳ ಬಿಜೆಪಿ ವತಿಯಿಂದ ಕಾಂಗ್ರೆಸ್ ವಿರುದ್ಧ ಪ್ರತಿಭಟನೆ

ದೇಶದ ಜನರಿಗೆ ಕಾಂಗ್ರೆಸ್‌ನಿಂದ ದ್ರೋಹ: ನ್ಯಾಕ್



ಬಂಟ್ವಾಳ: 'ನಾರಿಶಕ್ತಿ ವಂದನ್' ಮಸೂದೆ ಸಂಸತ್ತಿನಲ್ಲಿ ಮಂಜೂರಾತಿಗೆ ವಿರೋಧ ವ್ಯಕ್ತಪಡಿಸಿದ ಕಾಂಗ್ರೆಸ್ ಮತ್ತದರ ಮಿತ್ರಪಕ್ಷಗಳ ವಿರುದ್ಧ ಬಿಜೆಪಿ ಬಂಟ್ವಾಳ ಮಂಡಲ ಮಹಿಳಾ ಮೋರ್ಚಾ ವತಿಯಿಂದ ಬಿ.ಸಿ.ರೋಡಿನ ಮೇಲ್ಸೇತುವೆ ತಳಭಾಗದಲ್ಲಿ ಸೋಮವಾರ ಬಿಜೆಪಿ ಪ್ರತಿಭಟನೆ ನಡೆಸಲಾಯಿತು

ಬಂಟ್ವಾಳ ಶಾಸಕ ರಾಜೇಶ್ ನ್ಯಾಕ್ ಪ್ರತಿಭಟನಾ ಸಭೆಯನ್ನುದ್ದೇಶಿಸಿ ಮಾತನಾಡಿ, ವಿಧಾನಸಭಾ ಚುನಾವಣಾ ಸಂದರ್ಭ ಬಿಜೆಪಿ ಜಿಲ್ಲೆಯಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಿ ಸ್ಪರ್ಧೆಗೆ ಅವಕಾಶ ನೀಡಿದೆ. ಆದರೆ ಮಹಿಳಾ ಮಸೂದೆ ಜಾರಿಯಾಗದಂತೆ ವಿರೋಧಿಸುವ ಕಾಂಗ್ರೆಸ್ ಜಿಲ್ಲೆಯ ಯಾವ ಕ್ಷೇತ್ರ ದಲ್ಲಿ ಮಹಿಳೆಯರಿಗೆ ಟಿಕೆಟ್ ನೀಡಿದೆ ಹೇಳಲಿ ಎಂದು ಸವಾಲೆಸೆದರಲ್ಲದೆ ಅಂತವರು ಬಿಜೆಪಿಯ ಬಗ್ಗೆ ಪ್ರಶ್ನಿಸುವ ನೈತಿಕತೆ ಇದೆಯಾ ಎಂದು ಪ್ರಶ್ನಿಸಿದರು.

ಮುಂದಿನ ದಿನದಲ್ಲಿ ಯಶಸ್ವಿ

ಮಹಿಳಾ ಮೀಸಲಾತಿ ಜಾರಿಗೆ ವಿರೋಧಿಸಿ ದೇಶದ ಜನರಿಗೆ ಕಾಂಗ್ರೆಸ್ ದ್ರೋಹ ಎಸೆಗಿದೆ. ಈಗ ಅಪಪ್ರಚಾರದಲ್ಲಿ ತೊಡಗಿದೆ. ಪ್ರಧಾನಿ ನರೇಂದ್ರ ಮೋದಿಯವರು ಮುಂದಿನ ದಿನಗಳಲ್ಲಿ ಈ ಮಸೂದೆ ಜಾರಿ ಮಾಡಿಯೇ ಮಾಡುತ್ತಾರೆ. ನಾರಿ ಶಕ್ತಿಗೆ, ಶಕ್ತಿ ತುಂಬುವ ಕೆಲಸ ಮಾಡುತ್ತಾರೆ ಎಂಬ ವಿಶ್ವಾಸ ವ್ಯಕ್ತಪಡಿಸಿದ ಅವರು ಮಹಿಳೆಯರು ವಿಶ್ವಾಸವನ್ನು ಕಳೆದುಕೊಳ್ಳದಿರಿ ಎಂದರು.

> **ಈ ಮಸೂದೆ ತಿರಸ್ಕರಿಸಿ ಸಂಭ್ರಮಿಸುತ್ತಿರುವ ವಿರೋಧ ಪಕ್ಷಗಳ ಮನಸ್ಥಿತಿ ದೇಶದಲ್ಲಿ ಇರುವ 50%ಕ್ಕೂ ಹೆಚ್ಚು ಮಹಿಳೆಯರಿಗೆ ಮಾಡಿರುವ ಅವಮಾನ. ಮಹಿಳೆಯರು ಎಂದಿಗೂ ವಿರೋಧ ಪಕ್ಷಗಳ ಈ ಮನಸ್ಥಿತಿಯನ್ನು ಕ್ಷಮಿಸುವುದಿಲ್ಲ.**
> • ಸುಲೋಚನಾ ಜಿ.ಕೆ. ಭಟ್

ಬಿಜೆಪಿ ರಾಜ್ಯ ನಾಯಕಿ ಸುಲೋಚನಾ ಜಿ.ಕೆ. ಭಟ್ ಮಾತನಾಡಿ, ಮಹಿಳೆಯರಿಗೆ ಲೋಕಸಭೆ ಹಾಗೂ ವಿಧಾನಸಭೆಗಳಲ್ಲಿ ಶೇ.33% ಮೀಸಲಾತಿ ನೀಡಲು ಕೇಂದ್ರ ಸರ್ಕಾರ ಇರಿಸಿರುವ ಹೆಜ್ಜೆ ಐತಿಹಾಸಿಕವಾಗಿದ್ದು, ಈ ಸಾಂವಿಧಾನಿಕ ತಿದ್ದುಪಡಿಗೆ ವಿರೋಧ ಪಕ್ಷಗಳು ಬೆಂಬಲಿಸದೆ ಮಸೂದೆ ಜಾರಿಗೆ ತಡೆಯೊಡ್ಡಿರುವ ವಿರೋಧ ಪಕ್ಷಗಳ ನಿಲುವವನ್ನು ಖಂಡಿಸಿದರು.

ಬಿಜೆಪಿ ಬಂಟ್ವಾಳ ಅಧ್ಯಕ್ಷ ಚೆನ್ನಪ್ಪ ಆರ್. ಕೋಟ್ಯಾನ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಬಿಜೆಪಿ ಬಂಟ್ವಾಳ ಮಂಡಲದ ಮಹಿಳಾ ಮೋರ್ಚಾ ಅಧ್ಯಕ್ಷೆ ಸವಿತಾ ಶೆಟ್ಟಿ ಬಿಜೆಪಿ ಪ್ರಮುಖರಾದ ವಿಕಾಸ್ ಪುತ್ತೂರು, ತುಂಗಪ್ಪ ಬಂಗೇರ, ಶಿವಪ್ರಸಾದ್ ಶೆಟ್ಟಿ ದಿನೇಶ್ ಭಂಡಾರಿ, ಗೋವಿಂದ ಪ್ರಭು, ದೇವಪ್ಪ ಪೂಜಾರಿ, ರಾಮ್ ದಾಸ್ ಬಂಟ್ವಾಳ, ಜನಾರ್ದನ ಬೊಂಡಾಲ, ಆನಂದ ಶಂಭೂರು, ತನಿಯಪ್ಪ ಗೌಡ, ಹರೀಶ್ ಶೆಟ್ಟಿ ಪಡು, ಜಿನರಾಜ ಕೋಟ್ಯಾನ್, ಪ್ರಣಾಮ್ ಅಜ್ಜಿಬೆಟ್ಟು, ಕಮಲಾಕ್ಷಿ ಪೂಜಾರಿ, ನಳಿನಿ ಶೆಟ್ಟಿ ರೇಷ್ಮಾ ಶಂಕರಿ, ಸೀಮಾ ಮಾದವ, ಲಲಿತಾ ಆರ್. ಶೆಟ್ಟಿ ಬಬಿತಾ ಆರ್. ಕೋಟ್ಯಾನ್, ಹರ್ಷಿಣಿ ಪುಷ್ಪಾನಂದ, ಮಂದಾರತಿ ಶೆಟ್ಟಿ ಜಯಂತಿ, ಶ್ರೀಲತಾ ಮತ್ತಿತರರು ಉಪಸ್ಥಿತರಿದ್ದರು.

ಮುಡಿಪುವಿನಲ್ಲಿ ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಮಹಿಳಾ ಸಭೆ, ಪಾದಯಾತ್ರೆ



ಕೊಣಾಜೆ: ಭಾರತೀಯ ಜನತಾ ಪಾರ್ಟಿ ಮಂಗಳೂರು ಮಂಡಲದ ಬಿಜೆಪಿ ಮಹಿಳಾ ಮೋರ್ಚಾ ಹಾಗೂ ನಾರಿ ಶಕ್ತಿ ವೇದಿಕೆ ಇದರ ವತಿಯಿಂದ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿಯಾಗದಂತೆ ತಡೆದ ಮಹಿಳಾ ವಿರೋಧಿ ಕಾಂಗ್ರೆಸ್ ವಿರುದ್ಧ ಜನಾಕ್ರೋಶ ಮಹಿಳಾ ಸಭೆ ಹಾಗೂ ಪಾದಯಾತ್ರೆಯು ಮುಡಿಪುವಿನಲ್ಲಿ ಸೋಮವಾರ ನಡೆಯಿತು.

ಸಭೆಯನ್ನು ಉದ್ದೇಶಿಸಿ ಮಾತನಾಡಿದ ಮಾಜಿ ಜಿಲ್ಲಾ ಪಂಚಾಯತ್ ಸದಸ್ಯೆ, ಫಲಾನುಭವಿಗಳ ಪ್ರಕೋಷ್ಠ ರಾಜ್ಯ ಸದಸ್ಯರಾದ ಧನಲಕ್ಷ್ಮೀ ಗಟ್ಟಿ ಅವರು ಮಾತನಾಡಿ, ಈ ದೇಶದಲ್ಲಿ ತಾಯಿಯಂದಿರಿಗೂ ರಾಜಕೀಯದಲ್ಲಿ ಸಮಾನ ಅವಕಾಶ ಸಿಗಬೇಕಿದ್ದು ನಾರೀ ಶಕ್ತಿ ಅಧಿನಿಯಮವನ್ನು ವಿರೋಧಿಸಿ ಮಹಿಳೆಯರಿಗೆ ಅವಮಾನ ಮಾಡಿದ ಕಾಂಗ್ರೆಸ್‌ಗೆ ಮಹಿಳಾ ಶಾಪವೇ ತಟ್ಟಲಿದೆ ಎಂದು ಹೇಳಿದರು.

ಬಿಜೆಪಿ ಸರಕಾರ ಮಹಿಳಾ ಪರ ಯೋಜನೆ ಜಾರಿಗೊಳಿಸಿದೆ. ಇದನ್ನು ಕಾಂಗ್ರೆಸ್ ಅರ್ಥ ಮಾಡಿಕೊಳ್ಳಬೇಕು ಎಂದರು.

ಬಿಜೆಪಿ ಮಂಡಲದ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್, ಪೂಜಾ ಪೈ, ಮಂಡಲದ ಪ್ರಧಾನ ಕಾರ್ಯದರ್ಶಿ ವಿನುತಾ ದೇವಾಡಿಗ, ಸ್ವಪ್ನಾ ಶೆಟ್ಟಿ, ಉಪಾಧ್ಯಕ್ಷ ಹೇಮಲತಾ ಭಂಡಾರಿ, ಜಯಶ್ರೀ ಕಣೀರುತೋಟ, ಆಶಾ ಶೆಟ್ಟಿ, ಕೋಶಾಧಿಕಾರಿ ಸುಮಲತಾ ಕೊಣಾಜೆ, ಕೋಟೆಕಾರು ಪ.ಪಂ. ಅಧ್ಯಕ್ಷ ದಿವ್ಯ ಶೆಟ್ಟಿ, ಕಾರ್ಯದರ್ಶಿ ಶಶಿಕಲಾ ಶೆಟ್ಟಿ ವಿಶಾಲಾಕ್ಷಿ ಕುತ್ತಾರ್, ಮಹಿಳಾ ಮೋರ್ಚಾದ ಉಪಾಧ್ಯಕ್ಷ ಸುಮನಾ ಹರೀಶ್ ಶೆಟ್ಟಿ ಮಂಡಲದ ಕಚೇರಿ ಕಾರ್ಯದರ್ಶಿ ಸುಜಾತ ಶೆಟ್ಟಿ ನಡಾರ್, ಸುಮಿತ್ರಾ ಮುಖಂಡರಾದ ಮೋಹನ್ ರಾಜ್ ಕೆ.ಆರ್, ಪದ್ಮನಾಭ ಗಟ್ಟಿ ಕೊಣಾಜೆ, ಸಾಮಾಜಿಕ ಜಾಲತಾಣದ ಗಣೇಶ್, ಮೊಯ್ದಿನ್ ಇಸಾಕ್ ದಯಾನಂದ ಮೊದಲಾದವರು ಉಪಸ್ಥಿತರಿದ್ದರು. ಮಂಗಳೂರು ಮಂಡಲ ಬಿಜೆಪಿ ಮಹಿಳಾ ಮೋರ್ಚಾದ ಅಧ್ಯಕ್ಷ ಮಾಧವಿ ಉಳ್ಳಾಲ ಸ್ವಾಗತಿಸಿ, ಪ್ರಧಾನ ಕಾರ್ಯದರ್ಶಿ ಸ್ವಪ್ನ ಶೆಟ್ಟಿ ಕಾರ್ಯಕ್ರಮ ವಂದಿಸಿದರು.

ಕುಟುಂಬ ರಾಜಕೀಯಕ್ಕಾಗಿ ಮಸೂದೆಗೆ ಕಾಂಗ್ರೆಸ್ ವಿರೋಧ: ಶಾಸಕಿ ಮುರುಳ್ಯ



ಸುಳ್ಯ: ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗದಂತೆ ತಡೆದ ಕಾಂಗ್ರೆಸ್ ಹಾಗೂ ಮಿತ್ರಪಕ್ಷಗಳ ನಡೆ ಖಂಡಿಸಿ ಸುಳ್ಯ ಬಿಜೆಪಿ ಮಹಿಳಾ ಮೋರ್ಚಾ ವತಿಯಿಂದ ಜನಾಕ್ರೋಶ ಸಭೆ ಸೋಮವಾರ ಖಾಸಗಿ ಬಸ್ ನಿಲ್ದಾಣದ ಬಳಿ ನಡೆಯಿತು.

ಶಾಸಕಿ ಭಾಗೀರಥಿ ಮುರುಳ್ಯಅವರು ಕಾಂಗ್ರೆಸ್ ಧೋರಣೆ ಖಂಡಿಸಿ, ಕಾಂಗ್ರೆಸ್ ಪಕ್ಷವು ಮಸೂದೆಯನ್ನು ಕುಟುಂಬ ರಾಜಕೀಯದ ಕಾರಣದಿಂದ ಅದನ್ನು ವಿರೋಧಿಸುತ್ತಿದೆ ಎಂದು ಆರೋಪಿಸಿದರು.

ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ರಾಕೇಶ್ ರೈ ಕೆಡೆಂಜಿ, ಬಿಜೆಪಿ ಮಹಿಳಾ ಮೋರ್ಚಾ ಅಧ್ಯಕ್ಷೆ ಇಂದಿರಾ ಬಿ.ಕೆ., ಜಿ.ಪಂ. ಮಾಜಿ ಅಧ್ಯಕ್ಷೆ ಆಶಾ ತಿಮ್ಮಪ್ಪ ಸುಳ್ಯ ಮಂಡಲ ಅಧ್ಯಕ್ಷ ಮಾತನಾಡಿದರು. ಪ್ರಮುಖರಾದ ಬಿಜೆಪಿ ಮಂಡಲ ಕೋಶಾಧಿಕಾರಿ ಸುಭೋದ್ ಶೆಟ್ಟಿ ಮೇನಾಲ, ಪುಷ್ಪಾ ಮೇದಪ್ಪ ಶಾರದಾ ಡಿ. ಶೆಟ್ಟಿ ಸತ್ಯವತಿ ಬಸವನಪಾದೆ, ಭಾರತಿ ಉಳುವಾರು, ಶಶಿಕಲಾ ಎ. ನೀರಬಿದರೆ, ಶೀಲಾ ಕುರುಂಜಿ, ಮಮತಾ ಬೊಳುಗಲ್ಲು, ಕಿಶೋರಿ ಶೇಟ್, ಜಯಂತಿ ಎನ್.ಜೆ., ಅವಿನಾಶ್ ಕುರುಂಜಿ, ಪ್ರಭೋದ್ ಶೆಟ್ಟಿ ಮೇನಾಲ, ಶಾಂತರಾಮ ಕಣಿಲೆಗುಂಡಿ, ಸೋಮನಾಥ ಪೂಜಾರಿ, ಶ್ರೀಕಾಂತ್ ಮಾವಿನಕಟ್ಟೆ, ಬುದ್ಧ ನಾಯ್ಕ ನಾರಾಯಣ ಎಸ್.ಎಂ. ಶಾಂತಿನಗರ, ಚಿನ್ನಪ್ಪ ಪೂಜಾರಿ, ಸುನಿಲ್ ಕೇರ್ಪಳ, ವಿಜಯ ಆಲಡ್ಕ ಕೃಷ್ಣಯ್ಯ ಮೂಲೆತೋಟ, ರಂಜಿತ್ ಎನ್.ಆರ್., ಬಾಲಚಂದ್ರ ಜಯನಗರ, ಜಗನ್ನಾಥ ಜಯನಗರ, ಅಶೋಕ್ ಅಡ್ಕಾರ್, ಪ್ರಣೀತ್ ಕಣಕ್ಕೂರು, ಪ್ರದೀಪ್ ಕಣಕ್ಕೂರು ಪುರುಷೋತ್ತಮ ಬೊಡ್ಡನಕೊಚ್ಚಿ, ಧನಂಜಯ ಕುಂಚಡ್ಕ, ವೀಣಾ ಮೋಂಟಡ್ಕ, ಕರುಣಾಕರ ಹಾಸ್ಪಾರೆ, ಮೋಹಿನಿ ಕಟ್ಟ, ಚಂದ್ರಾವತಿ ಸವಣೂರು, ಆಶಾ ರೈ ಸವಣೂರು, ಲೋಲಾಕ್ಷಿ ದಾಸನಕಜೆ, ರಾಜೇಶ್ ಶೆಟ್ಟಿ ಮೇನಾಲ, ಸೀತಾ ಹೊಸಮಜಲು ಮತ್ತಿತರರು ಇದ್ದರು. ವಿನಯ ಕುಮಾರ್ ಕಂದಡ್ಕ ಸ್ವಾಗತಿಸಿ, ಗುಣವತಿ ಕೊಲ್ಲಂತಡ್ಕ ವಂದಿಸಿದರು. ಎ.ಟಿ. ಕುಸುಮಾಧರ ನಿರ್ವಹಿಸಿದರು.

ಕಾಂಗ್ರೆಸ್ ವಿರುದ್ಧ ಕಿನ್ನಿಗೋಳಿಯಲ್ಲಿ ಬಿಜೆಪಿ ವತಿಯಿಂದ ಜನಾಕ್ರೋಶ ಸಭೆ



ಕಿನ್ನಿಗೋಳಿ: ಮಹಿಳಾ ಮೀಸಲಾತಿ ಮಸೂದೆ ಜಾರಿಯಾಗಂತೆ ತಡೆದ ಮಹಿಳಾ ವಿರೋಧಿ ಕಾಂಗ್ರೆಸ್ ಪಕ್ಷಕ್ಕೆ ಮುಂದಿನ ದಿನದಲ್ಲಿ ಮಹಿಳೆಯರೆ ಉತ್ತರ ನೀಡಲಿದ್ದಾರೆ ಎಂದು ಮಂಡಲದ ಮಹಿಳಾ ಮೋರ್ಚಾದ ಅಧ್ಯಕ್ಷೆ ಗೀತಾ ಲಕ್ಷ್ಮೀ ಹೇಳಿದರು.

ಅವರು ಕಿನ್ನಿಗೋಳಿ ಬಸ್ ನಿಲ್ದಾಣದ ಸಮೀಪ ಅನುಗ್ರಹ ಸಭಾಗೃಹದ ಬಳಿ ಭಾರತೀಯ ಜನತಾ ಪಾರ್ಟಿ ಮುಲ್ಕಿ - ಮೂಡಬಿದಿರೆ ಮಂಡಲ ಮಹಿಳಾ ಮೋರ್ಚಾ ಆಶ್ರಯದಲ್ಲಿ ನಡೆದ ಮಹಿಳಾ ಮೀಸಲಾತಿ ವಿರೋಧಿ ಕಾಂಗ್ರೆಸ್ ಪಕ್ಷದ ವಿರುದ್ಧ ಜನಾಕ್ರೋಶ ಸಭೆಯಲ್ಲಿ ಮಾತನಾಡಿದರು.

ಶಾಸಕ ಉಮನಾಥ ಕೋಟ್ಯಾನ್ ಮಾತನಾಡಿ, ಪ್ರಧಾನ ಮಂತ್ರಿ ಮೋದಿ ಸರಕಾರ ಮಹಿಳೆಯರಿಗೆ ಒಂದಷ್ಟು ಪ್ರಾತಿನಿಧ್ಯ ದೊರಕಿಸುವ ನಿಟ್ಟಿನಲ್ಲಿ ಮಹಿಳಾ ಮೀಸಲಾತಿ ಮಸೂದೆಯನ್ನು ಜಾರಿ ಮಾಡಲು ಪ್ರಯತ್ನ ಪಟ್ಟರು ಆದರೇ ವಿರೋಧ ಪಕ್ಷ ಅದರಲ್ಲೂ ಕಾಂಗ್ರಸ ಪಕ್ಷ ಈ ಮಹಿಳಾ ಮಸೂದೆ ಜಾರಿಯಾಗದಂತೆ ವಿರೋಧ ವ್ಯಕ್ತಪಡಿಸಿದ್ದು ವ್ಯಾಪಕವಾಗಿ ನಾವು ಖಂಡಿಸಬೇಕು ಎಂದು ಹೇಳಿದರು.

ಮಹಿಳಾ ಮೋರ್ಚಾದ ರಾಜ್ಯ ಕಾರ್ಯದರ್ಶಿ ಶ್ವೇತಾ ಪೂಜಾರಿ, ಮಂಡಲದ ಅಧ್ಯಕ್ಷ ದಿನೇಶ್ ಪುತ್ರನ್, ಜಿಲ್ಲಾ ನಾಯಕರಾದ ಅಭಿಲಾಷ್ ಶೆಟ್ಟಿ ಕಟೀಲ್, ಶಾಂತಿ ಪ್ರಸಾದ್ ಹೆಗ್ಡೆ, ಮಂಡಲದ ರಂಜಿತ್ ಪೂಜಾರಿ, ಹರಿಪ್ರಸಾದ್, ಕಿನ್ನಿಗೋಳಿ ಪಟ್ಟಣ ಪಂಚಾಯತ್ ಅಧ್ಯಕ್ಷ ಗುರುರಾಜ ಮಲ್ಲಿಗೆಯಂಗಡಿ, ಬಜಪೆ ಪಟ್ಟಣ ಪಂಚಾಯತ್ ಅಧ್ಯಕ್ಷ ಲೋಕೇಶ್ ಪುಜಾರಿ, ಶೋಭೇಂದ್ರ ಸಸಿಹಿತ್ಲು, ಭುವನಾಭಿರಾಮ ಉಡುಪ, ಕೇಶವ ಕರ್ಕೇರಾ, ಮಮತಾ ಪೂಂಜಾ, ಜೀವನ್ ಶೆಟ್ಟಿ ಸಚಿನ್ ಶೆಟ್ಟಿಗಾರ್, ಪಟ್ಟಣ ಪಂಚಾಯತ್ ಸದಸ್ಯ ಧನುಷ್ ಶೆಟ್ಟಿಗಾರ್ ಉಪಸ್ಥಿರಿದ್ದರು.

ಏ.29ಕ್ಕೆ ಹಸಿರು ಹೊರೆಕಾಣಿಕೆ ಸಮರ್ಪಣೆ, ಮೆರವಣಿಗೆ | ಮೇ 3ರವರೆಗೆ ವಿವಿಧ ಧಾರ್ಮಿಕ ಕಾರ್ಯಕ್ರಮಗಳು

ತೊಕ್ಕೊಟ್ಟು ಶ್ರೀ ಚಾಮುಂಡೇಶ್ವರಿ ಕ್ಷೇತ್ರ, ಪರಿವಾರಗಳ ಪುನರ್ ಪ್ರತಿಷ್ಠಾಪನೆ

ಉಳ್ಳಾಲ: ತೊಕ್ಕೊಟ್ಟು, ಗಾಂಧಿನಗರದ ಶ್ರೀ ಚಾಮುಂಡೇಶ್ವರಿ ಅಮ್ಮನವರು ಮತ್ತು ಪರಿವಾರ ಸಾನಿಧ್ಯಗಳ ಪುನರ್ ಪ್ರತಿಷ್ಠಾಪನಾ ಕಲಶೋತ್ಸವವು ಏ.29ರಿಂದ ಮೇ 3ರ ವರೆಗೆ ನಡೆಯಲಿದೆಯೆಂದು ಕ್ಷೇತ್ರದ ಆಡಳಿತ ಮೊಕ್ತೇಸರರಾದ ಗಿರೀಶ್ ಕುಮಾರ್ ಯು.ಕೆ. ತಿಳಿಸಿದರು.

ಉಳ್ಳಾಲ ಪ್ರೆಸ್‌ಕ್ಲಬ್‌ನಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 1982ರಲ್ಲಿ ಚಾಮುಂಡೇಶ್ವರಿಯ ಸಣ್ಣ ಗುಡಿಯೊಂದನ್ನು ನಿರ್ಮಿಸಲಾಗಿದ್ದು, ನಂತರದ ದಿನಗಳಲ್ಲಿ ತಾಯಿಯ ಕಾರ್ಣಿಕದಿಂದಾಗಿ ನಾಲ್ಕು ವರ್ಷಗಳಲ್ಲೇ ಭಕ್ತರು ಗುಡಿಗೆ ದೇವಸ್ಥಾನದ ಸ್ವರೂಪ ನೀಡಿದ್ದರು. ಪ್ರಶ್ನಾ ಚಿಂತನೆಯಲ್ಲಿ ಕಂಡು ಬಂದಂತೆ ಜೀರ್ಣೋದ್ಧಾರಕ್ಕೆ ಮುಂದಾಗಿ ಕಳೆದ ವರ್ಷ ಜೂನ್ ನಲ್ಲಿ ಶಂಕುಸ್ಥಾಪನೆ ನಡೆಸಿದಾಗ ಕಲ್ಲು, ಮರಳು ನಿಷೇಧ ಆದ ಹಿನ್ನೆಲೆಯಲ್ಲಿ 4 ತಿಂಗಳು ಕೆಲಸ ಸ್ಥಗಿತಗೊಂಡಿತ್ತು. ಭಕ್ತರ ಸಹಕಾರದಿಂದ ಇದೀಗ ಕ್ಷೇತ್ರವು ಜೀರ್ಣೋದ್ಧಾರಗೊಂಡು ಪುನರ್ ಪ್ರತಿಷ್ಠಾ ಕಲಶೋತ್ಸವದ ಸಂಭ್ರಮದಲ್ಲಿದೆಯೆಂದರು.



ಏ.29ಕ್ಕೆ ಸಂಜೆ 4:30ಕ್ಕೆ ತೊಕ್ಕೊಟ್ಟು ಓವರ್ ಬ್ರಿಡ್ಜ್ ಕೊರಗಜ್ಜ ಸಾನಿಧ್ಯದಿಂದ ಜೈ ವೀರ ಮಾರುತಿ ವ್ಯಾಯಾಮ ಶಾಲೆ ಮಾರ್ಗವಾಗಿ ಶ್ರೀ ಕ್ಷೇತ್ರಕ್ಕೆ ಹೊರೆ ಕಾಣಿಕೆ ಮೆರವಣಿಗೆ ನಡೆಯಲಿದ್ದು, ಉಳಿಯ ಶ್ರೀ ಉಳ್ಳಾಲ್ತಿ ಧರ್ಮ ಅರಸರ ಕ್ಷೇತ್ರದ ಧರ್ಮದರ್ಶಿ ಶ್ರೀ ದೇವು ಮೂಲ್ಯಣ್ಣ ಹಾಗೂ ಕಾಪಿಕಾಡ್ ಶ್ರೀ ಉಮಾಮಹೇಶ್ವರಿ ಕ್ಷೇತ್ರದ ಆಡಳಿತ ಮೊಕ್ತೇಸರರಾದ ಎ.ಜೆ. ಶೇಖರ್ ಮೆರವಣಿಗೆಗೆ ಚಾಲನೆ ನೀಡಲಿದ್ದಾರೆ. ಅಂದು ರಾತ್ರಿ 7:30ಕ್ಕೆ ಹಾಗೂ ಏ.30ರಂದು ಸಂಜೆ 7ಕ್ಕೆ ಧಾರ್ಮಿಕ ಸಭೆ ನಡೆಯಲಿದೆ. ಮೇ 1ರಂದು ಸಂಜೆ 7:30ಕ್ಕೆ ವಿಧಾನಸಭಾಧ್ಯಕ್ಷ ಯು.ಟಿ.ಖಾದರ್ ಉಪಸ್ಥಿತಿಯಲ್ಲಿ ನಡೆಯುವ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಸಂತೋಷ್ ಕುಮಾರ್ ರೈ ಬೋಳಿಯಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ದೇರಳಕಟ್ಟೆ ಶ್ರೀ ಅಯ್ಯಪ್ಪ ಸ್ವಾಮಿ ದೇವಸ್ಥಾನದ ಆಡಳಿತ ಮೊಕ್ತೇಸರ ಚಂದ್ರಹಾಸ ಅಡ್ಯಂತಾಯ ಕಾರ್ಯಕ್ರಮ ಉದ್ಘಾಟಿಸಲಿದ್ದು, ಧಾರ್ಮಿಕ ಮುಖಂಡ ಶಿವಕೃಪಾ ಕುಂಜತ್ತೂರು ಧಾರ್ಮಿಕ ಉಪನ್ಯಾಸ ನೀಡಲಿದ್ದಾರೆ ಎಂದರು.

ಸಮಿತಿಯ ಪದಾಧಿಕಾರಿಗಳಾದ ಚಂದ್ರಶೇಖರ ಉಚ್ಚಿಲ್, ದಿನೇಶ್ ಕಾಜವ, ರಾಘವ ಉಚ್ಚಿಲ್, ಭಾಸ್ಕರ ತೊಕ್ಕೊಟ್ಟು, ಸುರೇಖಾ ಚಂದ್ರಹಾಸ, ಸತೀಶ್ ದೀಪಂ, ರೋಹಿತ್ ಉಳ್ಳಾಲ್, ಆನಂದ ಶೆಟ್ಟಿ ಭಟ್ನಗರ ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಮೇ 1ರಂದು ಪ್ರತಿಷ್ಠೆ

ಮೇ 1ರಂದು ಬೆಳಗ್ಗೆ 7:12ಕ್ಕೆ ತರವಾಡು ಚಾವಡಿಯ ಗೃಹಪ್ರವೇಶ ನಡೆಯಲಿದೆ. ಬೆಳಿಗ್ಗೆ 10.49 ರ ಮಿಥುನ ಲಗ್ನ ಸುಮೂರ್ಹತದಲ್ಲಿ ಶ್ರೀ ಚಾಮುಂಡೇಶ್ವರಿ, ಕತ್ತಲೆಕಾನ ಗುಳಿಗ, ಕೊರಗ ತನಿಯ ಗುಡಿಗಳ ಶಿಖರ ಪ್ರತಿಷ್ಠಾಪನೆ, ಕಲಶಾಭಿಷೇಕ, ಪ್ರಸನ್ನ ಪೂಜೆ ನಡೆಯಲಿದೆಯೆಂದು ಗಿರೀಶ್ ಕುಮಾರ್ ಹೇಳಿದರು.

ಸುತ್ತ ಮುತ್ತ

ಮೇ 12ಕ್ಕೆ ಕೆಡಿಪಿ ಸಭೆ ಮುಂದೂಡಿಕೆ

ಉಡುಪಿ: ರಾಜ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಸಚಿವರಾದ ಲಕ್ಷ್ಮೀ ಹೆಬ್ಬಾಳ್ಕರ್ ಅವರ ಅಧ್ಯಕ್ಷತೆಯಲ್ಲಿ ಉಡುಪಿ ಜಿಲ್ಲಾ ಪಂಚಾಯತ್‌ನ ಡಾ.ವಿ.ಎಸ್. ಆಚಾರ್ಯ ಸಭಾಂಗಣದಲ್ಲಿ ಏ.28ರಂದು ನಡೆಯಲಿದ್ದ ಕೆಡಿಪಿ ಸಭೆಯನ್ನು ಮುಂದೂಡಲಾಗಿದ್ದು, ಮೇ 12 ರಂದು ಮಧ್ಯಾಹ್ನ 3 ಗಂಟೆಗೆ ನಡೆಯಲಿದೆ ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳ ಕಚೇರಿ ಪ್ರಕಟಣೆ ತಿಳಿಸಿದೆ.

ಗ್ರಾ.ಪಂ ಚುನಾಯಿತ ಸದಸ್ಯರ ಸ್ಥಾನ: ಆಕ್ಷೇಪಣೆ ಅವಧಿ ವಿಸ್ತರಣೆ

ಉಡುಪಿ: ರಾಜ್ಯದ ಗ್ರಾಮ ಪಂಚಾಯತ್‌ಗಳ ಚುನಾಯಿತ ಸದಸ್ಯ ಸ್ಥಾನಗಳನ್ನು ಪ್ರಕರಣ 5(1) ರಂತೆ ನಿಗದಿಪಡಿಸಿದ ಕರಡು ಪ್ರಕಟಣೆಗೆ ಸಾರ್ವಜನಿಕರಿಂದ ಆಕ್ಷೇಪಣೆ ಸಲ್ಲಿಸುವ ಅವಧಿಯನ್ನು ಮೇ 2 ರ ಸಂಜೆ 5.30ರವರೆಗೆ ವಿಸ್ತರಿಸಲಾಗಿದೆ. ರಾಜ್ಯದ 31 ಜಿಲ್ಲೆಗಳ ಗ್ರಾಮ ಪಂಚಾಯತ್‌ಗಳ ಚುನಾಯಿತ ಸದಸ್ಯರ ಸಂಖ್ಯೆಯ ಕುರಿತಂತೆ ಸ್ವೀಕರಿಸಿದ ಆಕ್ಷೇಪಣೆ, ಅಹವಾಲುಗಳ ಬಗ್ಗೆ ಏ. 27ರಂದು ನಿಗದಿಪಡಿಸಿದ್ದ ಪರಿಶೀಲನಾ ಅದಾಲತ್‌ನ ದಿನಾಂಕವನ್ನು ಮುಂದೂಡಿದ್ದು, ಹೊಸ ವೇಳಾಪಟ್ಟಿಯಂತೆ ಮೇ 5ರಂದು ಮಂಗಳವಾರ ಬೆಂಗಳೂರಿನ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಗೇಟ್ ನಂ-2, 2 ನೇ ಮಹಡಿ ಇಲ್ಲಿ ಮಧ್ಯಾಹ್ನ 2.30 ರಿಂದ ಸಂಜೆ 5 ಗಂಟೆವರೆಗೆ ಅದಾಲತ್ ನಡೆಯಲಿದ್ದು, ಆಕ್ಷೇಪಣೆ ಸಲ್ಲಿಸಿದವರು ಆಧಾರ್ ಅಥವಾ ಗುರುತಿನ ಚೀಟಿ ಅಥವಾ ಸರ್ಕಾರದಿಂದ ನೀಡಲಾಗಿರುವ ಭಾವಚಿತ್ರವುಳ್ಳ ಯಾವುದೇ ಗುರುತಿನ ಚೀಟಿ ಸಲ್ಲಿಸಿ ಭಾಗವಹಿಸಬಹುದು ಎಂದು ಕರ್ನಾಟಕ ಪಂಚಾಯತ್ ರಾಜ್ ಸೀಮಾ ನಿರ್ಣಯ ಆಯೋಗದ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ತಿರಸ್ಕೃತ ಬೆಳೆ ವಿಮೆ: ಆಕ್ಷೇಪಣೆ ಆಹ್ವಾನ

ಉಡುಪಿ: ಪ್ರಧಾನಮಂತ್ರಿ ಫಸಲ್ ಬೀಮಾ ಯೋಜನೆಯಡಿ 2024-25 ಮುಂಗಾರು ಹಂಗಾಮಿನ ಬೆಳೆ ವಿಮೆಯಡಿ ನೋಂದಣಿಯಾದ ಪ್ರಸ್ತಾವನೆಗಳು ವಿಮಾ ಸಂಸ್ಥೆಯವರು ನೋಂದಾಯಿಸಿದ ಬೆಳೆಗೂ ಹಾಗೂ ಬೆಳೆ ಸಮೀಕ್ಷೆ ವರದಿಗೂ ತಾಳೆಯಾಗದ ಕಾರಣ ತಿರಸ್ಕೃತವಾಗಿದ್ದು ಸದರಿ ಪಟ್ಟಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಉಡುಪಿ, ರೈತ ಸಂಪರ್ಕ ಕೇಂದ್ರ, ಬ್ರಹ್ಮಾವರ ಹಾಗೂ ಸಂಬಂಧಪಟ್ಟ ಗ್ರಾಮ ಪಂಚಾಯತ್‌ನ ಸೂಚನಾ ಫಲಕಗಳಲ್ಲಿ ಪ್ರಕಟಿಸಲಾಗಿದ್ದು ಈ ಬಗ್ಗೆ ಆಕ್ಷೇಪಣೆಗಳಿದ್ದಲ್ಲಿ ಪೂರಕ ದಾಖಲೆಗಳೊಂದಿಗೆ 15 ದಿನಗಳ ಒಳಗಾಗಿ ಹತ್ತಿರದ ರೈತ ಸಂಪರ್ಕ ಕೇಂದ್ರ, ಕಾಪು, ಬ್ರಹ್ಮಾವರ, ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಉಡುಪಿ ಇಲ್ಲಿಗೆ ಲಿಖಿತವಾಗಿ ಸಲ್ಲಿಸಬಹುದು ಎಂದು ಸಹಾಯಕ ಕೃಷಿ ನಿರ್ದೇಶಕರ ಕಚೇರಿ ಪ್ರಕಟಣೆ ತಿಳಿಸಿದೆ.

ಬ್ರಹ್ಮರಕೂಟ್ಲು ಟೋಲ್ ಗೇಟ್ ತೆರವಿಗೆ ಆಗ್ರಹಿಸಿ 'ಜನಾಂದೋಲನ ನಡಿಗೆ'

ಬಂಟ್ವಾಳ: ಬ್ರಹ್ಮರಕೂಟ್ಲು ಟೋಲ್‌ಗೇಟ್ ತೆರವಿಗೆ ಆಗ್ರಹಿಸಿ ಸಮಾನ ಮನಸ್ಕ ಸಂಘಟನೆಗಳ ಸಹಭಾಗಿತ್ವದಲ್ಲಿ ಮಾಜಿ ಸಚಿವ ಬಿ.ರಮಾನಾಥ ರೈ ಅವರ ನೇತೃತ್ವದಲ್ಲಿ ಏ.28ರಂದು ಸಂಜೆ 4ರಿಂದ 'ಜನಾಂದೋಲನ ನಡಿಗೆ' ಪ್ರತಿಭಟನೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಬಿ.ಸಿ.ರೋಡ್‌ನ ಬ್ರಹ್ಮಶ್ರೀ ನಾರಾಯಣಗುರು ವೃತ್ತದಿಂದ ಬ್ರಹ್ಮರಕೂಟ್ಲು ಟೋಲ್‌ಗೇಟ್‌ವರೆಗೆ ಜನಾಂದೋಲನ ನಡಿಗೆ ಜಾಥಾ ಸಂಪನ್ನಗೊಳ್ಳಲಿದೆ. ಕಳೆದ 23 ವರ್ಷಗಳಿಂದ ಕಾರ್ಯಾಚರಿಸುತ್ತಿರುವ ಇನ್ನು ಮತ್ತಷ್ಟು ವರ್ಷ ಸಂಗ್ರಹ ಮುಂದುವರಿಸಲು ಪಣತೊಟ್ಟಿದೆ. ಸ್ಥಳೀಯ ವಾಹನಗಳಿಗೆ ನೀಡುತ್ತಿದ್ದ ಉಚಿತ ಓಡಾಟದ ಅವಕಾಶವನ್ನು ಈಗ ರದ್ದುಗೊಳಿಸಲಾಗಿದೆ. ಅಲ್ಲದೆ ಬ್ರಹ್ಮರಕೂಟ್ಲುವಿನಿಂದ 30 ಕಿ.ಮೀ. ದೂರದ ವಳಾಲು, 27 ಕಿ.ಮೀ. ದೂರದ ಪಣಕಜೆ, 32 ಕಿ.ಮೀ. ದೂರದ ಗಂಜಿಮಠದಲ್ಲಿ ಹೊಸ ಟೋಲ್ ಬೂತ್‌ಗಳನ್ನು ತೆರೆಯಲು ಎಲ್ಲಾ ಸಿದ್ಧತೆಗಳನ್ನು ನಡೆಸುತ್ತಿದೆ ಎಂದು ಸಮಿತಿ ದೂರಿದೆ. ಬ್ರಹ್ಮರಕೂಟ್ಲು ಟೋಲ್ ಗೇಟ್ ತೆರವುಗೊಳಿಸಬೇಕು. ಜಿಲ್ಲೆಯ ಹೆದ್ದಾರಿಗಳಲ್ಲಿ ಹೊಸ ಟೋಲ್ ಗೇಟ್‌ಗಳ ಸ್ಥಾಪನೆಯನ್ನು ಕೈಬಿಡಬೇಕು. ಅಂತರದ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಈ ಸಂದರ್ಭದಲ್ಲಿ ಆಗ್ರಹಿಸಲಾಗುತ್ತದೆ ಎಂದು ಹೋರಾಟ ಸಮಿತಿ ಸಂಚಾಲಕ ಮೋಹನ್ ಶೆಟ್ಟಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕುಂದಾಪುರ ತಾ.ಪಂ.ನಲ್ಲಿ ತ್ರೈಮಾಸಿಕ ಕೆಡಿಪಿ ಸಭೆ | ಶಾಸಕ ಕಿರಣ್ ಕುಮಾರ್ ಕೊಡ್ಗಿ ಭರವಸೆ

ಸರ್ಕಾರಿ ಆಸ್ಪತ್ರೆ ಬಗ್ಗೆ ಸರ್ಕಾರದ ಗಮನ ಸೆಳೆಯಲು ಪ್ರಯತ್ನ



ಕುಂದಾಪುರ: ತಾಲೂಕು ಕೇಂದ್ರದಲ್ಲಿರುವ ಸಮುದಾಯ ಆರೋಗ್ಯ ಕೇಂದ್ರ ಬಿಟ್ಟು ಉಳಿದೆಲ್ಲ ಸಮುದಾಯ ಆರೋಗ್ಯ ಕೇಂದ್ರಗಳನ್ನು ಮುಚ್ಚಲಾಗುತ್ತಿದೆ. ಶಂಕರನಾರಾಯಣ ಆರೋಗ್ಯ ಕೇಂದ್ರದ ವೈದ್ಯಾಧಿಕಾರಿಗಳು ಬೆಳ್ವೆಯಲ್ಲಿ ಸೇವೆ ಸಲ್ಲಿಸುತ್ತಿರುವುದರಿಂದ ಅವರನ್ನು ಶಂಕರನಾರಾಯಣ ಆರೋಗ್ಯ ಕೇಂದ್ರದಿಂದ ಬಿಡುಗಡೆಗೊಳಿಸಬೇಕು, ಸರ್ಕಾರಿ ಆಸ್ಪತ್ರೆಗಳಲ್ಲಿರುವ ಸಿಬ್ಬಂದಿ ಕೊರತೆ ಹಾಗೂ ಔಷಧ ಕೊರತೆ ಬಗ್ಗೆ ಮತ್ತು ವೈದ್ಯಾಧಿಕಾರಿಗಳ ನೇಮಕಾತಿ ಬಗ್ಗೆ ಸರ್ಕಾರದ ಗಮನ ಸೆಳೆಯಲಾಗುವುದು ಎಂದು ಕುಂದಾಪುರ ಶಾಸಕ ಎ.ಕಿರಣ್ ಕುಮಾರ್ ಕೊಡ್ಗಿ ಹೇಳಿದರು.

ತಾಲೂಕು ಪಂಚಾಯತ್ ಸಭಾಂಗಣದಲ್ಲಿ ಸೋಮವಾರ ನಡೆದ ತ್ರೈಮಾಸಿಕ ಕೆಡಿಪಿ ಸಭೆಯಲ್ಲಿ ಅವರು ಮಾತನಾಡಿದರು. ತಾಲೂಕಿನ ಸರಕಾರಿ ಆಸ್ಪತ್ರೆಗಳಲ್ಲಿ ಸಿಬ್ಬಂದಿ ಕೊರತೆ ಇದೆ. ಕೆಲವು ಅಗತ್ಯ ಔಷಧಗಳ ದಾಸ್ತಾನು ಇಲ್ಲದಿರುವುದರಿಂದ ಔಷಧ ಕೊರತೆ ಕಂಡು ಬರುತ್ತಿದೆ. ಕೊರತೆ ಇರುವ ಔಷಧಗಳನ್ನು ಖರೀದಿಸಲು ಆಸ್ಪತ್ರೆಯ ಅನುದಾನ ಬಳಸಿಕೊಳ್ಳಲಾಗುತ್ತಿದೆ. ಸಿಐಪಿ ಅವರ ಗುತ್ತಿಗೆ ಅವಧಿ ಮುಗಿದಿದ್ದು ಸಿಬ್ಬಂದಿಗಳು ರಾಜೀನಾಮೆ ನೀಡುತ್ತಿದ್ದಾರೆ. ಸಿದ್ದಾಪುರ ಮತ್ತು ಬಿದ್ಕಲ್‌ಕಟ್ಟೆ ಆರೋಗ್ಯ ಕೇಂದ್ರಗಳಿಗೆ ಹೊಸ ಕಟ್ಟಡದ ಅವಶ್ಯಕತೆ ಇದೆ ಎಂದು ತಾಲೂಕು ಆರೋಗ್ಯ ಅಧಿಕಾರಿ ಡಾ. ಪ್ರೇಮಾನಂದ ಮಾಹಿತಿ ನೀಡಿದರು.

ಕೃಷಿ ಇಲಾಖೆಯಿಂದ ಸವಲತ್ತು ಪಡೆದುಕೊಂಡವರಿಗೆ ಪುನಃ ಸವಲತ್ತು ವಿತರಿಸಲಾಗುತ್ತಿದೆ. ಅಗತ್ಯ ಇರುವವರಿಗೆ ವಿತರಿಸಿದರೆ ಅದರ ಪ್ರಯೋಜನ ರೈತರಿಗೆ ದೊರೆಯುತ್ತದೆ ಎಂದು ಕೊಡ್ಗಿ ಹೇಳಿದರು. ಕಳೆದ ವರ್ಷ 703 ಕ್ವಿಂಟಾಲ್ ಬೀಜ ವಿತರಿಸಲಾಗಿದ್ದು ಈ ವರ್ಷ 800 ಕ್ವಿಂಟಾಲ್ ಬೀಜಕ್ಕೆ ಬೇಡಿಕೆ ಸಲ್ಲಿಸಲಾಗಿದೆ. 4483 ಕ್ವಿಂಟಾಲ್ ಕೆಎಸ್ ಎಫ್‌ಸಿಯಲ್ಲಿ ದಾಸ್ತಾನು ಇದೆ. ರಸಗೊಬ್ಬರ ಕೂಡ ಸಾಕಷ್ಟು ದಾಸ್ತಾನು ಇದ್ದು ಈ ವರ್ಷ ಬಿತ್ತನೆ ಬೀಜ, ರಸಗೊಬ್ಬರದ ಕೊರತೆ ಎದುರಾಗುದಿಲ್ಲ ಎಂದು ಕೃಷಿ ಅಧಿಕಾರಿ ಸತೀಶ್ ಮಾಹಿತಿ ನೀಡಿದರು.

ಮಳೆ ಮಾಪನ ನಿರ್ವಹಣೆ ಕಳಪೆ

ಮಳೆ ಮಾಪನ ಸರಿಯಾಗಿ ನಿರ್ವಹಣೆ ಮಾಡದೇ ಇರುವುದರಿಂದ ಅನೇಕ ಕಡೆಗಳಲ್ಲಿ ಹವಾಮಾನ ಆಧಾರಿತ ಬೆಳೆ ವಿಮೆ ಕಡಿಮೆ ಬಂದಿದೆ ಎಂದು ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ಹರಿಪ್ರಸಾದ್ ಶೆಟ್ಟಿ ಹೇಳಿದರು.

ಆರೋಗ್ಯ ವ್ಯವಸ್ಥೆ ಮೇಲೆ ಪೆಟ್ಟು

ಉಪ ಆರೋಗ್ಯ ಕೇಂದ್ರಗಳನ್ನು ದುರ್ಬಲಗೊಳಿಸುವುದರಿಂದ ಆರೋಗ್ಯ ವ್ಯವಸ್ಥೆ ಮೇಲೆ ಪೆಟ್ಟು ಬೀಳಲಿದೆ. ಗ್ರಾಮೀಣ ಜನರಿಗೆ ಇದರಿಂದ ತೊಂದರೆಯಾಗಲಿದೆ ಎಂದು ಶಾಸಕ ಗುರುರಾಜ್ ಗಂಟಿಹೊಳೆ ಕಿಡಿಕಾರಿದರು.

ಶಾಲೆ-ಕಾಲೇಜುಗಳಿಗೆ ಗೈರು

ಸಮಾಜ ಕಲ್ಯಾಣ ಇಲಾಖೆಗೆ ಒಳಪಡುವ ವಿದ್ಯಾರ್ಥಿ ನಿಲಯಗಳ ವಿದ್ಯಾರ್ಥಿಗಳಲ್ಲಿ ಹೆಚ್ಚಿನ ವಿದ್ಯಾರ್ಥಿಗಳು ಶಾಲಾ ಕಾಲೇಜುಗಳಿಗೆ ಗೈರು ಹಾಜರಾಗುತ್ತಿರುವ ಬಗ್ಗೆ ಹಿಂದಿನ ಕೆಡಿಪಿ ಸಭೆಯಲ್ಲಿ ಚರ್ಚೆ ಮಾಡಿದ ಮೇಲೂ ಯಾವುದೇ ಕ್ರಮಕೈಗೊಂಡಿಲ್ಲ ಎಂದು ಶಾಸಕ ಕೊಡ್ಗಿ ಹೇಳಿದರು.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ವ್ಯಾಪ್ತಿಯ ವಿದ್ಯಾರ್ಥಿ ನಿಲಯಗಳಲ್ಲಿ ಕಾಲೇಜುಗಳಿಗೆ ತೆರಳದೆ ಇರುವ 21 ವಿದ್ಯಾರ್ಥಿಗಳು ಮತ್ತು ವಿದ್ಯಾರ್ಥಿನಿ ನಿಲಯದ 8 ವಿದ್ಯಾರ್ಥಿನಿಯರ ದಾಖಲಾತಿಯನ್ನು ರದ್ದುಪಡಿಸಲಾಗಿದೆ. ಪಿಯುಸಿ ಪರೀಕ್ಷೆಯಲ್ಲಿ ಕುಂದಾಪುರ ಮತ್ತು ಬೈಂದೂರು ತಾಲೂಕಿನಲ್ಲಿ ಶೇ. 100 ಫಲಿತಾಂಶ ದಾಖಲಾಗಿದ್ದರೆ, ಎಸೆಸ್ಸೆಲ್ಸಿಯಲ್ಲಿ ಕುಂದಾಪುರ ತಾಲೂಕಿನಲ್ಲಿ ಶೇ.98 ಫಲಿತಾಂಶ ದಾಖಲಾಗಿದೆ ಎಂದು ವಿದ್ಯಾರ್ಥಿ ನಿಲಯಗಳ ಮೇಲ್ವಿಚಾರಕಿ ಹೇಳಿದರು.

ಕುಂದಾಪುರ ವಲಯಕ್ಕೆ ಈ ಬಾರಿ ಎಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಶೇ.98.58 ಫಲಿತಾಂಶ ದಾಖಲಾಗಿದ್ದು, 9 ಸರಕಾರಿ, 3 ವಸತಿ ಶಾಲೆ, 3 ಅನುದಾನಿತ ಶಾಲೆ ಮತ್ತು 13 ಅನುದಾನ ರಹಿತ ಶಾಲೆಗಳಲ್ಲಿ ಶೇ.100 ಫಲಿತಾಂಶ ದಾಖಲಾಗಿದ್ದು, ಕಡಿಮೆ ಫಲಿತಾಂಶ ಬಂದಿರುವ ಶಾಲೆಗಳ ಮೇಲೆ ನಿಗಾ ಇಟ್ಟು ಫಲಿತಾಂಶ ಹೆಚ್ಚಳಕ್ಕೆ ಕ್ರಮಕೈಗೊಳ್ಳಲಾಗುವುದು ಎಂದು ಬಿಇಒ ಶೋಭಾ ಶೆಟ್ಟಿ ಹೇಳಿದರು.

ತಹಶೀಲ್ದಾರ್ ಪ್ರದೀಪ್ ಕುರ್ಡೇಕರ್, ತಾಪಂ ಇಒ ಮಹೇಶ ಕೆ.ಜಿ., ನಾಮನಿರ್ದೇಶಿತ ಸದಸ್ಯರು, ಅಧಿಕಾರಿಗಳು ಉಪಸ್ಥಿತರಿದ್ದರು.

ಮಂಗಳೂರಿನ ಪ್ರತಿಷ್ಠಿತ ಕರ್ನಾಟಕ ಪಾಲಿಟೆಕ್ನಿಕ್ ಪ್ರವೇಶಾತಿಗೆ ಅರ್ಜಿ ಆಹ್ವಾನ

ಈ ಬಾರಿಯಿಂದ ಕೆಪಿಟಿ-ಸಿಇಟಿ ಪರೀಕ್ಷಾ ಕ್ರಮ



ಮಂಗಳೂರು: ದೇಶದ ಪ್ರಥಮ ಸ್ವಾಯತ್ತ ಸರಕಾರಿ ಪಾಲಿಟೆಕ್ನಿಕ್ ಆಗಿರುವ ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಇಲಾಖೆಯ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಮಂಗಳೂರಿನ ಪ್ರತಿಷ್ಠಿತ ಕರ್ನಾಟಕ (ಸರ್ಕಾರಿ) ಪಾಲಿಟೆಕ್ನಿಕ್ (ಕೆಪಿಟಿ) ನಲ್ಲಿ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಲಾಗಿದೆ. ಈ ವರ್ಷದಿಂದ ವಿದ್ಯಾರ್ಥಿಗಳ ಪ್ರವೇಶಕ್ಕೆ 'ಕೆಪಿಟಿ ಸಿಇಟಿ' ಪರೀಕ್ಷಾ ಕ್ರಮ ಆರಂಭಿಸಲಾಗುತ್ತಿದೆ.

ಎಐಸಿಟಿಇ ಹೊಸದಿಲ್ಲಿಯಿಂದ ಮಾನ್ಯತೆ ಪಡೆದಿರುವ ನಮ್ಮ ಸಂಸ್ಥೆಯಲ್ಲಿ ಸ್ವಾಯತ್ತೆಯಿಂದಾಗಿ ಕಾಲೇಜು 2-3 ವರ್ಷಗಳಿಗೊಮ್ಮೆ ತನ್ನ ಪಠ್ಯಕ್ರಮವನ್ನು ಕೈಗಾರಿಕಾ ಅಗತ್ಯಗಳಿಗೆ ತಕ್ಕಂತೆ ಪರಿಷ್ಕರಿಸಿಕೊಳ್ಳಬಹುದಾಗಿದೆ. ಕೈಗಾರಿಕಾ ಸಹಭಾಗಿತ್ವದ ಕೋರ್ಸ್ ವಿನ್ಯಾಸ, ತ್ವರಿತ ಮತ್ತು ಪಾರದರ್ಶಕ ಮೌಲ್ಯಮಾಪನ, ಗುಣಮಟ್ಟದ ಬೋಧಕರ ವರ್ಗ, ಸಂಶೋಧನೆ, ಪ್ರಾಜೆಕ್ಟ್ ಮತ್ತು ನಾವೀನ್ಯತೆಗೆ ಅವಕಾಶ, ಹೊಸ ತಂತ್ರಜ್ಞಾನ ಕೋರ್ಸುಗಳ ಪರಿಚಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಮನ್ನಣೆ ಕೆಪಿಟಿ ವಿಶೇಷತೆಯಾಗಿದೆ ಎಂದು ಕೆಪಿಟಿ ಪ್ರಾಂಶುಪಾಲ ಹರೀಶ್ ಶೆಟ್ಟಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಯಾವುದೇ ವಿದ್ಯಾರ್ಥಿ 10ನೇ ತರಗತಿ ಉತ್ತೀರ್ಣನಾದ ನಂತರ ನಮ್ಮ 3 ವರ್ಷಗಳ ಡಿಪ್ಲೋಮಾ ಎಂಜಿನಿಯರಿಂಗ್ ಕೋರ್ಸ್‌ಗೆ ನೇರವಾಗಿ ಪ್ರವೇಶ ಪಡೆಯಬಹುದು. ಆಟೋಮೊಬೈಲ್ ಎಂಜಿನಿಯರಿಂಗ್, ಸಿವಿಲ್ ಎಂಜಿನಿಯರಿಂಗ್, ಮೆಕ್ಯಾನಿಕ್ ಎಂಜಿನಿಯರಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ ಎಂಜಿನಿಯರಿಂಗ್, ಕೆಮಿಕಲ್ ಎಂಜಿನಿಯರಿಂಗ್, ಪಾಲಿಮರ್ ಟೆಕ್ನಾಲಜಿ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಎಂಜಿನಿಯರಿಂಗ್, ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ಲಭ್ಯವಿರುವ ಡಿಪ್ಲೋಮಾ ಕೋರ್ಸ್‌ಗಳಾಗಿವೆ.

ಅರ್ಜಿ ನಮೂನೆಯನ್ನು ಮತ್ತು ಮಾಹಿತಿ ಪುಸ್ತಕವನ್ನು ಕಾಲೇಜಿನಿಂದ ಖುದ್ದಾಗಿ ಪಡೆದು, ಅರ್ಜಿ ಭರ್ತಿ ಮಾಡಿ, ದಾಖಲೆಗಳೊಂದಿಗೆ, ಸ್ವಯಂ ದೃಢೀಕರಿಸಿದ ನಕಲು ಪ್ರತಿಗಳೊಂದಿಗೆ ದಾಖಲೆ ಪರಿಶೀಲನೆ ಮತ್ತು ಆನ್‌ಲೈನ್ ಅರ್ಜಿ ಸಲ್ಲಿಕೆ ಕೇಂದ್ರದಲ್ಲಿ ಅರ್ಜಿ ಸಲ್ಲಿಸಿ, ಸ್ವೀಕೃತಿ ಪಡೆಯಬೇಕು. ಇದುವೇ ಕೆಪಿಟಿ-ಸಿಇಟಿ ಪ್ರವೇಶ ಪತ್ರ ಆಗಿರುತ್ತದೆ. ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳು ಕೆಪಿಟಿ-ಸಿಇಟಿಯನ್ನು ಕಡ್ಡಾಯವಾಗಿ ಬರೆಯಬೇಕು. ಎಸ್ಸೆಸ್ಸೆಲ್ಸಿಯ ಶೇ.75 ಅಂಕ ಹಾಗೂ ಕೆಪಿಟಿ-ಸಿಇಟಿಯ ಶೇ.25 ಅಂಕಗಳ ಆಧಾರದಲ್ಲಿ ಮೆರಿಟ್ ತಯಾರಿಸಿ ಪ್ರಕಟಿಸಲಾಗುತ್ತದೆ. ಅಂತಿಮ ಮೆರಿಟ್ ಮತ್ತು ರೋಸ್ಟರ್ ಅನ್ವಯ ಆಫ್‌ಲೈನ್ ಇಂಟರಾಕ್ಟಿವ್ ಕೌನ್ಸಿಲಿಂಗ್ ಮೂಲಕ ಸೀಟು ಹಂಚಿಕೆ ನಡೆಯಲಿದೆ. ಏ.27ರಿಂದ ಅರ್ಜಿ ಸಲ್ಲಿಕೆ ಆರಂಭವಾಗಲಿದ್ದು, ಮೇ 11 ಅರ್ಜಿ ಸಲ್ಲಿಕೆಗೆ ಕೊನೆ ದಿನಾಂಕವಾಗಿದೆ. ಕೆಪಿಟಿ-ಸಿಇಟಿ ಮೊದಲ ಹಂತದ ಪರೀಕ್ಷೆ ಮೇ 6ರಂದು ಬೆಳಗ್ಗೆ 10ರಿಂದ, ಎರಡನೇ ಹಂತದ ಪರೀಕ್ಷೆ ಮೇ 13ರಂದು ನಡೆಯಲಿದೆ. ಮೇ 18ರಂದು ಸಂಜೆ 5ಕ್ಕೆ ಡ್ರಾಫ್ಟ್ ಮೆರಿಟ್ ಪಟ್ಟಿ, ಮೇ 20ರಂದು ಸಂಜೆ 5ಕ್ಕೆ ಅಂತಿಮ ಮೆರಿಟ್ ಪಟ್ಟಿ ಪ್ರಕಟಿಸಲಾಗುತ್ತದೆ. ಮೇ 21ರಂದು ಬೆಳಗ್ಗೆ 8ಕ್ಕೆ ವಿಶೇಷ ಮೀಸಲಾತಿ ಕೌನ್ಸಿಲಿಂಗ್, ಸಂಜೆ ಪಾಳಿ ಪ್ರವೇಶದ ಕೌನ್ಸಿಲಿಂಗ್, ಮೇ 22ರಿಂದ 25 ಪ್ರಥಮ ಸುತ್ತಿನ ಕೌನ್ಸಿಲಿಂಗ್, ಮೇ 26ರಿಂದ 27 ದ್ವಿತೀಯ ಸುತ್ತಿನ ಕೌನ್ಸಿಲಿಂಗ್, ಮೇ 29ರಿಂದ 30 ಅಂತಿಮ ಸುತ್ತಿನ ಕೌನ್ಸಿಲಿಂಗ್ ನಡೆಯಲಿದೆ ಎಂದು ಅವರು ವಿವರಿಸಿದರು.

ಸಂಸ್ಥೆಯ ಪ್ರಮುಖರಾದ ರವೀಂದ್ರ ಕೇಣಿ, ನಾರಾಯಣ ಸ್ವಾಮಿ, ಪಿ.ಡಿ.ತಳವಾರ್, ವಿನೋದಾ ಕುಮಾರಿ, ಡಾ.ಸತೀಶ್ ಕೆ.ಎನ್., ಹರಿಶ್ ಸಿ.ಪಿ. ಉಪಸ್ಥಿತರಿದ್ದರು.

ಕುಂದಾಪುರ ದಂಡಾಧಿಕಾರಿಗೆ ಮನವಿ ಸಲ್ಲಿಸಿದ ಶ್ರೀ ಸಾಯಿ ಈಶ್ವರ ಗುರೂಜಿ ಹೇಳಿಕೆ

ಗೋವುಗಳ ರಕ್ಷಣೆ, ಗೋಹತ್ಯೆ ನಿಷೇಧ ಆಗ್ರಹ



ಕುಂದಾಪುರ: ಪ್ರಥಮ ಹಂತದಲ್ಲಿ ಗೋವುಗಳನ್ನು ರಕ್ಷಣೆ ಮಾಡಿದ್ರೆ ನಮ್ಮ ರಾಜ್ಯ, ನಮ್ಮ ರಾಷ್ಟ್ರವನ್ನು ಖಂಡಿತವಾಗಿ ನಾವು ಸಂರಕ್ಷಣೆ ಮಾಡಲಿಕ್ಕೆ ಸಾಧ್ಯ ಎಂದು ಉಡುಪಿ ಶಂಕರಪುರ ದ್ವಾರಕಾಮಯಿ ಮಠದ ಶ್ರೀ ಸಾಯಿ ಈಶ್ವರ ಗುರೂಜಿ ಹೇಳಿದರು.

ಗೋವುಗಳ ರಕ್ಷಣೆ ಮತ್ತು ಗೋಹತ್ಯೆ ನಿಷೇಧದ ಬಗ್ಗೆ ಕುಂದಾಪುರ ತಾಲೂಕು ದಂಡಾಧಿಕಾರಿ ಅವರಿಗೆ ಸೋಮವಾರ ಮನವಿ ಸಲ್ಲಿಸಿ ಮಾತನಾಡಿದರು.

ಸುಮಾರು 8,800 ತಾಲೂಕು ಕೇಂದ್ರಗಳಲ್ಲಿ ಈ ಅಭಿಯಾನ ನಡೆಯಲಿದ್ದು ಇದು ಮೊದಲ ಹಂತದ ಅಭಿಯಾನವಾಗಿದೆ. ಒಂದು ವರ್ಷಕ್ಕೆ ನಾಲ್ಕು ಬಾರಿ ಪ್ರತೀ ಮೂರು ತಿಂಗಳಿಗೊಮ್ಮೆ ಹಂತ ಹಂತವಾಗಿ ರಾಜ್ಯ ರಾಷ್ಟ್ರಮಟ್ಟದಲ್ಲಿ ಈ ಅಭಿಯಾನ ಆಯೋಜಿಸಲಾಗಿದ್ದು ಗೋವಿಗಾಗಿ ಏಕಮುಖ ಕಾನೂನು ಜಾರಿಯಾಗಬೇಕೆಂಬುದು ಎಲ್ಲಾ ಗೋ ಪ್ರೇಮಿಗಳ, ಗೋರಕ್ಷಕರ ಹಾಗೂ ಹಿಂದೂ ಸಂಘಟನೆಯ ಆಗ್ರಹವಾಗಿದೆ. ಪ್ರತಿ ವರ್ಷ ಏ.27ರಂದು ಗೋವುಗಳ ದಿನಾಚರಣೆಯನ್ನಾಗಿ ಆಚರಿಸಲಾಗುವುದು ಎಂದು ಅವರು ಹೇಳಿದರು.

ಕುಂದಾಪುರ ತಾಲೂಕು ಕೇಂದ್ರ ಉಪ ತಹಶೀಲ್ದಾರ ವಿನಯ್ ಎಸ್.ವಿ. ಅವರಿಗೆ ಮನವಿ ಸಲ್ಲಿಸಲಾಯಿತು.

- **ಸುಮಾರು 8,800 ತಾಲೂಕು ಕೇಂದ್ರಗಳಲ್ಲಿ ಗೋವು ರಕ್ಷಣಾ ಅಭಿಯಾನ**
- **ಒಂದು ವರ್ಷಕ್ಕೆ ನಾಲ್ಕು ಬಾರಿ ಪ್ರತೀ ಮೂರು ತಿಂಗಳಿಗೊಮ್ಮೆ ಹಂತ ಹಂತವಾಗಿ ರಾಜ್ಯ, ರಾಷ್ಟ್ರಮಟ್ಟದಲ್ಲಿ ಅಭಿಯಾನ**
- **ಗೋವಿಗಾಗಿ ಏಕ ಕಾನೂನು ಜಾರಿಗೊಳಿಸಲು ಆಗ್ರಹ**
- **ಪ್ರತಿ ವರ್ಷ ಏ.27ರಂದು ಗೋವುಗಳ ದಿನಾಚರಣೆ**

ಈ ಸಂದರ್ಭದಲ್ಲಿ ಕುಂದಾಪುರ ಮಂಡಲ ಬಿಜೆಪಿ ಕ್ಷೇತ್ರಾಧ್ಯಕ್ಷ ಸುರೇಶ್ ಶೆಟ್ಟಿ ಗೋಪಾಡಿ, ನಿಕಟ ಪೂರ್ವ ಅಧ್ಯಕ್ಷ ಶಂಕರ್ ಅಂಕದಕಟ್ಟೆ, ಪ್ರಧಾನ ಕಾರ್ಯದರ್ಶಿಗಳಾದ ಸತೀಶ್ ಪೂಜಾರಿ ವಕ್ವಾಡಿ, ಸುಧೀರ್ ಕೆ.ಎಸ್., ರಾಮಕ್ಷತ್ರಿಯ ಸಂಘ ಕುಂದಾಪುರ ಅಧ್ಯಕ್ಷ ಲಕ್ಷ್ಮೀಶ ಹವಾಲ್ದಾರ್, ಪ್ರಮುಖರಾದ ರಾಜೇಶ್ ಕಾವೇರಿ ಕುಂದಾಪುರ, ಸತೀಶ್ ಶೆಟ್ಟಿ, ದಿವಾಕರ ಕಡ್ಗಿ, ಪ್ರಕಾಶ್ ಪೂಜಾರಿ ಬೀಜಾಡಿ, ಭಾಸ್ಕರ್ ಬಿಲ್ಲವ ಹೇರಿಕುದ್ರು, ಹಾಲಾಡಿ ರಮೇಶ್ ಶೆಟ್ಟಿ, ವಿ ಪ್ರಭಾಕರ್, ಗುಣರತ್ನ, ಸಂತೋಷ್ ಶೆಟ್ಟಿ, ಕೆ.ಟಿ. ಸತೀಶ್, ರಾಜೇಶ್ ಕಡ್ಗಿ, ರತ್ನಾಕರ ಶೇರಿಗಾರ್, ಮಹೇಶ್ ಶೆಣೈ, ನಾಗರಾಜ್ ಸಂಪಿಕಟ್ಟೆ, ನವೀನ್ ಕೊರ್ಗಿ, ಸಂಪತ್ ಶೇರಿಗಾರ್, ಶ್ರೀನಾಥ್ ಶೆಟ್ಟಿ ತೆಕ್ಕಟ್ಟೆ, ಗಣೇಶ್ ಬೀಜಾಡಿ, ಪ್ರದೀಪ್ ಕೋಟೇಶ್ವರ, ಶ್ವೇತಾ ಶ್ರೀನಿಧಿ, ರೋಹಿಣಿ ಪೈ, ಕುಂದಾಪುರ ಬಿಜೆಪಿ ಯುವಮೋರ್ಚಾ ಅಧ್ಯಕ್ಷ ಕಿರಣ್ ಪೂಜಾರಿ ತೆಕ್ಕಟ್ಟೆ, ಒಬಿಸಿ ಮೋರ್ಚಾ ಅಧ್ಯಕ್ಷ ಸುರೇಂದ್ರ ಕಾಂಚನ್ ಸಂಗಮ್, ಮಹಿಳಾ ಮೋರ್ಚಾ ಅಧ್ಯಕ್ಷೆ ಸೌರಭಿ ಪೈ, ಎಬಿವಿಪಿ ವಿದ್ಯಾರ್ಥಿಗಳು, ಮಾತೃಶಕ್ತಿ ಸಂಘಟನೆಯ ಪ್ರಮುಖರು, ಸಂಘಟನೆಯ ಪ್ರಮುಖರು, ಗೋ ಪ್ರೇಮಿಗಳು, ಗೋರಕ್ಷಕರು ಇದ್ದರು. ಗಜೇಂದ್ರ ಬೈಂದೂರು ಕಾರ್ಯಕ್ರಮ ನಿರ್ವಹಿಸಿದರು.

ಕೊಯ್ಲ ಪಶುವೈದ್ಯಕೀಯ ಕಾಲೇಜು: ವಿಶ್ವ ಪಶು ವೈದ್ಯಕೀಯ ದಿನಾಚರಣೆ



ಕಡಬ: ಕೊಯ್ಲ ಪಶುವೈದ್ಯಕೀಯ ಕಾಲೇಜಿನಲ್ಲಿ ಪಶು ವೈದ್ಯಕೀಯ ದಿನಾಚರಣೆಯ ಅಂಗವಾಗಿ ಸಾಕು ಪ್ರಾಣಿಗಳಿಗೆ ರೇಬೀಸ್ ರೋಗದ ವಿರುದ್ಧ ಲಸಿಕೆ ಹಾಗೂ ಸಾಕು ಪ್ರಾಣಿಗಳಿಗೆ ಚಿಕಿತ್ಸೆ ನೀಡುವ ಕಾರ್ಯಕ್ರಮ ನಡೆಯಿತು.

ಕಾಲೇಜಿನ ಡೀನ್ ಡಾ.ಎಂ.ಸಿ. ಶಿವಕುಮಾರ್ ಗೋಪೂಜೆ ನೆರವೇರಿಸಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ವಿಶ್ವ ಪಶುವೈದ್ಯಕೀಯ ದಿನವನ್ನು ವಿಶ್ವದೆಲ್ಲೆಡೆ ಆಚರಿಸಲಾಗುತ್ತಿದೆ. ಕಾಲೇಜಿನ ವತಿಯಿಂದ ಪಶು ವೈದ್ಯಕೀಯ ಕೊಡುಗೆಯನ್ನು ಸಮಾಜಕ್ಕೆ ಅರಿವು ಮೂಡಿಸುವ ಕಾರ್ಯ ಮಾಡಲಾಗುತ್ತಿದೆ. ಪ್ರಾಣಿಗಳ ಆಹಾರ ಭದ್ರತೆ, ಪ್ರಾಣಿಜನ್ಯ ರೋಗ, ಮುಂತಾದ ವಿಚಾರಗಳ ಬಗ್ಗೆ ಸಾಮಾನ್ಯ ಜನರಿಗೆ ಮಾಹಿತಿ ನೀಡುವುದು ಪಶುವೈದ್ಯಕೀಯ ದಿನಾಚರಣೆ ಉದ್ದೇಶವಾಗಿದೆ. ಪರಾವಲಂಬಿ ಜೀವಿಗಳ ಜಂತು ನಾಶಕ ಔಷಧ, ದೊಡ್ಡ ಜಾನುವಾರುಗಳಿಗೆ ಖನಿಜ ಮಿಶ್ರಣವನ್ನು ಉಚಿತವಾಗಿ ನೀಡಲಾಗುತ್ತಿದೆ. ಸಾರ್ವಜನಿಕರು ಇದರ ಪ್ರಯೋಜನ ಪಡೆದುಕೊಳ್ಳಬೇಕು ಎಂದರು.

ಸಾಕುಪ್ರಾಣಿಗಳಾದ ನಾಯಿ, ಬೆಕ್ಕು ಮುಂತಾದ ಪ್ರಾಣಿಗಳಿಗೆ ಉಚಿತ ರೇಬೀಸ್ ಲಸಿಕೆ ನೀಡಲಾಯಿತು. ದೊಡ್ಡಪ್ರಾಣಿಗಳಾದ ಹಸು, ಕರುಗಳಿಗೆ ಖನಿಜ ಮಿಶ್ರಣ ಮತ್ತು ಕ್ಯಾಲ್ಸಿಯಂ ಟಾನಿಕ್ ನೀಡಲಾಯಿತು. 36 ಪ್ರಾಣಿಗಳಿಗೆ ಚಿಕಿತ್ಸೆ ನೀಡಲಾಯಿತು. ಕಾಲೇಜಿನ ಪ್ರಾಧ್ಯಾಪಕ ಹಾಗೂ ಪಶು ವೈದ್ಯಕೀಯ ಚಿಕಿತ್ಸಾ ಸಂಕೀರ್ಣ ವಿಭಾಗ ಮುಖ್ಯಸ್ಥ ಡಾ. ಮಂಜುನಾಥ್ ಪಾಟೀಲ್, ಸಹ ಪ್ರಾಧ್ಯಾಪಕ ಡಾ. ಧರಣೇಶ್, ಸಹಾಯಕ ಪ್ರಾಧ್ಯಾಪಕರಾದ ಡಾ. ಸಾಗರ್ ಆರ್.ಎಸ್., ಡಾ. ರಜತ್ ಸಾಗರ್, ಡಾ. ತೇಜಸ್ವಿನಿ ಎಂ.ಪಿ., ಡಾ.ರಶ್ಮಿ, ಡಾ.ಹರಿಣಿ, ಡಾ. ಸಾಗರ್ ಎಂ., ಅವರು ಲಸಿಕೆ, ಚಿಕಿತ್ಸೆ ನೀಡುವ ಕಾರ್ಯವನ್ನು ಮಾಡಿದರು. ಡಾ.ಎಂ.ಸಿ. ಶಿವಕುಮಾರ್ ಸ್ವಾಗತಿಸಿ, ಡಾ. ಮಂಜುನಾಥ್ ಪಾಟೀಲ್ ವಂದಿಸಿದರು.

ಅಶೋಕ ನಗರ ರೋಯಲ್ ಫ್ರೆಂಡ್ಸ್ ಸಂಘದ ವಾರ್ಷಿಕೋತ್ಸವ



ಮಂಗಳೂರು: ಅಶೋಕನಗರ ರೋಯಲ್ ಫ್ರೆಂಡ್ಸ್ ಸಂಘದ ವಾರ್ಷಿಕೋತ್ಸವ ಇಲ್ಲಿನ ಶಾಲೆ ವಠಾರದಲ್ಲಿ ನಡೆಯಿತು.

ಸಭೆಯಲ್ಲಿ ಕೋಡಿಯಾಲ್ ಬೈಲ್ ಲಯನ್ಸ್ ಕ್ಲಬ್‌ನ ಕಾರ್ಯದರ್ಶಿ ಸತ್ಯೇಂದ್ರ ಭಟ್ ಅಧ್ಯಕ್ಷತೆ ವಹಿಸಿದ್ದರು. ಲೈಫ್ ಚಾರಿಟೇಬಲ್ ಟ್ರಸ್ಟ್ ಸ್ಥಾಪಕಾಧ್ಯಕ್ಷ ಅರ್ಜುನ್ ಭಂಡಾರ್ಕರ್, ಕರ್ನಾಟಕ ಗ್ರಾಮೀಣ ವಿಕಾಸ ಬ್ಯಾಂಕಿನ ನಿವೃತ್ತ ಪ್ರಬಂಧಕ ಗಣೇಶ್ ಶೆಣೈ ಮುಲ್ಕಿ ದಂಬೆಲ್ ನಾಗಬ್ರಹ್ಮ ಸನ್ನಿಧಿಯ ಬಬ್ಬರ್ಯ ಬಂಟ ದೈವಸ್ಥಾನ ಗುರಿಕಾರ ಸೀತಾರಾಮ ಪೂಜಾರಿ, ಅಶೋಕನಗರ ಹಿಂದೂ ಧಾರ್ಮಿಕ ಸೇವಾ ಸಂಘದ ಅಧ್ಯಕ್ಷ ಪುರುಷೋತ್ತಮ ಸುವರ್ಣ ಮುಖ್ಯ ಅತಿಥಿಗಳಾಗಿದ್ದರು. ಮನಪಾ ಮಾಜಿ ಸದಸ್ಯ ಗಣೇಶ್ ಕುಲಾಲ್, ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದ ಅಸೋಸಿಯೇಟ್ ಪ್ರೊಫೆಸರ್ ಡಾ. ಶಿಲ್ಪಾ ದಿನೇಶ್ ಅವರನ್ನು ಸನ್ಮಾನಿಸಲಾಯಿತು. ಸಂಘದ ವತಿಯಿಂದ ಆರ್ಥಿಕವಾಗಿ ಹಿಂದುಳಿದ ಮಕ್ಕಳನ್ನು ದತ್ತು ಸ್ವೀಕರಿಸುವುದು, ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪುರಸ್ಕಾರ, ಇಬ್ಬರು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ, ಅಶಕ್ತ ಕುಟುಂಬಗಳಿಗೆ ಧನ ಸಹಾಯ ಹಾಗೂ ಕ್ರಿಕೆಟ್ ಪಂದ್ಯಾಟದ ವಿಜೇತರಿಗೆ ಬಹುಮಾನ ವಿತರಣೆ ಮಾಡಲಾಯಿತು.

ರಿಫ್ಲೆಕ್ಟರ್ ಡ್ಯಾನ್ಸ್ ತಂಡ ಮತ್ತು ಚೈತನ್ಯ ಬಳಗದವರಿಂದ ಮನರಂಜನಾ ಕಾರ್ಯಕ್ರಮ ನಡೆದವು. ಕಾಪು ರಂಗ ತರಂಗ ಕಲಾವಿದರಿಂದ ತುಳು ಹಾಸ್ಯ ನಾಟಕ 'ಶೋಭಾಜಿ' ಪ್ರದರ್ಶನಗೊಂಡಿತು.

ಉಪಾಧ್ಯಕ್ಷ ಹರಿಪ್ರಸಾದ್ ವರದಿ ವಾಚಿಸಿದರು. ಯತೀಶ್ ಪೂಜಾರಿ ಸ್ವಾಗತಿಸಿದರು. ಪುರುಷೋತ್ತಮ ಗೋಳಿಪಲ್ಕೆ, ದೀಪ್ತಿ ನಿರೂಪಿಸಿದರು. ಗೌರವಾಧ್ಯಕ್ಷ ಜಗದೀಶ್ ಶೆಟ್ಟಿ ದಿನಕರ್ ಸುವರ್ಣ, ಅಧ್ಯಕ್ಷ ರಾಜ್ ಕಿರಣ್, ಕೋಶಾಧಿಕಾರಿ ಸಂದೇಶ್ ಕೋಟ್ಯಾನ್, ಪ್ರಧಾನ ಸಲಹೆಗಾರರು ವಸಂತ ಪೂಜಾರಿ, ಶಶಿಕಿರಣ್, ರೋಹಿತ್ ಭಾಗವಹಿಸಿದ್ದರು.

ಬೊಂಡಾಲ ಶ್ರೀ ಗುರು ಫ್ರೆಂಡ್ಸ್ ವಾರ್ಷಿಕೋತ್ಸವ, ಮಹಾಮೃತ್ಯುಂಜಯ ಯಾಗ



ಬಂಟ್ವಾಳ: ಪಾಣೆಮಂಗಳೂರು ಗ್ರಾಮದ ಬೊಂಡಾಲ ಶ್ರೀ ಗುರು ಫ್ರೆಂಡ್ಸ್ ವಾರ್ಷಿಕೋತ್ಸವ ಪ್ರಯುಕ್ತ ಬೊಂಡಾಲ ಶ್ರೀ ಮಹಾಗಣಪತಿ ದೇವಸ್ಥಾನದಲ್ಲಿ ನಡೆಯುವ ಮಹಾಮೃತ್ಯುಂಜಯ ಯಾಗದ ಧಾರ್ಮಿಕ ಸಭೆಯಲ್ಲಿ ವೇದಮೂರ್ತಿ ಪರಕ್ಕಜೆ ಅನಂತನಾರಾಯಣ ಭಟ್ ಉಪನ್ಯಾಸ ನೀಡಿದರು.

ದೇವಸ್ಥಾನ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಮಾಜಿ ಶಾಸಕ ಪದ್ಮನಾಭ ಕೊಟ್ಟಾರಿ ಅಧ್ಯಕ್ಷತೆ ವಹಿಸಿದ್ದರು. ಸಹಕಾರ್ಯವಾಹಿಕ ರಾಷ್ಟ್ರ ಸೇವಿಕ ತಾಲೂಕು ಸಮಿತಿ ಸುಧಾ ಭಟ್ ಕಳೆಕೋಡಿ ಮಾತನಾಡಿದರು. ಪುಳಿಂಚ ಸೇವಾ ಪ್ರತಿಷ್ಠಾನದ ಅಧ್ಯಕ್ಷ, ನ್ಯಾಯವಾದಿ ಶ್ರೀಧರ ಶೆಟ್ಟಿ ಪುಳಿಂಚ, ರೋಟರಿ ಬಿ.ಸಿ.ರೋಡ್ ಸಿಟಿ ಸ್ಥಾಪಕಾಧ್ಯಕ್ಷ ಕೆ. ಸತೀಶ್ ಕುಮಾರ್, ಬಂಟ್ವಾಳ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಭುವನೇಶ್ ಪಚ್ಚಿನಡ್ಕ, ಬಲ್ನಾಡು ಉಲ್ಲಾಳ್ತಿ ದೈವ ಪಾತ್ರಿ ಬಿ. ಕೃಷ್ಣರಾಜ್ ನಂದಾವರ, ಹಿಂಜಾವೇ ಪ್ರಮುಖ ರತ್ನಾಕರ್ ಶೆಟ್ಟಿ ಕಲ್ಲಡ್ಕ, ಕಲ್ಲಡ್ಕ ಬಿಲ್ಲವ ಸಮಾಜ ಸೇವಾ ಸಂಘದ ಅಧ್ಯಕ್ಷ ಚಂದ್ರಶೇಖರ್ ಸಾಲಿಯಾನ್, ದೇವಸ್ಥಾನದ ಆಡಳಿತ ಮೊಕ್ತೇಸರ ಜಯರಾಮ ಹೊಳ್ಳ ನಾಗ್ತಿಮಾರು, ಹೆಕ್ಸ್‌ವೇರ್ ಟೆಕ್ನಾಲಜಿಸ್ ಜಯಪದ್ಮ ಎ.ಬಿ. ಬೆಂಗಳೂರು, ಡಾ. ಧನ್ವಿಶ್ ಪೂರ್ಲಿಪಾಡಿ, ಮೊಡಂಕಾಪು ಸ್ವಾಮಿ ವಿವೇಕಾನಂದ ಯುವಕ ಸಂಘದ ಅಧ್ಯಕ್ಷ ಸುನೀಲ್ ಕುಂದರ್, ಕಲ್ಲಡ್ಕ ಗೇರುಕಟ್ಟೆ ಉಮಾಶಿವ ಕ್ಷೇತ್ರದ ಅಧ್ಯಕ್ಷ ಈಶ್ವರ ಭಟ್ ರಾಕೋಡಿ, ಗಿರೀಶ್ ಸಾಲಿಯಾನ್ ಹೆಗಡೆಬೆಟ್ಟು, ಪಾಣೆಮಂಗಳೂರು ರೈ. ಸೇ. ಸ. ಸಂಘದ ನಿರ್ದೇಶಕಿ ಮೋಹಿನಿ ಜಿ ಶೆಟ್ಟಿ, ಮಮತಾ ಎನ್ ರಂಜಿತ್, ಬೊಂಡಾಲ ಗುರು ಫ್ರೆಂಡ್ಸ್ ನ ಗೌರವಾಧ್ಯಕ್ಷ ಸದಾಶಿವ ಸನಿಲ್, ಅಧ್ಯಕ್ಷ ರಾಜೇಂದ್ರ ಪೂಜಾರಿ ವೇದಿಕೆಯಲ್ಲಿದ್ದರು. ತ್ರಿಷಾ ಅನ್ವಿತಾ ಪ್ರಾರ್ಥಿಸಿ, ನಾಗೇಶ್ ಶೆಟ್ಟಿ ಬೊಂಡಾಲ ಪ್ರಸ್ತಾವನೆಗೈದು ಸ್ವಾಗತಿಸಿದರು, ರಾಜೇಶ್ ಕೊಟ್ಟಾರಿ ಕಲ್ಲಡ್ಕ ಕಾರ್ಯಕ್ರಮ ನಿರೂಪಿಸಿದರು.

ಹಳೆಯ ಕಟಡ ಕೆಡವಿದ ಆರೋಪಕ್ಕೆ ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಪ್ರತ್ಯುತ್ತರ | ಭಕ್ತರ ಅನುಕೂಲಕ್ಕಾಗಿ ಕೆಲಸ ಮಾಡಿದ್ದೇವೆ

ಕಟ್ಟಡ ತೆರವು ಮಾಡಿದ್ದು ಉಳ್ಳಾಲ್ತಿ ಅಮ್ಮ-ದೇವರ ಭೇಟಿ ವ್ಯವಸ್ಥಿತವಾಗಲಿ ಎಂಬ ಉದ್ದೇಶದಿಂದ

ಪುತ್ತೂರು: ನಾವು ಈ ವರ್ಷದ ಜಾತ್ರೋತ್ಸವವನ್ನು ಯಶಸ್ವಿಯಾಗಿ ಮಾಡಿದ್ದೇವೆ. ಈ ಹಿಂದಿನ ವರ್ಷಗಳಿಗಿಂತ ಹೆಚ್ಚಿನ ಜನರು ಈ ವರ್ಷ ಭಾಗವಹಿಸಿದ್ದರು. ಪೇಟೆ ಸವಾರಿ, ರಥ ಸೇವೆ, ಅನ್ನದಾನ, ಪ್ರಸಾದ್ ಹೀಗೆ ಎಲ್ಲಾ ಕಡೆಗಳಲ್ಲೂ ಉತ್ತಮ ವ್ಯವಸ್ಥೆ ಕಲ್ಪಿಸಲಾಗಿದೆ. ಈ ಮಧ್ಯೆ ಹಳೆಯ ಕಟ್ಟಡ ಕೆಡಹಿದ ಆರೋಪ ನಮ್ಮ ಮೇಲೆ ಮಾಡಿದ್ದಾರೆ. ಭಕ್ತಾದಿಗಳಿಗೆ ಅನುಕೂಲ ಮಾಡಿಕೊಡುವ ಒಂದೇ ಉದ್ದೇಶದಿಂದ ಮಾತ್ರ ಇದನ್ನು ಮಾಡಿದ್ದೇವೆ ಎಂದು ಶಾಸಕ ಅಶೋಕ್ ಕುಮಾರ್ ರೈ ಸ್ಪಷ್ಟಪಡಿಸಿದ್ದಾರೆ.

ಸಂಗಮ ಕ್ಷೇತ್ರಕ್ಕೆ 352 ಕೋಟಿ



ಉಪ್ಪಿನಂಗಡಿ ಸಹಸ್ರಲಿಂಗೇಶ್ವರ ದೇವಸ್ಥಾನ ರೂ.352 ಕೋಟಿ ಅಭಿವೃದಿ ಯೋಜನೆಗೆ ಪ್ರಸ್ತಾವನೆ ಸಿದಗೊಂಡಿದೆ. ಈ ಹಿಂದಿನ ಸಂಗಮ ಪ್ರೊಜೆಕ್ಟ್‌ಗೆ ಶೀಘ್ರ ಅನುಮೋದನೆ ಸಿಗಲಿದೆ. ಸಹಸ್ರಲಿಂಗೇಶ್ವರ ದೇವಸ್ಥಾನದ ಅಭಿವೃದಿ, ಪಿಂಡಪ್ರದಾನಕ್ಕೆ ಬೇಕಾದ ವ್ಯವಸ್ಥೆ, ರಸ್ತೆ, ಕೂಡಲಸಂಗಮದಂತೆ ಅಭಿವೃದಿ, ಎರಡು ವರ್ಷದಲ್ಲಿ ಅಭಿವೃದಿ ಮಾಡುವ ಕೆಲಸ ಆಗಲಿದೆ ಎಂದು ಅಶೋಕ್ ಕುಮಾರ್ ರೈ ಹೇಳಿದರು.

ಸೋಮವಾರ ತಮ್ಮ ಕಚೇರಿ ಸಭಾಂಗಣದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ಭಕ್ತಾದಿಗಳಿಗೆ ಉಳ್ಳಾಲ್ತಿ ಅಮ್ಮನವರು ಮತ್ತು ಮಹಾಲಿಂಗೇಶ್ವರ ದೇವರ ಭೇಟಿಯನ್ನು ಯಾವುದೇ ಅಪಾಯವಿಲ್ಲದೆ ವ್ಯವಸ್ಥಿತವಾಗಿ ನೋಡಬೇಕೆಂಬ ಉದ್ದೇಶದಿಂದ ಈ ಕ್ರಮ ಆಗಿದೆಯೇ ವಿನಃ ಬೇರೆನು ಉದ್ದೇಶವಿಲ್ಲ ಎಂದು ಹೇಳಿದರು.

ಕಟ್ಟಡವನ್ನು ಭಕ್ತರು ಕೆಡವಿದಾಗ ನಾವು ಅದನ್ನು ಬೇಡ ಎಂದು ಹೇಳಿಲ್ಲ, ಯಾಕೆಂದರೆ ಉಳ್ಳಾಲ್ತಿ ಅಮ್ಮನವರು ದೇವರ ಭೇಟಿಗೆ ಬರುವಾಗ ಕಳೆದ ವರ್ಷವೇ ಕಿರಿದಾಗ 9 ಅಡಿ ಅಗಲದ ದಾರಿಯಲ್ಲಿ ತುಂಬಾ ಕಷ್ಟ ಆಗಿತ್ತು. ಈ ವರ್ಷ ಅಲ್ಲಿ ಸುಮಾರು 30 ಸಾವಿರಕ್ಕಿಂತಲೂ ಹೆಚ್ಚು ಭಕ್ತರು ಸೇರುವಾಗ ಇನ್ನಷ್ಟು ಕಷ್ಟ ಆಗುವ ಸಾಧ್ಯತೆ ಇತ್ತು. ಮುಂಜಾಗ್ರತೆ ಕ್ರಮವಾಗಿ ಭಕ್ತರೇ ಕಟ್ಟಡ ಕೆಡವಿದ್ದಾರೆ. ಈ ಕುರಿತು ನಾವು ಆರಂಭದಲ್ಲಿ ಜಾಗದ ಮಾಲಕರು ಮತ್ತು ಅವರ ಪರವಾಗಿ ವಾದ ಮಂಡಿಸುವ ಮತ್ತು ನಗರಸಭೆಯ ಪರ ವಾದ ಮಂಡಿಸುವ ವಕೀಲರಲ್ಲಿ ವಿಚಾರವನ್ನು ತಿಳಿದುಕೊಂಡಿದ್ದೇವೆ. ಕಟ್ಟಡಕ್ಕೆ ಈ ಹಿಂದೆಯೇ ಲೋಕೋಪಯೋಗಿ ಇಲಾಖೆ ನಾಟ್ ಫಿಟ್ ಎಂದು ವರದಿ ನೀಡಿದ್ದಾರೆ. ನಗರಸಭೆ ಅಲ್ಲಿನ ಮೂರು ಕಟ್ಟಡಗಳನ್ನು ಜಪ್ತಿ ಮಾಡಿದೆ. ಜಾಗದ ಮಾಲಕತ್ವಕ್ಕೆ ಸುಪ್ರೀಂ ಕೋರ್ಟು ತನಕ ಹೋರಾಟ ನಡೆಯುತ್ತಿದೆ. ಪ್ರಸ್ತುತ ಹೋರಾಟ ಮಾಡುವವರು ಕೂಡಾ ಅಲ್ಲಿರುವ ಕಟ್ಟಡಗಳನ್ನು ತೆರವು ಮಾಡುವಂತೆ ಕೋರ್ಟ್‌ನಲ್ಲಿ ಅಫಿದಾವತ್ ಸಲ್ಲಿಸಿದ್ದಾರೆ. ನಾವು ಅವರ ವಕೀಲರಲ್ಲಿ ಮಾತನಾಡಿದ್ದೇವೆ. ಹೀಗಿರುವಾಗ ಕೆಲವೊಂದು ಮಾಧ್ಯಮದಲ್ಲಿ, ಸಾಮಾಜಿಕ ಜಾಲತಾಣದಲ್ಲಿ ಶಾಸಕರು ದರ್ಪವನ್ನು, ಅಹಂಕಾರವನ್ನು ತೋರಿಸುತ್ತಿದ್ದಾರೆ. ಆ ಜಾಗದಲ್ಲಿ ರಿಯಲ್ ಎಸ್ಟೇಟ್ ಮಾಡಲು ಹೊರಟಿದ್ದಾರೆ ಎಂಬ ಆರೋಪಗಳನ್ನು ನನ್ನ ಮೇಲೆ ಹಾಕುತ್ತಿದ್ದಾರೆ. ಅಲ್ಲಿ ನಮಗೆ ರಿಯಲ್ ಎಸ್ಟೇಟ್ ಆಸಕ್ತಿ ಇಲ್ಲ ಎಂದು ಹೇಳಿದರು.

ನಮಗೂ ಭಕ್ತರು ಹಲವು ಮನವಿ ಮಾಡಿದ್ದಾರೆ. ಉಳ್ಳಾಲ್ತಿ ಮತ್ತು ಮಹಾಲಿಂಗೇಶ್ವರ ಭೇಟಿ ಆಗುವ ಜಾಗ ಬಹಳ ಹಿಂದಿನಿಂದ ಬಂದಿರುವುದು. ಆ ಭೇಟಿಯಾಗುವ ಜಾಗವನ್ನು ಜಾಗದ ಮಾಲಕರಲ್ಲಿ ಮಾತನಾಡಿ, ಅದನ್ನು ದೇವಸ್ಥಾನಕ್ಕೆ ಕೊಡಬೇಕೆನ್ನುವ ಬೇಡಿಕೆ ಇದೆ. ಅವರು ಮನವೊಲಿಸಿ ಅವರೇ 2 ಎಕ್ರೆ ಜಾಗ ದೇವಸ್ಥಾನಕ್ಕೆ ಕೊಡಬಹುದು. ಉಳ್ಳಾಲ್ತಿ ಬರುವ ಜಾಗಕ್ಕೆ ಕಾಂಕ್ರೀಟ್ ರಸ್ತೆ ಮಾಡುವ ಬೇಡಿಕೆ ಇದೆ. ಅದಕ್ಕೆ ಈಗಾಗಲೇ ಹಣ ಇಟ್ಟಿದ್ದೆ. ಆದರೆ, ಅಲ್ಲಿ ಕೆಲವೊಂದು ಅಡೆತಡೆ ಬಂದಿದೆ ಎಂದು ಅಶೋಕ್ ರೈ ಹೇಳಿದರು.

ದೇವಸ್ಥಾನದ ವಿಚಾರದಲ್ಲಿ ಯಾರಾದರೂ ತಪ್ಪು ಮಾಡಿದರೆ ನಮ್ಮಲ್ಲಿ ಬಂದು ಚರ್ಚೆ ಮಾಡಿ ತಿದ್ದುವ ಕೆಲಸ ಮಾಡಿ. ಈ ಹಿಂದೆ ಕೂಡಾ ಕೆರೆಯಲ್ಲಿ ಕಾರಂಜಿ ಮಾಡುವ ಯೋಜನೆ ಮಾಡಿದ್ದೆವು. ಆದರೆ ಸಾರ್ವಜನಿಕರು ಅಲ್ಲಿ ಕಾರಂಜಿ ಮಾಡಿದರೆ ಕೆರೆ ಉತ್ಸವಕ್ಕೆ ತೊಂದರೆ ಆಗುತ್ತದೆ ಬೇರೆ ಕಡೆ ಮಾಡುವಂತೆ ಮಾರ್ಗದರ್ಶನ ನೀಡಿದರು. ಅವರ ಮಾರ್ಗದರ್ಶನ ಸ್ವೀಕರಿಸಿ ಬೇರೆ ಕಡೆ ಮಾಡಲಿದ್ದೇವೆ. ನಮ್ಮ ಉದ್ದೇಶ ಒಂದೇ ಮಹಾಲಿಂಗೇಶ್ವರ ದೇವಸ್ಥಾನ ಅಭಿವೃದ್ಧಿಯಾಗಬೇಕು. ಇಲ್ಲಿಗೆ ಹೊರಗಡೆಯ ಭಕ್ತರು ಬರಬೇಕು. ಆ ಮೂಲಕ ಟೆಂಪಲ್ ಟೂರಿಸಂ ಆಗಬೇಕು. ಆದ್ದರಿಂದ ನೋವು ಆಗುವ ರೀತಿಯಲ್ಲಿ ಸೋಶಿಯಲ್ ಮೀಡಿಯಾ ಪೋಸ್ಟ್ ಹಾಕುವುದನ್ನು ನಿಲ್ಲಿಸಬೇಕು. ಪವಿತ್ರವಾದ ಕ್ಷೇತ್ರದಲ್ಲಿ ಇಂತಹ ಕೆಲಸ ಬೇಡ ಎಂದು ಪುತ್ತೂರು ಶಾಸಕ ಅಶೋಕ್ ಕುಮಾರ್ ರೈ ಹೇಳಿದರು.

ಸುತ್ತ ಮುತ್ತ

ಇಂದು ವಿದ್ಯುತ್ ವ್ಯತ್ಯಯ

ಮಂಗಳೂರು: ಮಾಸ್ತಿಕಟ್ಟೆ, ಅಬ್ಬಕ್ಕ ಸರ್ಕಲ್, ಉಳ್ಳಾಲ, ಸುಂದರಿಭಾಗ್, ಸಮ್ಮರ್ ಸ್ಯಾಂಡ್, ಮುಕ್ಕಚೇರಿ, ಕೈಕೋ, ಹಿಲೆರಿಯ ನಗರ, ಸುಭಾಷ್ ನಗರ ಉಳ್ಳಾಲ, ಹೈದರಾಲಿ ನಗರ, ಸುಲ್ತಾನ್ ನಗರ, ಬಾಬು ಕಂಪೌಂಡು, ಬಾಬುಕಟ್ಟೆ, ಹಿರಾನಗರ, ನಿತ್ಯಾಧರ ನಗರ, ಪ್ರಕಾಶ್ ನಗರ, ಪಂಡಿತ್ ಹೌಸ್, ಶಿವಾಜಿ ನಗರ, ಮುಂಡೋಳಿ, ಸೇವಂತಿಗುಡ್ಡೆ, ಸೇವಂತಿಗುತ್ತು, ಗಾಂಡಿ, ವಿಜೇತನಗರ, ತಾರಿಪಡ್ಪು, ದಾರಂದಬಾಗಿಲು, ಹೊಸಗದ್ದೆ, ಬಾಬ ಲಾಡ್ಜ್, ಮೇಲಂಗಡಿ, ದರ್ಗಾ, ಮಿಲ್ಲತ್ ನಗರ, ಬಸ್ತಿಪಡ್ಪು, ಉಳಿಯ ಗೋಲಿಯಡಿ, ಸೇನೆರೆ ಬೈಲು, ಉಳಿಯ ಟೆಂಪಲ್, ಮಂಜನಕುದ್ರು, ಮೊಗವೀರಪಟ್ನ, ಕೋಡಿ ಕೋಟೆಪುರ, ಸಿ ರೋಡ್ ಕೋಟೆಪುರ, ಬರಕ, ಕೋಟೆಪುರ, ಸುಬ್ಬುಗೋರಿ, ಬಂಡಿಕೊಟ್ಯ, ಪಂಡೇಲುಪಕ್ಕ, ಕನೀರ್ ತೋಟ, ಬಗಂಬಿಲ, ಚೇತನನಗರ, ಕೊಲ್ಯ, ಶಾಂತಿಭಾಗ್, ಕುಂಪಲ, ಮೂರುಕಟ್ಟೆ, ಚಿತ್ರಾಂಜಲಿ ನಗರ, ಆಶ್ರಯ ಕಾಲೊನಿ, ಕುಜುಮಗುಡ್ಡೆ, ಕೋಟೆಪುರ ಇಂಡಸ್ಟ್ರಿಯಲ್ ಏರಿಯಾ, ಆಡಂಕುದ್ರು, ಕಲ್ಲಾಪು, ರಾಣಿಪುರ, ತೊಕ್ಕೊಟ್ಟು ಜಂಕ್ಷನ್, ಕಲ್ಲಾಪು ಪಟ್ಲ, ನಾಗನಕಟ್ಟೆ, ಹಿದಾಯತ್ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಏ.28ಕ್ಕೆ ಬೆಳಿಗ್ಗೆ 10ರಿಂದ ಸಂಜೆ 5ರವರೆಗೆ ವಿದ್ಯುತ್ ನಿಲುಗಡೆ ಮಾಡಲಾಗುತ್ತದೆ.

ಅಕ್ಷರ ಭಾರತಿ ವಿದ್ಯಾಲಯ: ಶೇ.100 ಫಲಿತಾಂಶ



ಬಂಟ್ವಾಳ: ಪ್ರಸ್ತುತ ಸಾಲಿನ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಬಂಟ್ವಾಳ ತಾಲೂಕಿನ ಆಲದಪದವು ಅಕ್ಷರ ಭಾರತಿ ವಿದ್ಯಾಲಯವು ಶೇ.100 ಫಲಿತಾಂಶ ದಾಖಲಿಸಿದೆ. ವಿದ್ಯಾರ್ಥಿ ಸಾತ್ವಿಕ್ ಜಿ. ಶೆಟ್ಟಿ 625 ರಲ್ಲಿ 612 ಅಂಕ ಗಳಿಸಿ 97.92% ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿರುತ್ತಾರೆ. ಈತ ಕಾವಳಮೂಡುರು ಗ್ರಾಮದ ಕಾರಿಂಜ ಗ್ರಾಮದ ಬೆಟ್ಟು ಗೋಪಾಲ ಶೆಟ್ಟಿ ಮತ್ತು ಸುಮಲತ ಶೆಟ್ಟಿ ದಂಪತಿಯ ಪುತ್ರ.

ಯಜ್ಞೇಶ್‌ಗೆ ಶೇ. 92 ಅಂಕ



ಮಂಗಳೂರು: ಈ ಬಾರಿಯ ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಉಳ್ಳಾಲ ತಾಲೂಕಿನ ಕೊಣಾಜೆ ಪದವು ಸರಕಾರಿ ಪ್ರೌಢಶಾಲೆಯ ವಿದ್ಯಾರ್ಥಿ ಯಜ್ಞೇಶ್ 573 ಅಂಕಗಳೊಂದಿಗೆ ಶೇ.92 ಫಲಿತಾಂಶ ಪಡೆದು ಕೊಂಡಿದ್ದಾನೆ. ಕೊಣಾಜೆ ಯಶವಂತಿಪುರ ಮುಚ್ಚಿಲಕೋಡಿ ನಿವಾಸಿ ಮಾಲತಿ ಮತ್ತು ಉಮೇಶ್ ಶೆಟ್ಟಿಗಾರ್ ಅವರ ಪುತ್ರನಾಗಿರುವ ಈತ ಕನ್ನಡದಲ್ಲಿ 122, ಹಿಂದಿ 97, ಸಮಾಜ ಶಾಸ್ತ್ರ 92, ವಿಜ್ಞಾನ 88, ಇಂಗ್ಲಿಷ್ 87 ಮತ್ತು ಗಣಿತದಲ್ಲಿ 87 ಅಂಕ ಪಡೆದುಕೊಂಡಿದ್ದಾನೆ.

ಪಂಜದಗುತ್ತು ಶಾಂತಾರಾಮ ಶೆಟ್ಟಿ ಶಾಲೆ: ಶೇ.100 ಫಲಿತಾಂಶ



ಕಿನ್ನಿಗೋಳಿ: ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಪಕ್ಷಿಕೆರೆ ಪಂಜದ ಗುತ್ತು ಶಾಂತಾರಾಮ ಶೆಟ್ಟಿ ಸರಕಾರಿ ಪ್ರೌಢಶಾಲೆಯಿಂದ ಹಾಜರಾದ ಎಲ್ಲಾ ವಿದ್ಯಾರ್ಥಿಗಳು ಕೂಡ ಉತ್ತೀರ್ಣರಾಗುವ ಮೂಲಕ ಸಂಸ್ಥೆಯು 100 ಶೇಕಡ ಫಲಿತಾಂಶ ದಾಖಲಿಸಿದೆ ಎಂದು ಮುಖ್ಯೋಪಾಧ್ಯಾಯರಾದ ಶರ್ಲಿ ಸುಮಾಲಿನಿ ತಿಳಿಸಿದರು. ಸಮೀಕ್ಷಾ 588 ಅಂಕಗಳನ್ನು ಪಡೆದು ಸಂಸ್ಥೆಗೆ ಪ್ರಥಮ ಸ್ಥಾನ ಪಡೆದಿದ್ದಾರೆ ಉಳಿದಂತೆ 6 ವಿದ್ಯಾರ್ಥಿಗಳು ವಿಶಿಷ್ಟ ಶ್ರೇಣಿಯಲ್ಲಿ, 12 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದು ಸಂಸ್ಥೆಯ ಗುಣಮಟ್ಟದ ಫಲಿತಾಂಶ 'ಎ' ಆಗಿದ್ದು 89.33 ಬಂದಿದೆ. ವಿದ್ಯಾರ್ಥಿಗಳಾದ ಸಮೀಕ್ಷಾ 94.08, ಕಿರಣ್ 88.64, ಪೂರ್ವಿ 87.52, ರಿಷಿಕ್ 86.72, ಸಂಜಯ್ 85.12, ಅನುಷ್ಕಾ 85 ಅಂಕ ಗಳಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ವಿಳಂಬ | ಸರ್ಕಾರದ ಧೋರಣೆ ವಿರುದ್ಧ ಬಿಜೆಪಿ ಪ್ರತಿಭಟನೆ

ಆರ್ಥಿಕ ದಿವಾಳಿತನದಿಂದ ಚುನಾವಣೆಗೆ ಹಿಂದೇಟು: ರಂಜನ್



> **ಜಾಣ ಕುರುಡು ಪ್ರದರ್ಶನ**
> ರಾಜ್ಯ ಸರ್ಕಾರದ ಬಳಿ ಹಣವಿಲ್ಲ, ಜಿಲ್ಲೆಯ ರಸ್ತೆಗಳು ಗುಂಡಿ ಬಿದ್ದು ಹಾಳಾಗಿದೆ. ಆದರೂ ಗುಂಡಿ ಮುಚ್ಚದೆ ಜಾಣ ಕುರುಡು ಪ್ರದರ್ಶಿಸಲಾಗುತ್ತಿದೆ.
> • ಎಂ.ಪಿ. ಅಪ್ಪಚ್ಚು ರಂಜನ್, ಮಾಜಿ ಸಚಿವ

ಸೋಮವಾರಪೇಟೆ: ಆರ್ಥಿಕವಾಗಿ ದಿವಾಳಿಯಾಗಿರುವ ರಾಜ್ಯ ಸರ್ಕಾರ ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ಹಿಂದೇಟು ಹಾಕುತ್ತಿದೆ ಎಂದು ಮಾಜಿ ಸಚಿವ ಎಂ.ಪಿ. ಅಪ್ಪಚ್ಚು ರಂಜನ್ ಆರೋಪಿಸಿದ್ದಾರೆ.

ಸ್ಥಳೀಯ ಸಂಸ್ಥೆಗಳ ಚುನಾವಣೆ ನಡೆಸಲು ವಿಳಂಬ ಧೋರಣೆ ಅನುಸರಿಸುತ್ತಿರುವ ರಾಜ್ಯ ಸರ್ಕಾರದ ವಿರುದ್ಧ ಸೋಮವಾರಪೇಟೆ ಮಂಡಲ ಬಿಜೆಪಿ ವತಿಯಿಂದ ಪಟ್ಟಣದ ತಾಲೂಕು ಪಂಚಾಯತ್ ಎದುರು ಆಯೋಜಿಸಿದ್ದ ಪ್ರತಿಭಟನೆಯಲ್ಲಿ ಭಾಗವಹಿಸಿದ ಅವರು, ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮುಖ್ಯಮಂತ್ರಿ ಕುರ್ಚಿ ವಿಚಾರದಲ್ಲಿಯೇ ಬಿಝಿಯಾಗಿದೆ. ಬಿಟ್ಟಿ ಭಾಗ್ಯಗಳಿಂದ ಆರ್ಥಿಕವಾಗಿ ದಿವಾಳಿಯಾಗಿದ್ದು, ಕೆಎಸ್‌ಆರ್‌ಟಿಸಿ ಸೇರಿದಂತೆ ಹಲವು ಇಲಾಖೆಯ ಸಿಬ್ಬಂದಿಗಳಿಗೆ ಸಂಬಳ ನೀಡಲು ಹಣವಿಲ್ಲದಂತಾಗಿದೆ ಎಂದು ಆರೋಪಿಸಿದರು.

ಗ್ರಾ.ಪಂ. ಅವಧಿ ಮುಗಿದಿದೆ. ತಾಲೂಕು ಪಂಚಾಯತ್ ಅವಧಿ ಮುಗಿದು ಹಲವು ವರ್ಷಗಳಾಗಿವೆ. ಆದರೂ ಸರ್ಕಾರ ಸುಮ್ಮನೆ ಕುಳಿತಿದೆ. ಇವರಿಗೆ ಚುನಾವಣೆ ನಡೆಸಲು ಹಣವಿಲ್ಲ ಆದಕ್ಕೆ ಎಂದು ವ್ಯಂಗ್ಯವಾಡಿದರು.

ಮಾಜಿ ಎಂಎಲ್ಸಿ ಎಸ್. ಜಿ.ಮೇದಪ್ಪ ಮಾತನಾಡಿ, ಹಿಂದಿನ ಸರ್ಕಾರಗಳು ಜನಸಾಮಾನ್ಯರಿಗೆ ಅಧಿಕಾರ ನೀಡುವ ನಿಟ್ಟಿನಲ್ಲಿ ಅಧಿಕಾರ ವಿಕೇಂದ್ರೀಕರಣ ಮಾಡಿದ್ದವು. ಇಂದಿನ ಸರ್ಕಾರ ಚುನಾವಣೆ ನಡೆಸದೆ ಜನವಿರೋಧಿ ನೀತಿ ಅನುಸರಿಸುತ್ತಿದೆ ಎಂದು ಟೀಕಿಸಿದರು. ಕೊಡಗು ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಹಾಗೂ ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಭಾರತೀಶ್ ಮಾತನಾಡಿ, ರಾಜ್ಯದಲ್ಲಿ ಸರ್ಕಾರ ಇದೆಯೋ ಇಲ್ಲವೋ ಎಂಬ ಅನುಮಾನ ಜನರಲ್ಲಿ ಕಾಡತೊಡಗಿದೆ. ಮತ್ತೊಂದೆಡೆ ಸರ್ಕಾರಿ ಅಧಿಕಾರಿಗಳು ಸಮರ್ಪಕವಾಗಿ ಕರ್ತವ್ಯ ನಡೆಸದಿರುವುದರಿಂದ ರಾಜ್ಯದಲ್ಲಿ ಜನಸಾಮಾನ್ಯರು ಸಂಕಷ್ಟಕ್ಕೆ ಒಳಗಾಗಿದ್ದಾರೆ ಎಂದು ದೂರಿದರು.

ಮಂಡಲ ಬಿಜೆಪಿ ಅಧ್ಯಕ್ಷ ಗೌತಮ್ ಮಾತನಾಡಿ, ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನಂಬಿಕೆ ಕಳೆದುಕೊಂಡಿರುವ ರಾಜ್ಯ ಸರ್ಕಾರ ಜನರ ಅಧಿಕಾರ ವಿಕೇಂದ್ರೀಕರಣದ ಹಕ್ಕನ್ನು ಕಸಿದುಕೊಂಡಿದೆ ಎಂದರು.

ಸೋಮವಾರ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿರಬೇಕು. ಅಲ್ಲದೆ ಪ್ರತಿಭಟನೆ ನಡೆಸುತ್ತಿದ್ದರೂ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿ ಕಚೇರಿಯಲ್ಲಿಲ್ಲದೆ ದರ್ಪ ತೋರಿದ್ದಾರೆ. ಮುಂದೆ ಹೀಗಾದರೆ ಕಚೇರಿಗೆ ಬೀಗ ಜಡಿದು, ಉಗ್ರ ಹೋರಾಟ ನಡೆಸಬೇಕಾಗುತ್ತದೆ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆ ಸಂದರ್ಭ ಜಿಲ್ಲಾ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಮಹೇಶ್ ತಿಮ್ಮಯ್ಯ, ಜಿಲ್ಲಾ ಬಿಜೆಪಿ ಉಪಾಧ್ಯಕ್ಷ ವಿ.ಕೆ.ಲೋಕೇಶ್, ಮನು ಕುಮಾರ್ ರೈ, ಅನಂತ್ ಕುಮಾರ್, ಮಂಡಲ ಬಿಜೆಪಿ ಮಹಿಳಾ ಘಟಕದ ಅಧ್ಯಕ್ಷೆ ಕವಿತಾ ವಿರೂಪಾಕ್ಷ, ಉಪಾಧ್ಯಕ್ಷೆ ಸವಿತಾ ಸತೀಶ್, ಮಂಡಲ ಬಿಜೆಪಿ ಹಿಂದುಳಿದ ವರ್ಗದ ಅಧ್ಯಕ್ಷ ಸುನಿಲ್, ಎಸ್.ಸಿ.ಮೋರ್ಚಾ ಅಧ್ಯಕ್ಷ ರಾಮಕೃಷ್ಣ, ಯುವ ಮೋರ್ಚಾ ಅಧ್ಯಕ್ಷ ಮೋಹಿತ್, ಮಂಡಲ ಬಿಜೆಪಿ ಕಾರ್ಯದರ್ಶಿ ಇಂದಿರಾ ಮೋನಪ್ಪ, ಮೋಹಿತ್ ರಾಜ್, ದರ್ಶನ್ ಮುಂತಾದವರು ಹಾಜರಿದ್ದರು.

ಉಳ್ಳಾಲ ಭಗವತಿ ದೇವಸ್ಥಾನದ ಆವರಣದಲ್ಲಿ ಮನ್‌ಕೀ ಬಾತ್ ವೀಕ್ಷಣೆ



ಪುತ್ತೂರು: ಪ್ರಧಾನಿ ನರೇಂದ್ರ ಮೋದಿಜೀಯವರು ಪ್ರಸ್ತುತಪಡಿಸಿದ 133ನೇ ಸಂಚಿಕೆಯ ಮನ್ ಕೀ ಬಾತ್ ಕಾರ್ಯಕ್ರಮವನ್ನು ವಿಧಾನ ಪರಿಷತ್ತಿನ ಶಾಸಕ ಕಿಶೋರ್ ಕುಮಾರ್ ಪುತ್ತೂರು ಅವರು ಭಾರತೀಯ ಜನತಾ ಪಕ್ಷದ ವಿವಿಧ ಪದಾಧಿಕಾರಿಗಳೊಂದಿಗೆ ಮಂಗಳೂರಿನ ಬೂತ್ ಸಂಖ್ಯೆ 24ರಲ್ಲಿ ಉಳ್ಳಾಲ ಭಗವತಿ ದೇವಸ್ಥಾನದ ಆವರಣದಲ್ಲಿ ವೀಕ್ಷಿಸಿದರು

ಈ ಸಂದರ್ಭದಲ್ಲಿ ಮಂಡಲ ಅಧ್ಯಕ್ಷ ಜಗದೀಶ್ ಆಳ್ವ ಕುವೆತ್ತಬೈಲ್, ಮಂಡಲ ಪ್ರಧಾನ ಕಾರ್ಯದರ್ಶಿ ದಯಾನಂದ ತೊಕ್ಕೋಟ್ಟು, ಜಿಲ್ಲಾ ಕಾರ್ಯದರ್ಶಿ ಧನಲಕ್ಷ್ಮಿ ಗಟ್ಟಿ, ಮಂಡಲ ಉಪಾಧ್ಯಕ್ಷರಾದ ರವಿಶಂಕರ್ ಸೋಮೇಶ್ವರ, ಮಂಡಲ ಮಹಿಳಾಮೋರ್ಚಾ ಅಧ್ಯಕ್ಷರಾದ ಮಾಧವಿ ಉಳ್ಳಾಲ್, ಮಂಡಲ ಯುವಮೋರ್ಚಾ ಅಧ್ಯಕ್ಷ ಮುರಳೀಧರ ಕೋಣಾಜೆ, ಮಂಡಲ ಸಹಕಾರ ಪ್ರಕೋಷ್ಠ ಸಂಚಾಲಕರಾದ ಆನಂದ ಶೆಟ್ಟಿ ಭಟ್ನಗರ, ಶಕ್ತಿಕೇಂದ್ರ ಪ್ರಮುಖರಾದ ಮನ್ವಿತ್ ಕಾಪಿಕಾಡ್, ಕಿರಣ್ ಧರ್ಮನಗರ, ಯುವಮೋರ್ಚಾ ಪದಾಧಿಕಾರಿಗಳು, ಮಹಿಳಾ ಮೋರ್ಚಾ ಪದಾಧಿಕಾರಿಗಳು, ಬೂತ್ ಅಧ್ಯಕ್ಷರು, ಪ್ರಧಾನ ಕಾರ್ಯದರ್ಶಿ, ವಿಎಚ್‌ಪಿ ಪ್ರಮುಖರಾದ ವಸಂತ ಉಳ್ಳಾಲ್ ಹಾಗೂ ಮಹಿಳಾ ಪ್ರತಿನಿಧಿಗಳು ಉಪಸ್ಥಿತರಿದ್ದರು. ಮನೆಯ ಯಜಮಾನರು ಹಾಗೂ ಉಳ್ಳಾಲ ಭಗವತಿ ದೇವಸ್ಥಾನದ ಪ್ರಧಾನ ಅರ್ಚಕರಾದ ಮಂಜಪ್ಪ ಕಾರ್ನವರ್ ಉಪಸ್ಥಿತರಿದ್ದರು.

ರಾಮಚಂದರ್ ಬೈಕಂಪಾಡಿ ಅವರಿಗೆ ಶ್ರದ್ಧಾಂಜಲಿ, ನುಡಿನಮನ ಕಾರ್ಯಕ್ರಮ



ಸುರತ್ಕಲ್: ಕವಿ, ಸಾಹಿತಿ, ನಾಟಕ ಕಲಾವಿದ, ರಾಜಕೀಯ ಮುಖಂಡ ರಾಮಚಂದರ್ ಬೈಕಂಪಾಡಿ ಅವರಿಗೆ ಶ್ರದ್ಧಾಂಜಲಿ ಹಾಗೂ ನುಡಿ ನಮನ ಸಭೆ ಬೈಕಂಪಾಡಿಯಲ್ಲಿ ಭಾನುವಾರ ಜರಗಿತು.

ನಾಟಕ ರಂಗ ಹಾಗೂ ಸಾಹಿತ್ಯ ಕ್ಷೇತ್ರಕ್ಕೆ ಇವರ ಕೊಡುಗೆಯನ್ನು ಕಲಾವಿದರು ಸ್ಮರಿಸಿಕೊಂಡರೆ, ರಾಜಕೀಯ ಕ್ಷೇತ್ರದಲ್ಲಿ ಹಾಗೂ ಮೊಗವೀರ ಸಮುದಾಯಕ್ಕೆ ಅವರ ವಿಶೇಷ ಸೇವಕಾರ್ಯಗಳನ್ನು ಗಣ್ಯರು, ಮೊಗವೀರ ಸಮುದಾಯದ ಪ್ರಮುಖರು ಸ್ಮರಿಸಿಕೊಂಡು ನುಡಿನಮನ ಸಲ್ಲಿಸಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರ ಆತ್ಮೀಯರಾಗಿ ಅವರ ವಿಶ್ವಾಸಕ್ಕೆ ಪಾತ್ರರಾಗಿ ಮೀನುಗಾರಿಕಾ ನಿಗಮ ಮಂಡಳಿ ಅಧ್ಯಕ್ಷ ಸ್ಥಾನ ಪಡೆದು ಈ ಮೂಲಕ ಹೆಚ್ಚಿನ ಅಭಿವೃದ್ಧಿಗೆ ಶ್ರಮಿಸಿದ್ದರು. ನಾಟಕ ರಚನೆ, ನಿರ್ದೇಶನ, ಸ್ವತಃ ನಟಿಸಿ ಪ್ರದರ್ಶನ ನೀಡಿದ್ದರು. ತುಳು ಅಕಾಡೆಮಿಯಲ್ಲಿ ಸಕ್ರಿಯ ರಾಗಿದ್ದರು. ನುಡಿ ನಮನ ಸಭೆಯಲ್ಲಿ ದಕ್ಷಿಣ ಕನ್ನಡ ಜಿಲ್ಲಾ ಸಂಸದರಾದ ಬ್ರಿಜೇಶ್ ಚೌಟ, ದಕ್ಷಿಣ ಕನ್ನಡ ಜಿಲ್ಲಾ ಬಿಜೆಪಿ ಅಧ್ಯಕ್ಷ ಸತೀಶ್ ಕುಂಪಲ, ಮಾಜಿ ಸಚಿವರಾದ ಕೃಷ್ಣ ಜೆ. ಪಾಲೇಮಾರ್, ಮಂಗಳೂರು ಉತ್ತರ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ವೈ. ಭರತ್ ಶೆಟ್ಟಿ, ಮಾಜಿ ಶಾಸಕರಾದ ಲಾಲಾಜಿ ಆರ್. ಮೆಂಡನ್, ಮೋಹಿದೀನ್ ಭಾವ, ನಾಟಕ ರಂಗದ ಕಲಾವಿದರಾದ ಕಾಸರಗೋಡು ಚಿನ್ನ, ಶಿವರಾಂ ಪಣಂಬೂರು, ಚಿದಂಬರ ಬೈಕಂಪಾಡಿ, ಜಯಕೃಷ್ಣ ಪರಿಸರ ಪ್ರೇಮಿ ಸಂಘಟನೆಯ ಜಯಕೃಷ್ಣ ವಿವಿಧ ಮೊಗವೀರ ಮಹಾಸಭಾ ಅಧ್ಯಕ್ಷರು ಪದಾಧಿಕಾರಿಗಳು, ಗುರಿಕಾರರು ರಾಮಚಂದ್ರ ಬೈಕಂಪಾಡಿ ಅವರ ಹಿತೈಷಿಗಳು ಅಭಿಮಾನಿಗಳು, ಕಲಾವಿದರು ಉಪಸ್ಥಿತರಿದ್ದರು.

ಎಳತ್ತೂರು ಕ್ಷೇತ್ರ: ಹಗಲು ರಥೋತ್ಸವ



ಕಿನ್ನಿಗೋಳಿ: ಎಳತ್ತೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದಲ್ಲಿ ವರ್ಷಾವಧಿ ಜಾತ್ರಾ ಮಹೋತ್ಸವದ ಅಂಗವಾಗಿ ಸೋಮವಾರ ಶ್ರೀ ದೇವರ ಹಗಲು ರಥೋತ್ಸವ ನಡೆಯಿತು.

ಕ್ಷೇತ್ರದ ತಂತ್ರಿ ವೇದಮೂರ್ತಿ ನರಹರಿ ತಂತ್ರಿಗಳ ನೇತೃತ್ವದಲ್ಲಿ ವಿಶೇಷ ಪ್ರಾರ್ಥನೆ ನಡೆದು ವಿವಿಧ ವಾದ್ಯಗೋಷಗಳೊಂದಿಗೆ ಪಲ್ಲಕ್ಕಿಯಲ್ಲಿ ಶ್ರೀ ದೇವರು ರಥಾರೋಹಣಕ್ಕೆ ತೆರಳಿ ಹಗಲು ರಥೋತ್ಸವ ನಡೆಯಿತು. ಮಧ್ಯಾಹ್ನ ಮಹಾ ಅನ್ನಸಂತರ್ಪಣೆ, ರಾತ್ರಿ ಶ್ರೀ ದೇವರ ಉತ್ಸವ ಬಲಿ, ಭೂತಬಲಿ, ಕವಾಟ ಬಂಧನ ನಡೆಯಿತು. ಕ್ಷೇತ್ರದಲ್ಲಿ ಮಂಗಳವಾರ ಬೆಳಿಗ್ಗೆ ಕವಾಟೋದ್ಘಾಟನೆ, ಪ್ರಸಾದ ವಿತರಣೆ, ತುಲಾ ಭಾರ ಸೇವೆ, ರಾತ್ರಿ ಮಹಾ ರಥೋತ್ಸವ, ಸುಡುಮದ್ದು ಪ್ರದರ್ಶನ, ಧ್ವಜಾವರೋಹಣ ನಡೆಯಲಿದೆ.

ಕಟೀಲಿನಲ್ಲಿ ವಸಂತ ವೇದ ಶಿಬಿರ



ಕಟೀಲು: ಧಾರ್ಮಿಕ ಆಚರಣೆಗಳ ಜ್ಞಾನವನ್ನು ನೀಡುವ ಕೆಲಸ ನಿರಂತರವಾಗಬೇಕು ಎಂದು ಮೈಸೂರು ವಿವಿಯ ನಿವೃತ್ತ ಪ್ರಾಧ್ಯಾಪಕ ಡಾ. ಗೋಪಾಲ ಮರಾಠೆ ಹೇಳಿದರು.

ಅವರು ಕಟೀಲು ದೇಗುಲದಲ್ಲಿ ನಡೆಯುವ ವಸಂತ ವೇದ ಶಿಬಿರ ಉದ್ಘಾಟಿಸಿ, ಶುಭಹಾರೈಸಿದರು. ನಿವೃತ್ತ ಉಪನ್ಯಾಸಕ ಡಾ. ಕೆ. ನಾರಾಯಣ ಭಟ್, ಕಟೀಲು ದೇಗುಲದ ಅರ್ಚಕ ಶ್ರೀ ಹರಿನಾರಾಯಣ ದಾಸ ಆಸ್ರಣ್ಣ, ವಸಂತ ವೇದ ಶಿಬಿರದ ಪ್ರಾಯೋಜಕ ಸಂಜೀವನಿ ಟ್ರಸ್ಟ್‌ನ ಡಾ. ಸುರೇಶ್ ರಾವ್, ಸಂಸ್ಕೃತ ಪ್ರಾಧ್ಯಾಪಕ ಡಾ. ಪದ್ಮನಾಭ ಮರಾಠೆ, ಶ್ರೀವತ್ಸ ಮತ್ತಿತರರಿದ್ದರು.

ಕೋಟ ಕಾರಂತ ಥೀಮ್ ಪಾರ್ಕ್‌ಗೆ ಮತ್ತಷ್ಟು ಮೆರಗು ತಂದ ಕೋಳಿ ಹುಂಜ



> **ವಿದ್ಯಾರ್ಥಿಗಳು ಖುಷ್!**
> ಕೋಳಿ ಹುಂಜ ಕಲಾಕೃತಿಯನ್ನು ಕಂಡು ವಿದ್ಯಾರ್ಥಿಗಳು ಸಂತಸ ಪಟ್ಟರು. ಅಲ್ಲದೇ ಈ ಕಲಾಕೃತಿ ಪ್ರವಾಸಿಗರನ್ನು ಸೆಳೆಯುತ್ತಿದೆ.

ಕೋಟ: ಇಲ್ಲಿನ ಕೋಟದ ಕಾರಂತ ಥೀಮ್ ಪಾರ್ಕಿನ ಇನ್ನಷ್ಟು ಮೆರಗು ಹೆಚ್ಚಿಸುವ ನಿಟ್ಟಿನಲ್ಲಿ ಆಕರ್ಷಕ ಕೋಳಿ ಹುಂಜ ಕಲಾಕೃತಿಯನ್ನು ಶ್ರೀ ಕ್ಷೇತ್ರ ಅಮೃತೇಶ್ವರಿ ಕ್ಷೇತ್ರದ ಧರ್ಮದರ್ಶಿ ಆನಂದ ಸಿ. ಕುಂದರ್ ಅವರು ಲೋಕಾರ್ಪಣೆಗೈದರು.

ಇದೇ ಸಂದರ್ಭ ಉಪಸ್ಥಿತರಿದ್ದ ಸಂಸದ ಕೋಟ ಶ್ರೀನಿವಾಸ ಪೂಜಾರಿ ಮಾತನಾಡಿ, ಇಂತಹ ಕಲಾಕೃತಿಗಳು ಥೀಮ್ ಪಾರ್ಕಿನ ಮೆರಗನ್ನು ಇನ್ನಷ್ಟು ಹೆಚ್ಚಿಸಲಿ ಎಂದು ಶುಭಹಾರೈಸಿದರು.

ಮುಖ್ಯ ಅಭ್ಯಾಗತರಾಗಿ ನಿವೃತ್ತ ಯೋಧ ಯೋಗೀಶ್ ಪಡುಕರೆ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ನೀಲಾವರ ಸುರೇಂದ್ರ ಅಡಿಗ, ಗೌರವ ಕಾರ್ಯದರ್ಶಿ ಸುಬ್ರಹ್ಮಣ್ಯ ಶೆಟ್ಟಿ, ಕೋಟತಟ್ಟು ಗ್ರಾಮ ಪಂಚಾಯತ್ ಪ್ರಭಾರ ಪಿಡಿಓ ರವೀಂದ್ರ ರಾವ್, ವಾಸು ಪೂಜಾರಿ, ಸುಬ್ರಾಯ ಆಚಾರ್, ರಾಜೀವ ಕುಲಾಲ್, ಹಾಗೂ ಶಿಬಿರದ 5 ತಂಡಗಳ ಮುಖ್ಯಸ್ಥರು ಉಪಸ್ಥಿತರಿದ್ದರು. ನರೇಂದ್ರ ಕುಮಾರ್ ಕೋಟ ಸ್ವಾಗತಿಸಿದರು, ಸತೀಶ ವಡ್ಡರ್ಸೆ ವಂದಿಸಿದರು, ಅನ್ವಿತಾ ಕಾರ್ಯಕ್ರಮವನ್ನು ನಿರೂಪಿಸಿದರು.

ಸುಬ್ರಹ್ಮಣ್ಯ ಶ್ರೀಮಠದಲ್ಲಿ ಇಂದಿನಿಂದ 5 ದಿನ ನೃಸಿಂಹ ಜಯಂತಿ ಮಹೋತ್ಸವ

ಸುಬ್ರಹ್ಮಣ್ಯ: ಜಗದ್ಗುರು ಶ್ರೀ ಮಧ್ವಾಚಾರ್ಯ ಮಹಾಸಂಸ್ಥಾನಮ್‌ನ ಸಂಪುಟ ನರಸಿಂಹ ಸ್ವಾಮಿ ಶ್ರೀ ಸುಬ್ರಹ್ಮಣ್ಯ ಮಠದಲ್ಲಿ ನೃಸಿಂಹ ಜಯಂತಿ ಮಹೋತ್ಸವ ಇಂದಿನಿಂದ ಮೇ 2ರ ತನಕ ಮಹೋತ್ಸವವು ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನತೀರ್ಥ ಸ್ವಾಮೀಜಿಗಳ ನೇತೃತ್ವದಲ್ಲಿ ಉತ್ಸವಾಧಿಗಳೊಂದಿಗೆ ವೇದ, ಉಪನಿಷತ್ತು, ಭಾಷ್ಯ ಪಾರಾಯಣ, ಸಂಕೀರ್ತನೆ, ಉಪನ್ಯಾಸ, ಪ್ರವಚನ, ಸಾಂಸ್ಕೃತಿಕ ಮತ್ತು ಶ್ರೀ ಆನಂದ ತೀರ್ಥ ತತ್ವದರ್ಶಿನಿ ಸಭಾ ನೆರವೇರಲಿದೆ.

ಮೇ 1ಕ್ಕೆ ಪ್ರಾತಃಕಾಲ ವ್ಯಾಸ ಪೂರ್ಣಿಮಾ ಮತ್ತು ವ್ಯಾಸಪೂಜೆ ನಡೆಯಲಿದೆ. ಬಳಿಕ ಶ್ರೀ ನೃಸಿಂಹ ದೇವರ ಮಹಾರಥೋತ್ಸವ ನೆರವೇರಲಿದೆ. ನಂತರ ವಸಂತ ಪೂಜೆ, ರಾತ್ರಿ ಡೋಲೋತ್ಸವ ನಡೆಯಲಿದೆ.

ಇಂದು ವೇದವ್ಯಾಸ ಜಯಂತಿ

ಇಂದು ವಸಂತ ದ್ವಾದಶಿಯ ದಿನ ಗಣಹೋಮ, ನರಸಿಂಹ ಹೋಮ, ವೇದವ್ಯಾಸ ಜಯಂತಿ ಮತ್ತು ವಸಂತ ಪೂಜೆ, ನೆರವೇರಲಿದೆ. ಬುಧವಾರ ವಸಂತ ಪೂಜೆ, ಗುರುವಾರ ಶ್ರೀದೇವರಿಗೆ ಮಹಾಭಿಷೇಕ ನೆರವೇರಲಿದೆ. ರಾತ್ರಿ ಹೊರಾಂಗಣ ಮತ್ತು ರಾಜಬೀದಿಯಲ್ಲಿ ವಿಮಾನೋತ್ಸವ, ವಸಂತ ಪೂಜೆ, ಡೋಲೋತ್ಸವ ನೆರವೇರಲಿದೆ. ಶನಿವಾರ ಕುಮಾರಧಾರೆಯಲ್ಲಿ ಅವಭೃತೋತ್ಸವ, ವಸಂತ ಪೂಜೆ ನೆರವೇರಲಿದೆ.

ಗುರುವಾರ ಬೆಳಗ್ಗೆ 11ರಿಂದ ಆನಂದತೀರ್ಥ ತತ್ವದರ್ಶಿನೀ ಸಭಾ ನಡೆಯಲಿದೆ. ಇದರಲ್ಲಿ ಅನುಗ್ರಹ ಸಂದೇಶವನ್ನು ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನತೀರ್ಥ ಶ್ರೀಪಾದರು, ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರು ನೀಡಲಿದ್ದಾರೆ. ವಿದ್ವಾನ್ ವಾಗೀಶಾಚಾರ್ಯ ಗೊರೆಬಾಳ ಉಪನ್ಯಾಸ ನೀಡುವರು. ಸುಬ್ರಹ್ಮಣ್ಯ ಮಠದ ಶ್ರೀ ಅನಿರುದ್ಧತೀರ್ಥ ವೇದಿಕೆಯಲ್ಲಿ ಸಾಂಸ್ಕೃತಿ ಕಾರ್ಯಕ್ರಮಗಳು ನಡೆಯಲಿದ್ದು, ಇಂದು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಎಡನೀರು ಮಠದ ಶ್ರೀ ಸಚ್ಚಿದಾನಂದ ಭಾರತೀ ಸ್ವಾಮೀಜಿಗಳು ಉದ್ಘಾಟಿಸಲಿದ್ದಾರೆ. ಬಳಿಕ ಕುನ್ನಕುಡಿ ಬಾಲಮುರಳಿಕೃಷ್ಣ ಚೆನ್ನೈ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ನಡೆಯಲಿದೆ. ಬುಧವಾರ ಅಪರಾಹ್ನ 2.30ರಿಂದ ಭಾಗವತ ಧೀರಜ್ ರೈ ಸಂಪಾಜೆ ಸಾರಥ್ಯದಲ್ಲಿ ಯಕ್ಷ, ಗಾನ, ಹಾಸ್ಯ ವೈಭವ ನಡೆಯಲಿದೆ. ಬಳಿಕ ಭರತನಾಟ್ಯ ಪ್ರದರ್ಶಿತವಾಗಲಿದೆ. ಗುರುವಾರ ಬೆಳಗ್ಗೆ ಕಲಾವಿದ ಕೆ. ಯಜ್ಞೇಶ್ ಆಚಾರ್ ಮತ್ತು ಬಳಗದಿಂದ ಭಕ್ತಿ ಸಂಗೀತ, ಸಂಜೆ ಪುತ್ತೂರು ಗಣೇಶ್ ಮತ್ತು ಬಳಗದಿಂದ ಸ್ಯಾಕ್ಸೋಫೋನ್ ವಾದನ ನಡೆಯಲಿದೆ. ಶುಕ್ರವಾರ ವಿದ್ವಾನ್ ರಾಜಕಮಲ್ ಬೆಂಗಳೂರು ಅವರಿಂದ ಕೊಳಲು ವಾದನ, ಬಳಿಕ ಲಕ್ಷ್ಮಿ ಗುರುರಾಜ್ ಬಳಗದಿಂದ ನೃತ್ಯ ನೀರಾಜನಂ ನೆರವೇರಲಿದೆ. ಶನಿವಾರ ಸಂಜೆ ಕಟೀಲು ಮೇಳದವರಿಂದ ತ್ರಿಜನ್ಮ ಮೋಕ್ಷ ಯಕ್ಷಗಾನ ಪ್ರದರ್ಶಿತವಾಗಲಿದೆ.



ವಿಟ್ಲ ಕಡಂಬು ಶ್ರೀ ಕಲ್ಕುಡ ಕಲ್ಲುರ್ಟಿ, ಕೊಡಮಣಿತ್ತಾಯ ದೈವಸ್ಥಾನದ ಕಾಲಾವಧಿ ಜಾತ್ರೆ, ಕಡಂಬು ಒಲಸರಿ ವಿಜೃಂಭಣೆಯಿಂದ ನಡೆಯಿತು.



ಜಿಲ್ಲಾಧಿಕಾರಿ ಸೂಚನೆಯ ಮೇರೆಗೆ ಪುತ್ತೂರು ನಗರಸಭೆ ವ್ಯಾಪ್ತಿಯ ರಸ್ತೆಗಳ ಬದಿ, ವಿಭಾಜಕಗಳ ಮಧ್ಯೆ ಅಳವಡಿಸಿದ ಬ್ಯಾನರ್, ಕಟೌಟ್‌ಗಳನ್ನು ನಗರಸಭೆ ಸಿಬ್ಬಂದಿಗಳು ತೆರವು ಕಾರ್ಯಾಚರಣೆ ನಡೆಸಿದರು.

ಬೆಳ್ತಂಗಡಿ ತಾ.ಪಂ. ಸಭಾಂಗಣದಲ್ಲಿ ಪರಿಶಿಷ್ಟ ಜಾತಿ, ಪಂಗಡದ ಕುಂದುಕೊರತೆ ಸಭೆ | ಗಾಂಜಾ ಹಾವಳಿ ತಡೆಗೆ ಮುಖಂಡರಿಂದ ಆಗ್ರಹ

ಅನುಮಾನಸ್ಪದ ಪ್ರಕರಣಗಳಲ್ಲಿ ಪೊಲೀಸರು ತ್ವರಿತವಾಗಿ ತನಿಖೆ ನಡೆಸಲಿ: ಸಂಜೀವ ಆರ್.



ಬೆಳ್ತಂಗಡಿ: ಕಳಿಯ ಗ್ರಾಮದ ಗೇರುಕಟ್ಟೆ ಸಮೀಪ ಶ್ರೀಧರ ಮುಗೇರ ಎಂಬಾತನ ಸಂಶಯಾಸ್ಪದ ರೀತಿಯಲ್ಲಿ ಕೆರೆಯಲ್ಲಿ ಶವ ಸಿಕ್ಕ ಪ್ರಕರಣ ನಡೆದು ವರ್ಷ ಕಳೆದರೂ ಇನ್ನೂ ಸರಿಯಾದ ದಿಕ್ಕಿನಲ್ಲಿ ತನಿಖೆ ನಡೆದಿಲ್ಲ, ತನಿಖೆ ಯಾವ ಕಾರಣಕ್ಕೆ ವಿಳಂಬ ಆಗುತ್ತಿದೆ. ತಕ್ಷಣ ಆರೋಪಿಗಳನ್ನು ಪತ್ತೆ ಹಚ್ಚಬೇಕು ಎಂಬ ಒತ್ತಾಯವನ್ನು ಸೋಮವಾರ ಬೆಳ್ತಂಗಡಿ ತಾಲೂಕು ಪಂಚಾಯತ್ ಸಭಾಂಗಣದಲ್ಲಿ ನಡೆದ ಪರಿಶಿಷ್ಟ ಜಾತಿ, ಪಂಗಡದ ಕುಂದುಕೊರತೆ ಸಭೆಯಲ್ಲಿ ಮಾಡಲಾಯಿತು.

ದಲಿತ ಮುಖಂಡ ಸಂಜೀವ ಆರ್. ಕೇಳಿದ ಪ್ರಶ್ನೆಗೆ ಡಿವೈಎಸ್ಪಿ ರೋಹಿಣಿ ಸಿ.ಕೆ. ಉತ್ತರಿಸಿ ಆತ ಬಳಸಿದ ಮೊಬೈಲ್ ಫೋನ್ ಮಾಹಿತಿ ಸಂಗ್ರಹವಾಗುತ್ತಿದ್ದು, ಅದರ ವರದಿ ಇನ್ನು ಬಂದಿಲ್ಲ, ಪ್ರಕರಣದ ತನಿಖೆ ಮುಂದುವರಿದಿದೆ ಎಂದು ತಿಳಿಸಿದರು.

ಬೆಳಾಲಿನಲ್ಲಿ ಕಳೆದ ಜುಲೈಯಲ್ಲಿ ವೀಣಾ ಎಂಬಾಕೆಯ ಶವ ಮನೆಯ ಬಾವಿಯಲ್ಲಿ ಪತ್ತೆಯಾದ ಪ್ರಕರಣವು ಸೂಕ್ತ ರೀತಿಯಲ್ಲಿ ತನಿಖೆಯಾಗಬೇಕು. ಆಕೆಯ ಮಗುವನ್ನು ಆಕೆಯಿಂದ ದೂರ ಮಾಡಿ ಮಾರಾಟ ಮಾಡಿರುವ ಸಾಧ್ಯತೆಯಿದೆ. ಇದರಿಂದ ನೊಂದ ಆಕೆ ಆತ್ಮಹತ್ಯೆ ಮಾಡಿಕೊಂಡಿರುವ ಸಾಧ್ಯತೆಯಿದೆ. ಈ ಬಗ್ಗೆ ತನಿಖೆ ನಡೆಸಬೇಕು ಎಂದು ಸೇಸಪ್ಪ ನಲ್ಕೆ ಅಳದಂಗಡಿ ಒತ್ತಾಯಿಸಿದರು. ಮಗುವಿನ ಅಜ್ಜ ನಾಗೇಶ್ ಅವರು ಕಾನೂನು ಪ್ರಕಾರ ಮಗುವನ್ನು ಪಡೆದುಕೊಂಡಿದ್ದಾರೆ ಎಂದು ಧರ್ಮಸ್ಥಳ ಪಿಎಸ್‌ಐ ಸಮರ್ಥ ಆರ್. ಗಾಣಿಗೇರ್ ಸಭೆಗೆ ತಿಳಿಸಿದರು.

> **ಕೆಲಸ ನಿರ್ವಹಿಸಲು ಸಿಬ್ಬಂದಿಗಳ ಕೊರತೆ**
> ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯವು ಪ್ರಸ್ತುತ ಪರಿಶಿಷ್ಟ ಜಾತಿ/ಪಂಗಡಗಳ ದೌರ್ಜನ್ಯ ತಡೆ ಪೊಲೀಸ್ ಠಾಣೆಯಾಗಿ ಕಾರ್ಯನಿರ್ವಹಿಸುತ್ತಿದ್ದು, ಇಲ್ಲಿಗೆ ಜಿಲ್ಲೆಯ 42 ಪೊಲೀಸ್ ಠಾಣೆಗಳ ದಲಿತ ದೌರ್ಜನ್ಯ ಪ್ರಕರಣಗಳ ತನಿಖೆ, ಆರೋಪಿಗಳ ಬಂಧನ , ನ್ಯಾಯಾಲಯಕ್ಕೆ ಅಂತಿಮ ವರದಿ ಸೇರಿದಂತೆ ವಿವಿಧ ಕೆಲಸಗಳನ್ನು ನಿರ್ವಹಿಸಲು ಸಿಬ್ಬಂದಿಗಳ ಕೊರತೆಯಿದ್ದು, ಪ್ರಸ್ತುತ ಓರ್ವ ಎಸ್ಪಿ, ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್ , 3 ಹೆಡ್ ಕಾನ್ಸ್‌ಟೇಬಲ್ , 6 ಕಾನ್ಸ್ ಟೇಬಲ್ ಗಳು ಮಾತ್ರವಿದ್ದು, ಇಲ್ಲಿಗೆ ಸೂಕ್ತ ಸಿಬ್ಬಂದಿಗಳ ನೇಮಕವಾಗಬೇಕು ಎಂದು ಶೇಖರ್ ಲಾಯಿಲ ಹೇಳಿದರು.

ತಾಲೂಕಿನಲ್ಲಿ ಗಾಂಜಾ ಮಾದಕ ದ್ರವ್ಯಗಳ, ಹಾವಳಿ ದಿನದಿಂದ ದಿನಕ್ಕೆ ಹೆಚ್ಚುತ್ತಿದ್ದು, ಸೂಕ್ತ ಕ್ರಮಕ್ಕೆ ಬಿ.ಕೆ ವಸಂತ ಆಗ್ರಹಿಸಿದರು. ಲಾಯಿಲ ದರ್ಪಿಂಜೆ ಸೇತುವೆಯಲ್ಲಿ ಮದ್ಯಪಾನ ಮಾಡುತ್ತಾ ಸಾರ್ವಜನಿಕರ ಶಾಂತಿಭಂಗಕ್ಕೆ ಕಾರಣವಾಗುವುದಲ್ಲದೆ, ವಾಹನ ಸಂಚಾರಕ್ಕೂ ಅಡ್ಡಿಯಾಗುತ್ತಿರುವ ಕುರಿತು ಶೇಖರ ಲಾಯಿಲ ಸಭೆಯ ಗಮನಕ್ಕೆ ತಂದರು. ಬೆಳ್ತಂಗಡಿ ಪೊಲೀಸ್ ಠಾಣೆಗೆ ಇನ್ಸ್‌ಪೆಕ್ಟರ್ ನೇಮಕವಾಗಬೇಕು, ಜಿಲ್ಲಾ ಎಸ್‌ಪಿ ನೇತೃತ್ವದಲ್ಲಿ ಸಭೆ ನಡೆಯಬೇಕು. ಆದರೆ ಎಸ್‌ಪಿ ಸಭೆಗೆ ಹಾಜರಾಗುತ್ತಿಲ್ಲ, ಎರಡು ತಿಂಗಳಿಗೆ ಒಂದು ಬಾರಿಯಾದರೂ ಸಭೆಗೆ ಆಗಮಿಸುವಂತೆ ಶೇಖರ್ ಲಾಯಿಲ ಆಗ್ರಹಿಸಿದರು. ಇದಕ್ಕೆ ನೇಮಿರಾಜ್ ಕಿಲ್ಲೂರು , ಶೇಖರ್ ಕುಕ್ಕೇಡಿ , ರಮೇಶ್ ಆರ್. ಧ್ವನಿಗೂಡಿಸಿದರು. ಕೊಯ್ಯೂರು ಗ್ರಾಮದಲ್ಲಿ ಅರಣ್ಯ ಇಲಾಖೆ ಕಲ್ಲಿನ ಗುಪ್ಪೆಗಳನ್ನು ನಿರ್ಮಾಣ ಮಾಡುತ್ತಿದೆ. ಕೂಡಲೇ ಅರಣ್ಯ ಇಲಾಖೆ ತನ್ನ ಕಾರ್ಯವನ್ನು ನಿಲ್ಲಿಸಬೇಕು ಎಂದು ಶೇಖರ್ ಲಾಯಿಲ ಸಭೆಯಲ್ಲಿ ಒತ್ತಾಯಿಸಿದರು.

ಈ ಸಂದರ್ಭ ಮಾತನಾಡಿದ ಡಿವೈಎಸ್ಪಿ ರೋಹಿಣಿ ಸಿ.ಕೆ. ಜನರಿಗೆ ಸ್ಪಷ್ಟ ಮಾಹಿತಿ ನೀಡಲು ತಿಳಿಸುವುದಾಗಿ ಹೇಳಿದರು. ಮೊದಲಿಗೆ ಡಿವೈಎಸ್ಪಿ ಕಚೇರಿಯ ಮಹಿಳಾ ಹೆಡ್ ಕಾನ್ಸ್ ಟೇಬಲ್ ಸವಿತಾ ಶೆಟ್ಟಿ ಸ್ವಾಗತಿಸಿ, ಧರ್ಮಸ್ಥಳ ಪೊಲೀಸ್ ಠಾಣೆಯ ಪಿಎಸ್‌ಐ ಸಮರ್ಥ ಆರ್. ಗಾಣಿಗೇರ್ ವಂದಿಸಿದರು



ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಪ್ರಯುಕ್ತ ಅಂತಾರಾಷ್ಟ್ರೀಯ ಖ್ಯಾತಿಯ ಪ್ರಸಿದ್ಧ ಬಾಲಪ್ರತಿಭೆ ಗಂಗಾ ಶಶಿಧರನ್ ತ್ರಿಶೂರು ಅವರ ವಯಲಿನ್ ಫ್ಯೂಶನ್ ಕಾರ್ಯಕ್ರಮವು ನೋಡುಗರ ಮನಸೂರೆಗೊಂಡಿತು. ಶ್ರೀ ಶಿವಶಕ್ತಿ ಪೆರಡಾಲ ಪ್ರಾಯೋಜಕತ್ವದಲ್ಲಿ ನಡೆದ ಈ ಕಾರ್ಯಕ್ರಮದಲ್ಲಿ ಗಂಗಾ ಶಶಿಧರನ್ ಹಾಗೂ ತಂಡದವರನ್ನು ಅಭಿನಂದಿಸಲಾಯಿತು. 10 ಸಾವಿರಕ್ಕೂ ಹೆಚ್ಚು ಮಂದಿ ಭಾಗವಹಿಸಿದ್ದರು.

ಸುತ್ತಮುತ್ತ

ಇಂದಿನಿಂದ ತಂಜರಕಟ್ಟೆ ಮುಡಿಪು ತರವಾಡಿನ ಗೃಹಪ್ರವೇಶ, ದೈವ ಪ್ರತಿಷ್ಠೆ



ಕುಂಬಳೆ: ಕಿದೂರು ತಂಜರಕಟ್ಟೆ ಬಂದ್ಯನ್ ಕುಲಾಲ್ ಮುಡಿಪು ತರವಾಡಿನ ನೂತನವಾಗಿ ನಿರ್ಮಿಸಿದ ಗೃಹಪ್ರವೇಶ , ದೈವಗಳ ಪ್ರತಿಷ್ಠಾ ಕಾರ್ಯಕ್ರಮ ಏ.28 ಮತ್ತು 29ರಂದು ಜರಗಲಿದೆ. ಏ.28ರಂದು ಸಂಜೆ 5 ಗಂಟೆಗೆ ದೇವತಾ ಪ್ರಾರ್ಥನೆ ರಾಕ್ಷೋಘ್ನ ಹೋಮ, ವಾಸ್ತು ಹೋಮ, ರಾತ್ರಿ ಗಂಟೆ 9.30ಕ್ಕೆ ಅನ್ನಸಂತರ್ಪಣೆ ನಡೆಯಲಿದೆ. ಏ.29ರಂದು ಬೆಳಿಗ್ಗೆ ಗಂಟೆ 7 ಗಂಟೆಗೆ ಗಣಪತಿ ಹೋಮ, 8ಕ್ಕೆ ಗೃಹಪ್ರವೇಶ ಮುಡಿಪು ಪೂಜೆ, 9.48ಕ್ಕೆ ದೈವಗಳ ಪೀಠ ಪ್ರತಿಷ್ಠೆ ಮಧ್ಯಾಹ್ನ 12 ಗಂಟೆಗೆ ಶ್ರೀ ಸತ್ಯನಾರಾಯಣ ಪೂಜೆ, 1 ಗಂಟೆಗೆ ಮಹಾಪೂಜೆ, ಅನ್ನಸಂತರ್ಪಣೆ, ಸಂಜೆ ಗಂಟೆ 4.30ಕ್ಕೆ ಸ್ಥಳ ಗುಳಿಗನ ಕೋಲ, ರಾತ್ರಿ 7.30ಕ್ಕೆ ಭಂಡಾರ ಏರುವುದು, ರಾತ್ರಿ 8 ಗಂಟೆಗೆ ಅನ್ನಸಂತರ್ಪಣೆ, ರಾತ್ರಿ 9ಕ್ಕೆ ವರ್ಣರ ಪಂಜುರ್ಲಿ, ಕಲ್ಲುರ್ಟಿ ಮತ್ತು ಮುಕಾಂಬಿ ಗುಳಿಗ ದೈವಗಳ ಕೋಲ, ಏ.30ರಂದು ಮುಂಜಾನೆ ಪ್ರಸಾದ ವಿತರಣೆ, ಭಂಡಾರ ಇಳಿಯುವುದು ಮೊದಲಾದ ಕಾರ್ಯಕ್ರಮಗಳು ಜರಗಲಿದೆ.

ಇಂದಿನಿಂದ ಆರ್ತಲ ತರವಾಡು ಮನೆ ಗೃಹ ಪ್ರವೇಶ, ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶ

ಕುಂಬಳೆ: ನೂತನವಾಗಿ ನಿರ್ಮಿಸಿದ ಕಿದೂರು ಆರ್ತಲ ತರವಾಡು ಮನೆಯ ಗೃಹಪ್ರವೇಶ ಹಾಗೂ ಶ್ರೀ ಕೋಮಾರು ಚಾಮುಂಡಿ, ಬೊಬ್ಬರ್ಯ ಮತ್ತು ಪರಿವಾರ ದೈವಗಳ ಪುನರ್ ಪ್ರತಿಷ್ಠಾ ಬ್ರಹ್ಮಕಲಶ ಏ.28ರಿಂದ 30ರವರೆಗೆ ಬ್ರಹ್ಮಶ್ರೀ ದೇಲಂಪಾಡಿ ಗಣೇಶ್ ತಂತ್ರಿ ನೇತೃತ್ವದಲ್ಲಿ ನಡೆಯಲಿದೆ. ಏ.28 ರಂದು ಸಂಜೆ 6 ಗಂಟೆಗೆ ತಂತ್ರಿವರ್ಯರ ಆಗಮನ, ಪೂರ್ಣಕುಂಭ ಸ್ವಾಗತ ದೇವತಾ ಪ್ರಾರ್ಥನೆ, ಆಚಾರ್ಯವರಣ, ಪುಣ್ಯಾಹ ವಾಚನ, ಸ್ಥಳಶುದ್ಧಿ, ಪ್ರಾಸಾದ ಶುದ್ಧಿ, ರಾಕ್ಷೋಘ್ನಹೋಮ, ವಾಸ್ತು ಹೋಮ, ವಾಸ್ತುಬಲಿ, ಅನ್ನ ಸಂತರ್ಪಣೆ ನಡೆಯಲಿದೆ. ಏ.29ರಂದು ಬೆಳಿಗ್ಗೆ 6 ಕ್ಕೆ ಗಣಪತಿ ಹವನ, ಬ್ರಹ್ಮಕಲಶ ಪೂಜೆ 9.50ರಿಂದ 11.25ರ ಮಧ್ಯೆ ನಡೆಯುವ ಮಿಥುನ ಲಗ್ನ ಶುಭಮುಹೂರ್ತದಲ್ಲಿ ನೂತನ ತರವಾಡು ಮನೆಯ ಗೃಹಪ್ರವೇಶ, ಶ್ರೀ ಕೋಮಾರು ಚಾಮುಂಡಿ, ಬೊಬ್ಬರ್ಯ, ಪರಿವಾರ ದೈವಗಳ ಪ್ರತಿಷ್ಠೆ ಬ್ರಹ್ಮಕಲಶ, ತಂಬಿಲ, 11 ಗಂಟೆಗೆ ಹರಿಸೇವೆ, ಪ್ರಸಾದ ವಿತರಣೆ, ಮಧ್ಯಾಹ್ನ 1ರಿಂದ ಅನ್ನಸಂತರ್ಪಣೆ, ಸಂಜೆ 5ಕ್ಕೆ ಶ್ರೀ ಸತ್ಯನಾರಾಯಣ ಪೂಜೆ ನಡೆಯಲಿದೆ. ರಾತ್ರಿ 7 ಕ್ಕೆ ಗುಳಿಗ ದೈವದ ನೇಮ, 8.30ಕ್ಕೆ ಭಂಡಾರ ಏರುವುದು, 9ಕ್ಕೆ ಅನ್ನಸಂತರ್ಪಣೆ ಜರಗಲಿದೆ. ಏ.30 ರಂದು ಬೆಳಿಗ್ಗೆ 1.30ಕ್ಕೆ ಶ್ರೀ ಬೊಬ್ಬರ್ಯ ದೈವದ ನೇಮ, 11.30ಕ್ಕೆ ಧರ್ಮದೈವ ಶ್ರೀ ಕೋಮಾರು ಚಾಮುಂಡಿ ದೈವದ ನೇಮ, ಮಧ್ಯಾಹ್ನ 1ರಿಂದ ಅನ್ನ ಸಂತರ್ಪಣೆ, 2 ಗಂಟೆಗೆ ಕೊರತ್ತಿ ದೈವದ ನೇಮ, ಮೇ 5ರಂದು ಸಂಜೆ 6ರಿಂದ ಸುದರ್ಶನ ಹೋಮ, ಪ್ರೇತಾವಾಹನೆ, ಬಾಧೋಚ್ಚಾಟನೆ, ಮೇ 6ರಂದು ಬೆಳಿಗ್ಗೆ ಗಂಟೆ 7 ಕ್ಕೆ ಗಣಪತಿ ಹವನ, ತಿಲಹೋಮ, ಪವಮಾನ ಹೋಮ, ಚಕ್ರಾಬ್ಜಪೂಜೆ, ದ್ವಾದಶಮೂರ್ತಿ ಆರಾಧನೆ ನಡೆಯಲಿದೆ.

ಜನಮನಸೂರೆಗೊಂಡ 'ಗಂಗಾ ತರಂಗಂ' ವಯಲಿನ್ ಫ್ಯೂಶನ್

ಕಾಸರಗೋಡು: ಪೆರಡಾಲ ಶ್ರೀ ಉದನೇಶ್ವರ ದೇವಸ್ಥಾನದ ನವೀಕರಣ ಪುನರ್ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಪ್ರಯುಕ್ತ ಭಾನುವಾರ ಅಂತಾರಾಷ್ಟ್ರೀಯ ಖ್ಯಾತಿಯ ಪ್ರಸಿದ್ಧ ಬಾಲಪ್ರತಿಭೆ ಗಂಗಾ ಶಶಿಧರನ್ ತ್ರಿಶೂರು ಅವರ ಗಂಗಾ ತರಂಗಂ ವಯಲಿನ್ ಫ್ಯೂಶನ್ ಕಾರ್ಯಕ್ರಮ ಜನಮನ ಸೂರೆಗೊಂಡಿತು. ಗಣಪತಿ ಸ್ತುತಿಯೊಂದಿಗೆ ಕಾರ್ಯಕ್ರಮ ಆರಂಭಗೊಂಡಾಗ ಕಿಕ್ಕಿರಿದ ಪ್ರೇಕ್ಷಕರ ಕರತಾಡನ ಮುಗಿಲುಮುಟ್ಟಿತ್ತು. ತನ್ನ ಹಾವಭಾವಗಳಿಂದ ಜನಮನ ಸೂರೆಗೊಂಡ ಬಾಲಪತ್ರಿಭೆಗೆ ಮೆಚ್ಚುಗೆಯ ಮಹಾಪೂರವೇ ಹರಿದುಬಂದಿತ್ತು.
ಶ್ರೀ ಕ್ಷೇತ್ರದ ಬ್ರಹ್ಮಕಲಶೋತ್ಸವ ಸಮಿತಿಯ ಪದಾಧಿಕಾರಿಗಳು ಬ್ಯಾಂಡ್ ವಾದ್ಯಗಳೊಂದಿಗೆ ಕಲಾವಿದೆಯನ್ನು ಬರಮಾಡಿಕೊಂಡರು. ಹತ್ತು ಸಾವಿರಕ್ಕೂ ಹೆಚ್ಚು ಮಂದಿ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು. ಕಾರ್ಯಕ್ರಮದ ಕೊನೆಯಲ್ಲಿ ಕಲಾವಿದೆಯೊಂದಿಗೆ ಫೋಟೋ ತೆಗೆಸಿಕೊಳ್ಳಲು ಅಭಿಮಾನಿಗಳು ಮುಗಿಬಿದ್ದರು

ಕುಡಿಯುವ ನೀರಿಗೂ ಸೃಷ್ಟಿಯಾಗಿದೆ ಸಂಕಷ್ಟ | ಕೃಷಿಕರಿಗೂ ಕಾಡುತ್ತಿದೆ ನೀರಿನ ಅಭಾವ

ಸುಡು ಬಿಸಿಲಿಗೆ ಜಿಲ್ಲೆಯಲ್ಲಿ ಬತ್ತಿ ಬರಡಾಗಿವೆ ಜಲಮೂಲಗಳು

ಕಾಸರಗೋಡು: ಹಲವಾರು ಜಲಮೂಲಗಳು ಹರಿಯುತ್ತಿರುವ ಕಾಸರಗೋಡು ಜಿಲ್ಲೆಯಲ್ಲಿ ನದಿಗಳು ಬತ್ತಿ ಬರಡಾಗುತ್ತಿವೆ. ದಿನ ಕಳೆದಂತೆ ಬಿಸಿಲಿನ ಉಷ್ಣಾಂಶ ವಿಪರೀತವಾಗಿ ಏರಿಕೆಯಾಗುತ್ತಿದ್ದು, ಅದರೊಂದಿಗೆ ಭೂಮಿಯ ಮೇಲಿನ ನೀರು ಕ್ಷಣಮಾತ್ರದಲ್ಲಿ ಆವಿಯಾಗುತ್ತಿದೆ. ಇದರಿಂದಾಗಿ ಕೃಷಿ ಬೆಳೆಗಳಿಗೆ ಜಲ ಅಲಭ್ಯತೆ ಕಂಡುಬರುತ್ತಿದ್ದು, ಕೆಲವೆಡೆ ಕುಡಿಯುವ ನೀರಿಗೂ ಸಂಕಷ್ಟ ಎದುರಾಗಿದೆ.

ವ್ಯಾಪಕಗೊಂಡ ನೀರಿನ ತತ್ವಾರ

ಜಿಲ್ಲೆಯ ಗಡಿ ಗ್ರಾಮಗಳು ಬೇಸಿಗೆಯ ತಾಪಮಾನದಿಂದಾಗಿ ಅಪಾರ ನೀರಿನ ಸಮಸ್ಯೆ ಅನುಭವಿಸುತ್ತಿವೆ. ಮಂಜೇಶ್ವರ, ವರ್ಕಾಡಿ, ಮೀಂಜ, ಪೈವಳಿಕೆ, ಕುಂಬಳೆ, ಮಂಗಲ್ಪಾಡಿ, ಪುತ್ತಿಗೆ, ಎಣ್ಮಕಜೆ ಗ್ರಾಮ ಪಂಚಾಯತ್‌ಗಳು ಹಾಗೂ ಕಾಸರಗೋಡು ನಗರಸಭೆ, ಮೊಗ್ರಾಲ್ ಪುತ್ತೂರು, ಮಧೂರು, ಚೆಮ್ನಾಡು, ಚೆಂಗಳ, ಮುಳಿಯಾರು, ದೇಲಂಪಾಡಿ, ಕಾರಡ್ಕ, ಬದಿಯಡ್ಕ, ಕುಂಬ್ಡಾಜೆ, ಬೆಳ್ಳೂರು ಗ್ರಾಮ ಪಂಚಾಯತ್‌ಗಳಲ್ಲೂ ನೀರಿನ ತತ್ವಾರ ವ್ಯಾಪಕಗೊಂಡಿದೆ.



ಯೋಜನೆ ಅನುಷ್ಠಾನಕ್ಕೆ ತನ್ನಿ

ಜನಸಾಮಾನ್ಯರಿಗೆ ಸಮರ್ಪಕವಾಗಿ ಕುಡಿಯುವ ನೀರು ಪೂರೈಸುವ ಯೋಜನೆಯಡಿ ಆಯಾ ಸ್ಥಳೀಯಾಡಳಿತ ಸಂಸ್ಥೆಯು ನೀರು ವಿತರಿಸಲು ಕಾರ್ಯಕ್ರಮ ರೂಪಿಸಿದ್ದು, ಆದರೆ ಕೆಲವೆಡೆಗಳಲ್ಲಿ ಈ ಯೋಜನೆ ಅಸಮರ್ಪಕವಾಗಿ ಮುಂದುವರಿಯುತ್ತಿದೆ. ಇನ್ನು ಕೆಲವೆಡೆಗಳಲ್ಲಿ ಸಮಯಕ್ಕನುಗುಣವಾಗಿ ನೀರು ಸರಬರಾಜು ಆಗದಿ ರುವುದು ಸಾರ್ವಜನಿಕರಿಗೆ ತೊಂದರೆಯುಂಟುಮಾಡಿದೆ. ಈ ಹಿನ್ನೆಲೆಯಲ್ಲಿ ಮಂಜೇಶ್ವರ ಮತ್ತು ಕಾಸರಗೋಡು ತಾಲೂಕುಗಳ ಅನೇಕ ಕುಟುಂಬಗಳು ಅಗತ್ಯಕ್ಕೆ ತಕ್ಕಂತೆ ಕುಡಿಯುವ ನೀರು ಲಭಿಸದೆ ಕಂಗಾಲಾಗಿದ್ದಾರೆ. ನೀರಿನ ಸಮಸ್ಯೆ ಅನುಭವಿಸುತ್ತಿರುವ ಕುಟುಂಬಗಳನ್ನು ಕೂಡಲೇ ಗುರುತಿಸಿ ಕುಡಿಯುವ ನೀರು ಒದಗಿಸಲು ತಕ್ಷಣ ಯೋಜನೆ ಅನುಷ್ಠಾನಕ್ಕೆ ತರಬೇಕೆಂಬ ಆಗ್ರಹ ವ್ಯಕ್ತವಾಗಿದೆ.

ಪ್ರಮುಖ ಹೊಳೆಗಳಲ್ಲೇ ನೀರಿಲ್ಲದಿರುವುದೇ ಅಚ್ಚರಿ!

ಬೇಸಿಗೆಯಲ್ಲಿ ಹನಿ ನೀರಿಗಾಗಿ ನಾಗರಿಕರು ಪರಿತಪಿಸುತ್ತಿರುವಾಗ ಜಿಲ್ಲೆಯ ಬಹುತೇಕ ಕುಡಿಯುವ ನೀರು ಯೋಜನೆಗಳು ಪ್ರಯೋಜನಕ್ಕಿಲ್ಲದಂತಾಗಿರುವುದು ವಿಪರ್ಯಾಸವಾಗಿದೆ. ಈ ಮಧ್ಯೆ ಸಾರ್ವಜನಿಕರಿಗಾಗಿ ನೀರು ಪೂರೈಸಲು ಗುರುತಿಸಲಾದ ಜಲಸಂಪನ್ಮೂಲಗಳು ಬತ್ತಿಹೋಗಿದ್ದು, ಇದು ನೀರು ಪೂರೈಕೆಗೆ ಅಡ್ಡಿಯಾಗುತ್ತಿರುವ ಅಂಶವಾಗಿದೆ. ಜಿಲ್ಲೆಯಲ್ಲಿ ಹರಿಯುತ್ತಿರುವ ಉಪ್ಪಳ, ಶಿರಿಯ, ಕುಂಬಳೆ, ಮೊಗ್ರಾಲ್ ಪುತ್ತೂರು, ಪಯಸ್ವಿನಿ, ಚಂದ್ರಗಿರಿ, ಮಧುವಾಹಿನಿ, ಸುವರ್ಣಗಿರಿ ಮೊದಲಾದ ಪ್ರಮುಖ ನದಿಗಳು ಕೂಡಾ ಬಹುತೇಕವಾಗಿ ಡ್ರೈ ಆಗಿದ್ದು, ಈ ಮೂಲಕ ನೀರು ಪೂರೈಕೆ ಯೋಜನೆ ಹಿನ್ನಡೆ ಅನುಭವಿಸುವಂತಾಗಿದೆ.

ಬತ್ತಿದ ಹೊಳೆಯಲ್ಲಿ ಹೊಂಡ ತೋಡಿದರೂ ನೀರಿಗೆ ಬರ

ಗತವರ್ಷಗಳಲ್ಲಿ ಕಾಸರಗೋಡು ಜಿಲ್ಲೆಯ ಹೊಳೆಗಳಲ್ಲಿ ಹೊಂಡ ಅಗೆದು ಪಂಪ್ ಮಾಡಿದರೆ ನೀರು ಲಭಿಸುತ್ತಿತ್ತು. ಈ ನಿಟ್ಟಿನಲ್ಲಿ ಜಲನಿಧಿ ಯೋಜನೆಗಳಿಗೆ ಹೊಳೆಗಳಿಂದ ನೀರು ತೆಗೆಯುವ ವ್ಯವಸ್ಥೆ ಕಲ್ಪಿಸಲಾಗಿತ್ತು. ಆದರೆ ಈ ವರ್ಷ ಬತ್ತಿದ ಹೊಳೆಗಳಲ್ಲಿ ಹೊಂಡ ತೋಡಿದರೂ ನೀರು ದೊರಕುತ್ತಿಲ್ಲ, ಇದರಿಂದ ಜಲನಿಧಿ ಯೋಜನೆಗಳು ವಿಫಲವಾಗಿದ್ದು, ಮೂಲೆಗುಂಪಾಗುತ್ತಿವೆ. ಆದ್ದರಿಂದ ಕುಡಿಯುವ ನೀರಿನ ಅಗತ್ಯವಿರುವ ಮನೆಗಳಿಗೆ ವಾಹನಗಳಲ್ಲಿ ನೀರು ಕೊಂಡೊಯ್ದು ತಲುಪಿಸಲಾಗುತ್ತಿದೆ. ಈ ಮೂಲಕ ಎರಡು ದಿನಗಳಿಗೊಮ್ಮೆ ನೀರು ಪೂರೈಸಲಾಗುತ್ತಿದೆ. ಆದರೆ ಇದು ದೈನಂದಿನ ಆವಶ್ಯಕತೆಗಳಿಗೆ ಸಾಕಾಗುವುದಿಲ್ಲ, ಈ ಹಿನ್ನೆಲೆ ಕೆಲವು ಕುಟುಂಬ ಗಳಿಗೆ ದೂರದ ಪ್ರದೇಶಗಳಿಂದ ಅಥವಾ ಬೇರೆ ಮನೆಗಳ ಬಾವಿಗಳಿಂದ ನೀರು ಹೊತ್ತು ತರಬೇಕಾದ ಅನಿವಾರ್ಯತೆಯಿದೆ.

ಮುಂಡೋಳು ಶ್ರೀ ಶಾಸ್ತಾರ ದೇವಳ: ವಾರ್ಷಿಕ ಪಾಟು ಮಹೋತ್ಸವ ಆರಂಭ

ಕಾಸರಗೋಡು: ಮುಳ್ಳೇರಿಯ ಕಾರಡ್ಕ ಮುಂಡೋಳು ಶ್ರೀ ಮಹಾವಿಷ್ಣು ದುರ್ಗಾಪರಮೇಶ್ವರಿ ಶಾಸ್ತಾರ ದೇವಸ್ಥಾನದ ವಾರ್ಷಿಕ ಪಾಟು ಮಹೋತ್ಸವದ ಅಂಗವಾಗಿ ಸೋಮವಾರ ಬೆಳಗ್ಗೆ ಶ್ರೀ ದೇವರ ಬಲಿ ಉತ್ಸವ, ಅನ್ನಪ್ರಸಾದ ವಿತರಣೆ, ಪಾಟು ಮಹೋತ್ಸವ, ಆಯುಧ ಬಲಿ, ತುಲಾಭಾರ ಸೇವೆ, ರಾತ್ರಿ ಶ್ರೀ ದೇವರ ಬಲಿ ಉತ್ಸವ, ಬೆಡಿಕಟ್ಟೆಯಲ್ಲಿ ಪೂಜೆ ಸುಡುಮದ್ದು ಪ್ರದರ್ಶನ, ಶ್ರೀ ದೇವರ ಬಲಿ ಉತ್ಸವ, ಹಾಗೂ ನೃತ್ಯೋತ್ಸವ, ಕವಾಟ ಬಂಧನ ನಡೆಯಿತು.

ಧ್ವಜಾವರೋಹಣ

ಏ.28ರಂದು ಬೆಳಿಗ್ಗೆ 6.30ಕ್ಕೆ ಕವಾಟೋದ್ಘಾಟನೆ, 7ರಿಂದ ಅನ್ನಪ್ರಸಾದ ವಿತರಣೆ, 9 ಗಂಟೆಗೆ ದೇವರ ಹೊರಡುವಿಕೆ, ಅವಭೃತ ಸ್ನಾನ, ಶ್ರೀ ದೇವರ ದರ್ಶನ ಬಲಿ, ರಾಜಾಂಗಣ ಪ್ರಸಾದ, ಧ್ವಜಾವರೋಹಣ, ಮಧ್ಯಾಹ್ನ ಮಹಾಪೂಜೆ, ತಪ್ಪಂಗಾಯಿ, ಅನ್ನಸಂತರ್ಪಣೆಯೊಂದಿಗೆ ಮಹೋತ್ಸವ ಸಂಪನ್ನಗೊಳ್ಳಲಿದೆ.



ಮೇ 5ರಂದು ದೈವಗಳ ಕೋಲ

ಮೇ 5ರಂದು ಶ್ರೀ ಕ್ಷೇತ್ರದಲ್ಲಿ ಬೆಳಿಗ್ಗೆ 8 ಗಂಟೆಗೆ ಪಡ್ಪೆ ಧೂಮಾವತಿ, 10 ಗಂಟೆಗೆ ಕಾರ್ಲೆ ಧೂಮಾವತಿ, ಮಧ್ಯಾಹ್ನ 2 ಗಂಟೆಗೆ ಮೂವಾಳಂ ಕುಯಿ ಚಾಮುಂಡಿ ದೈವದ ಕೋಲ ನಡೆಯಲಿದೆ.

ಯಶಸ್ವಿಯಾಗಿ ಸಂಪನ್ನಗೊಂಡ 'ಸ್ಪರ್ಶಂ' ದಿವ್ಯಾಂಗ ಮಕ್ಕಳ ಕಲಾಮೇಳ ಕಾರ್ಯಕ್ರಮ



ಮಂಜೇಶ್ವರ: ಹಾಸಿಗೆಯಲ್ಲೇ ಇರುವ ದಿವ್ಯಾಂಗ ಮಕ್ಕಳ ಸಾಮಾಜಿಕ ಒಳಗೊಳ್ಳುವಿಕೆಯನ್ನು ಉತ್ತೇಜಿಸುವ ಉದ್ದೇಶದಿಂದ ಸಮಗ್ರ ಶಿಕ್ಷಣ ಕಾಸರಗೋಡು –ಕಾಸರಗೋಡು ಜಿ.ಪಂ.ಸಂಯುಕ್ತವಾಗಿ 'ಸ್ಪರ್ಶಂ' ದಿವ್ಯಾಂಗ ಮಕ್ಕಳ ಕಲಾಮೇಳವನ್ನು ಯಶಸ್ವಿಯಾಗಿ ಆಯೋಜಿಸಲಾಯಿತು.
ಕಾರ್ಯಕ್ರಮವನ್ನು ಸಮಗ್ರ ಶಿಕ್ಷಣ ಕಾಸರಗೋಡು ಡಿಪಿಓ ಪ್ರಕಾಶನ್ ಟಿ. ಉದ್ಘಾಟಿಸಿದರು. ಈ ಸಂದರ್ಭ ಜಿಲ್ಲಾ ಶಿಕ್ಷಣಾಧಿಕಾರಿ ಡಿಡಿಇ ಇಬ್ರಾಹಿಂ ಬಿ., ಡಿಪಿಓ ಆಗಸ್ಟಿನ್ ಬರ್ನಾರ್ಡ್ ಮೊಂತೆರೋ, ಮಂಜೇಶ್ವರ ಎಇಓ ಜೋರ್ಜ್ ಕ್ರಾಸ್ತ ಸಿ.ಎಚ್. ಇದ್ದರು. ಪ್ರಸಿದ್ಧ ಜನಪದ ಗಾಯಕ, ಯುವ ಪ್ರತಿಭಾ ಪ್ರಶಸ್ತಿ ಪುರಸ್ಕೃತ ಶೈಜು ಬೆರಿಕ್ಕುಳಂ, ಕಲಾಭವನ ಮಣಿ ಫೌಂಡೇಶನ್‌ನ ಓಡಪ್ಪಳಂ ಪ್ರಶಸ್ತಿ ಪುರಸ್ಕೃತ ಪ್ರವೀಣ್ ಪೂಂಗೋಡ್ ಅವರನ್ನು ಗೌರವಿಸಲಾಯಿತು.
ಬಳಿಕ ನಡೆದ ಜನಪದ ಕಲಾಮೇಳ , ಮಕ್ಕಳ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಎಲ್ಲರ ಗಮನ ಸೆಳೆಯಿತು. ಮಂಜೇಶ್ವರ ಎಇಓ ಜೋರ್ಜ್ ಕ್ರಾಸ್ತ ಅಧ್ಯಕ್ಷತೆ ವಹಿಸಿದ್ದರು. ಮಂಜೇಶ್ವರ ಬಿಆರ್‌ಸಿಯ ಬಿಪಿಸಿ ರಾಜಗೋಪಾಲನ್ ಪಿ. ಬಹುಮಾನ ವಿತರಿಸಿದರು. ಸಿಆರ್‌ಸಿ ಸಂಯೋಜಕ ನಾರಾಯಣ ರಾಜ್ ಸ್ವಾಗತಿಸಿದರು.

ಶ್ರೀ ಚೀರುಂಬಾ ಕ್ಷೇತ್ರ ಸಭಾಂಗಣದಲ್ಲಿ ಆರೆಸ್ಸೆಸ್ ಕಾರ್ಯಕರ್ತರ ಸಮಾವೇಶ



ಕಾಸರಗೋಡು: ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಜಿಲ್ಲಾ ಪ್ರಚಾರ ವಿಭಾಗದಿಂದ ನಾರಾಯಣ ಮಂಗಲ ಶ್ರೀ ಚೀರುಂಬಾ ಭಗವತಿ ಕ್ಷೇತ್ರದ ಸಭಾಂಗಣದಲ್ಲಿ ನಡೆದ ಪ್ರಬುದ್ಧ ಕಾರ್ಯಕರ್ತರ ಸಮಾವೇಶದಲ್ಲಿ ಸಂಘದ ಹಿರಿಯ ಕಾರ್ಯಕರ್ತರಾದ ದಿ. ಗೋಪಾಲ ಚೆಟ್ಟಿಯಾರ್ ಅವರ ಸಂಘ ಕಾರ್ಯದ ಪ್ರೇರಣಾದಾಯಿ ಶೈಲಿ ವಿವರಿಸುವ ಕಿರುಹೊತ್ತಗೆ 'ಗೋಪಾಲ ಗಾಥೆ' ಬಿಡುಗಡೆಗೊಳಿಸಲಾಯಿತು.
ವೇದಿಕೆಯಲ್ಲಿ ಕಾಸರಗೋಡು ಜಿಲ್ಲಾ ಸಂಘಚಾಲಕ್ ಪ್ರಭಾಕರನ್ ಮಾಸ್ಟರ್, ಬದಿಯಡ್ಕ ಖಂಡ್ ಸಂಘಚಾಲಕ ರಮೇಶ ಕಳೇರಿ, ಕಣ್ಣೂರು ವಿಭಾಗ ಕಾರ್ಯವಾಹ ಲೋಕೇಶ್ ಜೋಡುಕಲ್ಲು, ಕರಾವಳಿ ಕಲ್ಯಾಣ ಪರಿಷತ್ ಸಂಯೋಜಕ ಆಶೋಕ, ಪುಸ್ತಕದ ಲೇಖಕ ಪುಂಡರೀಕಾಕ್ಷ ಬೆಳ್ಳೂರು ಉಪಸ್ಥಿತರಿದ್ದರು.
ಲಕ್ಷ್ಮಣ ಅಡೂರು ಸ್ವಾಗತಿಸಿ, ಬಾಲಕೃಷ್ಣ ನೀರ್ಚಾಲು ನಿರೂಪಿಸಿದರು. ತನ್ಮಯ್ ಬದಿಯಡ್ಕ, ವರ್ಷಾ ಸೂರಂಬೈಲು ಗೀತೆ ಹಾಡಿದರು. ಗಣೇಶ್ ಪಿ.ಎಂ. ಮುಂಡಾನ್‌ತ್ತಡ್ಕ ಪುಸ್ತಕದ ಬೆನ್ನುಡಿ ವಾಚಿಸಿ, ರಾಹುಲ್ ಪಾಯಿಚ್ಚಾಲ್ ವಂದಿಸಿದರು.



ಕಾಳ್ಯಂಗಾಡು ಶ್ರೀ ಮೂಕಾಂಬಿಕಾ ಕ್ಷೇತ್ರದ ಪುನರ್ ಪ್ರತಿಷ್ಠಾ ಬ್ರಹ್ಮಕಲಶದ ಅಂಗವಾಗಿ ಹೊರೆಕಾಣಿಕೆ ಶೋಭಾಯಾತ್ರೆ ಕಾಸರಗೋಡು ಮಲ್ಲಿಕಾರ್ಜುನ ದೇವಸ್ಥಾನದಿಂದ ಕರಂದಕ್ಕಾಡು ದಾರಿಯಾಗಿ ಕಾಳ್ಯಂಗಾಡು ಕ್ಷೇತ್ರಕ್ಕೆ ತಲುಪಿತು. ಮೆರವಣಿಗೆಯಲ್ಲಿ ಬ್ರಹ್ಮಕಲಶ ಸಮಿತಿ ಅಧ್ಯಕ್ಷ ಡಾ.ಕೆ.ಎನ್.ವೆಂಕಟ್ರಮಣ ಹೊಳ್ಳ, ಶ್ರೀ ಕ್ಷೇತ್ರದ ಆಡಳಿತ ಮೊಕ್ತೇಸರ ಅಚ್ಯುತ ಕಾಳ್ಯಂಗಾಡು, ಪ್ರಧಾನ ಕಾರ್ಯದರ್ಶಿ ದಯಾನಂದ ಕೊಳ್ಚಿಬೈಲ್, ಕಾರ್ಯ ದರ್ಶಿಗಳಾದ ರಂಜಿತ್ ಮನಿಪ್ಪಾಡಿ, ಗೋವಿಂದ ಕಾಳ್ಯಂಗಾಡು, ಶಾಂತಕುಮಾರ್ ಮುಂಡ್ಯತ್ತಡ್ಕ, ರಘು ಮೀಪುಗುರಿ, ವೇಣು ಭಾಮ, ಮೋಹನ್‌ರಾಜ್, ಮಿಥುನ್ ಕಾಳ್ಯಂಗಾಡು, ಪುಷ್ಪಾವತಿ ಮಹಾಲಿಂಗ ಸಹಿತ ಬ್ರಹ್ಮಕಲಶ ವಿವಿಧ ಸಮಿತಿ ಪದಾಧಿಕಾರಿಗಳು ಮತ್ತಿತರರಿದ್ದರು.



ಸ್ಪಂದನ ಟ್ರಸ್ಟ್ ಕೋಳ್ಯೂರು ಮಂಜೇಶ್ವರ ಇದರ 116ನೇ ಮಾಸಿಕ ಸೇವಾ ಯೋಜನೆಯ ಫಲಾನುಭವಿಯಾಗಿ ಮಾಧವ ಅಸನಬೈಲ್ ಪೊಯ್ಯತ್ತಬೈಲ್ ಇವರ ಚಿಕಿತ್ಸೆಗಾಗಿ ಭಾನುವಾರ ಫಲಾನುಭವಿಯ ಮನೆಗೆ ತೆರಳಿ ಸಹಾಯಧನ ಚೆಕ್‌ನ್ನು ಹಸ್ತಾಂತರಿಸಲಾಯಿತು. ಈ ಸಂದರ್ಭದಲ್ಲಿ ಸುಧೀರ್ ರಂಜನ್ ದೈಗೋಳಿ, ಸಂದೀಪ್ ಕೋಡಿ ಸೇನ್ಯ, ಬಾಲಕೃಷ್ಣ ಕೋಳ್ಯೂರುಪದವು, ಲೋಕೇಶ ಬಿ.ಕೋಳ್ಯೂರು ಉಪಸ್ಥಿತರಿದ್ದರು.



ಮಂಜೇಶ್ವರ ಕನಿಲ ಶ್ರೀ ಭಗವತೀ ಕ್ಷೇತ್ರದಲ್ಲಿ ಏ.24ರಿಂದ ಆರಂಭಗೊಂಡು ಮೇ 3ರ ವರೆಗೆ ನಡೆಯಲಿರುವ ಭರಣಿ ಮಹೋತ್ಸವದ ಅಂಗವಾಗಿ ಸೋಮವಾರ ವಿವಿಧ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಈ ಸಂದರ್ಭದಲ್ಲಿ ವಿವಿಧ ಗಣ್ಯರು ಸೇವಾ ಕಾರ್ಯದಲ್ಲಿ ಭಾಗವಹಿಸಿದ್ದರು.

ವಿಧಾನಸಭಾ ಚುನಾವಣೆಯ ಮತ ಎಣಿಕೆಗೆ ಶುರವಾಗಿದೆ ದಿನಗಣನೆ

ಮಾಸ್ಟರ್ ತರಬೇತುದಾರರಿಗೆ ತರಬೇತಿ ಕಾರ್ಯಕ್ರಮ

ಕಾಸರಗೋಡು: ವಿಧಾನಸಭಾ ಚುನಾವಣೆ ಮತ ಎಣಿಕೆಗೆ ಸಂಬಂಧಿಸಿದಂತೆ ಜಿಲ್ಲಾ ಮತ್ತು ವಿಧಾನಸಭಾ ಮಟ್ಟದಲ್ಲಿ ಮಾಸ್ಟರ್ ತರಬೇತುದಾರರಿಗೆ ತರಬೇತಿ ಕಾರ್ಯಕ್ರಮ ಆಯೋಜಿಸಲಾಗಿತ್ತು. ಕಲೆಕ್ಟರೇಟ್‌ನ ಮಿನಿ ಸಮ್ಮೇಳನ ಸಭಾಂಗಣದಲ್ಲಿ ನಡೆದ ಈ ಕಾರ್ಯಕ್ರಮವನ್ನು ಹೆಚ್ಚುವರಿ ಜಿಲ್ಲಾ ಮೆಜಿಸ್ಟ್ರೇಟ್ ಕೆ.ವಿ.ಶ್ರುತಿ ಉದ್ಘಾಟಿಸಿ ಮಾತನಾಡಿದರು.
ಚುನಾವಣಾ ಉಪಕಲೆಕ್ಟರ್ ಎ.ಎನ್.ಗೋಪಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಮಾಸ್ಟರ್ ತರಬೇತುದಾರರಾದ ಪಿ.ಸಜಿತ್ ಕುಮಾರ್, ಕೆ.ಮಧು, ಎಂ. ವಲ್ಸನ್ ತರಬೇತಿ ನೇತೃತ್ವ ವಹಿಸಿದ್ದರು. ಚುನಾವಣಾ ಅಧಿಕಾರಿಗಳಾದ ವಿ.ಪಿ.ರಘುಮಣಿ, ಬಿನು ಜೋಸೆಫ್, ಲಿವು ಎಸ್.ಲಾರೆನ್ಸ್, ಕೆ.ಆರ್.ಮನೋಜ್, ವಿ.ಇ. ಶೆರ್ಲಿ, ತರಬೇತಿ ನೋಡಲ್ ಅಧಿಕಾರಿ ಕೆ.ಬಿ.ರಾಮು ಮತ್ತಿತರರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.



ಚುನಾವಣಾಧಿಕಾರಿಗಳ ಸಹಾಯಕ ಸಿಬ್ಬಂದಿಗಳಿಗೆ ತರಬೇತಿ ಏ.28ರಂದು ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್ , ಹೊಸದುರ್ಗ ತಾಲೂಕು ಕಚೇರಿಯಲ್ಲಿ ನಡೆಯಲಿದೆ. ಮೈಕ್ರೋ ವೀಕ್ಷಕರು, ಮತ ಎಣಿಕೆ ಅಧೀಕ್ಷಕರು, ಮತ ಎಣಿಕೆ ಸಹಾಯಕರು ಮತ್ತು ಸಹಾಯಕ ಚುನಾವಣಾಧಿಕಾರಿಗಳಿಗೆ ಮೊದಲ ಹಂತದ ತರಬೇತಿ ಏ.29 ರಂದು ನಾಯನ್ಮಾರಮೂಲೆ ಟಿಐಎಚ್‌ಎಸ್‌ಎಸ್‌ನಲ್ಲಿ ನಡೆಯಲಿದೆ.

ಮತ ಎಣಿಕೆ

ಮೇ 4ರಂದು ಬೆಳಿಗ್ಗೆ 6.30ಕ್ಕೆ ಆಯಾ ಮತ ಎಣಿಕೆ ಸಭಾಂಗಣದಲ್ಲಿ ನಡೆಯಲಿದೆ. ಮಂಜೇಶ್ವರ, ಕಾಸರಗೋಡು, ಉದುಮ ಕ್ಷೇತ್ರಗಳ ಮತ ಎಣಿಕೆ ಕಾಸರಗೋಡು ಸರಕಾರಿ ಕಾಲೇಜಿನ ವಿವಿಧ ಸಭಾಂಗಣದಲ್ಲಿ ನಡೆಯಲಿದೆ. ಕಾಞಂಗಾಡು– ತೃಕ್ಕರೀಪ್ಪುರ ಕ್ಷೇತ್ರಗಳ ಮತ ಎಣಿಕೆಗೆ ಕಾಞಂಗಾಡು ದುರ್ಗಾಹೈಯರ್ ಸೆಕೆಂಡರಿ ಶಾಲೆ ಸಭಾಂಗಣ ಸಜ್ಜುಗೊಳಿಸಲಾಗಿದೆ.

ಶ್ರೀ ಮಲ್ಲಿಕಾರ್ಜುನ ದೇವಳ ಆವರಣದಿಂದ ಪ್ರತಿಭಟನಾ ಮೆರವಣಿಗೆ

ವಿರೋಧ ಪಕ್ಷದ ಮಹಿಳಾ ವಿರೋಧಿ ನೀತಿಗೆ ಖಂಡನೆ

ಕಾಸರಗೋಡು: ಮಹಿಳಾ ಮೀಸಲಾತಿ ಮಸೂದೆ ವಿರೋಧಿಸುವ ಮೂಲಕ ಕಾಂಗ್ರೆಸ್ ಮತ್ತು ಸಿಪಿಎಂ ಸೇರಿದಂತೆ ವಿರೋಧ ಪಕ್ಷಗಳು ದೇಶದ 70 ಕೋಟಿ ಮಹಿಳಾ ಸಮುದಾಯವನ್ನು ವಂಚಿಸಿದೆ. ಈ ಮೂಲಕ ದೇಶದ ವಿರೋಧ ಪಕ್ಷಗಳ ಮಹಿಳಾ ವಿರೋಧಿ ನೀತಿ ಬಯಲಾಗಿದೆ ಎಂದು ಬಿಜೆಪಿ ಕೇರಳ ರಾಜ್ಯ ಸಮಿತಿ ಸದಸ್ಯೆ ಸವಿತಾ ಟೀಚರ್ ಹೇಳಿದ್ದಾರೆ.
ಭಾರತೀಯ ಜನತಾ ಮಹಿಳಾ ಮೋರ್ಚಾದ ಕಾಸರಗೋಡು ಮಂಡಲ ಸಮಿತಿಯ ಆಶ್ರಯದಲ್ಲಿ ಪ್ರತಿಪಕ್ಷಗಳ ಮಹಿಳಾ ವಿರೋಧಿ ಧೋರಣೆಯನ್ನು ಖಂಡಿಸಿ ಸೋಮವಾರ ನಡೆದ ಬೃಹತ್ ಪ್ರತಿಭಟನಾ ಸಭೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.
ಮಹಿಳೆಯರು ಇಂದು ಎಲ್ಲಾ ಕ್ಷೇತ್ರಗಳಲ್ಲಿ ತಮ್ಮ ಸಾಮರ್ಥ್ಯ ಸಾಬೀತುಪಡಿಸಿದ್ದಾರೆ. ಸ್ವಾತಂತ್ರ್ಯ ಲಭಿಸಿ 75 ವರ್ಷಗಳಾದರೂ ಶಾಸಕಾಂಗ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಸರಿಯಾದ ಪ್ರಾತಿನಿಧ್ಯ ದೊರೆತಿಲ್ಲ, ಮಹಿಳಾ ಮೀಸಲಾತಿಯನ್ನು ವಿರೋಧಿಸಿದ ಕಾಂಗ್ರೆಸ್, ಸಿಪಿಎಂ ಸೇರಿದಂತೆ ವಿವಿಧ ಪಕ್ಷಗಳ ವಿರುದ್ಧ ಮಹಿಳಾ ಸಮುದಾಯ ಪ್ರತೀಕಾರ ತೀರಿಸಿಕೊಳ್ಳುತ್ತದೆ ಎಂದು ಹೇಳಿದರು.



ಕಾಸರಗೋಡು ನಗರದ ಶ್ರೀ ಮಲ್ಲಿಕಾರ್ಜುನ ದೇವಳ ಆವರಣದಿಂದ ಪ್ರಾರಂಭವಾದ ಪ್ರತಿಭಟನಾ ಮೆರವಣಿಗೆ ಕರಂದಕ್ಕಾಡಿನಲ್ಲಿ ಮುಕ್ತಾಯಗೊಂಡಿತು. ನಂತರ ಕಾಂಗ್ರೆಸ್ ಪಕ್ಷದ ಮಾಜಿ ರಾಷ್ಟ್ರೀಯ ಅಧ್ಯಕ್ಷ ಮತ್ತು ಸಂಸದ ರಾಹುಲ್ ಗಾಂಧಿ ಅವರ ಪ್ರತಿಕೃತಿ ದಹಿಸಲಾಯಿತು. ಕಾರ್ಯಕ್ರಮದಲ್ಲಿ ಮಹಿಳಾ ಮೋರ್ಚಾ ನಾಯಕಿ ಪುಷ್ಪಲತಾ ಅಧ್ಯಕ್ಷತೆ ವಹಿಸಿ ಮಾತನಾಡಿದರು.
ಮಹಿಳಾಮೋರ್ಚಾ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಅನಿತಾ ನಾಯ್ಕ್, ಜಿಲ್ಲಾ ಕೋಶಾಧಿಕಾರಿ ಶ್ರೀಲತಾ, ಮಧೂರು ಗ್ರಾಮ ಪಂಚಾಯತ್ ಅಧ್ಯಕ್ಷೆ ಸುಜ್ಞಾನಿ ಶ್ಯಾನುಭೋಗ್, ಮಂಡಲ ಪ್ರಧಾನ ಕಾರ್ಯದರ್ಶಿ ಶ್ರೀವಿದ್ಯಾ, ಮಂಡಲ ಕಾರ್ಯದರ್ಶಿ ಚೇತನಾ, ಬಿಜೆಪಿ ಜಿಲ್ಲಾ ಕೋಶಾಧಿಕಾರಿ ವೀಣಾ ಅರುಣ್ ಶೆಟ್ಟಿ, ಜಿಲ್ಲಾ ಕಾರ್ಯದರ್ಶಿಗಳಾದ ಪುಷ್ಪಾ ಗೋಪಾಲನ್, ಪ್ರಮೀಳಾ ಮಜಲ್, ಮಧೂರು ಪಂ.ಪಶ್ಚಿಮ ಕ್ಷೇತ್ರ ಅಧ್ಯಕ್ಷೆ ಧನ್ಯಾ, ಅಶ್ವಿತಾ, ಪ್ರಮೀಳಾ ಮತ್ತಿತರರಿದ್ದರು.

ಸುತ್ತ ಮುತ್ತ

ಏ.29, 30: ನರಸಿಂಗೆ ದೇಗುಲ ವರ್ಧಂತಿ ಉತ್ಸವ, ನರಸಿಂಹ ಜಯಂತಿ



ಮಣಿಪಾಲ: ಶ್ರೀ ನರಸಿಂಹ ದೇವಸ್ಥಾನದ ಪ್ರತಿಷ್ಠಾ ವರ್ಧಂತಿ ಮತ್ತು ಶ್ರೀ ನರಸಿಂಹ ಜಯಂತಿ ಉತ್ಸವವು ಏ.29, 30ರಂದು ಧಾರ್ಮಿಕ ವಿಧಿ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳೊಂದಿಗೆ ಆಚರಿಸಲಾಗುವುದು ಎಂದು ದೇವಳದ ಆಡಳಿತ ಮೊಕ್ತೇಸರ ರಮೇಶ್ ಸಲ್ವಾಂಕರ್ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೊದಲನೇ ಪುಟದಿಂದ

ಕಂಗಾಲಾದ ಕೇರಳ

ಬೇಸಿಗೆ ಕಾಲದಲ್ಲಿ ವಿದ್ಯುತ್ ಲೋಡ್ ಶೆಡ್ಡಿಂಗ್, ಪವರ್ ಕಟ್ ಇಲ್ಲ ಎಂದು ರಾಜ್ಯ ವಿದ್ಯುತ್ ಇಲಾಖೆ ಭರವಸೆ ನೀಡಿದ್ದರೂ, ಅದಕ್ಕೆ ವ್ಯತಿರಿಕ್ತವಾಗಿ ಈಗ ಲೋಡ್ ಶೆಡ್ಡಿಂಗ್ ನಡೆಯುತ್ತಿದೆ. ರಾಜ್ಯದಲ್ಲಿ ವಿದ್ಯುತ್ ಉಪಯೋಗ ಪ್ರತಿದಿನ 117 ದಶಲಕ್ಷ ಯೂನಿಟ್‌ಗೇರಿ ಸಾರ್ವಕಾಲಿಕ ದಾಖಲೆ ಮೀರಿದ್ದು ಇದರಿಂದ ಯಾವುದೇ ರೀತಿಯ ಪೂರ್ವಸೂಚನೆ ನೀಡದೆ ಪದೇ ಪದೇ ವಿದ್ಯುತ್ ಲೋಡ್ ಶೆಡ್ಡಿಂಗ್ ಏರ್ಪಡಿಸಲಾಗುತ್ತಿದೆ. ಬೇಸಿಗೆ ಕಾಲದ ತಾಪಮಾನ ಮಟ್ಟ ಇನ್ನೂ ಹೆಚ್ಚಾಗುವ ಸಾಧ್ಯತೆ ಇರುವ ಹಿನ್ನೆಲೆಯಲ್ಲಿ ದೈನಂದಿನ ವಿದ್ಯುತ್ ನಿಯಂತ್ರಣ 30 ನಿಮಿಷಗಳ ತನಕ ಮುಂದುವರಿಸುವ ಸಾಧ್ಯತೆ ಇದೆ. ಆದರೆ ಇದೇ ಸಂದರ್ಭ ರಾಜ್ಯದಲ್ಲಿ ವಿದ್ಯುತ್ ಲೋಡ್ ಶೆಡ್ಡಿಂಗ್ ಅಥವಾ ಪವರ್ ಕಟ್ ಏರ್ಪಡಿಸಿಲ್ಲವೆಂದು ವಿದ್ಯುತ್ ಲೋಡ್ ಹೆಚ್ಚಾಗುವ ಸಂದರ್ಭ ಕೇವಲ ಸಹಜ ನಿಯಂತ್ರಣ ಏರ್ಪಡಿಸಲಾಗುವುದು ಎಂದು ವಿದ್ಯುತ್ ಖಾತೆ ಸಚಿವ ಕೆ. ಕೃಷ್ಣನ್ ಕುಟ್ಟಿ ತಿಳಿಸಿದ್ದಾರೆ.

ಮಳೆಗಾಗಿ ಮೊರೆ

ಪುತ್ತೂರು ಸೀಮೆಯಲ್ಲಿ ಶೀಘ್ರ ಮಳೆ ಸುರಿಯುವ ಮೂಲಕ ಇಲ್ಲಿನ ಕೃಷಿ ಸಹಿತ ಸಮೃದ್ಧಿ ಉಂಟಾಗುವಂತೆ ಹಾಗೂ ಲೋಕಕ್ಕೆ ಕಲ್ಯಾಣ ಉಂಟಾಗುವಂತೆ ಶ್ರೀ ಮಹಾಲಿಂಗೇಶ್ವರನಲ್ಲಿ ಪ್ರಾರ್ಥನೆ ಸಲ್ಲಿಸಲಾಯಿತು. ಜೊತೆಗೆ ಸಮೃದ್ಧ ಮಳೆಗಾಗಿ ಮತ್ತು ಕೃಷಿ ಚಟುವಟಿಕೆಗಳು ಸುಗಮವಾಗಿ ನಡೆಯಲು ದೇವರಲ್ಲಿ ಮೊರೆಯಿಡಲಾಯಿತು.

ಉಡುಪಿ ವಾಣಿಜ್ಯ ಕಟ್ಟಡ ಅಗ್ನಿ ಅವಘಡ ಸ್ಥಳಕ್ಕೆ ಅಧಿಕಾರಿಗಳೊಂದಿಗೆ ಶಾಸಕ ಯಶ್‌ಪಾಲ್ ಸುವರ್ಣ ಭೇಟಿ
10 ಕೋಟಿ ರೂ. ಪರಿಹಾರ ನೀಡಲು ರಾಜ್ಯ ಸರ್ಕಾರಕ್ಕೆ ಆಗ್ರಹ



ಉಡುಪಿ: ಸಿಟಿ ಬಸ್ ನಿಲ್ದಾಣದ ಬಳಿಯ ವಾಣಿಜ್ಯ ಕಟ್ಟಡದಲ್ಲಿ ಅಗ್ನಿ ಅನಾಹುತದಿಂದ ಹಾನಿಗೀಡಾದ ಸ್ಥಳಕ್ಕೆ ಉಡುಪಿ ಶಾಸಕ ಯಶ್‌ಪಾಲ್ ಸುವರ್ಣ ಅಧಿಕಾರಿಗಳೊಂದಿಗೆ ಭೇಟಿ ನೀಡಿ ಹಾನಿಯ ಪರಿಶೀಲನೆ ನಡೆಸಿದರು.

ಸ್ಥಳದಲ್ಲಿಯೇ ತಹಶೀಲ್ದಾರ್ ಹಾಗೂ ನಗರಸಭೆಯ ಕಂದಾಯ ಅಧಿಕಾರಿಗಳಿಗೆ ಹಾನಿಯ ಬಗ್ಗೆ ಸರ್ಕಾರಕ್ಕೆ ವರದಿ ಸಲ್ಲಿಸುವಂತೆ ಸೂಚನೆ ನೀಡಿ, ಘಟನೆಯ ಬಗ್ಗೆ ಸ್ಥಳೀಯ ವರ್ತಕರಿಂದ ಮಾಹಿತಿ ಪಡೆದರು.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಶಾಸಕ ಯಶ್‌ಪಾಲ್ ಸುವರ್ಣ ಉಡುಪಿಯ ನಗರದಲ್ಲಿ ಬಹುದೊಡ್ಡ ಅಗ್ನಿ ಅವಘಡ ನಡೆದಿದ್ದು ಕೋಟ್ಯಂತರ ರೂ. ಹಾನಿಯಾಗಿರುವ ಬಗ್ಗೆ ಮೇಲ್ನೋಟಕ್ಕೆ ಕಂಡು ಬರುತ್ತಿದ್ದು, ರಾಜ್ಯ ಸರ್ಕಾರ ತಕ್ಷಣ ವಿಶೇಷ ಪ್ರಕರಣದಡಿ 10 ಕೋಟಿ ಪರಿಹಾರ ನೀಡುವಂತೆ ಆಗ್ರಹಿಸುವುದಾಗಿ ತಿಳಿಸಿದರು.

ಅಗ್ನಿಶಾಮಕ ದಳ ತಡವಾಗಿ ಘಟನಾ ಸ್ಥಳಕ್ಕೆ ಆಗಮಿಸಿದ ಬಗ್ಗೆಯೂ ಸಾರ್ವಜನಿಕರಿಂದ ದೂರುಗಳು ಕೇಳಿ ಬಂದಿದೆ. ಈ ಬಗ್ಗೆಯೂ ಅಧಿಕಾರಿಗಳ ಬಳಿ ಮಾಹಿತಿ ಪಡೆಯಲಾಗುವುದು. ಉಡುಪಿ ಅಗ್ನಿಶಾಮಕ ದಳಕ್ಕೆ ಹೆಚ್ಚುವರಿ ವಾಹನ ಹಾಗೂ ಖಾಲಿ ಹುದ್ದೆಗಳನ್ನು ಭರ್ತಿ ಮಾಡುವಂತೆ ಗೃಹ ಸಚಿವರಿಗೆ ಮನವಿ ಮಾಡಲಾಗಿದ್ದು ಈಗಾಗಲೇ ಪ್ರಗತಿಯಲ್ಲಿರುವ ಮಣಿಪಾಲ ಅಗ್ನಿಶಾಮಕ ದಳದ ಕಾಮಗಾರಿ ಪೂರ್ಣಗೊಳಿಸಿ ಸೇವೆಗೆ ಒದಗಿಸಲು ವಿಶೇಷ ಮುತುವರ್ಜಿ ವಹಿಸುವುದಾಗಿ ಹೇಳಿದರು.

ಈ ಸಂದರ್ಭದಲ್ಲಿ ಉಡುಪಿ ನಗರಸಭೆ ಪೌರಾಯುಕ್ತ ಮಹಾಂತೇಶ ಹಂಗರಗಿ, ನಗರಸಭೆ ಮಾಜಿ ಅಧ್ಯಕ್ಷ ಪ್ರಭಾಕರ ಪೂಜಾರಿ, ಮಾಜಿ ನಗರಸಭಾ ಸದಸ್ಯರಾದ ಹರೀಶ್ ಶೆಟ್ಟಿ, ಗಿರಿಧರ ಆಚಾರ್ಯ ಹಾಗೂ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

ಭಾನುವಾರ ಸಂಜೆ ಸಂಭವಿಸಿದ ಭೀಕರ ಬೆಂಕಿ ದುರಂತದಲ್ಲಿ ಅಗ್ನಿಶಾಮಕದ ದಳದಿಂದ ಬೆಂಕಿ ನಂದಿಸುವ ಕಾರ್ಯಾಚರಣೆ ಸೋಮವಾರ ಬೆಳಗ್ಗೆ ಸುಮಾರು 8 ಗಂಟೆವರೆಗೂ ಮುಂದುವರಿಯಿತು. ಒಟ್ಟಾರೆ 2.5 ಕೋಟಿರೂ. ಅಧಿಕ ಮೌಲ್ಯದ ನಷ್ಟ ಅಂದಾಜಿಸಲಾಗಿದೆ.

ಅಂಗಡಿ ಮಾಲಕ ಆಸ್ಪತ್ರೆಗೆ ದಾಖಲು

ಈ ದುರಂತ ಒಂದೇ ಮಾಲಕರಿಗೆ ಸಂಬಂಧಿಸಿದ ನಾಲ್ಕು ಅಂಗಡಿಗಳನ್ನು ಸುಟ್ಟು ಭಸ್ಮ ಮಾಡಿದ್ದು, ಈ ಆಘಾತದಿಂದ ತೀವ್ರ ಅಸ್ವಸ್ಥಗೊಂಡ ಅಂಗಡಿ ಮಾಲಕ ಭೀಮ ಆಸ್ಪತ್ರೆಗೆ ದಾಖಲಾಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ರಾಜಸ್ಥಾನ ಮೂಲದ ಉದ್ಯಮಿ ಭೀಮ ಎಂಬವರ ಪ್ಲಾಸ್ಟಿಕ್ ಸಾಮಗ್ರಿಗಳ ದಾಸ್ತಾನು ಗೋದಾಮಿನಲ್ಲಿ ಭಾನುವಾರ ಸಂಜೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಬೆಂಕಿ ಕಾಣಿಸಿಕೊಂಡಿತ್ತು. ಈ ಬೆಂಕಿ ಅವರದ್ದೇ ಮಾಲಕತ್ವದ ಪ್ಲಾಸ್ಟಿಕ್ ಅಂಗಡಿ, ಮೊಬೈಲ್ ಅಂಗಡಿಯನ್ನು ಸಂಪೂರ್ಣ ಸುಟ್ಟು ಭಸ್ಮಮಾಡಿದೆ. ಅದೇ ರೀತಿ ಸಮೀಪದ ಎರಡು ಮೂರು ಅಂಗಡಿಗಳಿಗೆ ಹಾನಿಯಾಗಿದ್ದು, ಅಪಾರ ನಷ್ಟ ಉಂಟಾಗಿದೆ ಎನ್ನಲಾಗಿದೆ.

ಹಲವು ಪ್ರಮುಖರ ಭೇಟಿ

ಸ್ಥಳಕ್ಕೆ ಕರಾವಳಿ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಂ.ಎ.ಗಫೂರ್ ಸಹಿತ ಹಲವು ಗಣ್ಯರು ಭೇಟಿ ನೀಡಿ ಪರಿಶೀಲನೆ ನಡೆಸಿದರು. ಇಲಾಖಾ ಮಟ್ಟದಲ್ಲಿ ಪರಿಹಾರಕ್ಕೆ ನೀಡಲು ಅವಕಾಶ ಇದ್ದರೆ ಪ್ರಯತ್ನಿಸಲಾಗುವುದು ಎಂದು ಅವರು ಭರವಸೆ ನೀಡಿದರು. ಇದೇ ವೇಳೆ ಜಿಲ್ಲಾ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಯ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು, ಉಡುಪಿ ತಾಲೂಕು ಅಧ್ಯಕ್ಷ ರಮೇಶ್ ಕಾಂಚನ್ ಮೊದಲಾದವರು ಉಪಸ್ಥಿತರಿದ್ದರು.

ತಡರಾತ್ರಿ ಬೆಂಕಿಯನ್ನು ಹತೋಟಿಗೆ ತಂದರೂ ಬೆಳಗ್ಗೆ ವರೆಗೆ ಹಲವು ಬಾರಿ ಗೋಡೌನ್ ಮತ್ತು ಕೆಳಗಿನ ಅಂಗಡಿಗಳಲ್ಲಿ ಮತ್ತೆ ಬೆಂಕಿ ಕಾಣಿಸಿಕೊಂಡಿತ್ತು. ತಕ್ಷಣ ಸ್ಥಳದಲ್ಲಿದ್ದ ಅಗ್ನಿ ಶಾಮಕದಳದ ವಾಹನಗಳಿಂದ ಬೆಂಕಿ ನಂದಿಸುವ ಕಾರ್ಯ ನಡೆಸಲಾಯಿತು.

ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇಗುಲ: ಶ್ರೀ ವಿದ್ಯಾಪ್ರಸನ್ನತೀರ್ಥರ ದಿವ್ಯ ಸಾನಿಧ್ಯ, ಸಂಸ್ಥಾನ ಪೂಜೆ





ಪಡುಬಿದ್ರಿ: ಸಮಗ್ರವಾಗಿ ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವ ಪ್ರಕ್ರಿಯೆಗಳು ನಡೆಯುತ್ತಿರುವ ಪಡುಬಿದ್ರಿ ಶ್ರೀ ಮಹಾಲಿಂಗೇಶ್ವರ ಮಹಾಗಣಪತಿ ದೇವಸ್ಥಾನದಲ್ಲಿ ಸುಬ್ರಹ್ಮಣ್ಯ ಮಠದ ಶ್ರೀ ವಿದ್ಯಾಪ್ರಸನ್ನ ತೀರ್ಥ ಶ್ರೀಪಾದರ ದಿವ್ಯ ಸಾನಿಧ್ಯ ಮತ್ತು ಸಂಸ್ಥಾನ ಪೂಜೆ ನೆರವೇರಿತು.

ಶ್ರೀ ದೇಗುಲದಲ್ಲಿ ಅಷ್ಟೋತ್ತರಶತ ನಾರಿಕೇಲ ಗಣಯಾಗ, ಮಹಾರುದ್ರಯಾಗ, ದುರ್ಗಾಯಾಗ, ನಾಗಸಾನಿಧ್ಯದಲ್ಲಿ ನಾಗಬ್ರಹ್ಮಾದಿ ಶಕ್ತಿಗಳ ಪ್ರತಿಷ್ಠಾಯಾಗ, ತಿಲ, ಕೂಷ್ಮಾಂಡ, ಪವಮಾನ, ಸರ್ಪತ್ರಯ ಮಂತ್ರಯಾಗ, ಸರ್ಪ ಗಾಯತ್ರಿಯಾಗ, ನಾಗಬ್ರಹ್ಮಾದಿಗಳ ಪ್ರತಿಷ್ಠೆ ನವಕ ಪ್ರಧಾನ, ಆಶ್ಲೇಷಾ ಬಲಿ, ಅಭಿಷೇಕ, ಪ್ರಸನ್ನ ಪೂಜೆಯು ಸಂಪನ್ನಗೊಂಡಿತು.

ಬಳಿಕ ಪಡುಬಿದ್ರಿ ಬಂಟರ ಸಂಘ ಮತ್ತು ಬಂಟರ ವೆಲ್ ಫೇರ್ ಟ್ರಸ್ಟ್ ವತಿಯಿಂದ ಮಹಾ ಅನ್ನಸಂತರ್ಪಣೆಯು ನಡೆಯಿತು. ಸಂಜೆ ದುರ್ಗಾರಾಧನೆ, ವನದುರ್ಗಾಯಾಗ, ಮಹಾಸುದರ್ಶನಯಾಗ ಜರಗಿತು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಕ್ರಮಕ್ಕೆ ಆಗ್ರಹಿಸಿ ಉಡುಪಿ ಎಸ್ಪಿಗೆ ಬಿಜೆಪಿ ಒಬಿಸಿ ಮೋರ್ಚಾ ದೂರು



ಉಡುಪಿ: ಪ್ರಧಾನಿ ನರೇಂದ್ರ ಮೋದಿ ಅವರನ್ನು 'ಭಯೋತ್ಪಾದಕ' ಎಂದು ಕರೆದು ಅವಮಾನಿಸಿರುವ ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಿರುದ್ಧ ಜಿಲ್ಲಾ ಬಿಜೆಪಿ ಒಬಿಸಿ ಮೋರ್ಚಾ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಈ ಸಂಬಂಧ ಸೋಮವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯನ್ನು ಭೇಟಿ ಮಾಡಿದ ನಿಯೋಗವು, ಖರ್ಗೆ ವಿರುದ್ಧ ಕಾನೂನು ಕ್ರಮಕೈಗೊಳ್ಳುವಂತೆ ಆಗ್ರಹಿಸಿ ಅಧಿಕೃತ ದೂರು ಸಲ್ಲಿಸಿತು.

ಬಿಜೆಪಿ ಒಬಿಸಿ ಮೋರ್ಚಾ ಉಡುಪಿ ಜಿಲ್ಲಾ ಘಟಕವು ಖರ್ಗೆ ಹೇಳಿಕೆಯನ್ನು ಕಟು ಶಬ್ದಗಳಲ್ಲಿ ಖಂಡಿಸಿದ್ದು, ಪ್ರಧಾನಿ ಹುದ್ದೆ ಹಾಗೂ ದೇಶದ 140 ಕೋಟಿ ಜನರ ಭಾವನೆಗಳಿಗೆ ಖರ್ಗೆ ಘೋರ ಅವಮಾನ ಮಾಡಿದ್ದಾರೆ. ಇಂತಹ ಪ್ರಚೋದನಕಾರಿ ಮಾತುಗಳು ಸಮಾಜದಲ್ಲಿ ಸೌಹಾರ್ದತೆ ಕೆಡಿಸಿ ಅಶಾಂತಿ ಸೃಷ್ಟಿಸುವ ಉದ್ದೇಶ ಹೊಂದಿವೆ. ಸಂವಿಧಾನಕ್ಕೆ ಗೌರವ ಕೊಡುವ ಯಾರು ಕೂಡ ಇಂತಹ ಪದಬಳಕೆಯನ್ನು ಸಹಿಸುವುದಿಲ್ಲ, ದ್ವೇಷದ ರಾಜಕಾರಣ ನಿಲ್ಲಬೇಕು ಮತ್ತು ಕಾಂಗ್ರೆಸ್ ತಕ್ಷಣವೇ ಕ್ಷಮೆಯಾಚಿಸಬೇಕು ಎಂದು ಬಿಜೆಪಿ ಮುಖಂಡರು ಆಗ್ರಹಿಸಿದರು.

ಬಿಜೆಪಿ ಒಬಿಸಿ ಮೋರ್ಚಾ ರಾಜ್ಯ ಉಪಾಧ್ಯಕ್ಷ ಐರೋಡಿ ವಿಠ್ಠಲ್ ಪೂಜಾರಿ, ಬಿಜೆಪಿ ಒಬಿಸಿ ಮೋರ್ಚಾದ ಜಿಲ್ಲಾಧ್ಯಕ್ಷ, ಉಡುಪಿ ಬಿಜೆಪಿ ಪ್ರಕೋಷ್ಠಗಳ ಸಂಯೋಜಕ ವಿಜಯ ಕೊಡವೂರು, ಒಬಿಸಿ ಮೋರ್ಚಾದ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸುರೇಂದ್ರ ವರಂಗ, ನಗರಸಭಾ ಮಾಜಿ ಅಧ್ಯಕ್ಷ ಪ್ರಭಾಕರ್ ಪೂಜಾರಿ, ಎಸ್ಸಿ ಮೋರ್ಚಾ ಜಿಲ್ಲಾ ಕಾರ್ಯದರ್ಶಿ ಉಮೇಶ್ ನಾಯ್ಕ್ ಚೇರ್ಕಾಡಿ, ನಗರ ಒಬಿಸಿ ಮೋರ್ಚಾ ಉಪಾಧ್ಯಕ್ಷ ಜಯಕರ್ ಆಚಾರ್ಯ, ನಗರಸಭಾ ಮಾಜಿ ಸದಸ್ಯರಾದ ಟಿ.ಜಿ. ಹೆಗ್ಡೆ ಹಾಗೂ ಮಂಜುನಾಥ್ ಮಣಿಪಾಲ, ಸುಭಾಷಿತ್, ಸಂತೋಷ್, ಅಶೋಕ್ ಶೆಟ್ಟಿಗಾರ್, ದೀಕ್ಷಿತ್ ದೇವಾಡಿಗ, ಚಿನ್ಮಯ, ಸುಶಾಂತ್, ರಾಜೇಂದ್ರ ಪಂದಿಬೆಟ್ಟು, ಪ್ರಮೋದ್ ಪಡುಕೆರೆ ಇದ್ದರು.